ವಿಶ್ವವಾಣಿ
ವಿಶ್ವಾಸವೇ ವಿಶ್ವ

ಧೋನಿ ಐಪಿಎಲ್ ಇನಿಂಗ್ಸ್ ಅಂತ್ಯ

ಚೆನ್ನೈ ಕಿಂಗ್ಸ್ ತಂಡದ ಸದಸ್ಯನಾಗಿದ್ದರೂ 19ನೇ ಆವೃತ್ತಿಯ ಐಪಿಎಲ್ ಟೂರ್ನಿಯಲ್ಲಿ ಒಂದು ಪಂದ್ಯವನ್ನೂ ಆಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ, ವೃತ್ತಿಪರ ಕ್ರಿಕೆಟ್‌ಗೆ ಬಹುತೇಕ ವಿದಾಯ ಹೇಳಿದ್ದಾರೆ. ಗುರುವಾರ ಅಹಮದಾಬಾದ್‌ನಲ್ಲಿ ಗುಜರಾತ್ ವಿರುದ್ಧ ನಡೆದ ನಿರ್ಣಾಯಕ ಪಂದ್ಯದಲ್ಲೂ ಧೋನಿ ಕಣಕ್ಕಿಳಿಯಲಿಲ್ಲ.

ದಾರಿದೀಪೋಕ್ತಿ

ಜೀವನದಲ್ಲಿ ಮರೆಯುವುದು ಮತ್ತು ನೆನಪಿನಲ್ಲಿಟ್ಟುಕೊಳ್ಳುವುದು ಬಹಳ ಮುಖ್ಯ. ವಿಷಾದ ಮತ್ತು ಕೆಟ್ಟ ನೆನಪುಗಳನ್ನು ಮರೆಯಬೇಕು ಹಾಗೂ ಘಟನೆಗಳಿಂದ ಕಲಿತ ಪಾಠಗಳನ್ನು ಯಾವತ್ತೂ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ವಕ್ರತುಂಡೋಕ್ತಿ

ಒಂದು ತಂಡದಲ್ಲಿ ಕೆಲಸ ಮಾಡುವ ಲಾಭವೆಂದರೆ, ಸೋತಾಗ ನಿಮ್ಮನ್ನು ಯಾರೂ ಬೆರಳು ಮಾಡಿ ತೋರಿಸುವುದಿಲ್ಲ.

ವಸತಿ ಇಲಾಖೆ
ಕರ್ನಾಟಕ ಗೃಹ ಮಂಡಳಿ
ಸಮುದಾಯ ನಿರ್ಮಾಣದತ್ತ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಕರ್ನಾಟಕ ಗೃಹ ಮಂಡಳಿ
ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು
ಸೂರ್ಯನಗರ 4ನೇ ಹಂತ, ಕೆ.ಹೆಚ್.ಬಿ. ಸೂರ್ಯ ಕ್ರೀಡಾ ಗ್ರಾಮದಲ್ಲಿ
ಅಂತರಾಷ್ಟ್ರೀಯ
ಕ್ರಿಕೆಟ್ ಸ್ಟೇಡಿಯಂ ನಿರ್ಮಾಣ
ಕಾಮಗಾರಿಯ ಶಂಕುಸ್ಥಾಪನೆ ಸಮಾರಂಭ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಸನ್ಮಾನ್ಯ ಮುಖ್ಯಮಂತ್ರಿಗಳ 'ನಮ್ಮ ಮನೆ' ಯೋಜನೆಗೆ ಚಾಲನೆ
'ಸೂರ್ಯ ಶೈನ್' ಮತ್ತು 'ಸೂರ್ಯ ಡಿವೈನ್' ವಸತಿ ಸಮುಚ್ಚಯ ಕಾಮಗಾರಿಗಳಿಗೆ ಶಂಕುಸ್ಥಾಪನೆ
ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರುಗಳಿಗೆ ಸಾಂಕೇತಿಕ ನಿವೇಶನ ಹಂಚಿಕೆ
ಮುಖ್ಯಮಂತ್ರಿಯವರ ಅಮೃತ ಹಸ್ತದಿಂದ ಸಾರ್ವಜನಿಕ ಅರ್ಜಿದಾರರಿಗೆ ನಿವೇಶನ ಹಂಚಿಕೆ

ದಿನಾಂಕ
23ನೇ ಮೇ, 2026
ಶನಿವಾರ

ಸಮಯ
ಬೆಳಿಗ್ಗೆ
11.00 ಗಂಟೆಗೆ

ಸ್ಥಳ: ಇಂಡ್ಲವಾಡಿ ಗ್ರಾಮ, 4ನೇ ಹಂತ, ಕೆ.ಹೆಚ್.ಬಿ. ಸೂರ್ಯ ಕ್ರೀಡಾ ಗ್ರಾಮ, ಬೆಂಗಳೂರು

ಸಮಾರಂಭದ ಉದ್ಘಾಟನೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಜಲಸಂಪನ್ಮೂಲ ಇಲಾಖೆ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ಅವರನ್ನು ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರಾದ **ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್** ಅವರು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರಾದ **ಶ್ರೀ ಕೆ.ಎಂ. ಶಿವಲಿಂಗೇಗೌಡ** ಹಾಗೂ ಆನೇಕಲ್ ವಿಧಾನಸಭಾ ಕ್ಷೇತ್ರದ ಶಾಸಕರಾದ **ಶ್ರೀ ಬಿ. ಶಿವಣ್ಣ** ಅವರೊಂದಿಗೆ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತಿರುವ ಸಂದರ್ಭ.

ಸಾರ್ವಜನಿಕ ಹಂಚಿಕೆ ಪತ್ರ ವಿತರಣೆ
ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ರೈತರಿಗೆ ಹಂಚಿಕೆ ಪತ್ರ ವಿತರಣ
ಶ್ರೀ ಕೆ.ಎಂ. ಶಿವಲಿಂಗೇಗೌಡ
ಮಾನ್ಯ ಅಧ್ಯಕ್ಷರು
ಕರ್ನಾಟಕ ಗೃಹ ಮಂಡಳಿ

ಅಧ್ಯಕ್ಷತೆ
ಶ್ರೀ ಬಿ. ಶಿವಣ್ಣ
ಮಾನ್ಯ ಶಾಸಕರು
ಆನೇಕಲ್ ವಿಧಾನಸಭಾ ಕ್ಷೇತ್ರ

ಗೌರವ ಅತಿಥಿ
ಡಾ|| ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು
ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಗೌರವ ಉಪಸ್ಥಿತಿ
ಶ್ರೀ ಡಿ.ಕೆ. ಸುರೇಶ್
ಮಾನ್ಯ ಅಧ್ಯಕ್ಷರು
ಬೆಂಗಳೂರು ಹಾಲು ಒಕ್ಕೂಟ

ರಾಜ್ಯದ ಎಲ್ಲಾ ಮಾನ್ಯ ಸಚಿವರು, ಸಂಸದರು, ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಶಾಸಕರುಗಳು ಹಾಗೂ ಎಲ್ಲಾ ಆಯೋಗ, ನಿಗಮ ಮಂಡಳಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ ಆತ್ಮೀಯ ಸ್ವಾಗತ

ಸರ್ವರಿಗೂ ಆದರದ ಸುಸ್ವಾಗತ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ಶ್ರೀ ಕೆ.ಪಿ. ಮೋಹನ್ ರಾಜ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು, ವಸತಿ ಇಲಾಖೆ

ಶ್ರೀ ಕೆ.ಎ. ದಯಾನಂದ, ಭಾ.ಆ.ಸೇ
ಆಯುಕ್ತರು, ಕರ್ನಾಟಕ ಗೃಹ ಮಂಡಳಿ

ಹಾಗೂ ಸಮಸ್ತ ಕರ್ನಾಟಕ ಗೃಹ ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸಮಾಚಾರ ಸಣ್ಣದಲ್ಲ

ದೇಶದಲ್ಲಿ ಬೆನ್ಜ್‌ಗೆ ಹೆಚ್ಚಿದ ಬೇಡಿಕೆ

ಬೆಂಗಳೂರು: ಭಾರತದಲ್ಲಿ ಐಷಾರಾಮಿ ಎಸ್‌ಯುವಿಗಳ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆ ಮರ್ಸಿಡಿಸ್ ಬೆನ್ಜ್ ಜಿಎಲ್‌ಇ ಹಾಗೂ ಜಿಎಲ್‌ಎಸ್ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವುದರಿಂದ ಭಾರತದಲ್ಲಿ ಜಿಎಲ್‌ಇ ಹಾಗೂ ಜಿಎಲ್‌ಎಸ್ ನೈಟ್ ಎಡಿಷನ್ ಮಾದರಿಗಳನ್ನು ಭಾರತದಲ್ಲಿ ಬಿಡುಗಡೆ ಮಾಡಿದೆ. ಇದು ಜಾಗತಿಕ ಮಟ್ಟದಲ್ಲಿ ಸೀಮಿತ ಸಂಖ್ಯೆಯಲ್ಲಿ ಲಭ್ಯವಿರುವ ಮಾದರಿಗಳಾಗಿವೆ.

ನೈಟ್ ಎಡಿಷನ್ ಮಾದರಿಗಳು ವಿಶಿಷ್ಟ ಬಣ್ಣಗಳಲ್ಲಿ ಲಭ್ಯವಿದೆ. ಕಾರಿನ ಒಳಭಾಗದಲ್ಲಿ ಕಪ್ಪು ನಪ್ಪಾ ಲೆದರ್ ಹಾಗೂ ವಿಶಿಷ್ಟ ಮರದ ಅಲಂಕಾರ ನೀಡಲಾಗಿದೆ. ಭಾರತದಲ್ಲಿ ಜಿಎಲ್‌ಎಸ್ 450 1.41 ಕೋಟಿ ರು. , ಜಿಎಲ್‌ಎಸ್ 450ಡಿ 1.43 ಕೋಟಿ, ಜಿಎಲ್‌ಇ 300ಡಿ 1.05 ಕೋಟಿ ಹಾಗೂ ಜಿಎಲ್‌ಇ 450 1.14 ಕೋಟಿ ರು. ಎಕ್ಸ್ ಶೋರೂಂ ಬೆಲೆ ಹೊಂದಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ರಾಜಧಾನಿಗೆ ಹತ್ತಿರ ಇರುವುದರಿಂದ ಬೆಂಗಳೂರು ಉತ್ತರಕ್ಕೆ ಸೇರಿಸಲು ಮನವಿ
ತುಮಕೂರು ಜಿಲ್ಲೆಗೆ ತನ್ನದೇ ಇತಿಹಾಸ ಇದೆ | ನನಗೆ ಭಾವನಾತ್ಮಕ ಸಂಬಂಧವಿದೆ

ತುಮಕೂರಿನ ಹೆಸರು ಬದಲಾಗಲ್ಲ: ಪರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತುಮಕೂರಿನ ಇತಿಹಾಸವನ್ನು ನನ್ನಂಥವನು ಬದಲಾವಣೆ ಮಾಡಲು ಆಗುತ್ತಾ? ಅಭಿವೃದ್ಧಿ ದೃಷ್ಟಿಯಿಂದ ಬೆಂಗಳೂರು ಉತ್ತರ ಮಾಡಿ ಅಂತ ಕೇಳಿರುವುದು ಅಷ್ಟೇ ಎಂದು ಗೃಹ ಸಚಿವ ಜಿ.ಪರಮೇಶ್ವರ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿಗೆ ತುಮಕೂರನ್ನು ಸೇರಿಸುವುದು ಅಲ್ಲ. ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ತುಮಕೂರು ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡಲಾಗುತ್ತಾ? ತುಮಕೂರಿಗೆ ಅದರ ಇತಿಹಾಸ ಹಾಗೂ ಅಸ್ಮಿತೆಯಿದೆ. ಅದನ್ನು ನಾವು ಬದಲಾವಣೆ ಮಾಡಲು ಹೋಗುತ್ತೀವಾ? ಬಂಡವಾಳ ಹೂಡಿಕೆ ಸೇರಿದಂತೆ ತುಮಕೂರಿಗೆ ಆಗುತ್ತದೆ ಎಂಬುದಷ್ಟೇ ನಮ್ಮ ಉದ್ದೇಶ. ಬಿಜೆಪಿಯವರಿಗೆ ನಮ್ಮದೇನೂ ಅರ್ಥವೇ ಆಗುವುದಿಲ್ಲ. ತುಮಕೂರಿನ ಬಗ್ಗೆ ಎಲ್ಲರಿಗೂ ಎಷ್ಟು ಭಾವನಾತ್ಮಕ ಸಂಬಂಧವಿದೆಯೋ ನನಗೂ ಇದೆ. ಏಕೆಂದರೆ ನಾನು ಹುಟ್ಟಿ ಬೆಳೆದದ್ದು ಅಲ್ಲೇ. ತುಮಕೂರಿನ ಹೆಸರು ಬದಲಾಗುವುದಿಲ್ಲ, ಆಡಳಿತ ಬದಲಾಗುವುದಿಲ್ಲ, ವಿಸ್ತೀರ್ಣ ಬದಲಾಗುವುದಿಲ್ಲ. ಬೆಂಗಳೂರಿಗೆ ಹತ್ತಿರ ಇರುವುದರಿಂದ ಬೆಂಗಳೂರು ಉತ್ತರಕ್ಕೆ ಸೇರಿಸಿ ಅಂತ ಕೇಳಿರೋದು ಅಷ್ಟೇ ಎಂದರು.

ದೆಹಲಿಯ ಪಕ್ಕದಲ್ಲಿ ನೋಯ್ಡಾ ಇದೆ. ಅದೇ ರೀತಿ ವಿಕೇಂದ್ರೀಕರಣ ಮಾಡುವ ಕಾರಣದಿಂದ ದೇಶಾದ್ಯಂತ ಈ ರೀತಿ ಕೆಲಸಗಳನ್ನು ಮಾಡಲಾಗಿದೆ. ತುಮಕೂರನ್ನು ಬೆಳೆಸಬಾರದಾ? ತುಮಕೂರಿನಲ್ಲಿ 20,000 ಎಕರೆಯಲ್ಲಿ ಇಂಡಸ್ಟ್ರಿಯಲ್ ಹಬ್ ಮಾಡಲಾಗುತ್ತಿದೆ. ಅದು ನನ್ನದೇ ಕ್ಷೇತ್ರದಲ್ಲಿ ಬರಲಿದ್ದು, ಎರಡು ಹಂತಗಳನ್ನು ಈಗಾಗಲೇ ಮುಗಿಸಲಾಗಿದೆ. ಏಷ್ಯಾದಲ್ಲಿ ಅತಿ ದೊಡ್ಡ ಇಂಡಸ್ಟ್ರಿಯಲ್ ಹಬ್ ಇದಾಗಲಿದೆ. ಜಪಾನ್ ಮೂಲದ ಒಂದು ದೊಡ್ಡ ಕಂಪನಿ ಕೂಡ ಈಗಾಗಲೇ ತಲೆಯೆತ್ತಿದೆ. ನಾವು ನಗರವನ್ನು ಬೆಳೆಸಬೇಕು ಎಂಬುದನ್ನು ಬಿಟ್ಟು ಹಾಗೆಯೇ ಹಿಂದುಳಿದು ಬಿಡಲಿ ಅಂತ ಬಿಡೋದು ಸರಿ ಹೋಗುವುದಿಲ್ಲ. ತುಮಕೂರು ಶಿಕ್ಷಣದ ಕೇಂದ್ರವಾಗಿದೆ. 9 ಇಂಜಿನಿಯರಿಂಗ್ ಹಾಗೂ 3 ಮೆಡಿಕಲ್ ಕಾಲೇಜುಗಳು ನಮ್ಮ ಜಿಲ್ಲೆಯಲ್ಲಿದ್ದಾವೆ. ಆ ವಿದ್ಯಾರ್ಥಿಗಳಿಗೆ ಅವಕಾಶಗಳು ಬೇಕಲ್ಲವೇ ಎಂದು ಹೇಳಿದರು.

ಬಿಡದಿ ಟೌನ್‌ಶಿಪ್ ಬಹಳ ವರ್ಷಗಳಿಂದ ಯೋಜಿಸಲಾ ಗಿದೆ. ನೈಸ್ ರಸ್ತೆ ನಿರ್ಮಿಸು ವಾಗಲೂ ಮೂರ್ನಾಲ್ಕು ಟೌನ್‌ಶಿಪ್‌ಗಳನ್ನು ಮೈಸೂರಿಗೆ ಮಾಡಬೇಕು ಅಂತ ಪ್ರಸ್ತಾವನೆ ಸಲ್ಲಿಸಲಾ ಗಿತ್ತು. ಬೆಂಗಳೂರಿನ ಮೇಲಿರುವ ಒತ್ತಡವನ್ನು ವಿಕೇಂದ್ರೀಕರಣ ಮಾಡುವುದೇ ಇದರ ಉದ್ದೇಶ. ಇದೇ ಉದೇಶದಿಂದಲೇ ನಮ್ಮ ಡಿಸಿಎಂ ಕೂಡ ಸಂಪುಟದ ಮುಂದೆ ಪ್ರಸ್ತಾವನೆ ಇಟ್ಟಿದ್ದರು. ಕ್ಯಾಬಿನೆಟ್ ಕೂಡ ಚರ್ಚೆ ಮಾಡಿದ ನಂತರವೇ ಒಪ್ಪಿಗೆ ನೀಡಿರುವುದು. ಯಾವುದೋ ದುರುದ್ದೇಶ ಇಟ್ಟುಕೊಂಡು ಮಾಡುತ್ತಿರುವುದು ಅಲ್ಲ.

– ಡಾ.ಜಿ.ಪರಮೇಶ್ವರ, ಗೃಹ ಸಚಿವ

ನಿತ್ಯ ಮಾತನಾಡಲು ಆಗಲ್ಲ

ಸಿಎಂ ಬದಲಾವಣೆ ವಿಚಾರದಲ್ಲಿ ರಾಜಣ್ಣ ಹೇಳಿಕೆ ವಿಚಾರವಾಗಿ ಮಾತನಾಡಿದ ಸಚಿವ ಪರಮೇಶ್ವರ್ ಅವರು, ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನ ಮಾಡುತ್ತಾರೆ. ಒಬ್ಬೊಬ್ಬರು ಒಂದೊಂದು ವಿಶ್ಲೇಷಣೆ ಮಾಡುತ್ತಾರೆ. ಅದಕ್ಕೆಲ್ಲ ನಾನು ಪ್ರತಿಕ್ರಿಯೆ ಮಾಡುವುದು ಬರೋದಿಲ್ಲ. ನಾನೇನು ಮೌನವಾಗಿಲ್ಲ. ದಿನ ಅದೇ ವಿಷಯ ಮಾತನಾಡಲು ಆಗುವುದೇ? ಪಕ್ಷದಲ್ಲಿ ಹೈಕಮಾಂಡ್ ಇದೆ, ಹೈಕಮಾಂಡ್‌ಗೆ ಯಾವ ಸಂದರ್ಭದಲ್ಲಿ ಏನು ಮಾಡಬೇಕು ಅಂತ ಗೊತ್ತಿದೆ. ಮಾಧ್ಯಮದ ಮೂಲಕ ನಾನೇನೋ ಆಗುವುದಕ್ಕೆ ಆಗುವುದಿಲ್ಲ. ಹೈಕಮಾಂಡ್ ತೀರ್ಮಾನ ಮಾಡುತ್ತಾರೆ. ಅವರನ್ನು ಬದಲಾಯಿಸುವ ಹಾಗೂ ಮುಂದುವರಿಸುವ ಪ್ರಸ್ತಾವನೆ ಬಗ್ಗೆ ನಾವು ಚರ್ಚೆ ಮಾಡಿ ಏನಾಗುತ್ತೆ?. ನಮಗೆ ಗೊತ್ತಿರುವ ಹಾಗೆ ಯಾವುದನ್ನೂ ನಿಗದಿ ಮಾಡಿ ಮುಖ್ಯಮಂತ್ರಿಯನ್ನಾಗಿ ಮಾಡಿರುವುದಿಲ್ಲ ಎಂದು ತಿಳಿಸಿದರು.

ಒಂದನೇ ತರಗತಿ ವಯೋಮಿತಿ ವಿವಾದ ಸರಿಪಡಿಸಿ: ಹೈಕೋರ್ಟ್

ಬೆಂಗಳೂರು: ರಾಜ್ಯದಲ್ಲಿ ಒಂದನೇ ತರಗತಿ ದಾಖಲಾತಿಗೆ ವಯೋಮಿತಿ ನಿಗದಿಪಡಿಸಿ ಹೊರಡಿಸಿದ್ದ ಆದೇಶ ಮರು ಪರಿಶೀಲಿಸುವಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ತಾಕೀತು ಮಾಡಿದೆ.

ಸರಕಾರದ ಆದೇಶ ಪ್ರಶ್ನಿಸಿ ಬೆಂಗಳೂರಿನ ಮಾಸ್ಟರ್ ಕೃಷ್ಣ ಸೇರಿದಂತೆ ಒಟ್ಟು ಆರು ಜನ ವಿದ್ಯಾರ್ಥಿಗಳು ಹಾಗೂ ಪೋಷಕರು ಸಲ್ಲಿಸಿದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರ ಏಕಸದಸ್ಯ ಪೀಠದಲ್ಲಿ ಈ ಮಹತ್ವದ ಅರ್ಜಿ ವಿಚಾರಣೆ ನಡೆಯಿತು.

ಅರ್ಜಿದಾರರ ಪರ ವಕೀಲ ಅಜಯ್ ಕುಮಾರ್ ಪಾಟೀಲ್ ವಾದ ಮಂಡಿಸಿ, ಸರಕಾರದ ವಯೋಮಿತಿ ಆದೇಶದಿಂದ ಸುಮಾರು 5 ಲಕ್ಷ ವಿದ್ಯಾರ್ಥಿಗಳಿಗೆ ತೊಂದರೆಯಾಗಲಿದೆ. 2025-26ನೇ ಸಾಲಿನಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಪೂರೈಸಿದ ಅನೇಕ ಮಕ್ಕಳು, ಹೊಸ ವಯೋಮಿತಿ ನಿಯಮದಿಂದಾಗಿ ಮತ್ತೆ ಯುಕೆಜಿ ಅಧ್ಯಯನ ಮಾಡುವ ಪರಿಸ್ಥಿತಿ ಎದುರಾಗಿದೆ. 5 ವರ್ಷ 5 ತಿಂಗಳು ಪೂರೈಸಿರುವ ಮಕ್ಕಳಿಗೂ ಒಂದನೇ ತರಗತಿ ದಾಖಲಾತಿಗೆ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಮಕ್ಕಳ ಒಂದು ಅಮೂಲ್ಯ ವರ್ಷ ವ್ಯರ್ಥವಾಗುತ್ತದೆ ಹಾಗೂ ಅವರ ಮಾನಸಿಕ ಬೆಳವಣಿಗೆಯ ಮೇಲೂ ಇದು ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ವಾದ ಮಂಡಿಸಿದರು.

ಸದ್ಯ ಎದುರಾಗಿರುವ ಸಮಸ್ಯೆಯ ಗಂಭೀರತೆ ಸರಕಾರ ಅರ್ಥಮಾಡಿಕೊಂಡಿದೆ. ನ್ಯಾಯಾಲಯವು ಸೂಕ್ತ ಸಮಯಾವಕಾಶ ನೀಡಿದಲ್ಲಿ, ಪೋಷಕರು ಮತ್ತು ಮಕ್ಕಳ ಹಿತದೃಷ್ಟಿಯಿಂದ ವಯೋಮಿತಿ ನಿಯಮವನ್ನು ಪುನಃ ಪರಿಶೀಲಿಸಿ, ಹೊಸ ಆದೇಶ ಹೊರಡಿಸುವುದಾಗಿ ಹೆಚ್ಚುವರಿ ಅಡ್ವೋಕೇಟ್ ಜನರಲ್ ತಿಳಿಸಿದರು. ಸರಕಾರದ ಮನವಿ ಆಲಿಸಿದ ಪೀಠ, ಮಕ್ಕಳ ಶಿಕ್ಷಣದ ಹಿತದೃಷ್ಟಿಯಿಂದ ಈ ವಿಷಯದಲ್ಲಿ ವಿಳಂಬ ಧೋರಣೆ ಸರಿಯಲ್ಲ ಎಂದು ಅಭಿಪ್ರಾಯಪಟ್ಟಿತು. ಅಲ್ಲದೆ, ಒಂದು ವಾರದೊಳಗೆ ವಯೋಮಿತಿ ಸಡಿಲಿಕೆ ಕುರಿತು ಸಮಗ್ರವಾಗಿ ಮರುಪರಿಶೀಲನೆ ನಡೆಸಿ, ಪೋಷಕರಿಗೆ ಅನುಕೂಲವಾಗುವ ಸೂಕ್ತ ಆದೇಶ ಹೊರಡಿಸಬೇಕೆಂದು ಶಿಕ್ಷಣ ಇಲಾಖೆಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿ ವಿಚಾರಣೆ ಮುಂದೂಡಿದೆ.

ಪೋಷಕರಲ್ಲಿ ಆತಂಕ

ಸರಕಾರದ ಹೊಸ ನಿಯಮದ ಅನ್ವಯ, ಈ ಮಕ್ಕಳಿಗೆ ಒಂದನೇ ತರಗತಿಗೆ ಪ್ರವೇಶ ಸಿಗುವುದಿಲ್ಲ. ಇದರಿಂದಾಗಿ ಮಕ್ಕಳು ತಾವು ಈಗಾಗಲೇ ಓದಿ ಮುಗಿಸಿರುವ ಯುಕೆಜಿ ತರಗತಿಯನ್ನೇ ಮತ್ತೊಂದು ವರ್ಷ ಕಡ್ಡಾಯವಾಗಿ ಓದಬೇಕಾದ ವಿಚಿತ್ರ ಮತ್ತು ಕಷ್ಟಕರ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಪೋಷಕರಲ್ಲಿ ತೀವ್ರ ಆತಂಕ ಹಾಗೂ ಗೊಂದಲ ಉಂಟುಮಾಡಿದೆ.

OLA ELECTRIC
OLA Electric Mobility Limited
(formerly known as Ola Electric Mobility Private Limited)
CIN: L74999KA2017PLC099619
Registered Office: Wing C, Prestige RMZ Startech, Hosur Road, Municipal Ward No.67, Municipal No. 140 Koramangala VI Bk, Bangalore - 560095, Bangalore South, Karnataka, India. **Tel:** 080-35440050, **Email Id:** companysecretary@olaelectric.com

STATEMENT OF AUDITED STANDALONE AND CONSOLIDATED FINANCIAL RESULTS FOR THE FOURTH QUARTER AND FINANCIAL YEAR ENDED MARCH 31, 2026

The Audited Standalone and Consolidated Financial Results for the Fourth Quarter and Financial Year ended March 31, 2026, have been reviewed by the Audit Committee and approved by the Board of Directors at their meeting held on Wednesday, May 20, 2026.
The Statutory Auditors of the Company, M/s. B S R & Co. LLP, Chartered Accountants, have issued an unmodified audit opinion on the aforesaid financial results.
The full format of the audited Standalone and Consolidated Financial Results for the Fourth Quarter and Financial Year ended March 31, 2026 are available on the Stock Exchange websites www.nseindia.com and www.bseindia.com and company website https://www.olaelectric.com/investor-relations/financials and can be accessed by scanning the QR code.

Scan to view full results

For Ola Electric Mobility Limited
Sd/-
Bhavish Aggarwal
Chairman and Managing Director
(DIN: 03287473)

Place: Bengaluru
Date: May 22, 2026
CONCEPT

wework
INDIA
WeWork India Management Limited
CIN: L74999KA2016PLC093227

EXTRACT OF AUDITED STANDALONE AND CONSOLIDATED FINANCIAL RESULTS FOR THE QUARTER AND FINANCIAL YEAR ENDED MARCH 31, 2026

(Rs. in Million, unless specified)

Sl. No	Particulars	Standalone			Consolidated		
		Quarter ended 31/03/2026	Year ended 31/03/2026	Quarter ended 31/03/2025	Quarter ended 31/03/2026	Year ended 31/03/2026	Quarter ended 31/03/2025
1	Total Income from Operations	6,928.46	24,317.63	5,356.34	6,960.63	24,401.80	5,393.67
2	Net profit/(loss) for the period (before tax, exceptional and/or extraordinary items)	422.01	543.38	(127.63)	430.47	550.85	(132.77)
3	Net profit/(loss) for the period before tax (after exceptional and/or extraordinary items)	422.01	500.44	(127.63)	440.06	528.97	(133.61)
4	Net profit/(loss) for the period after tax (after exceptional and/or extraordinary items)	643.72	722.15	374.56	658.70	749.18	367.32
5	Total Comprehensive Income for the period [Comprising profit/(loss) for the period (after tax) and other comprehensive income (after tax)]	644.04	716.34	377.93	660.45	744.11	370.64
6	Equity Share Capital (Face value of Rs. 10 each)	1,353.78	1,353.78	1,340.23	1,353.78	1,353.78	1,340.23
7	Reserves (excluding Non controlling interest) as shown in Audited Statement of Financial Position	1,698.55	1,698.55	752.31	1,625.91	1,625.91	656.75
8	Earnings Per Share (of Rs. 10/- each) 1. Basic (amount in Rs.)	4.80	5.39	2.83	4.88	5.55	2.76
	2. Diluted (amount in Rs.)	4.67	5.23	2.81	4.76	5.40	2.74

Notes:
a) The above is an extract of the Audited Financial Results for the quarter and year ended March 31, 2026, filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the aforesaid Financial Results are available on the websites of the Stock Exchanges (www.nseindia.com and www.bseindia.com) and on the Company's website at www.wework.co.in/investors-relations/financial-information/#results. The same can also be accessed by scanning the Quick Response (QR) code.
b) The above Audited Standalone and Consolidated Financial Results were reviewed by the Audit Committee and approved by the Board of Directors at their meetings held on May 21, 2026. The said Financial Results are prepared in accordance with the Indian Accounting Standards (Ind AS) as prescribed under Section 133 of the Companies Act, 2013.

For more information
Please scan:

For and on behalf of the Board of Directors

Karan Virwani
Managing Director & CEO
DIN: 03071954

Place: Bengaluru
Date: May 21, 2026

Registered Office: 6th Floor, Prestige Central, 36 Infantry Road, Shivaji Nagar, Bengaluru, Karnataka, India – 560001
Email ID: cswwi@wework.co.in | **Phone:** +91 88 8456 4500 | **Website:** www.wework.co.in

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

PUBLIC NOTICE
The general public are hereby notified that, my client Mr.M. Rajendra S/o. Late. V.M. Mahadeva Achari, has lost Original Sale deed dated 18.01.2008, bearing No.7179/2007-2008, registered at the Office of the Sub-registrar, Dasanapura, Bangalore pertaining to Property bearing Site No.178, 22nd Cross, 1st Stage, 5th Block, HBR Layout, Bangalore-560043. In this regard a Lost report No.2183956/2026, was lodged before the Bangalore City Police on 02.05.2026. If any person/s finds the said documents kindly inform the above stated person or address mentioned below. If any person/s misuses the said document, the same is not binding on my client and they shall do so at their own risk.
C.K.V.K. LAW ASSOCIATES
Mr. VENKATESH CHANDRAN M.A., L.L.B.
Advocates & Legal Consultants Bangalore-43
M : 9845846428, 9108784843, 080-48658774
E- Mail: rvlaw.76@gmail.com

ಪಿಎಸ್ ಎನ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್,
CIN : U72900KA2010PTC052506
ನಂ.380, ಇಟ್ಟಿನ ಸೆಂಟರ್, 1ನೇ ಮಹಡಿ, 3ನೇ ಬ್ಲಾಕ್, 16ನೇ ಮುಖ್ಯ ರಸ್ತೆ, ಕೋರಮಂಗಲ, ಬೆಂಗಳೂರು 560034

ಫಾರ್ಮ್ ನಂ. ಐ ಎನ್ ಸಿ 26
(ಕಂಪನಿಗಳ ನಿಯಮ 30ರ ಅನುಸಾರ (ಸಂಘಟನೆ) ನಿಯಮ 2014)

ಕೇಂದ್ರ ಸರ್ಕಾರದ ಪ್ರಾದೇಶಿಕ ನಿರ್ದೇಶಕರು ನೈಋತ್ಯ ಪ್ರದೇಶ ನಿರ್ದೇಶನಾಲಯ ಸಮ್ಮುಖದಲ್ಲಿ ಕಂಪನಿಯ ನೋಂದಾಯಿತ ಕಚೇರಿಯನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸಲು ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಜಾಹೀರಾತು. 2013 ರ ಕಂಪೆನಿಗಳ ಕಾಯ್ದೆ ವಿಭಾಗ 13 ರ ಉಪ ವಿಭಾಗ (4) ರ ಕಂಪನಿಗಳ ವಿಷಯದಲ್ಲಿ ಮತ್ತು 2014 ರ ಕಂಪನಿಗಳ ನಿಯಮ 30ರ, ಉಪ ನಿಯಮ (5) ಹಾಗೂ ಕಂಪನಿಗಳ ಷರತ್ತು (ಎ) ರ ಅನುಸಾರ ಕಂಪನಿಗಳ (ಸಂಘಟನೆ) ನಿಯಮದ ವಿಷಯದಲ್ಲಿ,
ಮತ್ತು
ಪಿಎಸ್ ಎನ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್ ನಂ.380, ಇಟ್ಟಿನ ಸೆಂಟರ್, 1ನೇ ಮಹಡಿ, 3ನೇ ಬ್ಲಾಕ್, 16ನೇ ಮುಖ್ಯ ರಸ್ತೆ, ಕೋರಮಂಗಲ, ಎನ್ ಎ, ಬೆಂಗಳೂರು, ಕರ್ನಾಟಕ, ಭಾರತ – 560034 , ಇಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಹೊಂದಿದ್ದು ಇವರ ವಿಷಯದಲ್ಲಿ ...ಅರ್ಜಿದಾರರು

ಈ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲೆ ತಿಳಿಸಿರುವ ಕಂಪನಿಯು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು 2013ರ ಕಂಪನಿಗಳ ಕಾಯ್ದೆ ವಿಭಾಗ 13ರ ವಿಷಯದಂತೆ ಕಂಪನಿಯ ಮೆಮೊರಾಂಡಂ ಆಫ್ ಅಸೋಯೇಷನ್ ನಲ್ಲಿರುವಂತಹ ಬದಲಾವಣೆಗೆ, ಕಂಪನಿಯು ಬುಧವಾರ, 18ನೇ ಮಾರ್ಚ್ 2026 ರಂದು ನಡೆದ ಹೆಚ್ಚುವರಿ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ, ನೋಂದಾಯಿತ ಕಚೇರಿಯನ್ನು ಕಂಪನಿಗಳ ರಿಜಿಸ್ಟ್ರಾರ್ ಕರ್ನಾಟಕ ರಾಜ್ಯದ ಬೆಂಗಳೂರಿನ ನ್ಯಾಯವ್ಯಾಪ್ತಿಯಿಂದ ಕಂಪನಿಗಳ ರಿಜಿಸ್ಟ್ರಾರ್, "ಕೇರಳ ರಾಜ್ಯ" ಕ್ಕೆ ವರ್ಗಾವಣೆ ಮಾಡಲು ಪ್ರಾಸ್ತಾಪಿಸಿರುತ್ತದೆ.
ಪ್ರಸ್ತುತ ಉದ್ದೇಶಿತ ಕಂಪನಿಯ ನೊಂದಾಯಿತ ಕಚೇರಿಯ ವರ್ಗಾವಣೆ ಬಗ್ಗೆ ಯಾವುದೇ ವ್ಯಕ್ತಿಯ ಇಚ್ಛೆಗೆ ವಿರುದ್ಧವಾಗಿದ್ದಲ್ಲಿ ಅಂತಹ ದೂರುಗಳನ್ನು ಹಾಗೂ ಕಾರಣ ತಿಳಿಸುವುದಿದ್ದರೆ ಅಥವಾ ಅವನ/ಅವಳ ಇಚ್ಛೆ ಮತ್ತು ವಿರೋಧದ ಅವನ/ ಅವಳ ಸ್ವಭಾವವನ್ನು ಪ್ರಮಾಣೀಕರಿಸುವ ಬೆಂಬಲ ಪತ್ರವನ್ನು MCA-21 Portal (www.mca.gov.in) ರವಾನೆ ಮಾಡುವುದರ ಮೂಲಕ, ಹೂಡಿಕೆದಾರನ ದೂರಿನ ನಮೂನೆಯನ್ನು ಪ್ರಮಾಣ ಪತ್ರದೊಂದಿಗೆ ನೊಂದಾಯಿತ ಅಂಚೆಯ ಮೂಲಕ ತಮ್ಮ ಕಾರಣ ಕೇಳ್ವಿಕೆಯೊಂದಿಗೆ, ಅಂತಹ ದೂರುಗಳನ್ನು ಪ್ರಾದೇಶಿಕ ನಿರ್ದೇಶಕರು, ದಕ್ಷಿಣ ಪೂರ್ವ ವಿಭಾಗ, 'ಇ' ವಿಂಗ್, 2 ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034, ಕರ್ನಾಟಕ ಇಲ್ಲಿಗೆ ಈ ಪ್ರಕಟಣೆ ಪ್ರಕಟಗೊಂಡ ಹದಿನಾಲ್ಕು ದಿನಗಳೊಳಗೆ ಹಾಗೂ ಅರ್ಜಿದಾರನ ದೂರಿನ ಒಂದು ನಕಲನ್ನು ಈ ಕೆಳಗೆ ತಿಳಿಸಿರುವ ಅರ್ಜಿದಾರ ಕಂಪನಿಯು ಕಚೇರಿಯು ನೋಂದಾಯಿತ ಕಚೇರಿ ವಿಳಾಸಕ್ಕೆ ತಲುಪುವಂತೆ ಕಳುಹಿಸಬೇಕಾಗಿ ವಿನಂತಿ, ನಂ. 380, ಇಟ್ಟಿನ ಸೆಂಟರ್, 1ನೇ ಮಹಡಿ, 3ನೇ ಬ್ಲಾಕ್, 16ನೇ ಮುಖ್ಯ ರಸ್ತೆ, ಕೋರಮಂಗಲ, ಎನ್ ಎ, ಬೆಂಗಳೂರು, ಕರ್ನಾಟಕ, ಭಾರತ – 560034.

ಅರ್ಜಿದಾರರ ಪರವಾಗಿ
ಪಿಎಸ್‌ಎನ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್
ಪುಲಿಕುಟ್‌ಮಾಡೊಂ ಕೃಷ್ಣೈರ್ ಅನಂತನಾರಾಯಣನ್
ವ್ಯವಸ್ಥಾಪಕ ನಿರ್ದೇಶಕರು
DIN: 00243007
ದಿನಾಂಕ: 22.5.2026, ಸ್ಥಳ: ಕೋರಮಂಗಲ

ವಾಟ್ಸಾಪ್ ಗ್ರೂಪ್ ಗಲಾಟೆ: ಗ್ಯಾಂಗ್ ಬಂಧನ

ಅಪರಾಧ ಸುದ್ದಿಗಳು

ಬೆಂಗಳೂರು: ಜಿಮ್ ವಾಟ್ಸಾಪ್ ಗ್ರೂಪ್‌ನಲ್ಲಿ ಆರಂಭವಾದ ಮಾತಿನ ಚಕಮಕಿ ಕೊನೆಗೆ ಯುವಕನ ಮೇಲೆ ಭೀಕರ ಹಲ್ಲೆಗೆ ತಿರುಗಿದ ಘಟನೆ ಸಂಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಅನ್ಶ್ ಠಾಕೂರ್ ಎಂಬ ಯುವಕನ ಮೇಲೆ ಮತಿನ್ ಮತ್ತು ಆತನ ಗ್ಯಾಂಗ್ ಮನ ಬಂದಂತೆ ಹಲ್ಲೆ ನಡೆಸಿರುವ ಆರೋಪ ಕೇಳಿಬಂದಿದೆ. ಯುವಕನ ಮೇಲಿನ ಹಲ್ಲೆಯ ದೃಶ್ಯಗಳು ಸ್ಥಳೀಯ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಪ್ರಸ್ತುತ ಪದವಿ ಶಿಕ್ಷಣ ಪಡೆಯುತ್ತಾ ಪಾರ್ಟ್ ಟೈಂ ಜಿಮ್ ಟ್ರೈನರ್ ಆಗಿ ಕೆಲಸ ಮಾಡುತ್ತಿದ್ದ ಅನ್ಶ್ ಠಾಕೂರ್ ಈ ಹಿಂದೆ ಇಲಿಯಾಜ್ ಎಂಬಾತನಿಂದ ಖಾಸಗಿ ಜಿಮ್‌ನಲ್ಲಿ ಟ್ರೈನಿಂಗ್ ಪಡೆದಿದ್ದನು. 2023ರಿಂದ ಸುಮಾರು ಎರಡು ವರ್ಷಗಳ ಕಾಲ ಇಲಿಯಾಜ್ ಬಳಿ ತರಬೇತಿ ಪಡೆದಿದ್ದ ಅನ್ಶ್, ಕಳೆದ ಆರು ತಿಂಗಳಿಂದ ಇಲಿಯಾಜ್ ಜತೆ ಸಂಪರ್ಕದಲ್ಲಿರಲಿಲ್ಲ ಎನ್ನಲಾಗಿದೆ. ಆದರೆ, ಮೇ 18ರ ರಾತ್ರಿ ಜಿಮ್ನ ವಾಟ್ಸಾಪ್ ಗ್ರೂಪ್‌ನಲ್ಲಿ ನಡೆದ ಕೆಲ ಮಾತುಕತೆಗಳ ವೇಳೆ ಬಾಡಿ ಬಿಲ್ಡಿಂಗ್ ವಿಚಾರವಾಗಿ ಇಲಿಯಾಜ್ ಮತ್ತು ಅನ್ಶ್ ನಡುವೆ ವಾಗ್ವಾದ ಶುರುವಾಗಿದ್ದು, ಇದೇ ಗಲಾಟೆ ನಂತರ ದೊಡ್ಡ ಮಟ್ಟಕ್ಕೆ ತಿರುಗಿದೆ ಎಂದು ತಿಳಿದುಬಂದಿದೆ.

ಈ ಗಲಾಟೆಯ ಮಧ್ಯೆ ಮತ್ತೊಬ್ಬ ಟ್ರೈನಿ ಆಗಿದ್ದ ಮತಿನ್ ಎಂಬಾತ ಎಂಟ್ರಿ ಕೊಟ್ಟಿದ್ದಾನೆ ಎನ್ನಲಾಗಿದೆ. ಟ್ರೈನರ್ ಬಗ್ಗೆ ಮಾತಾಡ್ತಿಯಾ ಎಂದು ಅನ್ಶ್‌ಗೆ ಅವಾಜ್ ಹಾಕಿ ಬೆದರಿಕೆ ಹಾಕಿದ್ದ ಆರೋಪ ಕೇಳಿಬಂದಿದೆ. ಬಳಿಕ ಮೇ 19ರಂದು ಮಾತನಾಡಬೇಕಿದೆ ಎಂದು ಹೇಳಿ ಅನ್ಶ್ ಮನೆ ಬಳಿ ಮತಿನ್ ಹಾಗೂ ಆತನ ಗ್ಯಾಂಗ್ ಬಂದಿದ್ದರು. ಆರಂಭದಲ್ಲಿ ಮಾತುಕತೆ ನಡೆಸಿದಂತೆ ನಟಿಸಿದ ಆರೋಪಿಗಳು, ಏಕಾಏಕಿ ಅನ್ಶ್ ಮೇಲೆ ಹಲ್ಲೆ ನಡೆಸಿದ್ದಾರೆ. ಮಾತನಾಡುತ್ತಿದ್ದ ವೇಳೆ ಮತಿನ್ ಎಂಬಾತ ಮೆಟಲ್ ನಕಲ್ ಬಳಸಿ ಅನ್ಶ್ ಮೇಲೆ ಹಲ್ಲೆ ನಡೆಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಗ್ಯಾಂಗ್ ಸೇರಿ ಯುವಕನ ಮೇಲೆ ಮನ ಬಂದಂತೆ ಹಲ್ಲೆ ನಡೆಸಿರುವ ದೃಶ್ಯಗಳು ಸ್ಥಳೀಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಹಲ್ಲೆಯಿಂದ ಗಾಯಗೊಂಡ ಅನ್ಶ್‌ಗೆ ಚಿಕಿತ್ಸೆ ನೀಡಲಾಗಿದ್ದು, ಘಟನೆ ಬಳಿಕ ಕುಟುಂಬಸ್ಥರು ಸಂಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಮೇರೆಗೆ ಸಂಜಯನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಕ್ಷಿಪ್ರ ಕಾರ್ಯಾಚರಣೆ ನಡೆಸಿದ್ದಾರೆ. ಪ್ರಕರಣ ಸಂಬಂಧ ಮತಿನ್, ಶೈಲೇಂದ್ರ, ಪವನ್, ಜಯಕಾಂತ್, ಶ್ರೇಯಸ್ ಸೇರಿ ಒಟ್ಟು ಆರು ಮಂದಿಯನ್ನು ಬಂಧಿಸಲಾಗಿದೆ. ಆರೋಪಿಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ಹೆಚ್ಚಿನ ತನಿಖೆ ಮುಂದುವರೆಸಿದ್ದು, ಹಲ್ಲೆಗೆ ನಿಖರ ಕಾರಣ ಮತ್ತು ಗ್ಯಾಂಗ್ನ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದಾರೆ.

ಶೌಚಾಲಯದಲ್ಲಿ ಸಿಲುಕಿದ್ದ ಮಗು ರಕ್ಷಣೆ

ಬೆಂಗಳೂರು: ತುರ್ತು ಪರಿಸ್ಥಿತಿಯಲ್ಲಿ ಸಾರ್ವಜನಿಕರ ಕರೆಗೆ ಬೆಂಗಳೂರು ನಗರ ಪೊಲೀಸರು ಸ್ಪಂದಿಸಿದ್ದು, ರಾಜಾಜಿನಗರದ ಮನೆಯೊಂದರ ಶೌಚಾಲಯದಲ್ಲಿ ಸಿಲುಕಿಕೊಂಡಿದ್ದ ಪುಟ್ಟ ಮಗುವನ್ನು, ಸ್ಥಳೀಯ ಹೊಯ್ಸಳ ತಂಡದ ಸಿಬ್ಬಂದಿ ಕೆಲವೇ ನಿಮಿಷಗಳಲ್ಲಿ ರಕ್ಷಿಸಿದ್ದಾರೆ.

ರಾಜಾಜಿನಗರ 1ನೇ ಬ್ಲಾಕ್‌ನ ನಿವಾಸವೊಂದರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದ್ದು, ಮನೆಯಲ್ಲಿದ್ದ ಪುಟ್ಟ ಮಗುವೊಂದು ಆಟವಾಡುತ್ತಾ ಶೌಚಾಲಯದ ಒಳಗೆ ಹೋಗಿ ಬಾಗಿಲು ಹಾಕಿಕೊಂಡಿತ್ತು. ತಾಂತ್ರಿಕ ದೋಷದಿಂದಾಗಿ ಬಾಗಿಲು ಒಳಭಾಗದಿಂದ ಲಾಕ್ ಆಗಿದ್ದು, ತೆರೆಯಲು ಸಾಧ್ಯವಾಗಲಿಲ್ಲ. ಮಗು ಒಳಗೆ ಸಿಲುಕಿಕೊಂಡು ಗಾಬರಿಯಿಂದ ಅಳಲಾರಂಭಿಸಿತು. ಪೋಷಕರು ಬಾಗಿಲು ಒಡೆಯಲು ಹರಸಾಹಸಪಟ್ಟರೂ ಮಗು ಮತ್ತು ಪೋಷಕರ ನಡುವೆ ತಡೆಯಾಗಿ ನಿಂತಿದ್ದ ಬಾಗಿಲು ತೆರೆಯಲಿಲ್ಲ. ಮಗುವಿನ ಅಳಲು ಮತ್ತು ಹೊರಗಿನವರ ನೈಜ ಆತಂಕದ ನಡುವೆ ತಕ್ಷಣದ ಸಹಾಯಕ್ಕಾಗಿ ಪೋಷಕರು 'ನಮ್ಮ-112' ತುರ್ತು ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದರು.

ಕ್ಷಣಾರ್ಧದಲ್ಲಿ ಸ್ಥಳಕ್ಕೆ ಬಂದ ಹೊಯ್ಸಳ ತಂಡ: ತುರ್ತು ಸಹಾಯವಾಣಿಗೆ ಕರೆ ಬಂದ ಬೆನ್ನಲ್ಲೇ, ನಿಯಂತ್ರಣ ಕೊಠಡಿಯಿಂದ ಕೂಡಲೇ ಮಹಾಲಕ್ಷ್ಮೀಲೇಔಟ್ ಪೊಲೀಸ್ ಠಾಣೆಯ ಹೊಯ್ಸಳ-102 ವಾಹನಕ್ಕೆ ಸಂದೇಶ ರವಾನಿಸಲಾಯಿತು. ಈ ವೇಳೆ ಹೊಯ್ಸಳ ವಾಹನದಲ್ಲಿದ್ದ ಎಎಸ್‌ಐ ಶಂಕರ್ ಮತ್ತು ಮುಖ್ಯಪೇದೆ ವಿಜಯ್ ಕುಮಾರ್ ಕೇವಲ 2 ನಿಮಿಷಗಳ ಅವಧಿಯಲ್ಲಿ ಅವರು ಘಟನಾ ಸ್ಥಳಕ್ಕೆ ಧಾವಿಸಿದರು. ಸ್ಥಳಕ್ಕೆ ಬಂದ ತಕ್ಷಣ ಪರಿಸ್ಥಿತಿಯನ್ನು ಅರಿತ ಸಿಬ್ಬಂದಿಯವರು, ವಿಳಂಬ ಮಾಡದೆ ಮಗುವಿನ ರಕ್ಷಣೆಗೆ ಮುಂದಾದರು. ಶೌಚಾಲಯದ ಬಾಗಿಲು ಮುರಿಯುವ ಬದಲು, ಕಿಟಕಿಯ ಹಿಂಬದಿಯ ಮೂಲಕ ಒಳಗೆ ಪ್ರವೇಶಿಸಲು ಸಾಧ್ಯವೇ? ಎಂದು ಪರಿಶೀಲಿಸಿದರು. ಸಾಹಸದಿಂದ ಕಿಟಕಿಯ ಮೂಲಕ ಒಳ ಪ್ರವೇಶಿಸಿದ ಸಿಬ್ಬಂದಿಯವರು, ಮಗುವಿನ ಪ್ರಾಣಕ್ಕೆ ಯಾವುದೇ ಅಪಾಯವಾಗದಂತೆ ಎಚ್ಚರಿಕೆ ವಹಿಸಿ ಶೌಚಾಲಯದ ಬಾಗಿಲನ್ನು ತೆರೆದರು.

ಲಾಡ್ಜ್‌ನಲ್ಲಿ ಹೃದಯಾಘಾತದಿಂದ ವ್ಯಕ್ತಿ ಸಾವು

ಬೆಂಗಳೂರು: ಲಾಡ್ಜ್‌ನಲ್ಲಿ ತಂಗಿದ್ದ ತಮಿಳುನಾಡು ಮೂಲದ ವ್ಯಕ್ತಿಗೆ ಹೃದಯಾಘಾತವಾಗಿ ಸಾವನ್ನಪ್ಪಿರುವ ಘಟನೆ ಮಡಿವಾಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮುರುಗನ್ ಮಧು (35) ಸಾವನ್ನಪ್ಪಿದ ವ್ಯಕ್ತಿ. ಕೃಷ್ಣಗಿರಿ ಜಿಲ್ಲೆ ಪುಳಿಯಂಪಟ್ಟಿ ನಿವಾಸಿಯಾಗಿರುವ ಮಧು, ಬುಧವಾರ ಲಾಡ್ಜ್‌ನಲ್ಲಿ ಹೃದಯಾಘಾತಗೊಂಡು ಸ್ಥಳದಲ್ಲಿ ಸಾವನ್ನಪ್ಪಿದ್ದಾರೆ. ಮೃತದೇಹವನ್ನ ಮರಣೋತ್ತರ ಪರೀಕ್ಷೆಗಾಗಿ ಸೆಂಟ್ ಜಾನ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ. ಲಾಡ್ಜ್ ಮಾಲೀಕರು ನೀಡಿದ ದೂರಿನ ಮೇರೆಗೆ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಹಿಂದೆ ಎರಡು ಬಾರಿ ಲಘು ಹೃದಯಾಘಾತ ಸಂಭವಿಸಿತ್ತು. ಮೇ 18ರಂದು ಕೆಲಸದ ನಿಮಿತ್ತ ಬೆಂಗಳೂರಿಗೆ ಹೋಗಿ ಬರುವುದಾಗಿ ತಾಯಿ ಬಳಿ ಹೇಳಿದ್ದರು. ಇದರಂತೆ ಮಡಿವಾಳದ ಗೋಲ್ಡನ್ ನೆಕ್ಸ್ ಎಂಬ ಲಾಡ್ಜ್‌ಗೆ ಬಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಅತ್ಯಾಚಾರ ಯತ್ನ: ಪ್ರಕರಣ ದಾಖಲು

ಬೆಂಗಳೂರು: ನಗರದ ಖಾಸಗಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಯುವತಿಯು ಸ್ನೇಹಿತರೊಂದಿಗೆ ನಡೆದ ಪಾರ್ಟಿ ವೇಳೆ ಪರಿಚಯಸ್ಥರಿಂದಲೇ ಅತ್ಯಾಚಾರಕ್ಕೆ ಯತ್ನಿಸಿರುವ ಬಗ್ಗೆ ಮಡಿವಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 20 ವರ್ಷದ ಯುವತಿ ನೀಡಿದ ದೂರಿನ ಮೇರೆಗೆ ಹೈನಾಸ್, ಸುರೇಶ್ ಇನ್ನಿತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಯುವತಿಯು ಕಾಲೇಜು ವ್ಯಾಸಂಗದ ಬಿಡುವಿನ ವೇಳೆ ಮೊಮೋಸ್ ಹೋಟೆಲ್‌ನಲ್ಲಿ ಅರೆಕಾಲಿಕವಾಗಿ ಕೆಲಸ ಮಾಡುತ್ತಿದ್ದರು. ಅದರ ಮಾಲೀಕರು ಹೋಟೆಲ್ ಮಾರಾಟಕ್ಕೆ ಮುಂದಾಗಿದ್ದರು. ಈ ವೇಳೆ ಆರೋಪಿಯಾಗಿರುವ ಬ್ರೋಕರ್ ಹೈನಾಸ್ ಎಂಬಾತ ಹೋಟೆಲ್ ಮಾರಾಟ ಮಾಡಿಸಿಕೊಡುವುದಾಗಿ ಭರವಸೆ ನೀಡಿದ್ದ. ಇನ್ನೆರಡು ದಿನಗಳಲ್ಲಿ ಹೋಟೆಲ್ ಮಾರಾಟವಾಗಲಿದೆ, ಈ ಸಂಬಂಧ ಪಾರ್ಟಿ ನೀಡುವಂತೆ ಹೋಟೆಲ್ ಮಾಲೀಕರಲ್ಲಿ ಕೇಳಿಕೊಂಡಿದ್ದ.

ಸ್ನೇಹಿತರಿಂದ ಯುವತಿ ರಕ್ಷಣೆ: ಮೇ 11ರಂದು ರಾತ್ರಿ ಇಬ್ಬರು ಹೋಟೆಲ್ ಮಾಲೀಕರು, ಯುವತಿ, ಆರೋಪಿ ಸೇರಿ ನಾಲ್ವರು ಪಾರ್ಟಿ ಮಾಡಿದ್ದಾರೆ. ಈ ವೇಳೆ ಊಟ ತರಲೆಂದು ಸ್ನೇಹಿತರಿಬ್ಬರು ಹೊರಗೆ ಹೋಗಿದ್ದರು. ಆಗ ಕೊಠಡಿಯಲ್ಲಿ ಯುವತಿ ಜತೆಯಿದ್ದ ಆರೋಪಿಯು ಆಕೆಯ ಬಟ್ಟೆ ಕಳಚಿ ಬೆತ್ತಲು ಮಾಡಿ ಅತ್ಯಾಚಾರಕ್ಕೆ ಯತ್ನಿಸಲು ಮುಂದಾಗಿದ್ದ. ಈ ವೇಳೆ, ಸ್ನೇಹಿತರು ಬಂದು ರಕ್ಷಿಸಿದ್ದಾರೆ. ಇದಕ್ಕೆ ಕೆರಳಿದ ಆರೋಪಿಯು ಮದ್ಯದ ಬಾಟಲ್ ಹಿಡಿದು ಕೊಲೆ ಮಾಡುವುದಾಗಿ ಬೆದರಿಸಿದ್ದ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಹೋಟೆಲ್ ಮಾಲೀಕರ ಮೇಲೆ ಹಲ್ಲೆ ಆರೋಪ:
ಈ ಬಗ್ಗೆ ದೂರು ನೀಡಲು ಹೋದಾಗ ಆರೋಪಿಗಳು ಜೀವ ಬೆದರಿಕೆ ಹಾಕಿದ್ದಾರೆ. ಮೇ 14ರಂದು ಯುವತಿ ಕೆಲಸ ಮಾಡುವ ಹೋಟೆಲ್ ಬಳಿ ಅಪರಿಚಿತರು ಅನುಮಾನಾಸ್ಪದವಾಗಿ ಸುತ್ತುತ್ತಿರುವುದನ್ನು ಕಂಡು ಭೀತಿಯಿಂದ ಕೇರಳಕ್ಕೆ ಹೋಗಿದ್ದಾರೆ. ಆರೋಪಿಯ ಕುಮ್ಮಕ್ಕಿನಿಂದ 9 ಮಂದಿ ಅಪರಿಚಿತ ಆರೋಪಿಗಳು ಸ್ನೇಹಿತರಾಗಿದ್ದ ಹೋಟೆಲ್ ಮಾಲೀಕರ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ದೂರಿನಲ್ಲಿ ಯುವತಿ ಆರೋಪಿಸಿದ್ದಾರೆ.

ಒಪ್ಪಿಗೆ ಮೇರೆಗೆ ದೈಹಿಕ ಸಂಪರ್ಕ: ಆರೋಪಿ

ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕೇರಳ ಮೂಲದ ಹೈನಾಸ್‌ಗೆ ನೋಟಿಸ್ ನೀಡಿ ವಿಚಾರಣೆಗೆ ಬರುವಂತೆ ತಿಳಿಸಿದ್ದಾರೆ. ಯುವತಿಯ ಒಪ್ಪಿಗೆ ಮೇರೆಗೆ ದೈಹಿಕ ಸಂಪರ್ಕ ಬೆಳೆಸಿದ್ದೇನೆ. ಈ ವೇಳೆ, ನಡೆಸಿದ ಮಾತುಕತೆಗೆ ಸಂಬಂಧಿಸಿದ ದಾಖಲೆ ನೀಡುವುದಾಗಿ ಆರೋಪಿ ಹೇಳಿದ್ದಾನೆ. ಸದ್ಯ ಆತನನ್ನು ಕರೆಯಿಸಿ ಕೂಲಂಕಷ ವಿಚಾರಣೆ ನಡೆಸಿ ಸತ್ಯಾಸತ್ಯತೆ ಆಧರಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಎಸ್‌ಐಆರ್ ಪ್ರಶ್ನಿಸಿ ಸುಪ್ರೀಂಗೆ ಮೊರೆ?

ಮೂರ್ನಾಲ್ಕು ದಿನಗಳಲ್ಲಿ ರಾಜ್ಯ ಸರಕಾರ ಅಂತಿಮ ನಿರ್ಣಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಮತಪಟ್ಟಿ ವಿಶೇಷ ತೀವ್ರ ಪರಿಷ್ಕರಣೆಯಲ್ಲಿ(ಎಸ್‌ಐಆರ್) ನಲ್ಲಿ ಮತದಾರನ ಹಕ್ಕು ಕಸಿಯುವ, ದಮನ ಮಾಡುವ ಪ್ರಕ್ರಿಯೆ ನಡೆದರೆ ಅದನ್ನು ತಡೆಯುವ ಪ್ರಯತ್ನ ಮಾಡಬೇಕೆಂಬ ಚಿಂತನೆ ನಡೆಸಿ ಈ ಸಂಬಂಧ ಸುಪ್ರೀಂಕೋರ್ಟ್ ಮೆಟ್ಟಿಲು ಹತ್ತಲು ಸಚಿವ ಸಂಪುಟ ಸಭೆಯಲ್ಲಿ ಗಂಭೀರ ಚರ್ಚೆ ನಡೆದಿದ್ದು, ಮೂರ್ನಾಲ್ಕು ದಿನಗಳಲ್ಲಿ ಅಂತಿಮ ನಿರ್ಣಯ ಕೈಗೊಳ್ಳಲು ಸರಕಾರ ಸಿದ್ಧತೆ ನಡೆಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯ ನಂತರ ಮಾಹಿತಿ ನೀಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್ ಮಾಹಿತಿ ನೀಡಿ, ಎಸ್‌ಐಆರ್ ಸಾಧಕ ಬಾಧಕ ಕುರಿತು ಸುದೀರ್ಘ ಹಾಗೂ ಗಂಭೀರ ಚರ್ಚೆ ನಡೆಸಲಾಗಿದೆ. ಈ ವಿಚಾರ ಸಂಬಂಧ ಸಭೆಯಲ್ಲಿ ಚರ್ಚೆ ಪೂರ್ಣ ಆಗಿಲ್ಲ. ಮುಂದಿನ ಮೂರು ನಾಲ್ಕು ದಿನಗಳ ನಂತರ ಮುಂದಿನ ನಡೆ ಬಗ್ಗೆ ತೀರ್ಮಾನ ಮಾಡಲಾಗುವುದು. ಆರಂಭಿಕ ಹಂತದಲ್ಲಿ ಆಯೋಗದ ಮುಂದೆ ಹೋಗುವ ಮತ್ತು ಕಾನೂನು ಪರಿಮಿತಿಗಳ ಬಗ್ಗೆ ಚರ್ಚೆಯಾಗಿದ್ದು, ಈ ಸಂಬಂಧ ಸಿಎಂ ಸಿದ್ದರಾಮಯ್ಯ ಮುಂದಿನ ವಿಚಾರ ತೀರ್ಮಾನ ಮಾಡುತ್ತಾರೆ. ಒಟ್ಟಿನಲ್ಲಿ ಮತಾಧಿಕಾರ ರದ್ದು ಆಗುವ ಬಗ್ಗೆ ಸಂಪುಟ ಸಭೆಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ ಎಂದರು.

ಎಸ್‌ಐಆರ್ ಸಂಬಂಧ ರಾಷ್ಟ್ರದಲ್ಲಿ ಹಲವು ಅವಘಡಗಳು ಜರುಗಿದ್ದು, ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಮತದಾರರ ಹಕ್ಕು ಹೋಗಿರುವುದು, ಬೇರೆ ರಾಜ್ಯಗಳಲ್ಲಿ ಆಗಿರುವ ಹಲವು ಗಂಭೀರ ಆಕ್ಷೇಪಗಳು, ತಮಿಳುನಾಡಿನ ವಿಚಾರ ಗಮನದಲ್ಲಿಟ್ಟುಕೊಳ್ಳಲಾಗಿದೆ. ನಾಗರಿಕರಿಗೆ ಮತದಾನದ ಹಕ್ಕನ್ನು ಉಳಿಸಿಕೊಳ್ಳುವುದರಲ್ಲಿ ಸರ್ವ ಪ್ರಯತ್ನ ಮಾಡಬೇಕೆಂದು ಚಿಂತನೆ ಮಾಡಲಾಗಿದೆ. ಈ ಸಂಬಂಧ ಮತದಾರರ ಅಂತಿಮ ಪಟ್ಟಿ ಸಂಬಂಧಿತ ವಿಚಾರಕ್ಕೆ ಸುಪ್ರೀಂ ಮೆಟ್ಟಲು ಹತ್ತಲು ನಿರ್ಧರಿಸಲಾಗಿದೆ ಎಂದರು.

ಪಿ.ಎನ್.ದೇಸಾಯಿ ಮಾನವ ಹಕ್ಕು ಆಯೋಗಕ್ಕೆ

ಪಿ.ಎನ್.ದೇಸಾಯಿ ಅವರನ್ನು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನೇಮಿಸಲು ತೀರ್ಮಾನ ಮಾಡಲಾಗಿದೆ. ಇದೇ ವೇಳೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ಸಂಪುಟ ಅನುಮೋದನೆ ನೀಡಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಸಂಪುಟ ತೀರ್ಮಾನಗಳು

- ಮಾನವ ಹಕ್ಕು ಆಯೋಗದ ಅಧ್ಯಕ್ಷರಾಗಿ ಪಿ.ಎನ್.ದೇಸಾಯಿ ನೇಮಕ
- 52 ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ಅನುಮೋದನೆ
- ಎಸ್ಸೆಸ್ಸೆಲ್ಸಿ ಟಾಪರ್‌ಗಳಿಗೆ ಉಚಿತ ಪಿಯು ಶಿಕ್ಷಣದ ಜತೆ ನೀಟ್, ಸಿಇಟಿ ಕೋಚಿಂಗ್
- ಕಾರವಾರ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ ಕಟ್ಟಡಕ್ಕೆ 100 ಕೋಟಿ ರು. ಮಂಜೂರು
- ಹೇಮಗಿರಿ ಶುಗರ್ಸ್ ಕಂಪನಿಗೆ ಮಂಡ್ಯದಲ್ಲಿ 100 ಎಕರೆ ಜಮೀನು ಮಾರಾಟ

ಸರಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿ ಜಿಲ್ಲೆಗೆ 15 ವಿದ್ಯಾರ್ಥಿಗಳಂತೆ 500 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 15 ಕೋಟಿ ರು. ವೆಚ್ಚದಲ್ಲಿ 2 ವರ್ಷಗಳ ವಸತಿ ಸಹಿತ ಪಿಯುಸಿ (ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ) ಶಿಕ್ಷಣದೊಂದಿಗೆ ಜೆಇಇ, ನೀಟ್, ಸಿಇಟಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಒಪ್ಪಿಗೆ ನೀಡಲಾಗಿದೆ.

→ 4

ಪುಲ್ವಾಮಾ ದಾಳಿ ರೂವಾರಿ ಹಮ್ಜಾ ಬುರ್ಹಾನ್ ಹತ್ಯೆ

ದೆಹಲಿ: 2019ರ ಪುಲ್ವಾಮಾ ಉಗ್ರ ದಾಳಿಯ ಮಾಸ್ಟರ್ ಮೈಂಡ್ ಹಮ್ಜಾ ಬುರ್ಹಾನ್‌ನನ್ನು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಅಪರಿಚಿತ ವ್ಯಕ್ತಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ತರಬೇತುದಾರನ ರೂಪದಲ್ಲಿ ಅಡಗಿದ್ದ ಹಮ್ಜಾ ಬುರ್ಹಾನ್ ಅಲಿಯಾಸ್ 'ಡಾಕ್ಟರ್' ಮೇಲೆ ಅಪರಿಚಿತ ವ್ಯಕ್ತಿಗಳು ಮುಜಾಫರಾಬಾದ್ ಕಚೇರಿಯೊಳಗೆ ನುಗ್ಗಿ ಹಲವು ಸುತ್ತಿನ ಗುಂಡಿನ ದಾಳಿ ನಡೆಸಿದ್ದಾರೆ.

ಮೋದಿ ಸಚಿವ ಸಂಪುಟ ಶೀಘ್ರವೇ ಪುನಾರಚನೆ?

ದೆಹಲಿ: ಪಂಚ ರಾಷ್ಟ್ರಗಳ ಪ್ರವಾಸದಿಂದ ಹಿಂತಿರುಗಿರುವ ಪ್ರಧಾನಿ ನರೇಂದ್ರ ಮೋದಿ ಅವರು ಸದ್ಯವೇ ತಮ್ಮ ಸಂಪುಟ ಪುನಾರಚನೆ ಮಾಡುವ ನಿರೀಕ್ಷೆ ಇದೆ. ಮೋದಿ 3.0 ಸರಕಾರಕ್ಕೆ ಮುಂದಿನ ತಿಂಗಳು ಎರಡು ವರ್ಷ ತುಂಬಲಿರುವ ಹಿನ್ನೆಲೆಯಲ್ಲಿ, ಜೂನ್ ಮಧ್ಯ ಭಾಗದಲ್ಲಿ ಸಂಪುಟ ವಿಸ್ತರಣೆ ಆಗುವುದು ಬಹುತೇಕ ಖಚಿತ ಎಂದು ಹೇಳಲಾಗುತ್ತಿದೆ.

ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿವೈವಿ ಮುಂದುವರಿಕೆ ?

ಬೆಂಗಳೂರು: ಬಿಜೆಪಿಯ ರಾಜ್ಯಾಧ್ಯಕ್ಷರಾಗಿ ಬಿ.ವೈ. ವಿಜಯೇಂದ್ರ ಮುಂದುವರಿಯುವುದು ಖಚಿತವಾಗಿದ್ದು, ಹೈಕಮಾಂಡ್ ಶೀಘ್ರದಲ್ಲಿಯೇ ನಿರ್ಧಾರ ಪ್ರಕಟಿಸುವ ನಿರೀಕ್ಷೆ ಇದೆ. ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ವಿಶೇಷ ಸಂಘಟನಾ ಸಭೆಯ ನಂತರ ಮಾತನಾಡಿದ ಪಕ್ಷದ ರಾಜ್ಯ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರವಾಲ್ ಈ ಸೂಚನೆ ನೀಡಿದ್ದಾರೆ.

ಸೊಂಪಾದ ಪುಟಗಳು

ಅಪಸ್ವರವನ್ನೇ ಮೆಲೋಡಿಯನ್ನಾಗಿಸುವ ಮೋದಿ ಮೋಡಿ
ಶಿಶಿರಕಾಲ
ಶಿಶಿರ್ ಹೆಗಡೆ

ಅಬೋಲಿ ಹೂವುಗಳನ್ನು ಬೆಳೆಯುವ ಹಳ್ಳಿ!
ಶಶಾಂಕಣ
ಶಶಿಧರ ಹಾಲಾಡಿ

ಫನ್‌ತರಂಗ

- ರಘುಪತಿ ಶೃಂಗೇರಿ -

ಸೋಷಿಯಲ್ ಮೀಡಿಯಾದಲ್ಲಿ 'ಕಾಕ್ರೋಚ್ ಜನತಾ ಪಾರ್ಟಿ' ಅಬ್ಬರ



ದ್ವಿತೀಯ ಪಿಯು: ತೇರ್ಗಡೆ ಪ್ರಮಾಣ ಶೇ.92.25ಕ್ಕೆ ಏರಿಕೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ –2ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದ್ದು, ರಾಜ್ಯದ ಎರಡೂ ಪರೀಕ್ಷೆಗಳ ಒಟ್ಟು ಕ್ರೋಢೀಕೃತ ಫಲಿತಾಂಶವು ಶೇ.92.25ಕ್ಕೆ ಏರಿಕೆಯಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಎಸ್. ಮಧುಬಂಗಾರಪ್ಪ ತಿಳಿಸಿದ್ದಾರೆ.

ದ್ವಿತೀಯ ಪರೀಕ್ಷೆ–1ರಲ್ಲಿ ಶೇ.86.52ರಷ್ಟು ಫಲಿತಾಂಶ ಬಂದಿತ್ತು. ಕಳೆದ ವರ್ಷದ ಶೇ.85.19 ಫಲಿತಾಂಶಕ್ಕೆ ಹೋಲಿಸಿದರೆ ಇದು ಶೇ.7.06ರಷ್ಟು ಮಹತ್ವದ ಏರಿಕೆಯಾಗಿದೆ. ಇದು ಕರ್ನಾಟಕದ ಇತಿಹಾಸದಲ್ಲೇ ದೊಡ್ಡ ಸಾಧನೆಯಾಗಿದೆ ಎಂದು ಸಚಿವರು ಬಣ್ಣಿಸಿದ್ದಾರೆ. ಕಲಾ ವಿಭಾಗದ ಫಲಿತಾಂಶ ಕಳೆದ ವರ್ಷದ ಶೇ.69.47ರಿಂದ ಶೇ.83.31ಕ್ಕೆ, ವಾಣಿಜ್ಯ ವಿಭಾಗದ ಫಲಿತಾಂಶ ಶೇ.87.83ರಿಂದ ಶೇ.92.84ಕ್ಕೆ ಹಾಗೂ ವಿಜ್ಞಾನ ವಿಭಾಗದ ಫಲಿತಾಂಶ ಶೇ.91.88ರಿಂದ ಶೇ.96.01ಕ್ಕೆ ಏರಿಕೆಯಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಪರೀಕ್ಷೆಗೆ 80,535 ವಿದ್ಯಾರ್ಥಿಗಳು ಹಾಜರಾಗಿದ್ದರು.

ವಿಶ್ವವಾಣಿಯಿಂದ ಕನ್ನಡ ಸಂಸ್ಕೃತಿ ಜಾಗತಿಕ ಮಟ್ಟಕ್ಕೆ: ಹೊರಟ್ಟಿ

ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮಕ್ಕೆ ಸಭಾಪತಿ ಮೆಚ್ಚುಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡ ಪತ್ರಿಕೋದ್ಯಮದಲ್ಲಿಯೇ ವಿನೂತನ ಕಾರ್ಯಕ್ರಮವಾಗಿರುವ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮಕ್ಕೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮುಕ್ತಕಂಠದಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ವಿಶ್ವವಾಣಿ ಗ್ಲೋಬಲ್ ಫೋರಂ ವತಿಯಿಂದ ಕರುನಾಡಿನ ಸಾಧಕರನ್ನು ವಿಶ್ವ ಮಟ್ಟದಲ್ಲಿ ಗೌರವಿಸುವ ವಿಭಿನ್ನ ಆಲೋಚನೆಯೊಂದಿಗೆ ಕಳೆದ ಮೂರು ವರ್ಷದ ಅವಧಿಯಲ್ಲಿ 12 ದೇಶದಲ್ಲಿ ನಡೆಸಿ, ಫಿಲಿಪೈನ್ಸ್‌ನಲ್ಲಿ 13ನೇ ಆವೃತ್ತಿಯನ್ನು ಹಮ್ಮಿಕೊಳ್ಳಲಾಗಿತ್ತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಅಸಾಮಾನ್ಯ ಸಾಧಕರಿಗೆ 'ಗ್ಲೋಬಲ್ ಅಚೀವರ್ಸ್' ಪ್ರಶಸ್ತಿ ನೀಡುವ ಜತೆಗೆ ಸಪ್ತಸಾವಿರ ದ್ವೀಪದ ಗುಚ್ಛದಂತಿರುವ ಫಿಲಿಪೈನ್ಸ್‌ನ ಐತಿಹಾಸಿಕ, ಪಾರಂಪರಿಕ ಸ್ಥಳಗಳಿಗೆ ವಿಶ್ವವಾಣಿ ಸಮೂಹದ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ನೇತೃತ್ವದ ನಿಯೋಗ ಭೇಟಿ ನೀಡಿತ್ತು. ಈ ನಿಯೋಗದಲ್ಲಿ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಪರಿಷತ್ ಸದಸ್ಯ ತಿಪ್ಪಣ್ಣಪ್ಪ ಕಮಕನೂರು, ಹಿರಿಯ ವಕೀಲ ಅರುಣ್ ಶ್ಯಾಮ್ ಸೇರಿದಂತೆ 40 ಗಣ್ಯರು ಭಾಗವಹಿಸಿದ್ದರು.

ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಸವರಾಜ ಹೊರಟ್ಟಿ ಅವರು, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಶ್ಲಾಘಿಸಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರಿಗೆ ಅಭಿನಂದನಾ ಪತ್ರ ಬರೆದಿದ್ದಾರೆ. ಕನ್ನಡಿಗರ ಸಾಧನೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ವಿದೇಶಿ ನೆಲದಲ್ಲಿ ಸನ್ಮಾನಿಸುವ ಮೂಲಕ ಕನ್ನಡದ ಹಿರಿಮೆ–ಗರಿಮೆಯನ್ನು ಅನಾವರಣಗೊಳಿಸಿರುವುದು ಶ್ಲಾಘನೀಯ ಕಾರ್ಯ. ಮನಿಲಾದಲ್ಲಿ ನಡೆದ ಕಾರ್ಯಕ್ರಮವನ್ನು ವೈಭವಪೂರ್ಣವಾಗಿ ಹಾಗೂ ವಿನೂತನವಾಗಿ ಆಯೋಜಿಸಿರುವುದು ಉತ್ತಮ ನಡೆ. ಪ್ರಶಸ್ತಿ ಪ್ರದಾನ ಸಮಾರಂಭದ ಜತೆಗೆ ಫಿಲಿಪೈನ್ಸ್‌ನ ಐತಿಹಾಸಿಕ ಸ್ಥಳಗಳಿಗೆ ಅಧ್ಯಯನ ಪ್ರವಾಸ ಹಮ್ಮಿಕೊಂಡು, ಆ ದೇಶದ ನೆಲ, ಜಲ, ಭೂಗೋಳ ಮತ್ತು ಸಂಸ್ಕೃತಿ ಕುರಿತು ಮಾಹಿತಿಯನ್ನು ಹಂಚಿಕೊಂಡಿರುವುದು ವಿಶೇಷ ಮೆರುಗು ತಂದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಬಸವರಾಜ ಎಸ್. ಹೊರಟ್ಟಿ
ಸಭಾಪತಿ
ಕರ್ನಾಟಕ ವಿಧಾನ ಪರಿಷತ್ತು
BASAVARAJA S. HORATTI
Chairman
Karnataka Legislative Council

Off. Tel : 2225 9112
2225 8575 / 2203 3325
Fax : 2225 2068
ಕೊಠಡಿ ಸಂಖ್ಯೆ: 117, ಒಂದನೇ ಮಹಡಿ, ವಿಧಾನ ಸೌಧ, ಡಾ|| ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560 001
Room No. 117, 1st Floor, Vidhana Soudha
Dr. B.R. Ambedkar Veedhi
Bengaluru - 560 001
E-mail : chairmanklc.uh@gmail.com

ಸಂಖ್ಯೆ:ಕವಿಪಸ: 4195 :2025
ದಿನಾಂಕ:20-05-2026

"ಅಭಿನಂದನಾ ಪತ್ರ"

ತಮ್ಮ ನೇತೃತ್ವದಲ್ಲಿ ವಿಶ್ವವಾಣಿ ವತಿಯಿಂದ ಹಮ್ಮಿಕೊಂಡಿದ್ದ "ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ" ಸಮಾರಂಭವನ್ನು ಫಿಲಿಪ್ಪೈನ್ಸ್ ದೇಶದ ಮನಿಲಾ ನಗರದಲ್ಲಿ ವಿನೂತನವಾಗಿ ಹಾಗೂ ವೈಭವಪೂರ್ಣವಾಗಿ ನಡೆಸಿ ಕನ್ನಡಿಗರು ಮಾಡಿರುವ ಅಪ್ರತಿಮ ಸೇವೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿ ಅವರನ್ನು ಪ್ರೋತ್ಸಾಹಿಸುವ ಮೂಲಕ ಅವರಿಗೆ ವಿದೇಶಿ ನೆಲದಲ್ಲಿ ಸನ್ಮಾನಿಸುವ ಕಾರ್ಯಕ್ರಮವನ್ನು ನಡೆಸುವ ಮೂಲಕ ಕನ್ನಡದ ಹಿರಿಮೆ-ಗರಿಮೆಯನ್ನು ವಿದೇಶಿ ನೆಲದಲ್ಲಿ ಮತ್ತೊಮ್ಮೆ ಅನಾವರಣಗೊಳಿಸಿದ ತಮಗೆ ಹೃತ್ಪೂರ್ವಕ ಅಭಿನಂದನೆಗಳು.

ಮುಂದುವರೆದು, ಸದರಿ ಸನ್ಮಾನ ಕಾರ್ಯಕ್ರಮದ ನೇಪಥ್ಯದಲ್ಲಿ ಫಿಲಿಪ್ಪೈನ್ಸ್ ದೇಶದ ಹಲವು ಐತಿಹಾಸಿಕ ಸ್ಥಳಗಳಿಗೆ ಅಧ್ಯಯನ ಪ್ರವಾಸಕ್ಕೆ ಕರೆದುಕೊಂಡು ಹೋಗಿ ಸ್ಥಳ ಪ್ರಾಮುಖ್ಯತೆಗಳ ಕುರಿತು ತಮಗಿರುವ ಜ್ಞಾನ ಭಂಡಾರದ ಮೂಲಕ ನಮಗೆಲ್ಲಾ ತಿಳಿಸಿರುವುದು ಈ ಪ್ರವಾಸ ಕಾರ್ಯಕ್ರಮದ ಮೆರುಗನ್ನು ಇನ್ನಷ್ಟು ಹೆಚ್ಚಿಸಿದ್ದೀರಿ.

"ದೇಶ ಸುತ್ತು ಕೋಶ ಓದು" ಎನ್ನುವ ನಾಣ್ನುಡಿಯಂತೆ ಎಲ್ಲಾ ಸನ್ಮಾನಿತರುಗಳಿಗೆ ವಿಭಿನ್ನವಾಗಿ ಆ ದೇಶ ಬಗ್ಗೆ ಮತ್ತು ಆ ನೆಲ, ಜಲ, ಭೂಗೋಳ ಮತ್ತು ಆ ನೆಲದ ಸಾಧಕರ ಬಗ್ಗೆ ವಿವರಣೆಗಳನ್ನು ನೀಡುವಂತಹ ತಮ್ಮ ಪರಿಕಲ್ಪನೆ ಅತ್ಯಂತ ಸ್ಫೂರ್ತಿದಾಯಕವಾಗಿತ್ತು.

ಇದೇ ರೀತಿ ತಾವುಗಳು ಈಗಾಗಲೇ ಹತ್ತು ಹಲವಾರು ದೇಶಗಳಲ್ಲಿ ಇಂತಹದೇ ಕಾರ್ಯಕ್ರಮಗಳನ್ನು ನೀಡಿರುವುದು ನಿಜಕ್ಕೂ ಹೆಮ್ಮೆಯ ವಿಚಾರವೇ ಆಗಿದೆ. ಇಂತಹ ಕಾರ್ಯಕ್ರಮಗಳ ಮೂಲಕ ತಾವುಗಳು ಕನ್ನಡದ ಕಂಪು ಮತ್ತು ಸಂಸ್ಕೃತಿಯನ್ನು ವಿದೇಶಿ ನೆಲದಲ್ಲಿ ಅನಾವರಣಗೊಳಿಸುವುದು ಮತ್ತು ಆಯಾ ವಿದೇಶಿ ನೆಲದ ಸಂಸ್ಕೃತಿ ಕಂಪುಗಳನ್ನು ಕನ್ನಡದ ಸಾಧಕರುಗಳಿಗೆ ತಿಳಿಸುವ ಕಾರ್ಯ ಮಾಡುತ್ತಾ ಅಂತಹ ಸಾಧಕರುಗಳಿಗೆ ತಾಯ್ನಾಡಿನಲ್ಲಿ ಇನ್ನೂ ಹೆಚ್ಚು ಸಾಧನೆಗಳನ್ನು ಮಾಡಲು ಪ್ರೇರೇಪಿಸುವಂತ ಕಾರ್ಯವು ನಿಜಕ್ಕೂ ಶ್ಲಾಘನೀಯವಾಗಿದೆ.

ದಿನಾಂಕ:11-05-2026 ರಿಂದ ದಿನಾಂಕ:18-05-2026 ರವರೆಗೆ ನಡೆದ "ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ ಪ್ರದಾನ" ಸಮಾರಂಭಕ್ಕೆ ನನ್ನನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿರುವುದಕ್ಕೆ ತಮಗೆ ಮತ್ತೊಮ್ಮೆ ಅಭಿನಂದಿಸುತ್ತಾ ತಮ್ಮ ಈ ವಿನೂತನ ಕನ್ನಡ ಮತ್ತು ಅದರ ಸಂಸ್ಕೃತಿಯನ್ನು ವಿದೇಶಿ ನೆಲದಲ್ಲಿ ಪಸರಿಸುವ ಕಾರ್ಯವು ನಿರಂತರವಾಗಿ ಸಾಗಲಿ ಎಂದು ಆಶಿಸುತ್ತೇನೆ.

(ಬಸವರಾಜ ಎಸ್. ಹೊರಟ್ಟಿ)

ರವರಿಗೆ,
ಶ್ರೀ ವಿಶ್ವೇಶ್ವರ ಭಟ್ ರವರು,
ಪ್ರಧಾನ ಸಂಪಾದಕರು, ವಿಶ್ವವಾಣಿ ದಿನಪತ್ರಿಕೆ,
ನಂ:11, ಎಸ್.ಪಿ.ಆರ್. ನಿಸರ್ಗ ಎನ್‌ಕ್ಲೇವ್, 3ನೇ ಮಹಡಿ,
5ನೇ ಎ ಸ್ಟೇಜ್ ಆರ್.ಆರ್ ನಗರ, ಬೆಂಗಳೂರು-98

ವಿದೇಶಿ ನೆಲದಲ್ಲಿ ಕನ್ನಡದ ಕಂಪು

ದೇಶ ಸುತ್ತು, ಕೋಶ ಓದು ಎಂಬ ನಾಣ್ನುಡಿಯ ಅರ್ಥವನ್ನು ಕಾರ್ಯಕ್ರಮದ ಮೂಲಕ ಜೀವಂತಗೊಳಿಸಿರುವ ವಿಶ್ವವಾಣಿ ತಂಡದ ಪರಿಕಲ್ಪನೆ ಸ್ಫೂರ್ತಿದಾಯಕವಾಗಿದೆ. ವಿದೇಶಿ ನೆಲದಲ್ಲಿ ಕನ್ನಡದ ಸಂಸ್ಕೃತಿ ಮತ್ತು ಕಂಪನ್ನು ಪರಿಚಯಿಸುವ ಜತೆಗೆ, ಅಲ್ಲಿ ಇರುವ ಸಂಸ್ಕೃತಿ ವೈವಿಧ್ಯತೆಯನ್ನು ಕನ್ನಡದ ಸಾಧಕರಿಗೆ ಪರಿಚಯಿಸುವ ಕೆಲಸ ಶ್ಲಾಘನೀಯ. ಮೇ 11ರಿಂದ 18ರವರೆಗೆ ನಡೆದ ಈ ಕಾರ್ಯಕ್ರಮಕ್ಕೆ ನನ್ನನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಿದ್ದಕ್ಕಾಗಿ ವಿಶ್ವವಾಣಿ ಬಳಗಕ್ಕೆ ಧನ್ಯವಾದಗಳು, ಇಂತಹ ವಿನೂತನ ಕಾರ್ಯಕ್ರಮಗಳು ಮುಂದುವರಿದು ಕನ್ನಡದ ಸಂಸ್ಕೃತಿಯನ್ನು ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಪಸರಿಸಲಿ ಎಂದು ಅಭಿನಂದನಾ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕೋಟ್ಯಂತರ ಮಹಿಳೆಯರ ಬಾಳಿಗೆ ಆಸರೆಯಾದ ಸರ್ಕಾರದ ಉಚಿತ ಬಸ್ ಪಯಣ

ಪ್ರಯಾಣದ ಸ್ವಾತಂತ್ರ್ಯ ತಂದ ಶಕ್ತಿ ಯೋಜನೆ

ಅಂಕಿ-ಅಂಶ

₹18,943 ಕೋಟಿ
ಈವರೆಗೆ 'ಶಕ್ತಿ'ಗೆ ವ್ಯಯಿಸಲಾದ ಮೊತ್ತ

726 ಕೋಟಿಗೂ ಅಧಿಕ
ವಿತರಿಸಲಾದ ಒಟ್ಟು ಉಚಿತ ಟಿಕೆಟ್‌ಗಳು

ಗ್ಯಾರಂಟಿ ವಾರ್ತೆ

ಬೆಂಗಳೂರು: 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆ ಮೊದಲನೆಯದಾಗಿದೆ. ರಾಜ್ಯದಾದ್ಯಂತ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸುವ ಈ ಯೋಜನೆಗೆ 2023ರ ಜೂನ್ 11ರಂದು ಅಧಿಕೃತವಾಗಿ ಚಾಲನೆ ನೀಡಲಾಗಿತ್ತು. ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಈ ಮಹತ್ವಾಕಾಂಕ್ಷಿ ಯೋಜನೆಯು ರಾಜ್ಯದಲ್ಲಿ ಕೋಟ್ಯಂತರ ಮಹಿಳೆಯರಿಗೆ ಪ್ರಯಾಣದ ಸ್ವಾತಂತ್ರ್ಯ ಕಲ್ಪಿಸಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದೆ.

ದಿನನಿತ್ಯ ದುಡಿಮೆಗೆ ಹೋಗುವ ಗಾರ್ಮೆಂಟ್ಸ್ ಕಾರ್ಮಿಕರು, ಪೌರಕಾರ್ಮಿಕರು ಹಾಗೂ ಕೆಳ–ಮಧ್ಯಮ ವರ್ಗದ ಮಹಿಳೆಯರಿಗೆ ಪ್ರತಿ ತಿಂಗಳು ಸುಮಾರು 1,500 ರಿಂದ 2,000 ರೂಪಾಯಿಗಳವರೆಗೆ ಉಳಿತಾಯವಾಗುತ್ತಿದೆ. ಈ ಹಣವನ್ನು ಅವರು ಮಕ್ಕಳ ಶಿಕ್ಷಣ, ದಿನಸಿ ಖರ್ಚಿಗೆ, ಔಷಧಿ ಖರೀದಿ ಸೇರಿದಂತೆ ಇನ್ನಿತರ ಸಣ್ಣಪುಟ್ಟ ಉಳಿತಾಯ ಖಾತೆಗಳಲ್ಲೂ ತೊಡಗಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಯಾವುದೇ ಆರ್ಥಿಕ ಹೊರೆಯಿಲ್ಲದೆ ಕಾಲೇಜು ಮತ್ತು ಉನ್ನತ ಶಿಕ್ಷಣಕ್ಕಾಗಿ ನಗರ ಪ್ರದೇಶಗಳಿಗೆ ಪ್ರಯಾಣಿಸಲು ಶಕ್ತಿ ನೆರವಾಗಿದೆ. ಯೋಜನೆಯ ಜಾರಿಯ ನಂತರ ರಾಜ್ಯದ ಪ್ರಮುಖ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಮಹಿಳಾ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದು, ಧಾರ್ಮಿಕ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗಿದೆ.

726 ಕೋಟಿಗೂ ಅಧಿಕ ಪ್ರಯಾಣ

ಸರ್ಕಾರದ ಅಂಕಿ–ಅಂಶಗಳ ಪ್ರಕಾರ, ಯೋಜನೆ ಜಾರಿಯಾದಾಗಿನಿಂದ ಈವರೆಗೆ 726 ಕೋಟಿಗೂ ಅಧಿಕ ಬಾರಿ ಮಹಿಳಾ ಪ್ರಯಾಣಿಕರು 'ಶಕ್ತಿ' ಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ 18,943 ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಟಿಕೆಟ್‌ಗಳನ್ನು ವಿತರಿಸಿದ್ದು, ಸಾರಿಗೆ ಸಂಸ್ಥೆಗಳಿಗೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡುತ್ತಿದೆ. ಹೆಚ್ಚುತ್ತಿರುವ ಪ್ರಯಾಣಿಕರ ಒತ್ತಡವನ್ನು ನಿಭಾಯಿಸಲು ಸಾವಿರಾರು ಹೊಸ ಬಸ್‌ಗಳನ್ನು ಸಾರಿಗೆ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಲಾಗಿದೆ. ಯೋಜನೆಯನ್ನು ಇನ್ನಷ್ಟು ಸುಗಮಗೊಳಿಸಲು ಮತ್ತು ದುರುಪಯೋಗ ತಡೆಯಲು ಸರ್ಕಾರವು ಮಹಿಳೆಯರಿಗೆ 'ಶಕ್ತಿ ಸ್ಮಾರ್ಟ್ ಕಾರ್ಡ್' (Smart Card) ವಿತರಿಸುವ ಪ್ರಕ್ರಿಯೆಯನ್ನು ಕೂಡ ಶೀಘ್ರದಲ್ಲೇ ಜಾರಿಗೊಳಿಸುವತ್ತ ಹೆಜ್ಜೆ ಇಟ್ಟಿದೆ.

ಇತರೆ ರಾಜ್ಯಗಳಿಗೆ ಮಾದರಿ

ಕರ್ನಾಟಕದ ಈ 'ಶಕ್ತಿ' ಯೋಜನೆ ಕೇವಲ ಉಚಿತ ಬಸ್ ಪ್ರಯಾಣಕ್ಕೆ ಸೀಮಿತವಾಗಿರದೆ, ಮಹಿಳೆಯರ ಪ್ರಯಾಣವನ್ನು ಹೆಚ್ಚಿಸುವ ಮೂಲಕ ಅವರಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ನೋಡಿ ದೇಶದ ಇತರೆ ರಾಜ್ಯಗಳು ಕೂಡ ಇಂತಹದೇ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಿರುವುದು ಇದರ ಯಶಸ್ಸಿಗೆ ಸಾಕ್ಷಿಯಾಗಿದೆ. ಈಗಾಗಲೇ ತೆಲಂಗಾಣದಲ್ಲಿ 'ಮಹಾಲಕ್ಷ್ಮೀ', ಆಂಧ್ರಪ್ರದೇಶದಲ್ಲಿ 'ಸ್ತ್ರೀ ಶಕ್ತಿ' ಹಾಗೂ ಕೇರಳದಲ್ಲೂ ಕೂಡ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಕೂಡ ಈ ಯೋಜನೆಯನ್ನು ಘೋಷಿಸಿ, ಅನುಷ್ಠಾನಕ್ಕೂ ಮುಂದಾಗಿದೆ.

3 ವರ್ಷಗಳ ಸಾಧನೆ, 'ಗ್ಯಾರಂಟಿ ಹಬ್ಬ' ಘೋಷಣೆ

ಜನಪರ ಆಡಳಿತದ ಯಶಸ್ವಿ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ರಾಜ್ಯ ಸರ್ಕಾರವು 3 ವರ್ಷಗಳ ಸಾಧನಾ ಸಮಾವೇಶವನ್ನು ಮೇ 19ರಂದು ತುಮಕೂರಿನಲ್ಲಿ ಯಶಸ್ವಿಯಾಗಿ ನಡೆಸಿದ್ದು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ತಿಂಗಳು ಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಘೋಷಿಸಿದ್ದರು. ಅದರಂತೆ ರಾಜ್ಯ ಸರ್ಕಾರವು 'ಗ್ಯಾರಂಟಿ ಹಬ್ಬ' ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ತಿಂಗಳು ಪೂರ್ತಿ ವಿವಿಧ ಅಭಿಯಾನಗಳು ನಡೆಯಲಿವೆ.

ಗ್ಯಾರಂಟಿ ಹಬ್ಬ
4ನೇ ವರ್ಷಕ್ಕೆ ಪಾದಾರ್ಪಣೆ

"ನಮ್ಮ ಹಳ್ಳೀಲಿ ದಿನವೂ ಕೆಲಸ ಸಿಗುತ್ತಿರಲಿಲ್ಲ, ಒಮ್ಮೆ ಕೆಲಸವಿದ್ದರೆ ಮತ್ತೊಮ್ಮೆ ಇರುತ್ತಿರಲಿಲ್ಲ. ಅಂತಹದ್ರಲ್ಲಿ ಆಸ್ಪತ್ರೆಗೆ ಹೋಗಬೇಕೆಂದರೆ ಬಸ್ ಚಾರ್ಜ್‌ಗೇ ಪರದಾಡಬೇಕಿತ್ತು. ಈಗ ಶಕ್ತಿ ಯೋಜನೆಯಿಂದಾಗಿ ಫ್ರೀ ಬಸ್ ಬಂದಿದ್ದರಿಂದ ಆಸ್ಪತ್ರೆಗೆ ಹೋಗಿ ಬರಲು ಅನುಕೂಲವಾಗಿದೆ. ಅಷ್ಟೇ ಅಲ್ಲ, ಮನಸ್ಸಿನ ಬೇಸರ ಕಳೆಯಲು ಧರ್ಮಸ್ಥಳಕ್ಕೂ ಹೋಗಿ ಬಂದೆ. ಬಸ್ ಚಾರ್ಜ್‌ನಿಂದ ಉಳಿತಾಯವಾಗುತ್ತಿರುವ ಹಣದಲ್ಲೇ ಅನಾರೋಗ್ಯ ಬಿದ್ದಾಗ ಗುಳಿಗೆಗಳನ್ನು ಕೊಂಡುಕೊಳ್ಳುತ್ತಿದ್ದೇನೆ.

○ ಹನುಮವ್ವ, ಹಾವೇರಿ

"ಮನೆಯ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ತವರು ಮನೆಗೆ ಹೋಗಬೇಕೆಂದರೂ ಬಸ್ ಚಾರ್ಜ್‌ಗೆ ದುಡ್ಡಿಲ್ಲದೆ, ಕಾಲಿನಲ್ಲಿ ಗುಳ್ಳೆಗಳು ಏಳುವಂತೆ ಮೈಲುಗಟ್ಟಲೆ ನಡೆದುಕೊಂಡು ಹೋಗುತ್ತಿದ್ದೆವು. ಬಡತನ ನಮ್ಮ ಕಾಲಿಗೆ ಬೇಡಿ ಹಾಕಿತ್ತು. ಆದರೆ ಇಂದು ಫ್ರೀ ಬಸ್ ಇರುವುದರಿಂದ ಮೈಸೂರಿನಲ್ಲಿರುವ ನನ್ನ ಮಗಳನ್ನು, ಮನಸ್ಸಿಗೆ ಬೇಸರವಾದಾಗ ದೇವರನ್ನು ನೋಡಿ ಬರುವ ಶಕ್ತಿ ನನಗೆ ಸಿಕ್ಕಿದೆ.

○ ಲಕ್ಷ್ಮಮ್ಮ, ಕೊಪ್ಪಳ

"ಬಂಡವಾಳದ ಕೊರತೆಯಿಂದಾಗಿ ಕಸೂತಿ ಉದ್ಯಮವನ್ನು ನಡೆಸಲಾಗದೆ ಕಂಗಾಲಾಗಿದ್ದೆ. ಕಸೂತಿ ಕೆಲಸಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ತರಲು ಪೇಟೆಗೆ ಹೋಗಿ ಬರಲು ಬಸ್ ಟಿಕೆಟ್ ದುಡ್ಡೇ ದೊಡ್ಡ ಹೊರೆಯಾಗಿತ್ತು. ಆದರೆ, ಸರ್ಕಾರದ 'ಶಕ್ತಿ' ಯೋಜನೆಯ ಉಚಿತ ಬಸ್ ಸೌಲಭ್ಯ ಸಿಕ್ಕ ಮೇಲೆ ನಂಗೆ ಬಸ್ ಓಡಾಟದ ಖರ್ಚಿನ ಚಿಂತೆ ದೂರವಾಗಿದೆ.

○ ಜಮಲಾ ಬಾಯಿ, ಯಾದಗಿರಿ

ಮಹಿಳಾ ಸಬಲೀಕರಣವೇ ಸಮೃದ್ಧ ಕರ್ನಾಟಕದ ಬುನಾದಿ

'ಶಕ್ತಿ' ಯೋಜನೆಯು ಕೇವಲ ಉಚಿತ ಸಾರಿಗೆ ಸೌಲಭ್ಯವಲ್ಲ; ಇದು ರಾಜ್ಯದ ಪ್ರತಿಯೊಬ್ಬ ಮಹಿಳೆಯ ಗೌರವ, ಸಮಾನತೆ ಮತ್ತು ಪ್ರಗತಿಗಾಗಿ ನಮ್ಮ ಸರ್ಕಾರ ಹೊಂದಿರುವ ಅಚಲ ಬದ್ಧತೆಯ ಸಂಕೇತವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕೋಟ್ಯಂತರ ಉಚಿತ ಪ್ರಯಾಣಗಳು ಮಹಿಳೆಯರಿಗೆ ಯಾವುದೇ ಆರ್ಥಿಕ ಅಡೆತಡೆಗಳಿಲ್ಲದೆ ಶಿಕ್ಷಣ, ಉದ್ಯೋಗ ಹಾಗೂ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಲು ನೆರವಾಗಿವೆ. ಸಬಲ ಮಹಿಳೆಯೇ ಬಲಿಷ್ಠ ಕುಟುಂಬದ ಆಧಾರಸ್ತಂಭ, ಆ ಬಲಿಷ್ಠ ಕುಟುಂಬಗಳೇ ಸಮೃದ್ಧ ಕರ್ನಾಟಕದ ಬುನಾದಿ. ಸರ್ವರನ್ನೂ ಒಳಗೊಳ್ಳುವ ಇಂತಹ ಪ್ರಗತಿಪರ ಅಭಿವೃದ್ಧಿಗೆ ನಮ್ಮ ಸರ್ಕಾರ ಸದಾ ಕಟಿಬದ್ಧವಾಗಿದೆ.

• ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಸ್ವತಂತ್ರ ಪ್ರಯಾಣ: ಮಹಿಳಾ ಸಬಲೀಕರಣದ ಹೊಸ ಆಯಾಮ

ಮುಕ್ತ ಪ್ರಯಾಣವು ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದಾಗಿ ಅವರಿಗೆ ಉದ್ಯೋಗ, ಶಿಕ್ಷಣ ಹಾಗೂ ಮಾರುಕಟ್ಟೆಯ ಅವಕಾಶಗಳು ಕೈಗೆಟುಕುತ್ತವೆ. ಶಕ್ತಿ ಯೋಜನೆಯು ಕುಟುಂಬಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿದ್ದಲ್ಲದೆ, ಕರ್ನಾಟಕದ ಸಾಮಾಜಿಕ–ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ದ್ವಿಗುಣಗೊಳಿಸಿದೆ. ನಮ್ಮ ಆಡಳಿತದ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಈ ಸುಸಂದರ್ಭದಲ್ಲಿ, ಹೆಚ್ಚು ಸಮಾನತೆಯ ಮತ್ತು ಸಬಲ ಕರ್ನಾಟಕದ ನಿರ್ಮಾಣಕ್ಕೆ ನಾವು ಮತ್ತೊಮ್ಮೆ ಸಂಕಲ್ಪ ತೊಡುತ್ತೇವೆ.

• ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ಪ್ರಗತಿಯ ಪಥದಲ್ಲಿ ಸಾರ್ವಜನಿಕ ಸಾರಿಗೆ

ಶಕ್ತಿ ಯೋಜನೆಯು ಕರ್ನಾಟಕದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮಹಿಳಾ ಪ್ರಗತಿಯ ಶಕ್ತಿಶಾಲಿ ವಾಹನವನ್ನಾಗಿ ಪರಿವರ್ತಿಸಿದೆ. ನಮ್ಮ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ವಿತರಿಸಲಾಗುವ ಪ್ರತಿಯೊಂದು ಉಚಿತ ಟಿಕೆಟ್ ಸಹ ರಾಜ್ಯದ ಮಹಿಳೆಯರ ಹಕ್ಕು, ಆರ್ಥಿಕ ಉಳಿತಾಯ ಮತ್ತು ಆತ್ಮವಿಶ್ವಾಸದ ಪ್ರತೀಕವಾಗಿದೆ. ಗ್ರಾಮೀಣ ಭಾಗದಿಂದ ಹಿಡಿದು ಮಹಾನಗರಗಳವರೆಗೆ ಮಹಿಳೆಯರು ಇಂದು ಎಂದಿಗಿಂತಲೂ ಹೆಚ್ಚು ಧೈರ್ಯದಿಂದ ಮತ್ತು ಸ್ವತಂತ್ರವಾಗಿ ಪ್ರಯಾಣಿಸುತ್ತಿದ್ದಾರೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಈ ಐತಿಹಾಸಿಕ ಯೋಜನೆಯ ಲಾಭ ನಿರಂತರವಾಗಿ ಸಿಗುವಂತೆ ಮಾಡಲು ನಮ್ಮ ಇಲಾಖೆ ಬದ್ಧವಾಗಿದೆ.

• ರಾಮಲಿಂಗಾರೆಡ್ಡಿ, ಸಾರಿಗೆ ಹಾಗೂ ಮುಜರಾಯಿ ಸಚಿವರು

ಕರ್ನಾಟಕ ವಾರ್ತೆ

ಸಮಾಚಾರ ಸಣ್ಣದಲ್ಲ

2 ಸ್ಪಾಂಜ್, ಐರನ್ ಕಾರ್ಖಾನೆಗೆ ಬೀಗ

ಕೊಪ್ಪಳ: ತಾಲೂಕಿನ ಎರಡು ಸ್ಪಾಂಜ್ ಮತ್ತು ಐರನ್ ಕಾರ್ಖಾನೆಗೆ ಅಧಿಕಾರಿಗಳು ಗುರುವಾರ ಬೀಗ ಹಾಕಿದ್ದಾರೆ. ಕೊಪ್ಪಳ ತಾಲೂಕು ಹಾಲವರ್ತಿ ಗ್ರಾಮದ ಬಳಿಯ ಅಲ್ಲಾನಗರ ಗ್ರಾಮದ ಸಮೀಪದಲ್ಲಿದ್ದ ಪಿಬಿಎಸ್ 1 ಹಾಗೂ ಹೊಸಪೇಟೆ ಇಸ್ಪಾತ್ ಕಾರ್ಖಾನೆಗೆ ಅಧಿಕಾರಿಗಳು ಅಧಿಕೃತವಾಗಿ ಬೀಗ ಹಾಕಿದ್ದಾರೆ. ಉಪವಿಭಾಗ ಅಧಿಕಾರಿ ಮಹೇಶ ಮಾಲಗಿತಿ ಹಾಗೂ ತಹಸೀಲ್ದಾರ್ ಬಸವರಾಜ ತೆನ್ನಳ್ಳಿ ನೇತೃತ್ವದಲ್ಲಿ ಎರಡು ಕಾರ್ಖಾನೆ ಸೀಜ್ ಮಾಡಲಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯ ಮಾರ್ಗಸೂಚಿ ಉಲ್ಲಂಘಿಸಿ ಕಾರ್ಖಾನೆ ಕಾರ್ಯಾಚರಣೆ ಮಾಡುತ್ತಿದ್ದವು. ಈ ಹಿನ್ನೆಲೆ ಕಾರ್ಖಾನೆ ಹೊರ ಸೂಸುವ ಹೊಗೆಯಿಂದ ಸ್ಥಳೀಯರು ರೋಸಿ ಹೋಗಿ, ಕಾರ್ಖಾನೆ ವಿರುದ್ಧ ಹೋರಾಟ ನಡೆಸಿದ್ದರು. ಬಾಧಿತ ಗ್ರಾಮಕ್ಕೆ ಭೇಟಿ ನೀಡಿದ್ದ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷರು, ಒಟ್ಟು 5 ಕಾರ್ಖಾನೆಗೆ ಕ್ಲೋಸರ್ ನೋಟಿಸ್ ನೀಡಿದ್ದರು. ಈ ಪೈಕಿ ಮೊದಲ ಹಂತವಾಗಿ ಎರಡು ಕಾರ್ಖಾನೆ ಬೀಗ ಹಾಕಿದ್ದಾರೆ.

ಹೇಬಿಯಸ್ ಕಾರ್ಪಸ್ ಅರ್ಜಿ ವಜಾ

ಬೆಂಗಳೂರು: ಮುಸ್ಲಿಂ ಪ್ರೇಮಿಯೊಂದಿಗೆ ವಾಸಿಸುತ್ತಿದ್ದ ತನ್ನ 21 ವರ್ಷದ ಮಗಳಿಗೆ ಕಡ್ಡಾಯವಾಗಿ ಮಾನಸಿಕ ಆರೋಗ್ಯ ತಪಾಸಣೆ ಕೋರಿ ಸಿಖ್ ಮಹಿಳೆಯೊಬ್ಬರು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ನ್ಯಾ. ಸೂರಜ್ ಗೋವಿಂದರಾಜ್ ಮತ್ತು ಕೆ. ಮನ್ಮಥ ರಾವ್ ಅವರ ರಜಾ ಪೀಠವು, ತನ್ನ ಪ್ರೇಮಿಯೊಂದಿಗೆ ಸ್ವಇಚ್ಛೆಯಿಂದ ವಾಸಿಸುತ್ತಿದ್ದೇನೆ ಎಂದು ನಿಸ್ಸಂದಿಗ್ಧವಾಗಿ ಹೇಳಿದ ಯುವತಿಯ ಇಚ್ಛೆಗೆ ವಿರುದ್ಧವಾಗಿ ಮಾನಸಿಕ ಪರೀಕ್ಷೆಗೆ ಆದೇಶಿಸಲಾಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದೆ. ನೀವು ಕೇಳಿದ ಮಾತ್ರಕ್ಕೆ ಯಾರಾದರೂ ಪರೀಕ್ಷೆಗೆ ಏಕೆ ಒಳಗಾಗಬೇಕು? ನೀವು ಮಾನಸಿಕ ಆರೋಗ್ಯ ಕಾಯ್ದೆಯ ಅಡಿಯಲ್ಲಿ ಮಾತ್ರ ಅರ್ಜಿ ಸಲ್ಲಿಸಬಹುದು ಮತ್ತು ಆ ವಿಧಾನ ಅನುಸರಿಸಬಹುದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿತು.

ಹೈಕಮಾಂಡ್ ನಿರ್ಧಾರ ಪ್ರಕಟ ಸಾಧ್ಯತೆ | ಪಕ್ಷದಲ್ಲಿನ ಗೊಂದಲಗಳಿಗೆಲ್ಲ ತೆರೆ

ಬಿವೈವಿ ರಾಜ್ಯಾಧ್ಯಕ್ಷರಾಗಿ ಮುಂದುವರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಬಿಜೆಪಿಯ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಮುಂದುವರಿಯುವುದು ಖಚಿತವಾಗಿದ್ದು, ಈ ಸಂಬಂಧ ಹೈಕಮಾಂಡ್ ಶೀಘ್ರದಲ್ಲಿಯೇ ನಿರ್ಧಾರ ಪ್ರಕಟಿಸಲಿದ್ದು, ಪಕ್ಷದೊಳಗಿನ ಹಲವಾರು ಗೊಂದಲಗಳು ಬಗೆಹರಿದಂತಾಗಬಹುದು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ವಿಶೇಷ ಸಂಘಟನಾ ಸಭೆಯ ನಂತರ ಮಾತನಾಡಿದ ಪಕ್ಷದ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರವಾಲ್, ನಮ್ಮ ಪೂರ್ಣಾವಧಿ ರಾಜ್ಯ ಅಧ್ಯಕ್ಷರಿದ್ದು, ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಧ್ಯಕ್ಷರಾಗಿ ಮುಂದುವರೆಯುವರೇ ಇಲ್ಲವೇ ಎಂಬುದು ಇಲ್ಲಿನ ಸಭೆಯಲ್ಲಿ ನಿರ್ಧಾರ ಆಗುವುದಿಲ್ಲ. ಇಲ್ಲಿ ಅಧ್ಯಕ್ಷರ ಮೌಲ್ಯಮಾಪನ ನಡೆಯುತ್ತದೆ ಎಂಬ ಭ್ರಮೆ ಇದ್ದರೆ ಅದು ಸರಿಯಲ್ಲ ಎಂದಿದುರುವು ವಿಜಯೇಂದ್ರ ಮುಂದುವರಿಕೆಯ ಮುನ್ಸೂಚನೆ ಸಿಕ್ಕಿದೆ. ಅಲ್ಲದೆ, ನಮ್ಮಲ್ಲಿ ಮೌಲ್ಯಮಾಪನ ನಿರಂತರವಾಗಿ ನಡೆಯುತ್ತಿರುತ್ತದೆ. ಯಾವ ಬಿಜೆಪಿ ನಾಯಕ ಏನು ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಲು ಇಲ್ಲಿ ಬರುವ ಅವಶ್ಯಕತೆ ಇಲ್ಲ, ನಾನು ಅಧ್ಯಕ್ಷರ ಕಾರ್ಯಕರ್ತನಲ್ಲ, ನಾನು ಬಿಜೆಪಿ ಕಾರ್ಯಕರ್ತ. ನಾನೇ ಎಲ್ಲವನ್ನೂ ಹೇಳಬಲ್ಲೆ. ಯಾವಾಗ ಅಂತಿಮವಾಗಿ ಒಬ್ಬ ಅಧ್ಯಕ್ಷರನ್ನು ಪ್ರಕಟಿಸಲಾಗುವುದೋ ಆಗ ಹಳೆಯ ತಂಡದ ಬದಲಾಗಿ ಸಹಜವಾಗಿ ಹೊಸ ತಂಡ ರಚಿಸಲಾಗುತ್ತದೆ. ಹೊಸ ಅಧ್ಯಕ್ಷರು ಬಂದರೆ ಕೋರ್ ಕಮಿಟಿ ಬದಲಾಗುವುದಿಲ್ಲ. ಅದನ್ನು ರಾಷ್ಟ್ರ ಘಟಕವು ನಿರ್ಧರಿಸುತ್ತದೆ. ಒಂದಿಬ್ಬರು ಹಳೆಯವರನ್ನು ಬದಲಿಸಿ ಹೊಸಬರು ಬರಬಹುದು ಎಂದಿದ್ದಾರೆ.

ಬೆಕ್ಕುಗಳ ನಡುವೆ ಜಗಳ ತಂದಿಕ್ಕಿದ ಖರ್ಗೆ: ದೆಹಲಿಯಲ್ಲಿರುವ ಕಾಂಗ್ರೆಸ್ ಮುಖಂಡ ಖರ್ಗೆಯವರು ಮಂಗನ ಮಾದರಿಯಲ್ಲಿ ಸಿದ್ದರಾಮಯ್ಯ ಮತ್ತು ಶಿವಕುಮಾರ್ ಎಂಬ ಇಲ್ಲಿನ ಎರಡು ಬೆಕ್ಕುಗಳ ಜಗಳ ಮಾಡಿಸುತ್ತಿದ್ದಾರೆ ಎಂದು ಅಗರವಾಲ್ ಆರೋಪಿಸಿದ್ದಾರೆ. ಇವರು ಜಗಳ ಮಾಡಿಕೊಂಡು ತಾವು ಮುಖ್ಯಮಂತ್ರಿ ಆಗಲು ಅವಕಾಶ ಸಿಗಲಿ ಎಂದು ಖರ್ಗೆಯವರು ಕಾಯುತ್ತಿದ್ದಾರೆ. ಇಲ್ಲಿ ಮುಖ್ಯಮಂತ್ರಿಯ 2 ಮುಖಗಳಿಲ್ಲ, 3 ಜನರಿದ್ದಾರೆ. ಕಾಂಗ್ರೆಸಿನ ಸ್ಥಿತಿ ಹದಗೆಟ್ಟಿದೆ. ಹಲವಾರು ಕಾಂಗ್ರೆಸ್ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ನಾಳೆ ವಿಧಾನಸಭೆ ಚುನಾವಣೆ ನಡೆದರೂ ಜನರು ಕಾಂಗ್ರೆಸ್ಸನ್ನು ಸೋಲಿಸಿ ಬಿಜೆಪಿ ಸರಕಾರ ಮಾಡಲು ಅವಕಾಶ ಮಾಡಿಕೊಡಲಿದ್ದಾರೆ. ಹೊರಗಡೆಯಿಂದ ಹೆಚ್ಚು ಸಾಲ ಪಡೆದುದರಿಂದ ರಾಜ್ಯವು ಆರ್ಥಿಕ ಸಂಕಷ್ಟದಲ್ಲಿದೆ. ಆರೇಳು ತಿಂಗಳುಗಳಿಂದ ಇಲ್ಲಿ ಸರಕಾರವೇ ಇಲ್ಲವಾಗಿದೆ. ಇವರು ಪರಸ್ಪರ ಜಗಳ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ನಡೆದ ವಿಶೇಷ ಸಂಘಟನಾ ಸಭೆಯಲ್ಲಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಮಾತನಾಡಿದರು.

ಮೋದಿ ಸರಕಾರಕ್ಕೆ 12 ವರ್ಷ: ವಿವಿಧ ಕಾರ್ಯಕ್ರಮ

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರ 12 ವರ್ಷ ಪೂರ್ಣಗೊಳಿಸುತ್ತಿರುವ ಹಿನ್ನೆಲೆ ರಾಜ್ಯ ಘಟಕ ವಿವಿಧ ಕಾರ್ಯಕ್ರಮ ಪಕ್ಷವು ಆಯೋಜಿಸಿದೆ. ರಾಷ್ಟ್ರೀಯ ಅಧ್ಯಕ್ಷರಾಗಿ ಮೊದಲ ಬಾರಿಗೆ ಬೆಂಗಳೂರಿಗೆ ನಾಳೆ ನಿತಿನ್ ನಬಿನ್ ಆಗಮಿಸುತ್ತಿದ್ದು, ಯಲಹಂಕ ಸಮೀಪದ ಖಾಸಗಿ ರೆಸಾರ್ಟ್‌ನಲ್ಲಿ ಪಕ್ಷದ ಪ್ರಮುಖರೊಂದಿಗೆ ಮಹತ್ವದ ಸಭೆ ನಡೆಸಲಿದ್ದಾರೆ. ಇದೇ ಸಂದರ್ಭದಲ್ಲಿ ಮೋದಿ ಸರಕಾರ 26ಕ್ಕೆ 12 ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಕೇಂದ್ರ ಸರಕಾರದ ಸಾಧನೆಗಳ ಜಾಗೃತಿ ಹಾಗೂ ಫಲಾನುಭವಿಗಳ ಜೊತೆ ಸಂವಾದ ಸೇರಿದಂತೆ ಹಲವು ರೀತಿಯ ಕಾರ್ಯಕ್ರಮ ಆಯೋಜಿಸಿದೆ. ಈ ಸಂಬಂಧ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ, ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್ ಸೇರಿದಂತೆ ಮತ್ತಿತರರು ಪೂರ್ವ ಸಿದ್ಧತಾ ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಸಿದರು.

> ಈಗ ಶಕ್ತಿಶಾಲಿ ಅಧ್ಯಕ್ಷರಿದ್ದಾರೆ. ಇದೇ ಅಧ್ಯಕ್ಷರ ನೇತೃತ್ವದಲ್ಲೇ ನಾವು ಲೋಕಸಭಾ ಚುನಾವಣೆ ಎದುರಿಸಿದ್ದೇವೆ. ಯಾರು ಅಧ್ಯಕ್ಷರಿರುತ್ತಾರೋ ಅವರ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸುತ್ತೇವೆ.
>
> **ರಾಧಾಮೋಹನ್ ದಾಸ್ ಅಗರವಾಲ್, ಬಿಜೆಪಿ ರಾಜ್ಯ ಉಸ್ತುವಾರಿ**

ಚಿಕ್ಕಮಗಳೂರು: ಕಾಂಗ್ರೆಸ್-ಬಿಜೆಪಿ ಕಾರ್ಯಕರ್ತರ ಮಧ್ಯೆ ಹೊಡೆದಾಟ

ಚಿಕ್ಕಮಗಳೂರು: ಕಾಫಿ ನಾಡು ಚಿಕ್ಕಮಗಳೂರಿನಲ್ಲಿ ಅಭಿವೃದ್ಧಿ ಕೆಲಸಗಳ ಕ್ರೆಡಿಟ್ ಪಡೆಯುವ ವಿಚಾರವಾಗಿ ಕಾಂಗ್ರೆಸ್ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಭಾರಿ ಹೈಡ್ರಾಮಾ ನಡೆಯಿತು. ಕೈ-ಕಮಲ ಪಾಳಯದ ನಡುವಿನ ಕ್ರೆಡಿಟ್ ವಾರ್ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿದ್ದು, ನೂರಾರು ಪೊಲೀಸರ ಸಮ್ಮುಖದಲ್ಲೇ ಉಭಯ ಪಕ್ಷಗಳ ಕಾರ್ಯಕರ್ತರು ಸರಿಸಮನಾಗಿ ಹೊಡೆದಾಡಿಕೊಂಡ ಘಟನೆ ನಡೆದಿದೆ.

ರಾಂಗುರ-ಕೆ.ಆರ್.ಪೇಟೆ ಮಾರ್ಗದ ರಸ್ತೆ ಕಾಮಗಾರಿ ವೀಕ್ಷಣೆಗಾಗಿ ಮಾಜಿ ಶಾಸಕ ಸಿ.ಟಿ.ರವಿ ಅವರು ಭೇಟಿ ನೀಡಿದ್ದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಕಾಂಗ್ರೆಸ್ ಕಾರ್ಯಕರ್ತರು ಸಿ.ಟಿ.ರವಿ ವಿರುದ್ಧ ಧಿಕ್ಕಾರ ಕೂಗಿ, ಕಪ್ಪು ಬಾವುಟ ಪ್ರದರ್ಶಿಸಲು ಯತ್ನಿಸಿದರು. ಇದರಿಂದ ಆಕ್ರೋಶಗೊಂಡ ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ತಿರುಗಿ ಬಿದ್ದರು. ನೋಡ ನೋಡುತ್ತಿದ್ದಂತೆ ಇಡೀ ರಸ್ತೆ ರಣರಂಗವಾಗಿ ಮಾರ್ಪಟ್ಟಿತು. ಗಲಾಟೆ ತಾರಕಕ್ಕೇರಿದಾಗ ಕಾಂಗ್ರೆಸ್ ಕಾರ್ಯಕರ್ತರು ಸಿ.ಟಿ.ರವಿ ಅವರ ಮೇಲೆ ಹಲ್ಲೆ ನಡೆಸಲು ತೀವ್ರ ಯತ್ನ ನಡೆಸಿದರು. ಆದರೆ ಕಮಲ ಪಾಳಯದ ಕಾರ್ಯಕರ್ತರು ಸಿ.ಟಿ.ರವಿ ಸುತ್ತ ರಕ್ಷಣಾ ಕೋಟೆಯಂತೆ ನಿಂತು, ಅವರನ್ನು ಮುಟ್ಟದಂತೆ ತಡೆದರು. ಈ ನೂಕಾಟ -ತಳ್ಳಾಟದ ಮಧ್ಯೆಯೂ ಸಿ.ಟಿ.ರವಿ ಅವರು ಸ್ಥಳದಿಂದ ಕದಲದೇ, ರಸ್ತೆ ಮಧ್ಯೆ ಯೇ ಕುಳಿತು ಪ್ರತಿಭಟನೆ ನಡೆಸಿದರು. 'ಬಾರೋ ಬಾ ಹೊಡೀ' ಎಂದು ಎದುರಾಳಿಗಳಿಗೆ ಸವಾಲು ಹಾಕಿದರು. ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದರಿಂದ ಆರಂಭದಲ್ಲಿ ಪೊಲೀಸರು ಪರಿಸ್ಥಿತಿ ನಿಭಾಯಿಸಲು ತಡಕಾಡಿದರು. ನೂರಾರು ಪೊಲೀಸರು ಇದ್ದಾಗ್ಯೂ, ಕಾರ್ಯಕರ್ತರು ಪೊಲೀ ಸರನ್ನೇ ತಳ್ಳಿ ಮುನ್ನುಗ್ಗಿದರು. ಸುರಕ್ಷತೆಯ ದೃಷ್ಟಿಯಿಂದ ಸ್ಥಳದಿಂದ ತೆರಳುವಂತೆ ಪೊಲೀಸರು ಮನವಿ ಮಾಡಿದರೂ ಸಿ.ಟಿ.ರವಿ ಅವರು ನಿರಾಕರಿಸಿ, ಕೊನೆಯವರೆಗೂ ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದರು.

ಎಂಎಲ್‌ಸಿ ಸಿ.ಟಿ.ರವಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಚಿಕ್ಕಮಗಳೂರಿನಲ್ಲಿ ಮಾತಿನ ಚಕಮಕಿ ನಡೆಯಿತು.

ಗೂಂಡಾ ರಾಜಕಾರಣಕ್ಕೆ ಬಗ್ಗಲ್ಲ

'ಮೆಡಿಕಲ್ ಕಾಲೇಜ್, ನೂತನ ಡಿಸಿ ಆಫೀಸ್, ನೀರಾವರಿ ಯೋಜನೆಗೆ 5,800 ಕೋಟಿ ರು.ಹಣ ತಂದಿದ್ದು ನಾನು. ಈ ರಸ್ತೆಗೂ ನಾನೇ ಹಣ ತಂದಿದ್ದೇನೆ. ಇದು ಜನರಿಗೆ ಗೊತ್ತಾಗುತ್ತದೆ ಎಂಬ ಭಯದಿಂದ ಕಾಂಗ್ರೆಸ್‌ನವರು ಗಲಾಟೆ ಮಾಡಿಸುತ್ತಿದ್ದಾರೆ. ಸಮಯ ಬಂದಾಗ ದಾಖಲೆ ಬಿಡುಗಡೆ ಮಾಡುತ್ತೇನೆ. ಇಂತಹ ಬೆದರಿಕೆಗಳಿಗೆ ನಾನು ಹೆದರುವುದಿಲ್ಲ' ಎಂದು ಸಿ.ಟಿ.ರವಿ ಎಚ್ಚರಿಕೆ ನೀಡಿದ್ದಾರೆ.

ಪರೀಕ್ಷೆ-1ರಲ್ಲಿ ಶೇ.86.52ರಷ್ಟು ಫಲಿತಾಂಶ | ಕಳೆದ ಬಾರಿಗಿಂತ ಶೇ.7.06ರಷ್ಟು ಜಿಗಿತ

ಪಿಯುಸಿ ಫಲಿತಾಂಶ ಶೇ.92.25ಕ್ಕೆ ಏರಿಕೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ -2ರ ಫಲಿತಾಂಶವನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಕಟಿಸಿದ್ದು, ಎರಡೂ ಪರೀಕ್ಷೆಗಳ ಒಟ್ಟಾರೆ ಫಲಿತಾಂಶ ಶೇ.92.25ಕ್ಕೆ ಏರಿಕೆಯಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ ತಿಳಿಸಿದ್ದಾರೆ.

ಫಲಿತಾಂಶ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ದ್ವಿತೀಯ ಪರೀಕ್ಷೆ-1ರಲ್ಲಿ ಶೇ.86.52ರಷ್ಟು ಫಲಿತಾಂಶ ಬಂದಿತ್ತು. ಕಳೆದ ವರ್ಷದ ಶೇ.85.19 ಫಲಿತಾಂಶಕ್ಕೆ ಹೋಲಿಸಿದರೆ ಇದು ಶೇ.7.06ರಷ್ಟು ಮಹತ್ವದ ಏರಿಕೆಯಾಗಿದೆ. ಇದು ಕರ್ನಾಟಕದ ಇತಿಹಾಸದಲ್ಲೆ ದೊಡ್ಡ ಸಾಧನೆಯಾಗಿದೆ. ಈ ವರ್ಷ ದ್ವಿತೀಯ ಪಿಯುಸಿ ಪರೀಕ್ಷೆ -1ರಲ್ಲೆ ರಾಜ್ಯವು ಸಾರ್ವಕಾಲಿಕ ದಾಖಲೆಯ ಫಲಿತಾಂಶ ಸಾಧಿಸಿದ್ದು, ಇದೀಗ ಪರೀಕ್ಷೆ 2ರ ನಂತರ ಈ ದಾಖಲೆಯನ್ನು ಮತ್ತೊಮ್ಮೆ ಸುಧಾರಿಸಿ ಹೊಸ ಇತಿಹಾಸ ನಿರ್ಮಿಸಿರುವುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದಿದ್ದಾರೆ.

ದೇಶದಲ್ಲಿಯೇ ಈ ಎರಡು ಪರೀಕ್ಷೆಯ ವಿಧಾನವನ್ನು ಕರ್ನಾಟಕ ಸರಕಾರ ಮೊದಲ ಬಾರಿಗೆ ಜಾರಿಗೆ ತಂದಿದೆ. ಇದರಿಂದ ತಮ್ಮ ಅಂಕಗಳನ್ನು ಹೆಚ್ಚಿಸಿಕೊಳ್ಳಲು ಬಯಸಿದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಪರೀಕ್ಷೆ 2ರಲ್ಲಿ ಅಂಥ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿತ್ತು. ಎರಡೂ ಪರೀಕ್ಷೆಗಳಲ್ಲಿ ಯಾವುದರಲ್ಲಿ ಗರಿಷ್ಠ ಅಂಕ ಪಡೆದಿರುತ್ತಾರೋ ಅದನ್ನು ಪರಿಗಣಿಸುವುದರಿಂದ ಕೇವಲ ಒಟ್ಟಾರೆ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯಷ್ಟೆ ಹೆಚ್ಚುವುದಲ್ಲ. ಅವರು ಉತ್ತೀರ್ಣಗೊಂಡಿರುವ ಅಂಕಗಳಲ್ಲೂ ಹೆಚ್ಚಳವಾಗಿದೆ ಎಂದು ಅವರು ಹೇಳಿದ್ದಾರೆ.

ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಲ್ಲೂ ಗಮನಾರ್ಹ ಸಾಧನೆ ದಾಖಲಾಗಿದೆ. ಕಲಾ ವಿಭಾಗದ ಫಲಿತಾಂಶ ಕಳೆದ ವರ್ಷದ ಶೇ.69.47ರಿಂದ ಶೇ.83.31ಕ್ಕೆ, ವಾಣಿಜ್ಯ ವಿಭಾಗದ ಫಲಿತಾಂಶ ಶೇ.87.83ರಿಂದ ಶೇ.92.84ಕ್ಕೆ ಹಾಗೂ ವಿಜ್ಞಾನ ವಿಭಾಗದ ಫಲಿತಾಂಶ ಶೇ.91.88ರಿಂದ ಶೇ.96.01ಕ್ಕೆ ಏರಿಕೆಯಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಈ ಬಾರಿ ವಿಶೇಷ ಸಾಧನೆ ಮಾಡಿದ್ದು, ಶೇ.92.77ರಷ್ಟು ಗ್ರಾಮಾಂತರ ಪ್ರದೇಶದ ಫಲಿತಾಂಶ ದಾಖಲಾಗಿದೆ. ನಗರ ಪ್ರದೇಶದ ಫಲಿತಾಂಶ ಶೇ.92.01ರಷ್ಟಾಗಿದೆ. ಪರೀಕ್ಷೆಗೆ 80,535 ವಿದ್ಯಾರ್ಥಿಗಳು ಹಾಜರಾಗಿದ್ದು, 36,746 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಶೇ.45.65ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ಪರೀಕ್ಷೆ 1 ಮತ್ತು 2ರ ಕ್ರೋಢೀಕೃತ ಫಲಿತಾಂಶ ಶೇ.92.25ರಷ್ಟಿದೆ ಎಂದರು.

> ಕಳೆದ ವರ್ಷ ಗ್ರಾಮೀಣ ಭಾಗದ ಫಲಿತಾಂಶ ಶೇ.84.94ರಷ್ಟು ಬಂದಿತ್ತು. ಈ ಬಾರಿ ಗ್ರಾಮೀಣ ವಿದ್ಯಾರ್ಥಿಗಳ ಫಲಿತಾಂಶದಲ್ಲೂ ಸುಧಾರಣೆಯಾಗಿದೆ ಎಂದು ಹೇಳಿದ್ದಾರೆ. ಸರಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶವು ಸುಧಾರಿಸಿರು ವುದು ಸಂತೋಷ ತಂದಿದೆ. ಕಳೆದ ವರ್ಷ ಶೇ.73.04ರಷ್ಟಿದ್ದ ಕ್ರೋಢೀಕೃತ ಫಲಿತಾಂಶವು ಈ ಬಾರಿ ಶೇ.87.03ಕ್ಕೆ ಏರಿಕೆಯಾಗಿದ್ದು, ಸುಮಾರು ಶೇ.13.99ರಷ್ಟು ಸುಧಾರಣೆಯಾಗಿದೆ.
>
> -ಮಧು ಬಂಗಾರಪ್ಪ, ಸಚಿವ

ಕಾರು ಚಲಾಯಿಸಿ ವ್ಯಕ್ತಿ ಕೊಲೆಗೆ ಯತ್ನಿಸಿದ ಆರೋಪ

ಆರ್‌ಟಿಐ ಗಂಗರಾಜು ಬಂಧನ

ಮೈಸೂರು: ಕಾರಿನ ಬಾನೆಟ್ ಮೇಲೆ ಹತ್ತಿದ ವ್ಯಕ್ತಿಯನ್ನು ಲೆಕ್ಕಿಸದೇ ಕಾರು ಚಲಾಯಿಸಿದ ಆರೋಪದ ಮೇಲೆ ಮೈಸೂರಿನ ಆರ್‌ಟಿಐ ಕಾರ್ಯಕರ್ತ ಗಂಗರಾಜು ಅವರನ್ನು ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಣಕಾಸು ವ್ಯವಹಾರ ಸಂಬಂಧ ಕೊಲೆ ಗಂಗರಾಜು ವಿರುದ್ಧ ಕೊಲೆ ಯತ್ನ ಆರೋಪದಡಿ ಕುವೆಂಪು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಈ ಸಂಬಂಧ ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿ ಗಂಗರಾಜು ಅವರನ್ನು 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ನಿವೇಶನ ಖರೀದಿ ಹೆಸರಿನಲ್ಲಿ 20 ಲಕ್ಷ ರು.ಮುಂಗಡ ಹಣ ಪಡೆದು ಬಳಿಕ ಹಣ ವಾಪಸ್ ನೀಡದೇ, ಪ್ರಶ್ನೆ ಮಾಡಿದ ವ್ಯಕ್ತಿಯ ಮೇಲೆಯೇ ಕಾರು ಹರಿಸಿ ಕೊಲೆ ಮಾಡಲು ಯತ್ನಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. 2024 ರಲ್ಲಿ ಮುಡಾದಲ್ಲಿ ಕೆಲಸ ಮಾಡುತ್ತಿದ್ದ ನಂದೀಶ್ ಪರಿಚಯವಾಗಿತ್ತು. ಅವರು ಮೈಸೂರು ನಗರದ ಜೆಪಿ ನಗರದಲ್ಲಿರುವ ನಿವೇಶನ ಖರೀದಿ ಮಾಡಿಕೊಳ್ಳುವಂತೆ ಸಲಹೆ ನೀಡಿ, ಗಂಗರಾಜು ಅವರನ್ನು ಪರಿಚಯ ಮಾಡಿಕೊಟ್ಟಿದ್ದರು. ಸುಮಾರು 8712 ಚದರ ಅಡಿ ವಿಸ್ತೀರ್ಣದ ಆ ಜಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಗಂಗರಾಜು ಅವರೇ ನೀಡಿದ್ದಾಗಿ ದೂರಿನಲ್ಲಿ ತಿಳಿಸಿದ್ದಾರೆ.

ನಿವೇಶನ ನೋಂದಣಿ ಮಾಡಿಸದ ಆರೋಪ

ನಿವೇಶನದ ಮಾಲೀಕರಾದ ಬನ್ನಂತೆ ಗೌಡರೂ ಸ್ಥಳದಲ್ಲಿದ್ದು, 'ವ್ಯವಹಾರವನ್ನು ಗಂಗರಾಜು ಅವರ ಜತೆಯೇ ನಡೆಸಿಕೊಳ್ಳಿ, ನಾನು ಬಂದು ಸಹಿ ಮಾಡುತ್ತೇನೆ' ಎಂದು ಹೇಳಿದ್ದಾಗಿ ಪಿರ್ಯಾದುದಾರರು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ನಂತರ ಚದರ ಅಡಿಗೆ 3,800 ರು.ದರ ನಿಗದಿ ಮಾಡಲಾಗಿದ್ದು, 2024ರ ಜೂನ್ ತಿಂಗಳಲ್ಲಿ ಪಿರ್ಯಾದುದಾರರು 20 ಲಕ್ಷ ರೂ.ಗಳನ್ನು ನಗದು ರೂಪದಲ್ಲಿ ಗಂಗರಾಜು ಅವರಿಗೆ ಮುಂಗಡವಾಗಿ ನೀಡಿದ್ದಾಗಿ ತಿಳಿಸಿದ್ದಾರೆ. ಈ ವೇಳೆ ನಂದೀಶ್ ಸಹ ಉಪಸ್ಥಿತರಿದ್ದರು ಎನ್ನಲಾಗಿದೆ. ಹಣ ಸ್ವೀಕರಿಸಿದ ಬಳಿಕ ನಿವೇಶನದ ಟೈಟಲ್ ಡೀಡ್ ಪಡೆದು, ಬನ್ನಂತೆಗೌಡರಿಂದ ತಮ್ಮ ಹೆಸರಿಗೆ ನೋಂದಣಿ ಮಾಡಿಕೊಡುವುದಾಗಿ ಗಂಗರಾಜು ಭರವಸೆ ನೀಡಿದ್ದರು ಎಂದು ದೂರಿನಲ್ಲಿ ಹೇಳಲಾಗಿದೆ. ಆದರೆ ಬಳಿಕ ಹಲವು ಬಾರಿ ಸಂಪರ್ಕಿಸಿದರೂ ನೋಂದಣಿ ಮಾಡಿಕೊಡದೇ, ಹಣ ವಾಪಸ್ ನೀಡುವ ಭರವಸೆ ನೀಡಿದರೂ ಇದುವರೆಗೆ ಯಾವುದೇ ಹಣ ನೀಡಿಲ್ಲ ಎಂದು ಆರೋಪಿಸಲಾಗಿದೆ.

ಎಸ್‌ಐಆರ್ ಪ್ರಶ್ನಿಸಿ ಸುಪ್ರೀಂಗೆ ಮೊರೆ?

← ಮೊದಲಪುಟದಿಂದ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳನ್ನು ಪ್ರತಿ ಕೇಂದ್ರಕ್ಕೆ 3000 ರು.ಗಳಂತೆ 69,922 ಅಂಗನವಾಡಿಗಳಿಗೆ 20.98 ಕೋಟಿಗಳ ಮೊತ್ತದಲ್ಲಿ ಖರೀದಿಸಲು ಒಪ್ಪಿಗೆ ನೀಡಲಾಗಿದೆ ಎಂದರು. ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡವನ್ನು 100 ಕೋಟಿ ರು ವೆಚ್ಚದಲ್ಲಿ ನಿರ್ಮಾಣ, ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕು ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ 10.61 ಕೋಟಿ ರು., ರಾಯಚೂರು ಮತ್ತು ತಾಲ್ಲೂಕಿನ ವ್ಯಾಪ್ತಿಯಲ್ಲಿ ತುಂಗಭದ್ರಾ ಎಡದಂಡೆ ಕಾಲುವೆಯಡಿ ಬರುವ ವಿತರಣಾ ಕಾಲುವೆ ನೀರಾವರಿ ಸೌಲಭ್ಯ ಕಲ್ಪಿಸುವ 182.70 ಕೋಟಿ ರು.ಮೊತ್ತದ ಮಟಮಾರಿ ವೀರಭದ್ರೇಶ್ವರ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕ್ ನೆರವಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯಡಿ ಕೇಂದ್ರ ಸರಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಸಾಲದ ಮಾತುಕತೆ ಸಿದ್ಧತೆಯ ಮಾನದಂಡಗಳ ಪ್ರಕಾರ 53 ಸರ್ಕಾರಿ ಪದವಿ ಕಾಲೇಜುಗಳು, 14 ಸರ್ಕಾರಿ ಪಾಲಿಟೆಕ್ನಿಕ್‌ಗಳು, 5 ಉತ್ಕೃಷ್ಟತಾ ಕೇಂದ್ರಗಳು ಹಾಗೂ ಯೋಜನಾ ನಿರ್ವಹಣಾ ಘಟಕಕ್ಕೆ ಒಟ್ಟು 802 ಕೋಟಿ ರು. ಗಳ ಮೊತ್ತದ ವಸ್ತುಗಳ ಮುಂಗಡ ಖರೀದಿಗೆ ಅನುಮೋದನೆ. ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ನಗರ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ನಮ್ಮ ಕ್ಲಿನಿಕ್‌ಗಳಿಗೆ ಅವಶ್ಯವಿರುವ ಪ್ರಯೋಗಾಲಯ ಉಪಭೋಗ್ಯ ಹಾಗೂ ಉಪಕರಣ ಖರೀದಿಗೆ 22 ಕೋಟಿ ರು. ನೀಡಲು ಒಪ್ಪಿಗೆ ನೀಡಲಾಗಿದೆ ಎಂದರು.

ಸಂಪುಟದ ಇತರ ತೀರ್ಮಾನಗಳು

- ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಕ್ಕೆ ಯಂತ್ರೋಪಕರಣ ಖರೀದಿಗೆ 90 ಕೋಟಿ ರು.
- ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕಿನ ದಾಸನಕೆರೆ ಅಭಿವೃದ್ಧಿ ಹಾಗೂ ವಿದ್ಯುದ್ದೀಕರಣ ಕಾಮಗಾರಿಗೆ 25 ಕೋಟಿ ರು.
- ಯಾದಗಿರಿ ಜಿಲ್ಲೆಯ ಶಹಾಪುರದಲ್ಲಿ ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ತಲಾ 50 ಹಾಸಿಗೆ ಆಸ್ಪತ್ರೆಗೆ 38 ಕೋಟಿ ರು.
- ಕಲಬುರಗಿ ಶರಣಸಿರಸಗಿ ಗ್ರಾಮದ 4 ಎಕರೆ ಗೋಮಾಳ ಜಮೀನನ್ನು ಕಲಬುರಗಿ ಜಿಲ್ಲಾ ಆದಿ ವೀರಶೈವ ಬಣಜಿಗ ಸಮಾಜಕ್ಕೆ ಮಂಜೂರು
- ನಂಜನಗೂಡುಶ್ರೀಕಂಠೇಶ್ವರ ದೇವಾಲಯದ ಸ್ನಾನಘಟ್ಟದ ಹತ್ತಿರ ಕಬಿನಿ ನದಿಗೆ ಅಡ್ಡಲಾಗಿ ವಿಯರ್ ನಿರ್ಮಾಣ ಕಾಮಗಾರಿಗೆ 15 ಕೋಟಿ ರು.
- ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿನ ವೈದ್ಯಕೀಯ ಬೋಧನಾ ಕಾಲೇಜು ಆಸ್ಪತ್ರೆಗಳಲ್ಲಿನ ಕ್ಲೇಮ್ ಪ್ರಕ್ರಿಯೆ ಹಾಗೂ ಡಿಜಟಲೀಕರಣಕ್ಕೆ 17.85 ಕೋಟಿ ರು.
- ಬೆಂಗಳೂರು ಕೇಂದ್ರ ಕಾರಾಗೃಹದ ಆವರಣದಲ್ಲಿ ಕಾರಾಗೃಹ ಇಲಾಖೆಗೆ ಸೇರಿದ ಜಮೀನಿನಲ್ಲಿ ಪೆಟ್ರೋಲ್ ಪಂಪ್ ಮತ್ತು ಮಾರಾಟ ಮಳಿಗೆ ಸ್ಥಾಪಿಸಲು ಅನುಮತಿ

ಜಾಮೀನು: ವಿಲ್ಸನ್ ಗಾರ್ಡನ್ ನಾಗ ರಿಲೀಸ್

ಬೆಳಗಾವಿ: ಸಿದ್ದಾಪುರದ ಮಹೇಶ್ ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಆರೋಪಿ ನಟೋರಿಯಸ್ ರೌಡಿಶೀಟರ್ ವಿಲ್ಸನ್ ಗಾರ್ಡನ್ ನಾಗನಿಗೆ ಜಾಮೀನು ಮಂಜೂರಾದ ಹಿನ್ನೆಲೆ ಗುರುವಾರ ಬೆಳಗಾವಿ ಹಿಂಡಲಗಾ ಜೈಲಿನಿಂದ ಬಿಡುಗಡೆ ಮಾಡಲಾಯಿತು. ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿದ್ದ ವೇಳೆ ವೈರಲ್ ಆಗಿದ್ದ ಫೋಟೊಗಳಿಂದ ವಿಲ್ಸನ್ ಗಾರ್ಡನ್ ನಾಗ ಕೂಡ ಸಾಕಷ್ಟು ಸುದ್ದಿಯಾಗಿದ್ದ. ಬಳಿಕ ಆತನನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿತ್ತು. ವಿಲ್ಸನ್ ಗಾರ್ಡನ್ ನಾಗನಿಗೆ ಎರಡು ದಿನಗಳ ಹಿಂದಷ್ಟೇ ನಗರದ ಸೆಷನ್ಸ್ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಈ ಹಿನ್ನೆಲೆ ಆತನ ಬಿಡುಗಡೆ ಹಿನ್ನೆಲೆಯಲ್ಲಿ ಸುಮಾರು 10 ಮಂದಿ ಸಹಚರರು ಹಿಂಡಲಗಾ ಜೈಲಿನ ಬಳಿ ಹಾರ-ತುರಾಯಿ ಸಮೇತ ಆಗಮಿಸಿದ್ದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ: VTU/BGM/SAP/CW1/T-745,746,747/2026-27/815 ದಿನಾಂಕ: 21.05.2026

ಟೆಂಡರ್ ಪ್ರಕಟಣೆ

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ-ಲಕೋಟೆ ಪದ್ಧತಿಯಲ್ಲಿ) ಇ-ಟೆಂಡರ್ ಮೂಲಕ ಮೊಹರು ಬಂದ್ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ	ಮುಂಗಡ ಠೇವಣಿ
1	T-745: Tender for Supply of High-Speed Scanners to VTU Examination Section, Belagavi	Rs. 65,19,500/-	Rs. 1,30,500/-
2	T-746: Tender for subscription of 1 Gbps Leased line Internet Connectivity for 3 years to VTU CNC Section, Belagavi	Rs. 57,52,500/-	Rs.1,15,500/-
3	T-747: Tender for Refurbishment of Laboratories in Bosch-Rexroth Centre at VTU Mysuru	Rs. 84,07,547/-	Rs.1,68,500/-

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 05.06.2026ರ 2.30ರ ವರೆಗೆ. ಟೆಂಡರ ತೆರೆಯುವ ದಿನಾಂಕ: 06.06.2026ರ 4.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ಮತ್ತು www.vtu.ac.in ನೋಡಬಹುದು.

ಸಹಿ/–
ಕುಲಸಚಿವರು

DIPR/Belagavi/285/Adverto/2026-27

ನಗರಸಭಾ ಕಾರ್ಯಾಲಯ, ಮಂಡ್ಯ.
ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–11/2026–27
ದಿ : 18–05–2026

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2026–27ನೇ ಸಾಲಿನ ಸಾಮಾನ್ಯ ನಿಧಿ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act–1999 & 2000ರಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW–3ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು https://kppp.karnataka.gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಕೊನೆಯ ದಿನಾಂಕ: 03–06–2026 ಅಪರಾಹ್ನ 4.30 ಗಂಟೆಯೊಳಗೆ ಸಲ್ಲಿಸುವುದು. ಟೆಂಡರ್ ಪ್ರಕಟಣೆ ವಿವರವನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.
ಕ್ರ ಸಂ : 01. ಇಂಡೆಂಟ್ ಸಂಖ್ಯೆ : DMA/2026-27/EL/WORK_INDENT57391. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 79.00. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 66.66. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 1,34,000/-.
ಕ್ರ ಸಂ : 02. ಇಂಡೆಂಟ್ ಸಂಖ್ಯೆ :DMA/2026-27/EL/WORK_INDENT57393. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 70.60. ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 59.77. ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) : 1,20,000/-.

ಸಹಿ/–ಪೌರಾಯುಕ್ತರು,
ನಗರಸಭೆ, ಮಂಡ್ಯ

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/137/2026–27

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರವರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರಜಿಲ್ಲೆ,
ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ,
ಬನಶಂಕರಿ (ಬನಶಂಕರಿ ದೇವಸ್ಥಾನದ ಹತ್ತಿರ), ಬೆಂಗಳೂರು – 560070.
ಫೋನ್ ನಂ. 080–26716046 ವೆಬ್‌ಸೈಟ್: http://kppp.karnataka.gov.in

ಸಂಖ್ಯೆ:ಕಾಅ/ಪಂರಾಇಂವಿ/ಬೆಂನ/ಜೆಇ–1/ಟೆಂಡರ್/12/2026–27 ದಿನಾಂಕ:21.05.2026

ಕೆ.ಪಿ.ಪಿ.ಪಿ. ಪೋರ್ಟಲ್ ಟೆಂಡರ್ ಪ್ರಕಟಣೆ ನೋಟೀಸ್(ದ್ವಿ–ಲಕೋಟೆ)

ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 5054 Flood Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್ ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: 04.06.2026ರ ಸಂಜೆ 4.00 ಗಂಟೆಯವರೆಗೆ ಪಡೆದು ಸಲ್ಲಿಸಬಹುದಾಗಿರುತ್ತದೆ. (RDPR/2025-26/RD/WORK_INDENT23962) ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಬೆಂಗಳೂರು ನಗರ, ಬೆಂಗಳೂರು.

ವಾಸಾಸಂಇ/ವಾಪ್ರ/766/ಶಿರಡಿ ಸಾಯಿ/2026–27

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ
ದೂರವಾಣಿ ಸಂಖ್ಯೆ: 0836–2741277, 0836–2748374,
ಫ್ಯಾಕ್ಸ್ ಸಂಖ್ಯೆ: 0836–2741277,
Email Id: dsdharwad@gmail.com
ಸತ್ಯಮೇವ ಜಯತೇ ಆರೋಗ್ಯವೇ ಭಾಗ್ಯ

ಕ್ರ: ಜಿಆಧಾ/ಎ.ಆರ್.ಎಸ್/03/2026–27 ದಿ: 19–05–2026

ಟೆಂಡರ್ ಪ್ರಕಟಣೆ

ವಿಷಯ : 2026–2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ–ಟೆಂಡರ್ ಆಹ್ವಾನಿಸಿರುವ ಕುರಿತು.

2026–2027 ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ ವಿವಿಧ ಸಿಬ್ಬಂದಿಗಳ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸಲು ಇ–ಟೆಂಡರ್ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರ ಪ್ರಕಾರ ದ್ವಿ–ಬಿಡ್ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್ (ಇ–ಟೆಂಡರ್) ಆಹ್ವಾನಿಸಲಾಗಿದೆ.

Tender No: DHFWS/2026-27/SE2191/CALL-2
1) ಇ–ಪೋರ್ಟಲ್‌ದಲ್ಲಿ ಅಪ್ ಲೋಡ್ ಮಾಡುವ ದಿನಾಂಕ: 19–05–2026 ರಿಂದ 26–05–2026 ರ ವರೆಗೆ ಸಾಯಂಕಾಲ 4.00 ಗಂಟೆಯವರೆಗೆ 2) ತಾಂತ್ರಿಕ್ ಬಿಡ್‌ನ್ನು ತೆರೆಯುವ ದಿನಾಂಕ: 27–05–2026 ರಂದು 4.30 ಗಂಟೆಗೆ 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 29–05–2026 ರಂದು 12.00 ಗಂಟೆಗೆ

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ (www.kppp.karnataka.gov.in) ದಿಂದ ಪಡೆಯುಬಹುದು ಅಥವಾ ಕಚೇರಿ ಸಮಯುದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು
ಜಿಲ್ಲಾ ಆಸ್ಪತ್ರೆ ಧಾರವಾಡ

ಡಿಐಪಿಆರ್/ಧಾರವಾಡ/219/ಮಣಿಪಾಲ್/2026–27

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು

ಸಂ. ಕಾನಿಅ/ಗ್ರಾಕುನೀ&ನೈ/ವಿರಾ/ತಾ.ಶಾ/KKRDB/2026–27/ಇ–ಟೆಂಡರ/334 ದಿನಾಂಕ:18–05–2026

ಇ–ಪ್ರೋಕ್ಯೂರಮೆಂಟ ಅಲ್ಪಾವಧಿ ಟೆಂಡರ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ರಾಯಚೂರು ಇವರು KW-1&4 (Standard Bid Document) ನಿಬಂಧನೆಗಳೊಪಟ್ಟಂತೆ ಪಂಚಾಯತ ರಾಜ ಇಂಜನೀಯರಿಂಗ ಇಲಾಖೆಯಲ್ಲಿ ಸಿವ್ಹಿಲ್ ನೊಂದಾಯಿತ ಹಾಗೂ ಇ–ಗುತ್ತಿಗೆ ಕುರಿತು ಇ–ಪ್ರೋಕ್ಯೂರಮೆಂಟ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರುಗಳಿಂದ ಈ ವಿಭಾಗ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ KKRDB ಅನುದಾನದಡಿಯಲ್ಲಿ ರಾಯಚೂರು ಜಿಲ್ಲೆಯ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿಗಳಿಗೆ ಐಟಂವಾರು ಇ–ಟೆಂಡರ ಆಹ್ವಾನಿಸಲಾಗಿದೆ.

1] E-Payment/NEFT ಮುಖಾಂತರ ಅರ್ಜಿ ಸ್ವೀಕರಿಸುವ ದಿನಾಂಕ: 19–05–2026 2] ಶೆಡ್ಯೂಲಗಳನ್ನು Online ನಲ್ಲಿ ಬಿಡುವ ದಿನಾಂಕ : 19–05–2026 3] ಭರ್ತಿ ಮಾಡಿದ ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 01–06–2026 ಸಂಜೆ 4:30 ಗಂಟೆವರೆಗೆ 4] ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02–06–2026 ಸಂಜೆ 5:30 ಗಂಟೆ ಸಾಧ್ಯವಿದ್ದಲ್ಲಿ 5] ಆರ್ಥಿಕ ಬಿಡ್ ತೆರೆಯುವ ದಿನಾಂಕ: 03–06–2026 ಸಂಜೆ 5:30 ಗಂಟೆಗೆ ಸಾಧ್ಯವಿದ್ದಲ್ಲಿ

Indent Nos.:- Raichur: 1)RWSSD/2026-27/WS/WORK_INDENT10049 2) RWSSD/2026-27/WS/WORK_INDENT10084

ಕಾಮಗಾರಿಗಳ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕಛೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ವೆಬ್ ಸೈಟ https://kppp.karnataka.gov.in/ನಲ್ಲಿ ಮಾಹಿತಿಯನ್ನು ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು.,
ಗ್ರಾ.ಕು.ನೀ. & ನೈ ವಿಭಾಗ,
ರಾಯಚೂರು..

DIP/RCR/80KSMCA/82/2026-27

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
(ಜಿಲ್ಲಾ ನಗರಾಭಿವೃದ್ಧಿ ಕೋಶ ಬೆಂಗಳೂರು)
E-Mail: ka.bengaluru.urban.dudc@gmai.com Phone No: 08022211372/3

ಸಂ: ಜಿನಕೋ/ಸಾಮಾನ್ಯ/ಸಿಆರ್01/2026-27 ದಿನಾಂಕ: 21-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ:– ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ,ಬೆಂಗಳೂರು ನಗರ ಜಿಲ್ಲಾ ಕಛೇರಿಗೆ 01 Nodal Officer ನೌಕರರ ಸೇವೆಯನ್ನು ನೊಂದಾಯಿತ ಏಜೆನ್ಸಿರವರಿಂದ ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು ಸೇವಾ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.

ಹೆಸರು: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ,ಬೆಂಗಳೂರು ನಗರ ಜಿಲ್ಲಾ ಕಛೇರಿಗೆ 01 Nodal Officer ನೌಕರರ ಸೇವೆಯನ್ನು ನೊಂದಾಯಿತ ಏಜೆನ್ಸಿರವರಿಂದ ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು ಸೇವಾ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ.

ಕನ್ಸಲ್ಟೆನ್ಸಿ ಒಟ್ಟು ಮೊತ್ತ: ರೂ.4,19,986 /–. ಇ.ಎಂ.ಡಿ: 10,500/–.

ಅವಧಿ: ಗುತ್ತಿಗೆದಾರರ ಸೇವೆ ತೃಪ್ತಿಕಾರ ವಾದ್ದಲ್ಲಿ ಪ್ರತಿ ವರ್ಷ ನವೀಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.

1. ಟೆಂಡರ್‌ನ KPP ಪೋರ್ಟಲ್ ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 28.05.2026 ಮಧ್ಯಾಹ್ನ 3.00 ಗಂಟೆಯವರೆಗೆ. 2. ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 30 .05.2026 ಬೆಳಗ್ಗೆ 10.10 ಗಂಟೆಗೆ. 3. ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01.06.2026 ಬೆಳಗ್ಗೆ 11.30 ಗಂಟೆಗೆ. 4. ಹೆಚ್ಚಿನ ಮಾಹಿತಿಯನ್ನು KPP Portal ನಲ್ಲಿ ಪಡೆಯಬಹುದಾಗಿದೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ನಗರ ಜಿಲ್ಲೆ.

DIPR/CP/RO778/AAPL/2026-27

ಸಮಾಚಾರ ಸಣ್ಣದಲ್ಲ

ನಿಡಗುಂದಿ: ಛಾವಣಿ ಕುಸಿದು ಮಹಿಳೆ ಸಾವು

ವಿಜಯಪುರ: ಮನೆ ಮೇಲ್ಛಾವಣಿ ಕುಸಿದು ಮಹಿಳೆಯೊಬ್ಬರು ಮೃತಪಟ್ಟ ಘಟನೆ ವಿಜಯಪುರ ಜಿಲ್ಲೆಯ ನಿಡಗುಂದಿ ಪಟ್ಟಣದಲ್ಲಿ ನಡೆದಿದೆ. ಪಟ್ಟಣದ ಗೌರೀಶ್ವರ ದೇವಸ್ಥಾನ ಬಳಿ ಗುರುವಾರ ನಸುಕಿನಜಾವ ಈ ದುರ್ಘಟನೆ ನಡೆದಿದೆ. ಮಹಾದೇವಿ ವಾರದ (55) ಮೃತ ಮಹಿಳೆ. ಇವರ ಪತಿ ಮನೆಯ ಹೊರಗೆ ಮಲಗಿದ್ದರಿಂದ ಜೀವಾಪಾಯದಿಂದ ಪಾರಾಗಿದ್ದಾರೆ.

ಮಳೆಗೆ ನೆನೆದಿದ್ದ ಮನೆ: ಮಂಗಳವಾರ ಸುರಿದ ಮಳೆಗೆ ಹಳೆಯ ಮನೆ ನೆನೆದಿತ್ತು. ದುರಾದೃಷ್ಟವಶಾತ್ ಏಕಾಏಕಿ ಛಾವಣಿ ಕುಸಿದಿದ್ದ, ಮಲಗಿದ್ದ ಮಹಾದೇವಿ ಜೀವಂತ ಸಮಾಧಿಯಾಗಿದ್ದಾರೆ. ಬೇಸಿಗೆ ಹಿನ್ನೆಲೆಯಲ್ಲಿ ಮಹಿಳೆಯ ಪತಿ ಶಿವಾನಂದ ಅವರು ಮನೆಯ ಹೊರಗಡೆ ಮಲಗಿದ್ದರಿಂದ ಬದುಕುಳಿದಿದ್ದಾರೆ. ಸ್ಥಳಕ್ಕೆ ನಿಡಗುಂದಿ ಪೊಲೀಸರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಪರಿಚಿತ ವಾಹನ ಡಿಕ್ಕಿ: ಸವಾರರಿಬ್ಬರ ಸಾವು

ಹಾಸನ: ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ದ್ವಿಚಕ್ರ ವಾಹನ ಸವಾರರು ಸ್ಥಳದಲ್ಲೇ ಮೃತಪಟ್ಟ ಘಟನೆ ಎ.ಬೆಳಗುಲಿ ಗೇಟ್ ಸಮೀಪ ನಡೆದಿದೆ. ಅರುಣ್ ಕುಮಾರ್ (26) ಪ್ರದೀಪ್ (23) ಮೃತರು. ಅರಸೀಕೆರೆ ತಾಲೂಕು ಗಂಡಸಿ ಸಮೀಪದ ಕಾಳೇನಹಳ್ಳಿ ಗ್ರಾಮದ ಯುವಕರು ಎಂದು ಗುರುತಿಸಲಾಗಿದೆ. ಈ ಘಟನೆಯಲ್ಲಿ ಬಿಹಾರ್ ಮೂಲದ ಸೂರಜ್ (40) ಗಂಭೀರವಾಗಿ ಗಾಯಗೊಂಡಿದ್ದು, ಸಾವು ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾರೆ. ಕಾಳೇನ ಹಳ್ಳಿಯ ಇಬ್ಬರು ಯುವಕರು ಶುಂಠಿ ಕೃಷಿ ಕೆಲಸದ ನಿಮಿತ್ತ ನುಗ್ಗೆಹಳ್ಳಿಗೆ ಬಂದು ವಾಪಸ್ ಸ್ವಗ್ರಾಮಕ್ಕೆ ಹಿಂದಿರುಗುವ ಮಾರ್ಗಮಧ್ಯೆ ಅಪಘಾತ ಸಂಭವಿಸಿದೆ. ಈ ಸಂಬಂಧ ನುಗ್ಗೆಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಿರುಕುಳ: 4 ತಿಂಗಳ ಗರ್ಭಿಣಿ ಆತ್ಮಹತ್ಯೆ

ಕಲಬುರಗಿ: ಪ್ರೀತಿಸಿ ಮದುವೆಯಾದ ಪತಿಯ ನಿರಂತರ ಕಿರುಕುಳಕ್ಕೆ ಬೇಸತ್ತು 4 ತಿಂಗಳ ಗರ್ಭಿಣಿಯೊಬ್ಬರು ತವರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಲಬುರಗಿ ತಾಲೂಕಿನ ಔರಾದ್ (ಬಿ) ಗ್ರಾಮದಲ್ಲಿ ನಡೆದಿದೆ. ಶ್ರುತಿ (22) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. 2 ವರ್ಷಗಳ ಹಿಂದೆ ಈಕೆ ಗೋಪಾಲ್ ಎಂಬಾತನನ್ನು ಪ್ರೀತಿಸಿ ಮದುವೆಯಾಗಿದ್ದರು. ಆದರೆ ವಿವಾಹದ ಬಳಿಕ ಕುಡಿತ, ಜೂಜಾಟ ಹಾಗೂ ದುಶ್ಚಟಗಳಿಗೆ ದಾಸನಾಗಿದ್ದ ಗೋಪಾಲ್, ಸಾಲ ತೀರಿಸಲು ಮನೆ ಮಾರಲು ಮುಂದಾಗಿದ್ದ. ಇದಕ್ಕೆ ಶ್ರುತಿ ಸಹಿ ಹಾಕದಿದ್ದಾಗ ಆಕೆಗೆ ಮನಬಂದಂತೆ ಥಳಿಸಿ, ತಾಳಿ ಕಿತ್ತುಕೊಂಡು ದೌರ್ಜನ್ಯ ಎಸಗಿದ್ದ. ಗಂಡನ ಕಾಟ ತಾಳಲಾರದೆ 15 ದಿನಗಳ ಹಿಂದೆ ಶ್ರುತಿ ತವರು ಮನೆ ಸೇರಿದ್ದರು. ಆದರೆ ಬುಧವಾರ ಅಲ್ಲಿಗೂ ಬಂದ ಗೋಪಾಲ್, ಮತ್ತೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಇದರಿಂದ ತೀವ್ರ ಮನನೊಂದ ಶ್ರುತಿ ತವರು ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ಕಲಬುರಗಿ ಮಹಿಳಾ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
22.05.2026
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ
ಶ್ರೀ ನಂದೀಶ ಪಿ.ಕೆ
ವಿಷಯ
ಅರವಿಂದರ ಸಾವಿತ್ರಿ-25
vishwavani.news

ದಿನ ವಿಶೇಷ

22 ಮೇ 2026 ಶುಕ್ರವಾರ

» ಸೂರ್ಯೋದಯ	: 5-44
» ಸೂರ್ಯಾಸ್ತ	: 7-03
» ತಿಥಿ	: ಷಷ್ಠಿ
» ನಕ್ಷತ್ರ	: ಆಶ್ಲೇಷ
» ಸಂವತ್ಸರ	: ಪರಾಭವ
» ಅಯನ	: ಉತ್ತರಾಯನ
» ಋತು	: ಗ್ರೀಷ್ಮ
» ಮಾಸ	: ಅಧಿಕ ಜ್ಯೇಷ್ಠ
» ಪಕ್ಷ	: ಶುಕ್ಲಪಕ್ಷ

ಕೇಂದ್ರ ಸರಕಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹ | ಯುವ ಕಾಂಗ್ರೆಸ್ ಪ್ರತಿಭಟನೆಯಲ್ಲಿ ಕೇಂದ್ರದ ವಿರುದ್ಧ ಗರಂ

ವೈದ್ಯಕೀಯ ಸೀಟು ಹಂಚಿಕೆ ರಾಜ್ಯಗಳಿಗೆ ನೀಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಸರಕಾರ ನೀಟ್ ನಡೆಸುವ ಬದಲು ಆಯಾ ರಾಜ್ಯಗಳಿಗೆ ಸೀಟು ಹಂಚುವ ಅವಕಾಶ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ನೀಟ್ ವಿರೋಧಿಸಿ ಯುವ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಇನ್ನು ಮುಂದೆ ನೀವು ನೀಟ್ ಪರೀಕ್ಷೆ ಮಾಡಬೇಡಿ. ಅದನ್ನು ಆಯಾ ರಾಜ್ಯಗಳಿಗೆ ಬಿಡಿ. ಒಕ್ಕೂಟ ರಾಜ್ಯಗಳಿಗೆ ಆಯಾ ವ್ಯವಸ್ಥೆ ಜಾರಿ ಮಾಡುವ ಅವಕಾಶ ಕೊಡಬೇಕು. ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಇದಕ್ಕೆ ಧರ್ಮೇಂದ್ರ ಪ್ರಧಾನ್ ಜವಾಬ್ದಾರಿ. ಆದರೆ ಧರ್ಮೇಂದ್ರ ಪ್ರಧಾನ್ ಆಗಲಿ, ಪ್ರಧಾನಿ ನರೇಂದ್ರ ಮೋದಿ ಅವರಾಗಲಿ ಅದರ ಜವಾಬ್ದಾರಿ ಹೊರುವ ಕೆಲಸ ಮಾಡಿಲ್ಲ. ಪ್ರಧಾನ್ ಅವರು ನೀಟ್ ಪರೀಕ್ಷೆಗೆ ಇನ್ನೊಂದು ದಿನ ನಿಗದಿ ಮಾಡಿ ಕೈ ತೊಳೆದುಕೊಳ್ಳುವ ಕೆಲಸ ಮಾಡಿದ್ದಾರೆ. ಇದಕ್ಕೆ ಇಬ್ಬರು ನಾಯಕರು ಉತ್ತರ ನೀಡಬೇಕಾಗುತ್ತದೆ. ಕೂಡಲೇ ನೀಟ್ ವಿದ್ಯಾರ್ಥಿಗಳ ಬಳಿ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಹಾಗೂ ಬೇರೆ ರಾಜ್ಯಗಳಲ್ಲಿ ಮೆಡಿಕಲ್ ಪ್ರವೇಶಕ್ಕೆ ಬಯಸುವ ವಿದ್ಯಾರ್ಥಿಗಳಿದ್ದಾರೆ. ಸಿಇಟಿ ಮುಖಾಂತರ ಬಹಳ ಪಾರದರ್ಶಕ ಪರೀಕ್ಷೆ ಮಾಡಲಾಗುತ್ತಿತ್ತು. 2016ರಲ್ಲಿ ಮೋದಿ ಅವರು ಈ ನೀಟ್ ಎಂಬ ವಿಚಾರವನ್ನು ಜಾರಿಗೆ ತಂದರು. ಇಲ್ಲಿವರೆಗೆ ಒಟ್ಟು 5 ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಇದೇ ಮೊದಲ ಬಾರಿಗೆ ಅಲ್ಲ. ವಿದ್ಯಾರ್ಥಿಗಳು ಒಂದು ವರ್ಷದಿಂದ ತಯಾರಿ ಮಾಡಿಕೊಂಡಿರುತ್ತಾರೆ. ಅನೇಕ ವಿದ್ಯಾರ್ಥಿಗಳು ಕೋಚಿಂಗ್ ಸೆಂಟರ್‌ಗೆ ಸೇರಿ ಅಭ್ಯಾಸ ಮಾಡಿ, ಸಾವಿರಾರು ರುಪಾಯಿ ಖರ್ಚು ಮಾಡಿರುತ್ತಾರೆ. ದುಡ್ಡು ಇರುವವರು ಕೋಚಿಂಗ್ ಸೇರುತ್ತಾರೆ. ಯಾರ ಬಳಿ ದುಡ್ಡು ಇರಲ್ಲವೋ ಅವರು ಕೋಚಿಂಗ್ ಸೆಂಟರ್‌ಗೆ ಸೇರಲು ಸಾಧ್ಯವಾಗುವುದಿಲ್ಲ ಎಂದು ಟೀಕಿಸಿದರು.

ಸಿಇಟಿಗೆ ಅವಕಾಶ ಮಾಡಿಕೊಡಿ: ಮೋದಿ ಅವರಿಗೆ ಬಡವರು, ಅಲ್ಪಸಂಖ್ಯಾತರು, ದುರ್ಬಲ ವರ್ಗದವರನ್ನು ಕಂಡರೆ ಆಗಲ್ಲ ಎಂಬುದಕ್ಕೆ ಇದೇ ಸಾಕ್ಷಿ. ನೀಟ್ ಯಾಕೆ ತಂದರು? ಸಿಇಟಿಯಲ್ಲಿ ಏನಾದರೂ ದೋಷ ಇತ್ತಾ? ಮಾತು ಎತ್ತಿದರೆ ಕೋ ಅಪರೇಟಿವ್ ಫೆಡರಲಿಸಂ ಅಂತಾ ಹೇಳುತ್ತಾರೆ. ಒಕ್ಕೂಟ ರಾಜ್ಯಗಳಿಗೆ ಆಯಾ ವ್ಯವಸ್ಥೆಗೆ ಜಾರಿ ಮಾಡುವ ಅವಕಾಶ ಕೊಡಬೇಕು. ಸಿಇಟಿ ಪರೀಕ್ಷೆಗೆ ಅವಕಾಶ ಮಾಡಿಕೊಡುವ ಕೆಲಸವಾಗಬೇಕು. ಮೋದಿ ಅವರಿಗೆ ಗೊತ್ತಿರುವ ಪ್ರಕಾರ ಎಷ್ಟು ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಈ ಹಿಂದೆ ರಾಜ್ಯದಲ್ಲಿ ಬೊಮ್ಮಾಯಿ, ಯಡಿಯೂರಪ್ಪ ಕಾಲದಲ್ಲಿ ಎಷ್ಟು ಸಲ ಸೋರಿಕೆಯಾಯಿತು? ಸಬ್ ಇನ್ಸ್‌ಪೆಕ್ಟರ್ ಪರೀಕ್ಷೆಯಲ್ಲಿಯೂ ಪ್ರಶ್ನೆ ಪತ್ರಿಕೆ ಸೋರಿಕೆಯಾಯಿತು. ಎಡಿಜಿಪಿ ಜೈಲಿಗೆ ಹೋಗಿದ್ದಾರೆ. ಇದಕ್ಕೆ ಯಾರು ಹೊಣೆ? ಪೆಟ್ರೋಲ್ ಡೀಸೆಲ್, ಚಿನ್ನ ಖರೀದಿ ಮಾಡಬಾರದು ಅಂತಾ ಮೋದಿ ಹೇಳುತ್ತಾರೆ. ಆದರೆ ಅವರು ಯುರೋಪ್ ಪ್ರವಾಸದಲ್ಲಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಕೇವಲ ಕೋಮುವಾದ, ಹಿಂದೂ ಮುಸ್ಲಿಂ ನಡುವೆ ಸಂಘರ್ಷ ಮಾಡುವುದು. ಅವರಿಗೆ ಪರೀಕ್ಷೆ ನಡೆಸಲು ಬರಲ್ಲ. ಧರ್ಮೇಂದ್ರ ಪ್ರಧಾನ್ ಕೂಡಲೇ ರಾಜೀನಾಮೆ ಕೊಡಬೇಕು. ಬಿಜೆಪಿಯವರು ಭಂಡರು, ಅವರು ಕೊಡಲ್ಲ. ಆದರೆ ರಾಜೀನಾಮೆ ಕೊಡುವವರೆಗೂ ಹೋರಾಟ ಮಾಡಬೇಕು. ಇಲ್ಲಿಯವರೆಗೂ ಬಹಳ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವರ್ಷಪೂರ್ತಿ ಅಭ್ಯಾಸ ಮಾಡಿ ಪರೀಕ್ಷೆ ಎದುರಿಸಿ, ಅದು ಸೋರಿಕೆ ಆಗಿದಕ್ಕೆ ಆತ್ಮಹತ್ಯೆ ಮಾಡಿಕೊಂಡರು. ಅವರ ಕುಟುಂಬಗಳಿಗೆ ಪರಿಹಾರ ನೀಡುವುದು ಕೇಂದ್ರದ ಜವಾಬ್ದಾರಿ. ಅದನ್ನು ಕೂಡಲೇ ಮಾಡಬೇಕು ಎಂಬುದು ನಮ್ಮ ಬೇಡಿಕೆ ಎಂದು ಆಗ್ರಹಿಸಿದರು.

ನೀಟ್ ವಿರೋಧಿಸಿ ಬೆಂಗಳೂರಿನಲ್ಲಿ ಯುವ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಸಿಎಂ ಸಿದ್ದರಾಮಯ್ಯ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಈಶ್ವರ್ ಖಂಡ್ರೆ, ಮಧು ಬಂಗಾರಪ್ಪ ಸೇರಿ ಹಲವರು ಪಾಲ್ಗೊಂಡಿದ್ದರು.

ನೀಟ್‌ನಿಂದ ಹಿಂದೆ ಸರಿಯುತ್ತೇವೆ

ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ್ ಪಾಟೀಲ್ ಮಾತನಾಡಿ, ಯುವಕರ ಜೀವನದಲ್ಲಿ ಕೇಂದ್ರ ಸರಕಾರ ಚೆಲ್ಲಾಟವಾಡುತ್ತಿದೆ. ಕಳೆದ ಆರು ವರ್ಷಗಳಿಂದ ನೀಟ್ ಪರೀಕ್ಷೆಯಲ್ಲಿ ಗೊಂದಲವಾಗುತ್ತಿದೆ. ನಾವು ಕೇಂದ್ರ ಸರಕಾರಕ್ಕೆ ಪತ್ರ ಬರೆದಿದ್ದೇವೆ. ನಮ್ಮೊಂದಿಗೆ ಕೇರಳ, ತಮಿಳುನಾಡಿನವರೂ ಕೂಡ ಪತ್ರ ಬರೆದಿದ್ದಾರೆ. ಅವರಿಗೆ ನೀಟ್ ನಡೆಸಲು ಆಗುತ್ತಿಲ್ಲ. ಇನ್ನು ಹೀಗೆಯೇ ಮುಂದುವರೆದರೆ ನಮ್ಮ ರಾಜ್ಯ ನೀಟ್‌ನಿಂದ ಹಿಂದೆ ಸರಿಯಲಿದೆ. ಪರೀಕ್ಷಾ ಪೇ ಚರ್ಚಾ ಮಾಡುವವರು ಈಗ ಸುಮ್ಮನಾಗಿದ್ದಾರೆ. ಕಳೆದ ಐದು ವರ್ಷಗಳಿಂದ ಆಗುತ್ತಿರುವ ಗೊಂದಲವಿದು. ಯಾರ ಮೇಲೂ ಇನ್ನು ಕ್ರಮ ಕೈಗೊಂಡಿಲ್ಲ. ಮೋದಿ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಾರೆ. ಕೇಂದ್ರ ಸರಕಾರ ಇದರಲ್ಲಿ ಸುಮ್ಮನೆ ಕುಳಿತಿದೆ. ರಾಜ್ಯಗಳಿಗೆ ಪರೀಕ್ಷೆ ನಡೆಸುವ ಅಧಿಕಾರ ಕೊಡಬೇಕು. ಕೇಂದ್ರ ಸರಕಾರ ಶಿಕ್ಷಣವನ್ನು ಮಾರಾಟಕ್ಕೆ ಇಟ್ಟಿದೆ. ಮೋದಿ ಯುವಕರಿಗೆ ಕ್ಷಮೆ ಕೇಳಬೇಕು. ಇದನ್ನು ಮಾಡದೇ ನಮ್ಮ ದೇಶದ ಮಕ್ಕಳಿಗೆ ಅವಮಾನ ಮಾಡುತ್ತಿದಾರೆ ಎಂದರು.

ಮೋದಿ ಸರಕಾರ ಶಿಕ್ಷಣ ಮಾಫಿಯಾಗೆ ಎಲ್ಲವನ್ನೂ ಒಪ್ಪಿಸಿಬಿಟ್ಟಿದೆ. ಹಿಂದಿನ ಬಿಜೆಪಿ ಸರಕಾರ ಪೇಪರ್ ಲೀಕ್‌ಗೆ ಹೆಸರುವಾಸಿಯಾಗಿತ್ತು. ನೂರಾರು ಪರೀಕ್ಷೆಗಳು ಬಿಜೆಪಿ ನಾಯಕರ ಮೂಗಿನ ಅಡಿಯಲ್ಲೇ ನಡೆದಿದೆ. ಮೋದಿಯವರು ಪರೀಕ್ಷಾ ಪೇ ಚರ್ಚಾ ಬಿಟ್ಟು ಪೇಪರ್ ಲೀಕ್ ಪೇ ಚರ್ಚೆ ಮಾಡಬೇಕು. ಒಂದಾದ ಮೇಲೊಂದು ಪೇಪರ್ ಲೀಕ್ ಸ್ಕ್ಯಾಮ್ ಹೊರಗೆ ಬರುತ್ತಲೇ ಇದೆ.

– **ರಣದೀಪ್ ಸಿಂಗ್ ಸುರ್ಜೇವಾಲ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಬಹಳಷ್ಟು ವಿದ್ಯಾರ್ಥಿಗಳ ಭವಿಷ್ಯ ಇಂದು ಅತಂತ್ರವಾಗಿದೆ. 22 ಲಕ್ಷ ಜನ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಕೋಚಿಂಗ್ ಸೆಂಟರ್ ನಡೆಸುತ್ತಿದ್ದವರೇ ಪ್ರಶ್ನೆ ಪತ್ರಿಕೆ ಸೋರಿಕೆ ಮಾಡಿದ್ದಾರೆ. ಇದೊಂದು ದೊಡ್ಡ ದಂಧೆ. ನಮ್ಮ ಕೈಯಲ್ಲಿ ಪರೀಕ್ಷೆ ಬರೆಸುವುದಕ್ಕೆ ಯೋಗ್ಯತೆ ಯಿಲ್ಲ ಎಂದು ಕೇಂದ್ರ ಸರಕಾರ ಹೇಳಿ, ಆಯಾ ರಾಜ್ಯಗಳಿಗೆ ಪರೀಕ್ಷೆ ಬರೆಸುವ ಅವಕಾಶವನ್ನು ಕೊಡಿ.

– **ಡಾ.ಎಂ.ಸಿ. ಸುಧಾಕರ್,** ಸಚಿವ

ಅರಣ್ಯ ಭೂಮಿಗೆ ಬೇಲಿ ಹಾಕಲು ಖಂಡ್ರೆ ಸೂಚನೆ

ಬೆಂಗಳೂರು: ಕಾಂಪಾ ನಿಧಿಯಲ್ಲಿ ಅರಣ್ಯ ಭೂಮಿ ರಕ್ಷಣೆಗೆ ಹಣ ಒದಗಿಸಲು ಅವಕಾಶ ಇದ್ದು, ನಗರ ಮತ್ತು ಪಟ್ಟಣದ ಸಮೀಪವಿರುವ ಕೋಟ್ಯಂತರ ರುಪಾಯಿ ಬೆಲೆ ಬಾಳುವ ಅರಣ್ಯ ಭೂಮಿ ಒತ್ತುವರಿ ಆಗದಂತೆ ಬೇಲಿ ಹಾಕಲು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಇತ್ತೀಚೆಗೆ ತಾವು ಹಾಸನ ನಗರಕ್ಕೆ ಹೊಂದಿಕೊಂಡಿರುವ ಮಡೆನೂರು ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದ್ದು, ಇಲಾಖೆ ಹೆಸರಲ್ಲಿ ಆರ್‌ಟಿಸಿ ಇದ್ದರೂ ಅಲ್ಲಿ ಅರಣ್ಯ ಬೆಳೆಸಿಲ್ಲ. ಹೀಗಾಗಿ ಒತ್ತುವರಿ ನಡೆಯುತ್ತದೆ. ಕೂಡಲೇ ಇಂತಹ ಭೂಮಿ ಗುರುತಿಸಿ ಬೇಲಿಹಾಕಿ, ಸ್ಥಳೀಯ ಪ್ರಭೇದದ ಸಸಿಗಳನ್ನು ನೆಟ್ಟು ನೆಡುತೋಪು ಅಭಿವೃದ್ಧಿಪಡಿಸಿ ಎಂದು ಸೂಚಿಸಿದರು. ಸರಕಾರದಿಂದ ಮತ್ತು ಹಿಂದೆ ರಾಜರ ಆಳ್ವಿಕೆ ಕಾಲದಲ್ಲಿ ಅರಣ್ಯ ಎಂದು ಗೆಜೆಟ್ ಅಧಿಸೂಚನೆ ಆಗಿದ್ದರೂ ಅರಣ್ಯ ಸ್ವರೂಪವಿದ್ದರೂ ಇನ್ನೂ ಕೆಲವು ಕಡೆ ಅರಣ್ಯ ಎಂದು ಇಂಡೀಕರಣ ಆಗದೆ, ಆರ್.ಟಿ.ಸಿ.ಯಲ್ಲಿ ಅರಣ್ಯ ಎಂದು ದಾಖಲಾಗದ ಕಾರಣ ಅಕ್ರಮ ಮಂಜೂರಾತಿ, ಒತ್ತುವರಿ ಆಗುತ್ತಿದ್ದು, ಕೂಡಲೇ ಇಂಡೀಕರಣಕ್ಕೆ ಸೂಚಿಸಿದರು. ತುಮಕೂರು ಜಿಲ್ಲೆಯಲ್ಲಿ ಊರಿನತ್ತ ಚಿರತೆಗಳು ಬರುವುದು ಹೆಚ್ಚಾಗಿದ್ದು, ಚಿರತೆಗಳನ್ನು ಹಿಡಿದು ಕಾಡಿಗೆ ಮರಳಿಸಲು, ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲು ಚಿರತೆ ಕಾರ್ಯಪಡೆ ರಚನೆಗೆ ಕೂಡಲೆ ಪ್ರಕ್ರಿಯೆ ಆರಂಭಿಸುವಂತೆ ತಿಳಿಸಿದರು.

ಅವರು ಏರಿಸ್ತಾರೆ, ನಾವು ಇಳಿಸೋದಾ?

ಬೆಂಗಳೂರು: ಕೇಂದ್ರ ಸರಕಾರ ಬೆಲೆ ಏರಿಸೋದು, ನಾವು ಕಡಿಮೆ ಮಾಡುವುದಾ ಎಂದು ಪ್ರಶ್ನಿಸಿದ ಸಿಎಂ ಸಿದ್ದರಾಮಯ್ಯ ಅವರು ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಇಳಿಸುವ ಪ್ರಸ್ತಾವನೆಯಿಲ್ಲ ಎನ್ನುವ ಸಂದೇಶ ರವಾನಿಸಿದ್ದಾರೆ. ಕೇಂದ್ರ ಬೆಲೆ ಏರಿಸೋದು, ನಾವು ಕಡಿಮೆ ಮಾಡೋದಾ?. ಅವ್ರು ಬೆಲೆ ಏರಿಸಿದರೂ ನೀವು ಏನೂ ಮಾತನಾಡುವುದಿಲ್ಲ. ನಮಗೆ ಕಡಿಮೆ ಮಾಡುತ್ತೀರಾ ಎಂದು ಪ್ರಶ್ನಿಸುತ್ತೀರಾ ಎಂದರು.

ಧರ್ಮಸ್ಥಳ ಕಾಡಿನಲ್ಲಿ ಬುರುಡೆ | ಪ್ರಕರಣದ ತನಿಖೆ ಮತ್ತೆ ಚುರುಕು

ಬಂಗ್ಲೆಗುಡ್ಡೆ ಕಾಡಿಗೆ ಎಫ್‌ಎಸ್‌ಎಲ್ ತಂಡ ಭೇಟಿ

ಮಂಗಳೂರು: ಧರ್ಮಸ್ಥಳ ಗ್ರಾಮದ ಬುರುಡೆ ರಹಸ್ಯ ಪ್ರಕರಣದ ತನಿಖೆ ಮತ್ತೆ ಚುರುಕು ಪಡೆದುಕೊಂಡಿದೆ. 4 ತಿಂಗಳ ಹಿಂದೆ 7 ಅಸ್ಥಿಪಂಜರ ಪತ್ತೆಯಾಗಿದ್ದ ಬಂಗ್ಲೆಗುಡ್ಡೆ ಕಾಡಿಗೆ ವಿಧಿವಿಜ್ಞಾನ ಪ್ರಯೋಗಾಲಯ ತಂಡ (ಎಫ್‌ಎಸ್‌ಎಲ್) ಭೇಟಿ ನೀಡಿದೆ. ಮೂವರು ಅಧಿಕಾರಿಗಳನ್ನೊಳಗೊಂಡ ಎಫ್‌ಎಸ್‌ಎಲ್ ಅಧಿಕಾರಿಗಳ ತಂಡ ಗುರುವಾರ ಬೆಂಗಳೂರಿನಿಂದ ಎಸ್‌ಐಟಿ ಅಧಿಕಾರಿಗಳೊಂದಿಗೆ ಬಂಗ್ಲೆಗುಡ್ಡೆ ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದೆ. 4 ತಿಂಗಳ ಹಿಂದೆ 4 ತಿಂಗಳ ಹಿಂದೆ 7 ಅಸ್ಥಿಪಂಜರ ಸಿಕ್ಕಿದ್ದ ಜಾಗದಲ್ಲಿ ಪರಿಶೀಲನೆ ನಡೆಸಿದೆ. ಅಲ್ಲದೇ ಆರೋಪಿ ಪ್ರದೀಪ್ ಕುಲಾಲ್‌ನನ್ನ ಸ್ಥಳಕ್ಕೆ ಕರೆತಂದು ಪರಿಶೀಲನೆ ನಡೆಸಲಾಗಿದೆ.

7 ಅಸ್ಥಿಪಂಜರ ಎಫ್‌ಎಸ್‌ಎಲ್‌ಗೆ ರವಾನೆ: ಬುರುಡೆ ಪ್ರಕರಣದ ತನಿಖೆ ಚುರುಕುಗೊಳಿಸಿದ್ದ ಎಸ್‌ಐಟಿ ತಂಡ, 4 ತಿಂಗಳ ಹಿಂದೆ ಬಂಗ್ಲೆಗುಡ್ಡೆ ಅರಣ್ಯದಲ್ಲಿ ಉತ್ಖನನ ಕೈಗೊಂಡಿತ್ತು. ಸೆ.17 ರಂದು 5 ಅಸ್ಥಿಪಂಜರ, ಸೆ.18 ರಂದು 2 ಅಸ್ಥಿಪಂಜರ ಪತ್ತೆಯಾಗಿತ್ತು. ಎಲ್ಲವೂ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿತ್ತು. ಈ ಅಸ್ಥಿಗಳನ್ನು ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಹೆಚ್ಚಿನ ತನಿಖೆಗಾಗಿ ಬೆಂಗಳೂರಿನ ಮಡಿವಾಳದಲ್ಲಿರುವ ಎಫ್‌ಎಸ್‌ಎಲ್ ಕೇಂದ್ರಕ್ಕೆ ಅಸ್ಥಿಪಂಜರಗಳ ರವಾನೆ ಮಾಡಲಾಗಿತ್ತು. ಇದಕ್ಕೂ ಮುನ್ನ ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಮೃತದೇಹಗಳನ್ನ ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸಿದ್ದ ಎಸ್‌ಐಟಿ ಕಳೆದ ನ.20 ರಂದು ಬೆಳ್ತಂಗಡಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ತನಿಖಾ ಪ್ರಾಥಮಿಕ ವರದಿ ಸಲ್ಲಿಸಿತ್ತು. ಈ ವೇಳೆ ಶೀಘ್ರವೇ ತನಿಖೆ ನಡೆಸಿ ಪೂರ್ಣ ವರದಿ ಸಲ್ಲಿಸುವಂತೆ ಕೋರ್ಟ್ ಸೂಚನೆ ನೀಡಿತ್ತು.

ಪರಿಚಿತ ಬುರುಡೆಗಳ ಪತ್ತೆ ಕೇಸ್ ಸಂಬಂಧ ಎಫ್‌ಎಸ್‌ಎಲ್ ತಂಡ ಗುರುವಾರ ಧರ್ಮಸ್ಥಳ ಪರಿಸರದಲ್ಲಿ ಪರಿಶೀಲನೆ ನಡೆಸಿತು.

ಆಲಮಟ್ಟಿ ಡ್ಯಾಮ್: 9 ಟಿಎಂಸಿ ನೀರು, ಆತಂಕ

ವಿಜಯಪುರ: ಪಂಚನದಿಗಳ ಬೀಡು ಎಂದೇ ಹೆಸರಾಗಿರುವ ವಿಜಯಪುರ ಜಿಲ್ಲೆಯಲ್ಲಿ ಇದೀಗ ನೀರಿಗಾಗಿ ಆಹಾಕಾರ ಶುರುವಾಗಿದೆ. ಆಲಮಟ್ಟಿ ಜಲಾಶಯದಲ್ಲಿ ಕೇವಲ 9 ಟಿಎಂಸಿ ನೀರಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ.

ಜಿಲ್ಲೆಯ ಜನರು ನೀರಿಗಾಗಿ ಕೃಷ್ಣಾ ನದಿ ಮೇಲೆ ಅವಲಂಬಿತರಾಗಿದ್ದಾರೆ. ಪಕ್ಕದ ಬಾಗಲಕೋಟೆ ಜಿಲ್ಲೆ ಕೂಡ ಕೃಷ್ಣಾ ನದಿ ಮೇಲೆ ಅವಲಂಬಿತವಾಗಿದೆ. ವಿಜಯಪುರ-ಬಾಗಲಕೋಟೆ ಅವಳಿ ಜಿಲ್ಲೆಗೆ ಆಲಮಟ್ಟಿ ಜಲಾಶಯದಿಂದಲೇ ನೀರು ಸರಬರಾಜು ಆಗುತ್ತದೆ. ಆದರೆ ಸದ್ಯ ಜಲಾಶಯದಲ್ಲಿ 9 ಟಿಎಂಸಿ ನೀರು ಮಾತ್ರ ಬಳಕೆಗೆ ಸಂಗ್ರಹವಿದ್ದು, ಇಷ್ಟರಲ್ಲಿಯೇ ಜೂನ್ ತಿಂಗಳು ಕೂಡ ಕಳೆಯಬೇಕಾಗಿದೆ. ಇದರಿಂದ ಅವಳಿ ಜಿಲ್ಲೆಯ ಜನರಲ್ಲಿ ಆತಂಕ ಮನೆ ಮಾಡಿದೆ. ಈಗಾಗಲೇ ಜಿಲ್ಲೆಯಲ್ಲಿ ಕೆಲವು ಕಡೆ ವಾರಕೊಮ್ಮೆ ನೀರು ಬಂದರೆ, ಕೆಲವೆಡೆ 15 ದಿನಕ್ಕೆ ನೀರು ಬರ್ತಿವೆ. ಇನ್ನು ಜಿಲ್ಲೆಯಲ್ಲಿ ಬಿಸಿಲು ಕೂಡ ಹಿಂದೆಂದು ಕಂಡರಿಯದಂತೆ ಹೆಚ್ಚಿದೆ. ಇದರಿಂದ ಬಾಷ್ಪೀಕರಣ ಕೂಡ ಈ ಬಾರಿ ಹೆಚ್ಚಾಗಿದೆ. ಈ ಬಾರಿ ಜೂ.15ರ ಮೇಲೆ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಹೀಗಾಗಿ ಇನ್ನೊಂದು ತಿಂಗಳು 9 ಟಿಎಂಸಿ ನೀರಿನಲ್ಲೇ ಜನರು, ಜಾನುವಾರುಗಳು ಜೀವನ ನಡೆಸಬೇಕಿದೆ.



ಬೋನಿಗೆ ಬಿದ್ದ ಚಿರತೆ

ಮಂಡ್ಯ: ಹಲವು ದಿನಗಳಿಂದ ಗ್ರಾಮದ ಜಮೀನಿನಲ್ಲಿ ಕಾಣಿಸಿಕೊಂಡು ರೈತರಲ್ಲಿ ಆತಂಕ ಸೃಷ್ಟಿ ಮಾಡಿದ್ದ ಚಿರತೆ ಕೊನೆಗೂ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿರುವ ಘಟನೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಚಿಂದಗಿರಿ ಕೊಪ್ಪಲು ಗ್ರಾಮದಲ್ಲಿ ಜರುಗಿದೆ.

ಚಿಂದಗಿರಿಕೊಪ್ಪಲು ಗ್ರಾಮ ಜಮೀನು ಪ್ರದೇಶದಲ್ಲಿ ಹಲವು ದಿನಗಳಿಂದ ಆಗಾಗ ಚಿರತೆ ಕಾಣಿಸಿಕೊಳ್ಳುತ್ತಿತ್ತು. ಇದರಿಂದ ಈ ಭಾಗದ ಜನರು ಜಮೀನಿಗೆ ಹೋಗಲು ಭಯಪಡುವ ಸ್ಥಿತಿ ನಿರ್ಮಾಣವಾಗಿತ್ತು. ಆದಷ್ಟು ಬೇಗ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಅರಣ್ಯ ಇಲಾಖೆಗೆ ಆಗ್ರಹ ಮಾಡಿದ್ದರು. ಇದರ ಬೆನ್ನಲ್ಲೇ ಬೋನಿನಲ್ಲಿ ನಾಯಿ ಇರಿಸಲಾಗಿತ್ತು.

ಕಳೆದ ರಾತ್ರಿ ಬೋನಿ ನಲ್ಲಿ ಇರಿಸಿದ್ದ ನಾಯಿಯನ್ನು ತಿನ್ನಲು ಬಂದ ವೇಳೆ ಚಿರತೆ ಬೋನಿಗೆ ಬಿದ್ದಿದೆ. ಬೋನಿಗೆ ಬಿದ್ದ ಚಿರತೆಯನ್ನು ನೋಡಲು ಅಕ್ಕ-ಪಕ್ಕದ ಗ್ರಾಮದ ಜನರು ಮುಗಿಬಿದ್ದಿದ್ದರು.

ವಿಶ್ವವಾಣಿ ಉದ್ಯೋಗಿ ರಂಗನಾಥ್ ನಿಧನ

ಬೆಂಗಳೂರು: ವಿಶ್ವವಾಣಿ ದಿನಪತ್ರಿಕೆಯಲ್ಲಿ ಬೆಂಗಳೂರು ಕೇಂದ್ರ ಕಚೇರಿಯಲ್ಲಿ ಹಿರಿಯ ಗ್ರಾಫಿಕ್ ಡಿಸೈನರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಜಿ.ಎಲ್. ರಂಗನಾಥ್ (48) ಅವರು ಗುರುವಾರ ನಸುಕಿನಲ್ಲಿ ಮೃತಪಟ್ಟಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕಿನ ವರಾದ ರಂಗನಾಥ್ ಅವರು ಕಳೆದ ಏಳೆಂಟು ವರ್ಷಗಳಿಂದ ವಿಶ್ವವಾಣಿ ದಿನಪತ್ರಿಕೆ ಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇದಕ್ಕೂ ಮೊದಲು ವಿಜಯವಾಣಿ ಸೇರಿದಂತೆ ವಿವಿಧ ದಿನಪತ್ರಿಕೆ, ನಿಯತಕಾಲಿಕೆಗಳಲ್ಲಿ ಕಾರ್ಯನಿರ್ವಹಿಸಿದ್ದರು. 48 ವರ್ಷದ ರಂಗನಾಥ್ ಅವರಿಗೆ ಕೆಲ ತಿಂಗಳ ಹಿಂದೆ ಅನಾರೋಗ್ಯ ಉಂಟಾಗಿ ಆಸ್ಪತ್ರೆಗೆ ದಾಖಲಾಗಿ ದ್ದರು. ಬಳಿಕ ಆರೋಗ್ಯದಲ್ಲಿ ಚೇತರಿಕೆ ಕಂಡರೂ, ಅಲ್ಪಕಾಲಿಕ ಅನಾರೋಗ್ಯ ದಿಂದ ಗುರುವಾರ ಮುಂಜಾನೆ ಕೊನೆಯುಸಿರು ಎಳೆದಿದ್ದಾರೆ.

ಗುರುವಾರ ಮಧ್ಯಾಹ್ನ ಪೀಣ್ಯದ ಎಸ್‌ಆರ್‌ಎಸ್ ಚಿತಾಗಾರದಲ್ಲಿ ಅಂತಿಮ ವಿಧಿವಿಧಾನಗಳು ನೆರವೇರಿವೆ. ಮೃತರು ಇಬ್ಬರು ಸಹೋದರರು, ಸಹೋದರಿ, ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ.

ರಂಗನಾಥ್ ಅವರ ಅಂತಿಮ ದರ್ಶನವನ್ನು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ ಸಂಸ್ಥೆಯ ಸಿಬ್ಬಂದಿ ಪಡೆದು, ಮೃತರ ಆತ್ಮಕ್ಕೆ ಶಾಂತಿ ಹಾಗೂ ಕುಟುಂಬಕ್ಕೆ ಈ ದುಃಖವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸಿದರು.

ಮತ್ತೊಂದು ಡಿಪಿಆರ್ ಸಿದ್ಧಪಡಿಸಿ ಕೇಂದ್ರಕ್ಕೆ ರವಾನೆ | ಅರಣ್ಯ ಪ್ರದೇಶಕ್ಕೆ ಪರ್ಯಾಯ ಭೂಮಿ ನೀಡಲು ಸಿದ್ಧ: ಡಿಸಿಎಂ ಡಿಕೆಶಿ

ಕೇಂದ್ರ ಒಪ್ಪಿಗೆ ಬೆನ್ನಲ್ಲೇ ಮೇಕೆದಾಟು ಯೋಜನೆ ಆರಂಭ

ಚಾಮರಾಜನಗರ: ಮೇಕೆದಾಟು ಯೋಜನೆಗೆ ಮತ್ತೊಂದು ಡಿಪಿಆರ್ ಸಿದ್ಧಪಡಿಸಲಾಗಿದ್ದು, ಶೀಘ್ರವೇ ಕೇಂದ್ರಕ್ಕೆ ಸಲ್ಲಿಸಿ ಅನುಮತಿ ಬಂದ ಬಳಿಕ ಯೋಜನೆಗೆ ಭೂಮಿ ಪೂಜೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಚಾಮರಾಜನಗರದ ಕೊಳ್ಳೇಗಾಲದಲ್ಲಿ ಗುರುವಾರ ಮಾತನಾಡಿದ ಅವರು, ಮೇಕೆದಾಟು ಯೋಜನೆಯ ಕಚೇರಿ ಆರಂಭಿಸಿದ್ದೇವೆ. ಮುಳುಗಡೆಯಾಗುವ ಅರಣ್ಯ ಪ್ರದೇಶಕ್ಕೆ ಪರ್ಯಾಯ ಜಮೀನು ನೀಡಲು ಜಮೀನು ಗುರುತಿಸುತ್ತಿದ್ದೇವೆ. ಮೇಕೆದಾಟು ಯೋಜನೆಗೆ ಆಕ್ಷೇಪ ಸಲ್ಲಿಸಲು ತಮಿಳುನಾಡಿಗೆ ಯಾವುದೇ ರೀತಿಯ ಹಕ್ಕಿಲ್ಲ. ಇದರ ಬಗ್ಗೆ ಕೇಂದ್ರ ಜಲ ಆಯೋಗ ತೀರ್ಮಾನ ಮಾಡಬೇಕು ಎಂದು ಸುಪ್ರೀಂಕೋರ್ಟ್ ಆದೇಶ ನೀಡಿದೆ ಎಂದರು.

ನಮ್ಮ ಸರಕಾರ ಮೂರು ವರ್ಷ ಪೂರ್ಣಗೊಳಿಸಿ ಕೊಟ್ಟ ಮಾತಿನಂತೆ ನಡೆದಿದೆ. ಜತೆಗೆ ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆಯನ್ನು ನೀಡಿದ್ದೇವೆ. ಪ್ರತಿಯೊಬ್ಬ ಫಲಾನುಭವಿಗಳ ಆಸ್ತಿ ದಾಖಲೆಗಳಲ್ಲಿ ಅವರ ಫೋಟೊ, ಆಸ್ತಿಯ ಫೋಟೊ ಹಾಕಿ ಮನೆ ಮನೆಗೆ ಖಾತೆ ಒದಗಿಸಿಕೊಡುತ್ತಿದ್ದೇವೆ. ಬೇರೆಯವರು ಮಾಡಲಾಗದ ಕೆಲಸವನ್ನು ನಾವು ಮಾಡಿ ಜನರ ಋಣ ತೀರಿಸುತ್ತಿದ್ದೇವೆ. ಮುಂದಿನ 2 ವರ್ಷಗಳಲ್ಲಿ ಇನ್ನು ಹೆಚ್ಚಿನ ಕೆಲಸ ಮಾಡುತ್ತಿದ್ದೇವೆ. ಕಳೆದ ಎರಡು ವರ್ಷ ಉತ್ತಮ ಮಳೆಯಾಗಿತ್ತು. ಈ ವರ್ಷ ಮಳೆ ಕೊರತೆಯಾದರೆ ರೈತರನ್ನು ಹೇಗೆ ಕಾಪಾಡಬೇಕು. ಕುಡಿಯುವ ನೀರಿನ ಸಮಸ್ಯೆ ಹೇಗೆ ಬಗೆಹರಿಸಬೇಕು ಎಂದು ಚರ್ಚೆ ಮಾಡುತ್ತಿದ್ದೇವೆ ಎಂದರು. ನಮ್ಮ ಸರಕಾರ ಹಾಗೂ ಖಾಸಗಿಯವರು ಸೇರಿ ಈ ದೇವಾಲಯದ ಜೀರ್ಣೋದ್ಧಾರದ ಕೆಲಸ ಮಾಡುತ್ತಿದ್ದೇವೆ. ಭಕ್ತ ಹಾಗೂ ಭಗವಂತನ ನಡುವೆ ವ್ಯವಹಾರ ನಡೆಯುವ ಸ್ಥಳ ದೇವಾಲಯ. ಈ ಪುಣ್ಯಕ್ಷೇತ್ರ ಯಾತ್ರಿಕರಿಗೆ ಪ್ರಸಿದ್ಧವಾಗಿದೆ. ಇದು ಪ್ರಕೃತಿಯ ಕೊಡುಗೆ. ನಮ್ಮ ಸರಕಾರ ಕೂಡ ಎಲ್ಲೆಡೆ ಅನೇಕ ಅಭಿವೃದ್ಧಿ ಕೆಲಸ ಮಾಡಿಕೊಂಡು ಬಂದಿದೆ.

ಜಿಬಿಎ ಚುನಾವಣೆಗೆ ಸಿದ್ಧತೆ: ಜಿಬಿಎ ಚುನಾವಣೆ ಬಗ್ಗೆ ಕೇಳಿದಾಗ, 'ಜಿಬಿಎ ಚುನಾವಣೆ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗದ ಮೇಲಿದೆ. ಚುನಾವಣೆ ನಡೆಸಲು ಸರಕಾರ ಸಂಪೂರ್ಣವಾಗಿ ಸಹಕಾರ ನೀಡಲು ಸಿದ್ಧವಾಗಿದೆ. ಸಮಯದ ಪ್ರಕಾರ ಚುನಾವಣೆ ನಡೆಯಲಿದೆ. ನಾವೆಲ್ಲ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ'' ಎಂದು ಸ್ಪಷ್ಟಪಡಿಸಿದರು.

ನೀವು ಯಾವಾಗ ಸಿಎಂ ಆಗುತ್ತೀರಿ ಎಂದು ಕೇಳಿದಾಗ, ''ಅದನ್ನು ಕಾಲ ತೀರ್ಮಾನ ಮಾಡುತ್ತದೆ'' ಎಂದು ತಿಳಿಸಿದರು.

ಕೊಳ್ಳೇಗಾಲ ತಾಲೂಕಿನ ಶಿವನಸಮುದ್ರದಲ್ಲಿರುವ ಮಧ್ಯರಂಗ ದೇಗುಲಕ್ಕೆ ಡಿಸಿಎಂ ಡಿಕೆಶಿ ಅವರು ಪತ್ನಿ ಜತೆ ಗುರುವಾರ ಭೇಟಿ ನೀಡಿದರು.

ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯ

ಚಾಮರಾಜನಗರ ಐತಿಹಾಸಿಕ ಜಿಲ್ಲೆ. ಧಾರ್ಮಿಕ, ಪ್ರಾಕೃತಿಕ ಸಂಪತ್ತು ಹೊಂದಿರುವ ಕಾವೇರಿ ನದಿ ತೀರದಲ್ಲಿರುವ ಪುಣ್ಯಭೂಮಿ. ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯ. ಎಲ್ಲಿ ಭಕ್ತಿ ಇದೆಯೋ ಅಲ್ಲಿ ಭಗವಂತ ಇದ್ದಾನೆ. ಮಲೆ ಮಾದೇಶ್ವರ, ಮಧ್ಯರಂಗ, ಸಿದ್ದಪ್ಪಾಜಿ, ಗೋಪಾಲಸ್ವಾಮಿ ಪುಣ್ಯಕ್ಷೇತ್ರಗಳಿಗೆ ಬಂದು ಜನ ನೆಮ್ಮದಿ ಕಂಡುಕೊಳ್ಳುತ್ತಾರೆ. ಬೆಳಗ್ಗೆಯಿಂದ ಸೂರ್ಯ ಮುಳುಗುವ ವೇಳೆಗೆ ಶ್ರೀರಂಗಪಟ್ಟಣ (ಆದಿರಂಗ), ಮಧ್ಯರಂಗ ಹಾಗೂ ಅಂತ್ಯರಂಗ ದೇವಾಲಯಗಳಿಗೆ ಭೇಟಿ ನೀಡುವ ಪದ್ಧತಿ ನಡೆದುಕೊಂಡು ಬಂದಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಚಾಮರಾಜನಗರ ಜಿಲ್ಲೆ ಧಾರ್ಮಿಕ ಆಚರಣೆಗಳ ಮಹತ್ವ ತಿಳಿಸಿದರು.

ಚಾಮರಾಜನಗರ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆ ಮಾಡಿ ಈ ಭಾಗದ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳಲಾಗಿದೆ. ಕೈಗಾರಿಕಾ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದೇವೆ. ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸರಕಾರಿ ಕೆಲಸ ನೀಡಿ ಕೊಟ್ಟ ಮಾತನ್ನು ಉಳಿಸಿ ಕೊಂಡಿದ್ದೇವೆ. ಇತಿಹಾಸ ಪುಟ ಸೇರುವಂತಹ ಕೆಲಸವನ್ನು ಸಚಿವರಾದ ವೆಂಕಟೇಶ್ ಮಾಡಿದ್ದಾರೆ.

–**ಡಿ.ಕೆ.ಶಿವಕುಮಾರ್,** ಡಿಸಿಎಂ

ವಿಶ್ವವಾಣಿ

ಸಂಪಾದಕೀಯ

ಎಬೋಲಾ: ಎಚ್ಚರಿಕೆ ಇರಲಿ

ಎಬೋಲಾ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಮೇ 28ರಿಂದ ದೆಹಲಿಯಲ್ಲಿ ನಡೆಯಬೇಕಿದ್ದ ಭಾರತ-ಆಫ್ರಿಕಾ ಒಕ್ಕೂಟ ನಡುವಿನ ಶೃಂಗಸಭೆಯನ್ನು ಮುಂದೂಡಲಾಗಿದೆ. ಆಫ್ರಿಕಾ ಖಂಡದ ಕಾಂಗೋ ಮತ್ತು ಉಗಾಂಡಾದಲ್ಲಿ ಎಬೋಲಾ ಹಾವಳಿ ಕಂಡುಬಂದಿದ್ದು, ಇದುವರೆಗೂ 91 ಜನರು ಈ ಮಾರಕ ವೈರಾಣುವಿಗೆ ಬಲಿಯಾಗಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಮಾಹಿತಿ ನೀಡಿದೆ. ಭಾರತ ಮತ್ತು ಆಫ್ರಿಕನ್ ಒಕ್ಕೂಟವು ನಾಲ್ಕನೇ ಭಾರತ-ಆಫ್ರಿಕಾ ವೇದಿಕೆಯ ಶೃಂಗಸಭೆಯ ಸಿದ್ಧತೆಯನ್ನು ದೆಹಲಿಯಲ್ಲಿ ಕೈಗೊಂಡಿತ್ತು. ಆಫ್ರಿಕಾದಲ್ಲಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ಶೃಂಗಸಭೆಯನ್ನು ಮುಂದೂಡುವ ಬಗ್ಗೆ ಒಮ್ಮತದ ತೀರ್ಮಾನ ಕೈಗೊಳ್ಳಲಾಗಿದೆ ಎಂದು ವಿದೇಶಾಂಗ ಇಲಾಖೆ ಹೇಳಿದೆ. ಎಬೋಲಾ ಸಾಂಕ್ರಾಮಿಕ ಭಾರತದೊಳಕ್ಕೆ ಬರದಂತೆ ತಡೆಯುವ ಹಿನ್ನೆಲೆಯಲ್ಲಿ ಈ ನಡೆ ಸಮಂಜಸವಾಗಿದೆ. ಭಾರತದಲ್ಲಿ ಇದುವರೆಗೆ ಯಾವುದೇ ಎಬೋಲಾ ಪ್ರಕರಣ ವರದಿಯಾಗಿಲ್ಲ. ಆದರೆ ವಿಶ್ವ ಆರೋಗ್ಯ ಸಂಸ್ಥೆ ಮಧ್ಯ ಆಫ್ರಿಕಾದ ಕೆಲವು ಭಾಗಗಳಲ್ಲಿ ಇದನ್ನು 'ಅಂತಾರಾಷ್ಟ್ರೀಯ ಕಾಳಜಿಯ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ' ಎಂದು ಘೋಷಿಸಿದ ಹಿನ್ನೆಲೆಯಲ್ಲಿ ನಾವೂ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಇನ್ನೊಂದು ಕಡೆ ಹಂಟಾವೈರಸ್ ಕೂಡ ಭೀತಿ ಮೂಡಿಸಿದೆ. ಹಂಟಾವೈರಸ್ ತೀರಾ ಸಾಂಕ್ರಾಮಿಕವೇನಲ್ಲ. ಆದರೆ ಎಬೋಲಾ ಕ್ಷಿಪ್ರಗತಿಯಲ್ಲಿ ಹರಡುವ ಗುಣ ಹೊಂದಿದೆ. ಎಬೋಲಾ ಪೀಡಿತರ ಮರಣ ಪ್ರಮಾಣ 50 ಶೇಕಡದಷ್ಟಿದೆ. ಎಬೋಲಾಕ್ಕೆ ಲಸಿಕೆ ಇದೆ. ಆದರೆ ಬುಂಡಿಬುಗ್ಯೊ ಎಂಬ ಹೆಸರಿನ ಅದರ ರೂಪಾಂತರಿ ತಳಿಯೊಂದು ಅತಿ ಮಾರಕವಾಗಿದ್ದು, ಈ ಲಸಿಕೆ ಅದರೆದುರು ಕೆಲಸ ಮಾಡುತ್ತಿಲ್ಲ. ಹೀಗಾಗಿ ಕೇಂದ್ರ ಸರಕಾರ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕಣ್ಗಾವಲು ಮತ್ತು ಸನ್ನದ್ಧತಾ ಕ್ರಮಗಳನ್ನು ಹೆಚ್ಚಿಸಬೇಕಿದೆ. ಎಬೋಲಾ ವೈರಸ್ ಮುನ್ನೆಚ್ಚರಿಕೆ ಮಾರ್ಗಸೂಚಿ ಬಿಡುಗಡೆ ಮಾಡಿ, ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕಿದೆ. ಎರಡೂ ವೈರಸ್‌ಗಳೂ ಭಾರತಕ್ಕೆ ಹರಡುವ ಸಾಧ್ಯತೆ ಕಡಿಮೆ ಎಂದು ತಜ್ಞರು ಹೇಳಿದ್ದಾರೆ. ಆದರೆ ಎಲ್ಲರೂ ಕೋವಿಡ್ ಕಾಲದ ಸ್ವಚ್ಛತೆಯ ರೂಢಿ, ಸ್ಯಾನಿಟೈಸರ್ ಬಳಕೆ ಇತ್ಯಾದಿಗಳನ್ನು ಕೈಗೊಂಡರೆ ತಪ್ಪೇನಿಲ್ಲ. ಕೋವಿಡ್‌ನಂತೆ ಇದು ಸುಲಭವಾಗಿ ಹರಡುವುದಿಲ್ಲ ಎಂದು ತಿಳಿಸಲಾಗಿದ್ದರೂ, ಜಗತ್ತೇ ಒಂದು ಗ್ರಾಮದಂತಾಗಿರುವ ಈ ಸನ್ನಿವೇಶದಲ್ಲಿ ಹೆಚ್ಚಿನ ಎಚ್ಚರಿಕೆ ಅಗತ್ಯವಾಗಿದೆ. ಆಫ್ರಿಕಾದಿಂದ ಬರುವವರ ಆರೋಗ್ಯ ತಪಾಸಣೆ, ಕ್ವಾರಂಟೈನ್ ಪ್ರೋಟೋಕಾಲ್ ಅಗತ್ಯವಾದೀತು.

ಸೊಂಪಾದಕೀಯ

ಜಿರಲೆ ತರಲೆಗೆ ಮದ್ದು

ಜಿರಲೆಗಳು ಸರ್ವವ್ಯಾಪಿ ಹಾಗೂ ಸರ್ವಭಕ್ಷಕಗಳು. ಇವು ಕೋಟ್ಯಂತರ ವರ್ಷಗಳಿಂದ ಇವೆ ಮತ್ತು ಇವುಗಳನ್ನು ನಮ್ಮ ಮನೆಯೊಳಗೆ ಬರದಂತೆ ಯಾರೂ ಬ್ಯಾನ್ ಮಾಡಲು ಸಾಧ್ಯವಿಲ್ಲ. ಆದರೆ ಜಿರಲೆ ಹೆಸರಿನಲ್ಲಿ ಪಾರ್ಟಿ ಕಟ್ಟಿಕೊಂಡು ತರಲೆ ಮಾಡಲು ಹೊರಟವರಿಗೆ ಸುಪ್ರೀಂ ಕೋರ್ಟ್ ಚೆನ್ನಾಗಿಯೇ ಬಿಸಿ ಮುಟ್ಟಿಸಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ 'ಜಿರಳೆ' ಟೀಕೆ ವಿರುದ್ಧ ಸದ್ಯ ವಿದೇಶದಲ್ಲಿ ನೆಲೆಸಿರುವ ಅಭಿಜಿತ್ ದೀಪ್ಕೆ ಎಂಬ ಯುವಕ ಆನ್‌ಲೈನ್‌ನಲ್ಲಿ ಆರಂಭಿಸಿದ್ದ 'ಕಾಕ್ರೋಚ್ ಜನತಾ ಪಾರ್ಟಿ'(ಸಿಜೆಪಿ) ಸಾಮಾಜಿಕ ಜಾಲತಾಣವನ್ನು ಭಾರತದಲ್ಲಿ ಗುರುವಾರದಿಂದ ನಿರ್ಬಂಧಿಸಲಾಗಿದೆ. ಜಿರಲೆಗಳು ರಕ್ತಬೀಜಾಸುರರ ಹಾಗೆ. ಎಷ್ಟೇ ಚಚ್ಚಿಹಾಕಿದರೂ ಮರುದಿನ ಅದರ ದುಪ್ಪಟ್ಟು ಕಾಣಿಸಿಕೊಳ್ಳುತ್ತವೆ. ಹಾಗೆಯೇ ಈ ಜಿರಲೆ ಪಾರ್ಟಿಗೂ ಈವರೆಗೆ ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಎಕ್ಸ್ ವೇದಿಕೆಗಳಲ್ಲಿ 1.40 ಕೋಟಿ ಫಾಲೋವರ್‌ಗಳು ಹುಟ್ಟಿಕೊಂಡಿದ್ದರು. ಎಷ್ಟೇ ಕಷ್ಟಪಟ್ಟರೂ ಸೋಶಿಯಲ್ ಮೀಡಿಯಾದಲ್ಲಿ ತಮ್ಮ ಹಿಂಬಾಲಕರ ಸಂಖ್ಯೆಯನ್ನು ಕೆಲವು ಲಕ್ಷ ದಾಟಿಸಲಾಗದ ಪಕ್ಷಗಳು ಈ ಪರಿಯ ಕಾಕ್ರೋಚ್‌ಗಳನ್ನು ಕಂಡು ಬೆಚ್ಚಿಬಿದ್ದಿರಬಹುದು. ಈ ಹಿಂದೆ ಆಮ್ ಆದ್ಮಿ ಪಕ್ಷ ಚುನಾವಣಾ ಪ್ರಚಾರದಲ್ಲಿ ಕೆಲಸ ಮಾಡುತ್ತಿದ್ದ ಅಭಿಜಿತ್ ದೀಪ್ಕೆಯೇ ಈ ಆನ್‌ಲೈನ್ ಕಾಕ್ರೋಚ್ ಜನತಾ ಪಾರ್ಟಿಯ ಸೃಷ್ಟಿಕರ್ತ. ಆಮ್ ಆದ್ಮಿಯ ಚಿಹ್ನೆ ಕಸಬರಿಗೆ. ಕಸಬರಿಗೆ ಕಾಕ್ರೋಚ್‌ಗಳನ್ನು ಬಡಿದುಹಾಕುವ ಸಾಧನವಾಗಬೇಕಿತ್ತು. ಆದರೆ ಹುಟ್ಟುಹಾಕಿರುವುದು ವಿಪರ್ಯಾಸ. ಕೆಲವು ನಿರುದ್ಯೋಗಿಗಳಿಗೆ ಇದರಿಂದ ಲೈಕ್, ಕಾಮೆಂಟ್, ಶೇರ್ ಮಾಡುವ ಉದ್ಯೋಗ ಸೃಷ್ಟಿಯಾಗಿತ್ತು. ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಿದ್ದಕ್ಕೆ ಈ ಸಿಜೆಪಿಗೆ ಅಭಿನಂದನೆ ಹೇಳಬೇಕೆ? ಗೊತ್ತಿಲ್ಲ.

ಸಂಪಾದಕರ ಸದ್ಯಶೋಧನೆ

ಬಾಳೆಹಣ್ಣಿಗೊಂದು ಕವಚ

ನಮ್ಮ ದೈನಂದಿನ ಬದುಕಿನಲ್ಲಿ ನಮಗೆ ಅರಿವಿಲ್ಲದೆಯೇ ಕೆಲವು ಸಣ್ಣಪುಟ್ಟ ಕಿರಿಕಿರಿಗಳು ಕಾಡುತ್ತಿರುತ್ತವೆ. ಬ್ಯಾಗ್‌ನಲ್ಲಿ ಇಟ್ಟ ಬಾಳೆಹಣ್ಣು ಜಜ್ಜಿಕೊಳ್ಳುವುದು, ಅರ್ಧ ತಿಂದು ಉಳಿದ ಸೇಬನ್ನು ಸಂರಕ್ಷಿಸುವುದು ಅಥವಾ ಛತ್ರಿ ಒದ್ದೆಯಾಗಿ ಬ್ಯಾಗ್ ಒದ್ದೆಯಾಗುವುದು- ಇವುಗಳನ್ನು ನಾವು 'ಹಣೆಬರಹ' ಎಂದು ಒಪ್ಪಿಕೊಂಡುಬಿಡುತ್ತೇವೆ. ಆದರೆ, ಜಪಾನ್ ದೇಶದ ಜನರು ಇಂಥ ಸಣ್ಣ ಸಮಸ್ಯೆಗಳಿಗೂ ಅದೆಷ್ಟು ಸೃಜನಶೀಲ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆಂದರೆ, ಅವರ ಆವಿಷ್ಕಾರಗಳನ್ನು ನೋಡಿದಾಗ 'ಇದೇಕೆ ನಮಗೆ ಮೊದಲೇ ಹೊಳೆಯಲಿಲ್ಲ?' ಎಂದು ಅನಿಸುವುದು ಸಹಜ. ಇಂಥ ಜಪಾನೀಸ್ ಆವಿಷ್ಕಾರಗಳಲ್ಲಿ 'ಬಾಳೆಹಣ್ಣಿನ ಕೇಸ್' (Banana Case) ಖಂಡಿತವಾಗಿಯೂ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಬಾಳೆಹಣ್ಣು ಪ್ರಕೃತಿ ಕೊಟ್ಟ ಅತ್ಯುತ್ತಮ 'ಪ್ಯಾಕೇಜ್ಡ್ ಫುಡ್'. ಆದರೆ, ಅದರ ದೌರ್ಬಲ್ಯವೆಂದರೆ ಅದು ಮೃದುವಾದದ್ದು. ಆಫೀಸ್ ಬ್ಯಾಗ್‌ನಲ್ಲಿ ಪುಸ್ತಕಗಳ ನಡುವೆ ಸಿಲುಕಿದಾಗ, ಆ ಬಾಳೆಹಣ್ಣಿನ ಸ್ಥಿತಿ ಏನಾಗುತ್ತದೆಯೋ ಅದು ತಿನ್ನುವವನಿಗೇ ಗೊತ್ತು! ಜಪಾನಿನ 100 ಯೆನ್ ಅಂಗಡಿಗಳಲ್ಲಿ ಸಿಗುವ ಈ ಪ್ಲಾಸ್ಟಿಕ್ ಬಾಳೆಹಣ್ಣಿನ ಕೇಸ್, ಒಂದು ಮನುಷ್ಯನಿಗೆ ಎಷ್ಟು ಅಗತ್ಯವೋ ಅಷ್ಟೇ ಅಚ್ಚುಕಟ್ಟಾಗಿ ಬಾಳೆಹಣ್ಣನ್ನು ಹಿಡಿದಿಟ್ಟುಕೊಳ್ಳುತ್ತದೆ. ಈ ಕೇಸ್‌ಗಳನ್ನು ತೆರೆಯುವುದು ಮತ್ತು ಮುಚ್ಚುವುದು ಬಹಳ ಸುಲಭ. ಹೆಚ್ಚಿನ ಕೇಸ್‌ಗಳಲ್ಲಿ ಗಾಳಿಯಾಡಲು ಸಣ್ಣ ರಂಧ್ರಗಳಿರುತ್ತವೆ, ಇದರಿಂದ ಬಾಳೆಹಣ್ಣು ಬೇಗ ಹಾಳಾಗುವುದಿಲ್ಲ. ಇದು ಕೇವಲ ರಕ್ಷಣಾ ಕವಚವಲ್ಲ, ಇದು ತಿನ್ನುವ ಆಹಾರದ ಮೌಲ್ಯವನ್ನು ಗೌರವಿಸುವ ಒಂದು ವಿಧಾನ. ಇದು ತುಂಬಾ ದುಬಾರಿ ಅಲ್ಲದಿದ್ದರೂ, ದೈನಂದಿನ ಜೀವನದಲ್ಲಿ ಎದುರಾಗುವ ಸಣ್ಣ ಕಿರಿಕಿರಿಗಳನ್ನು ಹೇಗೆ ಪರಿಹರಿಸಬಹುದು ಎಂಬುದಕ್ಕೆ ಇದೊಂದು ಉತ್ತಮ ಉದಾಹರಣೆ. ಶಾಲಾ ಬ್ಯಾಗ್‌ನಲ್ಲಿ ಬಾಳೆಹಣ್ಣು ಹಾಳಾಗದಂತೆ ಕೊಂಡೊಯ್ಯಲು ವಿದ್ಯಾರ್ಥಿಗಳಿಗೆ, ದೀರ್ಘ ಕಾಲದ ಪ್ರಯಾಣದಲ್ಲಿ ಆರೋಗ್ಯಕರವಾದ ಹಣ್ಣನ್ನು ಹಾನಿಯಾಗದಂತೆ ಜತೆಯಲ್ಲಿಡಲು ಪ್ರಯಾಣಿಕರಿಗೆ, ಮಧ್ಯಾಹ್ನದ ಲಘು ಉಪಾಹಾರವಾಗಿ ಬಾಳೆಹಣ್ಣನ್ನು ಸುರಕ್ಷಿತವಾಗಿಡಲು ಕಚೇರಿಗೆ ಹೋಗುವವರಿಗೆ ಅತ್ಯಂತ ಉಪಯುಕ್ತ. ಜಪಾನ್‌ನ ಆವಿಷ್ಕಾರಗಳನ್ನು ಗಮನಿಸಿದರೆ ಅಲ್ಲಿ ಒಂದು ದೊಡ್ಡ ತತ್ವ ಅಡಗಿದೆ- 'ಅಗತ್ಯವೇ ಆವಿಷ್ಕಾರದ ತಾಯಿ'. ಅವರಲ್ಲಿ ಜಾಗದ ಅಭಾವ ಹೆಚ್ಚು, ಸಮಯದ ಮೌಲ್ಯ ಹೆಚ್ಚು. ಹೀಗಾಗಿ ಅವರು ಮಾಡುವ ಪ್ರತಿಯೊಂದು ವಸ್ತುವೂ ಬಹುಪಯೋಗಿ ಮತ್ತು ಸಣ್ಣದಾಗಿರುತ್ತದೆ. ಜಪಾನಿನ ಶೈಲಿಯ ಆವಿಷ್ಕಾರಗಳು ಹೆಚ್ಚಾಗಿ ಮಡಚಬಲ್ಲವು (Foldable). ಬಾಳೆಹಣ್ಣಿನ ಕೇಸ್ ಆಗಿರಲಿ ಅಥವಾ ಅಲ್ಲಿನ ಮನೆಗಳ ವಿನ್ಯಾಸವಾಗಿರಲಿ, ಎಲ್ಲವೂ 'ಕಾಂಪ್ಯಾಕ್ಟ್' ಆಗಿರುತ್ತದೆ. ಒದ್ದೆಯಾದ ಛತ್ರಿಗಳನ್ನು ಲಾಕ್ ಮಾಡುವ ಪದ್ಧತಿಯಿರಲಿ ಅಥವಾ ರಸ್ತೆಬದಿಯ ಕಸದ ಬುಟ್ಟಿಗಳ ವಿನ್ಯಾಸವಿರಲಿ, ಅವರು ಪರಿಸರ ಮತ್ತು ಸ್ವಚ್ಛತೆಯನ್ನು ತಮ್ಮ ಆವಿಷ್ಕಾರಗಳ ಮೂಲಕವೇ ಕಾಯ್ದುಕೊಳ್ಳುತ್ತಾರೆ. ಕೇವಲ ದೈಹಿಕ ಅಗತ್ಯವಲ್ಲದೇ, 'ಮ್ಯೂಸಿಕಲ್ ರೋಡ್ಸ್'ನಂಥ ಆವಿಷ್ಕಾರಗಳ ಮೂಲಕ ಅವರು ಚಾಲಕನ ಮನಸ್ಸಿನ ಒತ್ತಡವನ್ನೂ ಕಡಿಮೆ ಮಾಡುತ್ತಾರೆ. ಜಪಾನಿನ ಈ ಸರಳ ಆವಿಷ್ಕಾರಗಳು ನಮಗೆ ಒಂದು ದೊಡ್ಡ ಪಾಠ ಕಲಿಸುತ್ತವೆ. ದೊಡ್ಡ ಸಮಸ್ಯೆಗಳಿಗೆ ಯಾವಾಗಲೂ ದೊಡ್ಡ ದೊಡ್ಡ ಪರಿಹಾರಗಳೇ ಬೇಕಿಲ್ಲ. ಕೆಲವೊಮ್ಮೆ, ಒಂದು ಸಣ್ಣ ಪ್ಲಾಸ್ಟಿಕ್ ಡಬ್ಬಿ ಅಥವಾ ಒಂದು ಸಣ್ಣ ಯೋಚನೆ ಇಡೀ ದಿನದ ಅಸಮಾಧಾನವನ್ನು ದೂರ ಮಾಡಬಲ್ಲದು. ನಾವು ಬಾಳೆಹಣ್ಣನ್ನು ಬ್ಯಾಗ್‌ನಲ್ಲಿ ಎಸೆಯುವ ಬದಲಾಗಿ, ಅದಕ್ಕೆ ಒಂದು ಅಚ್ಚುಕಟ್ಟಾದ 'ಮನೆ' ಕಟ್ಟಿಕೊಟ್ಟರೆ, ಆ ಬಾಳೆಹಣ್ಣು ಹಾಳಾಗುವುದಿಲ್ಲ, ಜತೆಗೆ ನಮ್ಮ ಬ್ಯಾಗ್ ಸ್ವಚ್ಛವಾಗಿರುತ್ತದೆ. ಇದು ಕೇವಲ ವಸ್ತುವಿನ ರಕ್ಷಣೆಯಲ್ಲ, ಇದು ಸಣ್ಣ ವಿಷಯಗಳಲ್ಲಿ ಸಿಗುವ ದೊಡ್ಡ ಸಂತೋಷ. ಬಾಳೆಹಣ್ಣಿನ ಕೇಸ್ ಎಂಬುದು ತುಂಬಾ ಸರಳವಾದ ಪ್ಲಾಸ್ಟಿಕ್ ಬಾಕ್ಸ್ ಆಗಿರಬಹುದು, ಆದರೆ ನಿಮ್ಮ ದಿನನಿತ್ಯದ ಬದುಕಿನಲ್ಲಿ ಬಾಳೆಹಣ್ಣಿನ ಸೇವನೆಯನ್ನು ಹೆಚ್ಚು ಸುಲಭ ಮತ್ತು ಆನಂದದಾಯಕವಾಗಿಸುವಲ್ಲಿ ಇದರ ಪಾತ್ರ ದೊಡ್ಡದು. ಜಪಾನೀಯರ ಸಂಸ್ಕೃತಿಯಲ್ಲಿರುವ ಪ್ರಾಯೋಗಿಕತೆ, ಶಿಸ್ತು ಮತ್ತು ಸೃಜನಶೀಲತೆಗೆ ಇದು ಪುಟ್ಟ ನಿದರ್ಶನ. ಜಪಾನಿನ ಈ ಆವಿಷ್ಕಾರಗಳು ದೊಡ್ಡ ಸಾಧನೆಗಳಲ್ಲದಿರಬಹುದು, ಆದರೆ ಇವು ಮನುಷ್ಯನ ದೈನಂದಿನ ಜೀವನದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಹಿಸುವ ಪಾತ್ರ ಅಪಾರ.

ಅಪಸ್ವರವನ್ನೇ ಮೆಲೋಡಿಯನ್ನಾಗಿಸುವ ಮೋದಿ ಮೋಡಿ



ಶಿಶಿರಕಾಲ
ಶಿಶಿರ್ ಹೆಗಡೆ
vveditoped@gmail.com

ಡೊನಾಲ್ಡ್ ಟ್ರಂಪ್‌ನಿಗೆ ಯಾರು ಏನೇ ಹೇಳಿ ವಿರೋಧಿಸಿದರೂ ಭೂತ ಮೈಮೇಲೆ ಬಂದವನಂತೆ ಆಡುತ್ತಾನೆ. ತಮಾಷೆಗಲ್ಲ- ಅವನದೇ ಪಕ್ಷದವರೂ ಅವನ ಯಾವುದೇ ಚಿಕ್ಕ ನಡೆಯ ವಿರುದ್ಧ ಮಾತನಾಡುವಂತಿಲ್ಲ. ಮಾತನಾಡಿದ್ದೇ ಆದರೆ, ಅವರ ವಿರುದ್ಧ ತನ್ನದೇ ಕ್ಯಾಂಡಿಡೇಟ್ ಬಿಟ್ಟು ಚುನಾವಣೆಯಲ್ಲಿ ಅವರನ್ನು ಸೋಲಿಸುತ್ತಾನೆ. ಇತ್ತೀಚೆಗೆ ಟ್ರಂಪ್ ವೈಟ್ ಹೌಸ್‌ಗೆ ತಾಗಿಕೊಂಡು ಒಂದು ದೊಡ್ಡ ಸರಕಾರೀ ಸಭಾಂಗಣ - ಬಾಲ್ ರೂಮ್ ನಿರ್ಮಿಸಲು ಮುಂದಾಗಿದ್ದಾನೆ. ಅದಕ್ಕಾಗಿ ರಾತ್ರೋ ರಾತ್ರಿ ಬುಲ್ಡೋಜರ್ ತರಿಸಿ, ವೈಟ್ ಹೌಸ್‌ನ ಒಂದು ದೊಡ್ಡ ವಿಭಾಗವನ್ನೇ ನೆಲಸಮ ಮಾಡಿಬಿಟ್ಟಿದ್ದಾನೆ ! ವೈಟ್ ಹೌಸ್‌ನಂತಹ ಐತಿಹಾಸಿಕ ಕಟ್ಟಡವನ್ನು ಧ್ವಂಸ ಮಾಡಿದ್ದನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟಿಗೆ ಹೋದರು. ಕೋರ್ಟ್ - ವೈಟ್ ಹೌಸ್ ಯಾರಪ್ಪನ ಸ್ವತ್ತೂ ಅಲ್ಲ, ಇದನ್ನು ಕೆಡವಿದ್ದು ಸರಿಯಲ್ಲ ಎಂದಿತು. ವೈಟ್ ಹೌಸ್‌ನಲ್ಲಿ ಬಂದುಳಿಯಲಷ್ಟೇ ಅಧ್ಯಕ್ಷನಿಗೆ ಅಧಿಕಾರ, ಅದು ಬಿಟ್ಟು ವೈಟ್ ಹೌಸ್ ಟ್ರಂಪ್ ಸ್ವತ್ತಲ್ಲ ಎಂದಿತು. ಟ್ರಂಪ್ ಇದನ್ನೂ ಅವಮಾನವೆಂದೇ ಸ್ವೀಕರಿಸಿದ. ಈಗ - ನೆಲಸಮ ಮಾಡಿಯಾಗಿದೆ, ಸರಕಾರಿ ದುಡ್ಡು ಬೇಡ, ತನ್ನ ಸ್ವಂತ ದುಡ್ಡಲ್ಲಿ ದೊಡ್ಡ ಸಭಾಂಗಣ ನಿರ್ಮಿಸಿಯೇ ಸಿದ್ಧ ಎಂದು ಸುಪ್ರೀಂ ಕೋರ್ಟ್ ವಿರುದ್ಧ ತೊಡೆ ತಟ್ಟಿ ನಿಂತಿದ್ದಾನೆ, ಮೀಡಿಯಾ ಎದುರು ದಿನಕ್ಕೊಮ್ಮೆ ಬಂದು ಹೂಂಕರಿಸುತ್ತಾನೆ. ಇಂತಹ ಅಸಂಖ್ಯ ಉದಾಹರಣೆಗಳಿವೆ- ಯಾರೇ ಏನೇ ಮಾತನಾಡಲಿ, ವಿರೋಧಿಸಲಿ- ಟೀಕೆಯನ್ನು ಸದೆಬಡಿಯುವುದೇ ತನ್ನ ಶಕ್ತಿ ಎಂಬಂತೆ ನಡೆಯುತ್ತಾನೆ ಟ್ರಂಪ್. ಆತ ಪತ್ರಕರ್ತರ ಪ್ರಶ್ನೆಯನ್ನು ಎದುರಿಸುವುದು ಕೂಡ ಹಾಗೆಯೇ. ಯಾವುದೇ ಚ್ಯಾನಲ್ ತನ್ನ ವಿರುದ್ಧ ಎಂದಾದರೆ, ತನಗೆ ಸಹ್ಯವಾಗದ ಪ್ರಶ್ನೆ ಕೇಳಿದರೆ - ಆ ಪತ್ರಕರ್ತರ ಬಗ್ಗೆ, ಎಲ್ಲಾ ಕ್ಯಾಮರಾ ಎದುರೇ 'ಯು ಆರ್ ಸ್ಟುಪಿಡ್, ಯುವರ್ ಚ್ಯಾನಲ್ ಈಸ್ ಫೇಕ್' ಎಂದುಬಿಡುತ್ತಾನೆ. ಅಷ್ಟೇ ಏಕೆ, ಇತ್ತೀಚೆಗೆ ಅವನ ವಿರುದ್ಧ ಟಿವಿ ಚ್ಯಾನಲ್‌ನ ನಿರೂಪಕರಿಬ್ಬರು ಹಾಸ್ಯ ಮಾಡಿದ್ದರು. ಟ್ರಂಪ್ ಬಿಡಲಿಲ್ಲ, ಅವರನ್ನು ತೆಗೆದು ಹಾಕಿ - ಎಂದು ನಿತ್ಯ ಹತ್ತಿಪ್ಪತ್ತು ಟ್ವೀಟ್ ಮಾಡಿದ್ದ!

ಟ್ರಂಪ್ ಒಬ್ಬನೇ ಈ ರೀತಿಯಲ್ಲ. ಬಹುತೇಕ ಇಂದಿನ ಗಟ್ಟಿ ರಾಷ್ಟ್ರಗಳ ಸರ್ವೋಚ್ಚ ನಾಯಕರದ್ದೂ ಇದೇ ಕಥೆ. ಕೆಲವರದ್ದಂತೂ ವಿಪರೀತ. ಸೌದಿಯ ರಾಜನ ವಿರುದ್ಧ ಮಾತನಾಡಿದ್ದಕ್ಕೆ ಜಮಾಲ್ ಕಶೋಗ್ಗಿ ಟರ್ಕಿಯ ಇಸ್ತಾಂಬುಲ್‌ನ ಸೌದಿ ರಾಯಭಾರಿ ಕಚೇರಿಯಲ್ಲಿ ಟಾಯ್ಲೆಟ್‌ನಲ್ಲಿ ತುಂಡು ತುಂಡಾಗಿ ಫ್ಲಶ್ ಆಗಿ ಹೋದ. ಉತ್ತರ ಕೊರಿಯಾದ ಸರ್ವಾಧಿಕಾರಿ ತನ್ನ ವಿರುದ್ಧ ಹೊರಟ ಚಿಕ್ಕಪ್ಪನನ್ನೇ ಗುಂಡಿಟ್ಟು ಕೊಲ್ಲಿಸಿದ, ಇನ್ನೊಬ್ಬನನ್ನು ವಿಮಾನ ನಿಲ್ದಾಣದಲ್ಲಿ ವಿಷ ಹಾಕಿ ಕೊಲ್ಲಿಸಿದ. ರಷ್ಯಾ ಕಥೆ ನಿಮಗೆ ಗೊತ್ತೇ ಇರುತ್ತದೆ. ಅಲ್ಲಿ ಕೂಡ ಪುಟಿನ್ ವಿರುದ್ಧ ಮಾತನಾಡಿದವರು ಹೇಳಹೆಸರಿಲ್ಲದಂತೆ ಮಾಯವಾಗಿಬಿಡುತ್ತಾರೆ. ಪುಟಿನ್ ವಿರುದ್ಧ ಮಾತಾಡಿದ ಕಾರಣಕ್ಕೆ ಅಲೆಕ್ಸಿ ನೋವಲ್ನಿಯನ್ನು ಮಾಸ್ಕೋಗೆ ಹೊರಟ ವಿಮಾನದಲ್ಲಿ ವಿಷ ಉಣಿಸಲಾಯಿತು. ಪುಟಿನ್ ವಿರುದ್ಧ ಮಾತನಾಡಿದರೆ ಪ್ರಜೆ ಯಾವುದೇ ನೆಲ, ದೇಶದಲ್ಲಿರಲಿ, ಅವನನ್ನು ಅಲ್ಲಿನ ವ್ಯವಸ್ಥೆ ಬಿಡುವುದಿಲ್ಲ. ಚೀನಾ ಕಥೆಯೂ ಅಷ್ಟೇ- ಅಲಿಬಾಬಾದಂತಹ ಬೃಹತ್ ಕಂಪನಿಯನ್ನು ನಿರ್ಮಿಸಿದ ಜ್ಯಾಕ್ ಮಾನಂತವರು ಕೂಡ ಸರಕಾರಿ ಆಡಳಿತದ ವಿರುದ್ಧ ಪಿಸುಗುಡುವಂತಿಲ್ಲ. ಅವನು 2020ರಲ್ಲಿ ಒಮ್ಮೆ ಕ್ಸಿ ಜಿನ್ ಪಿಂಗ್ ಮತ್ತು ಆಡಳಿತದ ವಿರುದ್ಧ ಮಾತನಾಡಿದ್ದ, ಬಹಳ ಸುದ್ದಿಯಾಗಿತ್ತು. ಅದಾದ ಮೇಲೆ- ಸುಮಾರು ನಾಲ್ಕು ತಿಂಗಳು ಅವನು ಎಲ್ಲಿದ್ದಾನೆ ಎಂದೇ ಯಾರಿಗೂ ತಿಳಿದಿರಲಿಲ್ಲ! ಇವತ್ತಿಗೂ ಜ್ಯಾಕ್ ಮಾ ಎಲ್ಲಿಯೂ ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ, ಅವನು ಬದುಕಿದ್ದಾನೋ ಎಂಬುದರ ಬಗ್ಗೆಯೇ ಅನುಮಾನ ಬರುವಷ್ಟು ಆತ ಈಗ ಅಜ್ಞಾತ.

ಟೀಕೆಗಳನ್ನು ಹೀಗೆಲ್ಲಾ ಸ್ವೀಕರಿಸುವ, ಟೀಕಿಸಿದಾಗಲೆಲ್ಲ ಶಕ್ತಿಪ್ರದರ್ಶನಕ್ಕೆ ಇಳಿಯುವ ನಾಯಕರು ಒಂದು ಕಡೆಯಾದರೆ, ಅಪಹಾಸ್ಯವನ್ನು ಆವೇಗವಾಗಿಸುವ, ದಾಳಿಯನ್ನು ಗಮನ ಸೆಳೆಯುವ ತಂತ್ರವಾಗಿ ಬಳಸಿಕೊಳ್ಳುವ, ಭಾವನೆಗಳನ್ನು ಸಂಪರ್ಕ ಸೇತುವೆಯಾಗಿ ಬಳಸಿಕೊಳ್ಳುವ ಮೋದಿ ಇನ್ನೊಂದು ಕಡೆ. ಈಗೊಂದು ಘಟನೆ ಸುದ್ದಿಯಲ್ಲಿದೆಯಲ್ಲ, ಮೋದಿ ಮತ್ತು ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ. ಈ ಹಿಂದೆ ಅವರ ನಡುವಿನ ಕೆಮಿಸ್ಟ್ರಿ ನೋಡಿದವರು ಸಾ.ಜಾ.ದಲ್ಲಿ, ಮಾಧ್ಯಮದಲ್ಲಿ ಅವರಿಬ್ಬರ ಕಾಲೆಳೆದಿದ್ದರು, ಹೈಸ್ಕೂಲ್ ಹುಡುಗ ಹುಡುಗಿಯ ರೀತಿಯಲ್ಲಿ ಕಿಚಾಯಿಸಿದ್ದರು. ಅಸಲಿಗೆ ನರೇಂದ್ರ ಮೋದಿಯಂತೆಯೇ ಮೆಲೋನಿ ಕೂಡ ಎಲ್ಲಾ ದೇಶದ ನಾಯಕರನ್ನು ಎದುರುಗಾಣುವ, ಸ್ವೀಕರಿಸುವ ರೀತಿ touchy- feely & ಮುಟ್ಟಿ, ತಬ್ಬಿ ಮಾತನಾಡಿಸುವ ಆಪ್ತ ಸ್ವಭಾವ. ಸಾಮಾನ್ಯವಾಗಿ ಕೆಲವೇ ಕೆಲವರಲ್ಲಿ ಮೈಮುಟ್ಟಿ ಮಾತನಾಡಿಸುವ ಸಲುಗೆಯ ಸರಳತೆ ಇರುತ್ತದೆ. ಅದು ಕೆಲವರ ವ್ಯಕ್ತಿತ್ವ. ಮೋದಿ ಮೆಲೋನಿ (ಮೆಲೋಡಿ) ಸಾಕಷ್ಟು ವೈರಲ್ ಆಗಿದ್ದರೂ ಅದು ಇಲ್ಲಿಯವರೆಗೆ ನರೇಂದ್ರ ಮೋದಿಯವರ ಗಮನಕ್ಕೆ ಬಂದಿದೆ ಎಂದು ಎಲ್ಲಿಯೂ ಅನಿಸಿರಲಿಲ್ಲ. ಈಗ ಏಕಾಏಕಿ - ಎಲ್ಲ ಮೀಟಿಂಗ್- ಗಡಿಬಿಡಿಗಳ ಮಧ್ಯೆ ಅದೊಂದು ಪಾರ್ಲೆ ಚಾಕಲೇಟ್- 'ಮೆಲೋಡಿ' ತೋರಿಸಿ ವೈರಲ್ ಆಗಿಬಿಟ್ಟಿದ್ದಾರೆ. ಇದೆಲ್ಲ ಮೊದಲು ಮೀಮ್, ಆನ್‌ಲೈನ್ ಹಾಸ್ಯ, ಸೆಲ್ಫಿ, ಸಾಮಾಜಿಕ ಜಾಲತಾಣದ ವ್ಯಂಗ್ಯದಂತೆ ಕಾಣಿಸಿದರೂ, ಕೆಲವೇ ಗಂಟೆಗಳಲ್ಲಿ ಅದರಾಚೆ ಬೆಳೆಯಿತು. ಇದೊಂದು ವೈರಲ್ ಡಿಪ್ಲೊಮಸಿ, ರಾಜತಾಂತ್ರಿಕತೆ, ಬಲ ಪ್ರದರ್ಶನ ಎಂದೇ ರೂಪ ಪಡೆದುಕೊಂಡಿತು. ಜನಮನ್ನಣೆಯನ್ನೂ ಪಡೆಯಿತು. ಭಾರತದಲ್ಲಿ ಮಾತ್ರವಲ್ಲ, ಇಟಲಿ ಪತ್ರಿಕೆಗಳು ಕೂಡ ಭಾರತ ಮತ್ತು ಇಟಲಿಯ ಹೊಸ ರಾಜತಾಂತ್ರಿಕ ಸಂಬಂಧ ಎಂದು ಬಣ್ಣಿಸುತ್ತಿವೆ. ಒಟ್ಟಾರೆ ಇಡೀ ಘಟನೆಯನ್ನು ಮೋದಿ ದ್ವೇಷಿಗಳು ಆಡಿಕೊಂಡರು, ಹಿಂಬಾಲಕರು ಕೊಂಡಾಡಿದರು. ಅದೆಲ್ಲದರ ನಡುವೆ ಸ್ಪಾಟ್‌ಲೈಟ್ ಮಾತ್ರ ಮೋದಿ ಅಂದುಕೊಂಡಂತೆ- ಮೋದಿಯ ಮೇಲೆಯೇ! ಪ್ರಚಾರ ಸಿಕ್ಕಿದ್ದು ಮಾತ್ರ ಮೋದಿಗೆ!

ಮೋದಿ ಬಲ್ಲವರಿಗೆ ಇದೆಲ್ಲ ಹೊಸತೇನಲ್ಲ. 'ಚಾಯ್ ವಾಲಾ' ಎನ್ನುವ ತಾತ್ಸಾರದ, ಅಲ್ಪವಾಗಿ ಕಾಣಿಸುವ ಮಾತನ್ನು ಹಿಡಿದುಕೊಂಡು ಮಾಡಿದ್ದೇನು? ಅದನ್ನೇ ತಮ್ಮ ಬಡತನದ ಮೂಲವನ್ನು ಹೇಳಲು ಬಳಸಿಕೊಂಡರು. 'ಒಬ್ಬ ಜನಸಾಮಾನ್ಯ ದೇಶದ ನಾಯಕನಾಗಬಾರದೆ?' ಎಂಬ ಪ್ರಶ್ನೆಯನ್ನು ಜನರಲ್ಲಿ ಮೂಡುವಂತೆ ಮಾಡಿದರು. ಪ್ರತೀ ಟೀಕೆ, ಪ್ರತಿ ಕಾರ್ಟೂನ್, ಪ್ರತೀ ಟಿವಿ ಚರ್ಚೆ, ಅಂತರಾಷ್ಟ್ರೀಯ ಹೆಡ್ ಲೈನ್‌ಗಳು- ಎಲ್ಲವನ್ನು ಹುಷಾರಿತನದಿಂದ ಬಳಸಿಕೊಳ್ಳುತ್ತಾ ಹೋದರು. ಅದುವೆ ಈಗ ಮೋದಿಯ ಬಗೆಗೆ larger than life - ಅಪ್ರತಿಮ ವ್ಯಕ್ತಿತ್ವ ರೂಪ ಕೊಟ್ಟು ನಿಲ್ಲಿಸಿದೆ.

ಕರ್ನಾಟಕದವರು ಹಾಗೆ, ಕೇರಳದವರು ಹೀಗೆ, ಗುಜರಾತಿಗಳು ಹಾಗೆ ಎಂದೆಲ್ಲ ವ್ಯಾಖ್ಯಾನಿಸುವುದು ಪೂರ್ಣವಲ್ಲ. ಆದರೂ ನಿಮಗೆ ಇದನ್ನು ಹೇಳಬೇಕೆನಿಸುತ್ತಿದೆ. ನನಗೊಂದಿಷ್ಟು ಗುಜ್ಜು ಸ್ನೇಹಿತರಿದ್ದಾರೆ. ಎಲ್ಲರೂ ಅಮೆರಿಕಾದಲ್ಲಿ ವ್ಯಾಪಾರಸ್ಥರು. ಅವರಲ್ಲೊಂದು ವಿಶೇಷ ಗುಣವನ್ನು ಗ್ರಹಿಸಿದ್ದೇನೆ. ಅದೇನೆಂದರೆ- ಅದೆಂತಹುದೇ ಪ್ರತಿಕೂಲ ಸಮಯ ಬಂದಾಗ ಉಳಿದವರು ಪಾರಾಗುವುದು ಹೇಗೆ ಎಂದು ಯೋಚಿಸಿದರೆ, ಈ ಗುಜ್ಜು ಸ್ನೇಹಿತರು ಅದರಿಂದ ತಮಗೆ ಲಾಭ ಮಾಡಿಕೊಳ್ಳುವುದು ಹೇಗೆ ಎಂದೇ ಯೋಚಿಸುತ್ತಿರುತ್ತಾರೆ. ಅವರ ವ್ಯಾಪಾರದಲ್ಲಿ ಅದೆಷ್ಟೋ ಬಾರಿ ಅವರ ಪ್ರಾಡಕ್ಟ್‌ಗೆ ಕೆಟ್ಟ ಪ್ರತಿಕ್ರಿಯೆ ಬರುತ್ತದೆ. ಅದನ್ನೇ ಇವರು ಬಳಸಿ ಅಡ್ವರ್ಟೈಜ್ ಮಾಡಿಬಿಟ್ಟಿದ್ದಿದೆ. ಅವರನ್ನು ಕಂಡ ನನಗೆ ಇದೆಲ್ಲ ಮೋದಿಯ ರಕ್ತಗತ ಗುಜರಾತೀ ಗುಣದಂತೆನಿಸಿದ್ದು ಸುಳ್ಳಲ್ಲ ! ಮೋದಿ ನಾವೆಲ್ಲ ಗ್ರಹಿಸಿದಂತೆ ರಕ್ಷಣಾತ್ಮಕವಾಗಿ, ಇಂತಹ ಕಾರಣಕ್ಕಾಗಿ ಹೀಗೆ ಮಾಡಿದೆ, ನಾನು ಮಾಡಿದ್ದು ಈ ಕಾರಣಕ್ಕೆ ಸರಿ ಎಂದೆಲ್ಲ ಹೇಳುವುದೇ ಇಲ್ಲ. ಯಾವುದೇ ಚಿಕ್ಕ ವಿವಾದವನ್ನೂ ಮೋದಿ ಮೊದಲು ಹೀರಿಕೊಳ್ಳುತ್ತಾರೆ, ಆನಂತರ ಸರಿಯಾದ ಸಮಯದಲ್ಲಿ ಅಂದುಕೊಂಡದ್ದಕ್ಕಿಂತ ಹೆಚ್ಚಿನ ಭಾವಪೂರ್ಣತೆಯಿಂದ ಅದಕ್ಕೆ ಉತ್ತರಿಸುತ್ತಾರೆ.

ಮೋದಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ರಾಜಕೀಯ ಪಂಡಿತರು, ಪ್ರತಿಪಕ್ಷದವರು ಎಡವುದೇ ಇಲ್ಲಿ. ಕಾರ್ಯನೀತಿ, ಭಾಷಣಗಳಿಂದಷ್ಟೇ ಮೋದಿ ಅರ್ಥವಾಗುವುದಿಲ್ಲ. ಅಥವಾ ಮೋದಿ ಎಂಬ ಇಮೇಜ್- ಆರ್ಥಿಕತೆ, ಮೂಲ ಸೌಕರ್ಯ, ಕಲ್ಯಾಣ ಯೋಜನೆಗಳು, ವಿದೇಶಾಂಗ ನೀತಿ ಇವೆಲ್ಲದರ ಮೇಲೆ ಕಟ್ಟಿಕೊಂಡದ್ದಲ್ಲ. ಮೋದಿ ತನ್ನ ಇಮೇಜ್ ಕಟ್ಟಿಕೊಂಡ ರೀತಿ ಅನನ್ಯ. ಇದನ್ನೆಲ್ಲ ಬಿಜೆಪಿ, ಮೋದಿಯವರ ಪಿಆರ್ ಟೀಮ್ ಮಾಡಿದ್ದಲ್ಲ. ಇದನ್ನೆಲ್ಲ ರೂಪುಗೊಳಿಸಿಕೊಂಡವರು, ಚಲಾವಣೆ ಮಾಡುವವರು ಖುದ್ದು ಮೋದಿ. ಇದೆಲ್ಲ ಬೇರೆಯವರಿಂದ ಕಡ ತಂದ ಬುದ್ಧಿವಂತಿಕೆಯಲ್ಲ, ಹಾಗಿದ್ದರೆ ಒಳ್ಳೆಯ ಪಿಆರ್ ತಂಡ ಖರೀದಿಸಿ ಎಲ್ಲರೂ ಮೋದಿಯಾಗಿಬಿಡುತ್ತಿದ್ದರು. ಈಗಂತೂ ಮೋದಿಗಿಂತ ಹೆಚ್ಚಿನ ಹಣ ಲೋಕಲ್ ಎಂಎಲ್‌ಎ ಹತ್ತಿರವೇ ಇರುತ್ತದೆ !

ಜನರ ಜೊತೆ ನೇರವಾದ ಮಾತುಕತೆ, ತ್ಯಾಗ, ಬಡತನ, ದೇವಾಲಯಗಳು, ಸೈನಿಕರು, ನಾಗರೀಕತೆ, ಐತಿಹಾಸಿಕ ಬಲಿದಾನ ಇವನ್ನೆಲ್ಲ ಮೋದಿ ಬಳಸಿಕೊಂಡಷ್ಟು ಇನ್ಯಾವುದೇ ರಾಜಕಾರಣಿ ಸದ್ಯಕ್ಕಂತೂ ಬಳಸಿಕೊಳ್ಳುತ್ತಿಲ್ಲ. ಮೋದಿ ಮಾತನಾಡುವ, ಎತ್ತಿಕೊಳ್ಳುವ ವಿಷಯಗಳು ಅಂಥವು. ಕೇಳಿದಾಗ ಪ್ರಜೆಗಳಿಗೆ ತಾವು ಯಾವುದೋ ದೊಡ್ಡ ಕೆಲಸದಲ್ಲಿ ಭಾಗಿಯಾಗಿದ್ದೇವೆ ಎಂದೆನಿಸುತ್ತಿರುತ್ತದೆ. ಅದು ದೇಶವೆಂಬ ವ್ಯವಸ್ಥೆಯ ಮಟ್ಟಿಗೆ ಬಹಳ ಮುಖ್ಯ. ಜನರು ಮೋದಿಯನ್ನು ಬೆಂಬಲಿಸುವುದು ಅವರ ರಾಜಕೀಯ ಅಧಿಕಾರ ಪ್ರಾವೀಣ್ಯತೆಗಷ್ಟೇ ಅಲ್ಲವಲ್ಲ ! ಇವಿಷ್ಟು ಮೋದಿಯವರ ಪ್ರಚಾರ ಚಾಣಕ್ಯತೆಯ ಬಗ್ಗೆ ಆಯಿತು. ಆದರೆ ನಾವಿಲ್ಲಿ ಇನ್ನೊಂದನ್ನು ಗ್ರಹಿಸಲೇಬೇಕು. ಅದೇನೆಂದರೆ ಭಾರತದಲ್ಲಿರುವ ನಾಯಕ ಮತ್ತು ಪ್ರಜೆಗಳ ನಡುವಿನ ಸಂಬಂಧದ ಬಗ್ಗೆ, ಎಲ್ಲವನ್ನೂ ವಿಶ್ಲೇಷಿಸುವ ನಾವು ಇದನ್ನೂ ವಿಶ್ಲೇಷಿಸಲೇಬೇಕು. ಒಂದು ದೇಶ ಮತ್ತು ಅದರ ನಾಯಕನ ಸರಕಾರದಾಚೆಯ ಸಂಬಂಧ.

ಒಬ್ಬ ದೇಶದ ಮುಖ್ಯಸ್ಥ ಸರಿಯಿದ್ದರೆ ಹೇಗೆ, ಸರಿಯಿಲ್ಲದಿದ್ದರೆ ಹೇಗೆ ಎಂದು ನಾನು ಕಣ್ಣಾರೆ ಕಂಡು ಅನುಭವಿಸಿದ್ದೇನೆ. ಕೊರೊನಾ ಬಂತಲ್ಲ, ಆಗ ಅಮೆರಿಕಾದಲ್ಲಿ ಇದ್ದದ್ದೂ ಇದೇ ಟ್ರಂಪ್. ಸಾಂಕ್ರಾಮಿಕದ ಹೊಸತರಲ್ಲಿ- ಕೊರೊನಾ ಅನ್ನೋದೇ ಸುಳ್ಳು ಎಂದಷ್ಟೇ ಹೇಳಿದ್ದಲ್ಲ, ಇಡೀ ದೇಶವನ್ನೇ ಗೊಂದಲದ ಗೂಡಾಗಿ ಮಾಡಿಬಿಟ್ಟಿದ್ದ. ಇತ್ತ ನರೇಂದ್ರ ಮೋದಿ ಹಾಗೆ ಮಾಡಲಿಲ್ಲ, ಜಾಗಟೆ ಬಡಿದರು ಎಂದು ತಮಾಷೆ ಮಾಡುತ್ತೇವೆ- ಆದರೆ ಅವರು ಯಾರೂ ಮಾಡದ ಕೆಲಸವನ್ನು ಅಂದು ಮಾಡಿದ್ದರು. ಅದು ದೇಶವನ್ನು ಒಗ್ಗಟ್ಟು ಮಾಡಿದ್ದು. ಇದೆಲ್ಲ ಅದೆಷ್ಟು ಮುಖ್ಯ, ವಿಪತ್ತಿನ ಕಾಲದಲ್ಲಿ ಹೇಗೆ ವ್ಯವಹರಿಸಬೇಕು ಎಂಬುದನ್ನು ಮೋದಿ ಮಾಡಿ ತೋರಿಸಿದರೆ, ಏನನ್ನು ಮಾಡಬಾರದು ಎಂಬುದಕ್ಕೆ ಟ್ರಂಪ್ ಉದಾಹರಣೆಯಾಗುವಂತೆ ನಡೆದುಕೊಂಡ. ಇದೆಲ್ಲ ಎಷ್ಟು ಮುಖ್ಯ ಎಂದು ಅಮೆರಿಕದಲ್ಲಿ ಕೂತ ನನ್ನ ಅನುಭವಕ್ಕೆ ಅಂದು ಬಂದಿತ್ತು.

ಕಾನೂನು ಸಮಾಜದಲ್ಲಿ ಸುವ್ಯವಸ್ಥೆಯನ್ನು ರೂಪಿಸಬಲ್ಲದು. ಆದರೆ ಅದೆಷ್ಟೇ ಗಟ್ಟಿಯ ಕಾನೂನು ವ್ಯವಸ್ಥೆ ಕೂಡ ದೇಶವನ್ನು ಒಂದಾಗಿಸುವುದಿಲ್ಲ. ಒಬ್ಬ ಜನ ಸಾಮಾನ್ಯ ಅದೆಂದೂ ಪ್ರತ್ಯಕ್ಷ ಕಾಣದ ದೇಶದ ನಾಯಕನ ಜೊತೆ ನೇರ ಸಂವಹಿಸಿದ ರೀತಿಯ ಅನುಭವ ಪಡೆಯುವುದು ಬಹಳ ಅಪರೂಪ. ನೀವೇ ಒಮ್ಮೆ ಚೀನಾ, ರಷ್ಯಾ, ಯುಕೆ, ಅಮೆರಿಕಾ ಈ ದೇಶದ ನಾಯಕರ ಇತ್ತೀಚಿನ ನಡೆನುಡಿಯನ್ನು ನೆನಪು ಮಾಡಿಕೊಳ್ಳಿ. ಅದರಲ್ಲೂ ಯುದ್ಧ ಸನ್ನಿವೇಶದಲ್ಲಿ ನಡೆದುಕೊಳ್ಳುತ್ತಿರುವ ರೀತಿ ನೋಡಿ. ಆಗ ಮೋದಿ ಸಂಪೂರ್ಣ ವಿಭಿನ್ನವಾಗಿ ಕಾಣಿಸುತ್ತಾರೆ. ಅದು ಮೋದಿಯನ್ನು ಉಳಿದ ಜಾಗತಿಕ ನಾಯಕರಿಂದ ಪ್ರತ್ಯೇಕಿಸುತ್ತದೆ. ಅಲ್ಲದೇ ಮೋದಿ ಮುನ್ನಡೆಸುತ್ತಿರುವ ದೇಶ ಭಾಷೆ, ಜಾತಿ, ಧರ್ಮ, ಪಂಗಡಗಳ ವೈವಿಧ್ಯದ್ದು. ಇಂತಹ ದೇಶವನ್ನು ಇನ್ನು ಹೇಗೆ ಮುನ್ನಡೆಸಬೇಕಿತ್ತು? ದೇಶ, ಮೋದಿ ಇವೆಲ್ಲದರ ಜೊತೆ ನಾಗರಿಕನ ಭಾವಬಂಧ ಬಹಳ ಅಪರೂಪದ್ದು. ಮೋದಿ ಆಡಳಿತದಲ್ಲಿರುವಾಗ ಯಾರು ಏನೇ ಹೇಳಲಿ, ಮುಂದೊಬ್ಬ ಯಾರೇ ನಾಯಕನಾಗಿ ಬಂದರೂ ಅವರನ್ನು ಮೋದಿಯ ಜೊತೆಯೇ ಹೋಲಿಸುವುದು ಪಕ್ಕಾ.

ಇದೆಲ್ಲದರ ನಡುವೆ ಮೋದಿಯನ್ನು ಕಂಡರಾಗದ ಒಂದು ಪಂಗಡವೂ ನಮ್ಮ ನಡುವೆಯೇ ಇದೆ. ನಾನು ಹೇಳುತ್ತಿರುವುದು ಕಾಂಗ್ರೆಸ್ ಇತ್ಯಾದಿ ರಾಜಕೀಯ ಪಕ್ಷಗಳ ಅನಿವಾರ್ಯ ವಿರೋಧದ ಬಗ್ಗೆ ಅಲ್ಲ. ಜನಸಾಮಾನ್ಯರಲ್ಲೇ ಕೆಲವರಿಗೆ ಮೋದಿ ಕಂಡರಾಗದು. ಮೋದಿಯೇ ಸರ್ವಸ್ವ, ಮೋದಿ ಮಾಡಿದ್ದೆಲ್ಲಾ ಸರಿ ಎನ್ನುವ ಪಂಗಡ ಒಂದು ಕಡೆಯಾದರೆ ಇನ್ನೊಂದು ಕಡೆ ಮೋದಿಯನ್ನು ದ್ವೇಷಿಸುವವರದ್ದು. ಇವರ ದೊಡ್ಡ ಸಮಸ್ಯೆಯೆಂದರೆ ಹೆಚ್ಚಿನವರದ್ದು ಅಕಾರಣ ದ್ವೇಷ. ಯಾವುದೋ ಓಬಿರಾಯನ ಕಾಲದ ಆಲದ ಮರದಂತಹ ವೈಚಾರಿಕತೆಗೆ ಜೋತು ಬಿದ್ದು ದ್ವೇಷ. ಸಾಮಾನ್ಯವಾಗಿ ಯೋಚಿಸದೇ ಪ್ರೀತಿಸುವವರು ಆಗೀಗ ಅಂಧಭಕ್ತರೆಂದು ಟೀಕೆಗೊಳಗಾಗುತ್ತಿರುತ್ತಾರೆ. ಹಾಗೆ ಟೀಕಿಸುವುದು ಸರಿಯೇ ಹೌದು. ಯಾವುದೇ ನಾಯಕನೆಡೆಗಿನ ಅಂಧ ಭಕ್ತಿ ದೇಶಕ್ಕೆ ಒಳ್ಳೆಯದಲ್ಲ. ಆದರೆ ಅಂಧದ್ವೇಷ? ಪತ್ರಿಕೆ ಮಾಧ್ಯಮದ ಹೊರತಾಗಿ ಜನರ ಪಲ್ಸ್ ಅರ್ಥ ಮಾಡಿಕೊಳ್ಳಲು ಸಾ.ಜಾ. ನೋಡುತ್ತಿದ್ದರೆ ಯಾವತ್ತೂ ಇವರಿಬ್ಬರ ನಡುವೆ ಅಲ್ಲಿ ನಿತ್ಯ ಸಮರ ನಡೆದೇ ಇರುತ್ತದೆ.

ಮೋದಿ ದ್ವೇಷಿಸುವವರ ಸಮಸ್ಯೆ ಎಂದರೆ ಅವರಿಗೆ ಮೋದಿಯನ್ನು ದ್ವೇಷಿಸಲು ಗಟ್ಟಿಯಾದ ಕಾರಣಗಳಿಲ್ಲ. ಅಷ್ಟಾಗಿಯೂ ಮೋದಿ ಮಾಡಿದ್ದೆಲ್ಲಾ ಸರಿ, ಮೋದಿಯೇ ದೇವರು ಎಂದು ನಾನು ಹೇಳುವುದಿಲ್ಲ. ದೇಶ ಕಂಡ ಅಪ್ರತಿಮ ನಾಯಕ ಹೌದು, ಆದರೆ ಮೋದಿಯೊಳಗೂ ಒಬ್ಬ ಸಾಮಾನ್ಯ ರಾಜಕಾರಣಿಯೇ ಇರಬಹುದು. ಆದರೆ ಅದೆಲ್ಲೂ ಪ್ರಕಟವಾಗದಿದ್ದಲ್ಲಿ, ಅದೆಲ್ಲೂ ದೃಗ್ಗೋಚರವಾಗದಿದ್ದಲ್ಲಿ ಅದು ಇದೆಯೆಂದು ನಂಬುವುದು ಮೂರ್ಖತನ. ಮೋದಿ ದ್ವೇಷ ಮತ್ತು ಮೋದಿ ಪ್ರೇಮವನ್ನೇ ಕೆಲವರು ತಮ್ಮ ಐಡೆಂಟಿಟಿ - ಗುರುತು ಎಂದು ಭಾವಿಸುತ್ತಾರೆ. ಅದೇ ಕಾರಣಕ್ಕೆ ಮೋದಿ ಮಾಡಿದ್ದು ಸರಿ ಎಂದು ಒಬ್ಬರೆಂದರೆ ಇನ್ನೊಬ್ಬರು ನೀನು ಅಂಧಭಕ್ತ ಎಂದು ವಾದಕ್ಕಿಳಿಯುವುದು. ಇಬ್ಬರಿಗೂ ಅವರೇ ನಂಬಿಕೊಂಡ ಮೋದಿ ಹೌದೆಂದಾಗಬೇಕು.

ಯಾವುದೇ ದೇಶವಿರಲಿ, ರಾಜ್ಯವಿರಲಿ - ಅಲ್ಲಿನ ಪ್ರಜೆ ಅಲ್ಲಿನ ಸರ್ವೋಚ್ಚ ನಾಯಕನನ್ನು ಪ್ರೀತಿಸಬೇಕು, ಗೌರವಿಸಬೇಕು. ಅಮೆರಿಕಾವಿರಲಿ, ಭಾರತವಿರಲಿ, ಚೀನಾವಿರಲಿ- ದೇಶಪ್ರೇಮ ದೇಶ ಕಟ್ಟಲು ಅವಶ್ಯಕ. ಮಾತ್ರವಲ್ಲ ನಾವೇ ಕಟ್ಟಿಕೊಂಡ ನಮ್ಮ ವ್ಯವಸ್ಥೆಯ ಮೇಲಿನ ನಿರಂತರ ನಂಬಿಕೆ ಕೂಡ ಬಹಳ ಮುಖ್ಯ. ಮೋದಿ ಮಾಡಿದ್ದೆಲ್ಲಾ ಸರಿಯೇ? ಮಾಡುವುದಕ್ಕೆಲ್ಲ ದೈವಾಂಶ ಹೇರಿ ನೋಡಬೇಕೆ? ಇಲ್ಲ. ದೇಶ ನಿಲ್ಲುವುದೇ ಈ ಸಮತೋಲನದಲ್ಲಿ. ತಾತ್ವಿಕವಾಗಿ ಒಪ್ಪದವರು ಇನ್ನಷ್ಟು ಜಾಸ್ತಿಯಾಗಬೇಕು, ಮೋದಿಯನ್ನು ಪ್ರಶ್ನಿಸುತ್ತಲೇ ಇರಬೇಕು. ಮೋದಿಯ ನಂತರ ಇನ್ನೊಬ್ಬ ಆ ಸ್ಥಾನಕ್ಕೆ ಬಂದರೆ ಅವರನ್ನೂ ಪ್ರಶ್ನಿಸಬೇಕು, ಪ್ರೀತಿಸಬೇಕು, ಗೌರವಿಸಬೇಕು. ಇದೆಲ್ಲವೂ ಒಳ್ಳೆಯ ಪ್ರಜಾಪ್ರಭುತ್ವದ ಸ್ಪಷ್ಟ ಲಕ್ಷಣ!

ತೈಲದ ಮೇಲೆ ಯುದ್ಧದ ಪರಿಣಾಮ ತಡೆಯಲು ಸಾಧ್ಯವೇ?!

ಮನಿಮೈಂಡೆಡ್
ಕೇಶವ ಪ್ರಸಾದ್ ಬಿ.
vveditoped@gmail.com

ಪಶ್ಚಿಮ ಏಷ್ಯಾದಲ್ಲಿ ಇರಾನ್ ಮತ್ತು ಅಮೆರಿಕ-ಇಸ್ರೇಲ್ ನಡುವಣ ಯುದ್ಧ ಆರಂಭವಾದ ಮೊದಲ ವಾರ ಜನ ಇಷ್ಟೆಲ್ಲಾ ಸಂಕೀರ್ಣವಾದ ಇಂಧನ ಸಮಸ್ಯೆಗಳ ಸರಣಿಯನ್ನೇ ಎದುರಿಸಬೇಕಾಗುತ್ತದೆ ಎಂಬುದನ್ನೇ ಯೋಚಿಸಿರಲಿಲ್ಲ! ಈಗ ಯುದ್ಧ ಮೂರನೇ ತಿಂಗಳಿಗೆ ಕಾಲಿಟ್ಟಿದೆ. ದಿನಗಳು ಯುಗದಂತೆ ಭಾಸವಾಗುತ್ತಿವೆ. 'ಇರಾನ್- ಅಮೆರಿಕ ಏನಾದರೂ ಮಾಡಿಕೊಂಡಿರಲಿ, ಆದ್ರೆ ನಮಗೆ ತೈಲ ದರ, ಎಲ್ಪಿಜಿ ಸಮಸ್ಯೆ ತಂದು ಹಾಕಿದ್ರಲ್ಲಾ...' ಎಂದು ಬೇಸರದ ನಿಟ್ಟುಸಿರು ಬಿಟ್ಟವರೆಷ್ಟೋ ಮಂದಿ. ಈ ಯುದ್ಧದ ಬಿಸಿನೆಸ್‌ನಿಂದ ತೈಲದ ಆರ್ಥಿಕತೆಯನ್ನು ಸಂಪೂರ್ಣವಾಗಿ ಬೇರ್ಪಡಿಸಲು ಸಾಧ್ಯವೇ? ಎಂಬ ಪ್ರಶ್ನೆ ಈಗ ಕಾಡುತ್ತಿದೆ. ಆದರೆ ಅದು ಸಾಧ್ಯವಿಲ್ಲದಿದ್ದರೂ, ಹಲವಾರು ದೇಶಗಳು ಭಾಗಶಃ ಬೇರ್ಪಡಿಸಲು ನಿರಂತರ ಪ್ರಯತ್ನವನ್ನು ಮುಂದುವರಿಸಿವೆ!

ಅಮೆರಿಕವು ರಷ್ಯಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುವುದಕ್ಕೆ ಹಾಕಿದ್ದ ತನ್ನ ಅಂತಾರಾಷ್ಟ್ರೀಯ ನಿರ್ಬಂಧಗಳನ್ನು ಸದ್ಯಕ್ಕೆ ತೆರವುಗೊಳಿಸಿದೆ. ಬೆಲೆ ಏರಿಕೆಯನ್ನು ತಡೆಯಲು ಹಲವು ರಾಷ್ಟ್ರಗಳು ತಮ್ಮ ಸ್ಟ್ರಾಟಜಿಕ್ ಪೆಟ್ರೋಲಿಯಂ ರಿಸರ್ವ್‌ಗಳಿಂದ ತೈಲವನ್ನು ಬಿಡುಗಡೆಗೊಳಿಸುತ್ತಿವೆ. ಇರಾನ್ ಸಂಘರ್ಷ ತಾರಕಕ್ಕೇರಿದ್ದರೂ, ಇತ್ತೀಚೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾಕ್ಕೆ ಭೇಟಿ ಕೊಟ್ಟಿದ್ದಾರೆ. ಅಮೆರಿಕದ ಕಾವಲು, ನಿರ್ಬಂಧಗಳ ಹೊರತಾಗಿಯೂ ಇರಾನ್ ಮಾರುಕಟ್ಟೆಗೆ ತೈಲವನ್ನು ಪೂರೈಸುತ್ತಿದೆ. ಆದರೆ ಯುದ್ಧ ಹಾಗೂ 'ಸ್ಟ್ರೇಟ್ ಆಫ್ ಹಾರ್ಮುಜ್' ಜಲಮಾರ್ಗದ ಬಿಕ್ಕಟ್ಟಿನಿಂದಾಗಿ ಇರಾನ್‌ನ ತೈಲ ರಫ್ತು ಪ್ರಮಾಣ ಕುಸಿದಿದೆ. ಆದರೂ, ಒಂದಷ್ಟು ತೈಲವನ್ನು ಇರಾನ್ ಹೇಗೋ ಮಾರುಕಟ್ಟೆಗೆ ತಳ್ಳುತ್ತಲೇ ಇದೆ. ಹೀಗೆ ಸಾಗಿಸಲು ಹಳೆಯ ಹಡಗುಗಳ ಜಾಲವನ್ನು ಇರಾನ್ ಬಳಸುತ್ತದೆ. ಈ ಹಡಗುಗಳು ಸಮುದ್ರದಲ್ಲಿ ತಮ್ಮ ಜಿಪಿಎಸ್ ಆಫ್ ಮಾಡಿ, ಕತ್ತಲಿನಲ್ಲಿ ಒಂದು ಹಡಗಿನಿಂದ ಮತ್ತೊಂದಕ್ಕೆ ವರ್ಗಾಯಿಸಿ ತೈಲವನ್ನು ಸಾಗಿಸುತ್ತವೆ.

ಜಾಗತಿಕ ಇಂಧನ ಮಾರುಕಟ್ಟೆಗಳಲ್ಲಿ ನಿಸ್ಸಂದೇಹವಾಗಿ ದೊಡ್ಡ ಅನಿಶ್ಚಿತತೆ ಆವರಿಸಿದೆ. ಹಾರ್ಮುಜ್ ಜಲಸಂಧಿಯ ದಿಗ್ಬಂಧನವು ವಿಶ್ವದ ಐದನೇ ಒಂದು ಭಾಗದಷ್ಟು ತೈಲ ಮತ್ತು ದ್ರವೀಕೃತ ನೈಸರ್ಗಿಕ ಅನಿಲ ಪೂರೈಕೆಯನ್ನು ಸ್ಥಗಿತಗೊಳಿಸಿದೆ. ಇತಿಹಾಸದಲ್ಲೇ ಅತಿದೊಡ್ಡ ಇಂಧನ ಅಡಚಣೆಗೆ ಇದು ಕಾರಣವಾಗಿದೆ. ಕೋಟಿಗಟ್ಟಲೆ ಬ್ಯಾರೆಲ್‌ಗಳಿಗೂ ಹೆಚ್ಚು ತೈಲ ಈಗಾಗಲೇ ನಷ್ಟವಾಗಿದೆ. ಪೆಟ್ರೋಲ್- ಡೀಸೆಲ್ ಮತ್ತು ಜೆಟ್ ಇಂಧನದಂತಹ ಸಂಸ್ಕರಿಸಿದ ಉತ್ಪನ್ನಗಳ ದರಗಳೂ ಏರುಗತಿಯಲ್ಲಿವೆ. ಇರಾನ್ ಸಂಘರ್ಷದ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕೇವಲ ಕಚ್ಚಾ ತೈಲದ ಬೆಲೆ ಮಾತ್ರ ಏರಿಕೆಯಾಗಿಲ್ಲ, ಅದರ ಜೊತೆಗೆ 'ಸಲ್ಫರ್' (ಗಂಧಕ) ಪೂರೈಕೆಯಲ್ಲೂ ಭಾರಿ ವ್ಯತ್ಯಯ ಮತ್ತು ಕೊರತೆ ಎದುರಾಗಿದೆ. ಮೇಲ್ನೋಟಕ್ಕೆ ಕಚ್ಚಾ ತೈಲ ಮತ್ತು ಸಲ್ಫರ್‌ಗೆ ಏನು ಸಂಬಂಧ ಎಂದು ಅನ್ನಿಸಬಹುದು. ಆದರೆ ಇವೆರಡೂ ಒಂದಕ್ಕೊಂದು ಲಿಂಕ್ ಇದೆ. ಜಗತ್ತಿನಲ್ಲಿ ಬಳಸುವ ಎಲ್ಲ ಗಂಧಕವನ್ನು ಪ್ರತ್ಯೇಕವಾಗಿ ಗಣಿಗಳಿಂದ ತೆಗೆಯಲಾಗುತ್ತಿಲ್ಲ. ಬದಲಿಗೆ ರಿಫೈನರಿಗಳಲ್ಲಿ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲವನ್ನು ಸಂಸ್ಕರಿಸುವಾಗ ಉಪ ಉತ್ಪನ್ನವಾಗಿ ಗಂಧಕ ದೊರೆಯುತ್ತದೆ. ಹೀಗಾಗಿ ಇರಾನ್ ಮತ್ತು ಪಶ್ಚಿಮ ಏಷ್ಯಾದ ದೇಶಗಳಲ್ಲಿನ ಕಚ್ಚಾ ತೈಲ ಬೇಕು. ಅವುಗಳಲ್ಲಿ ಗಂಧಕದ ಪ್ರಮಾಣವೂ ಹೆಚ್ಚು.

ಆದರೆ ಹಾರ್ಮುಜ್ ಮೂಲಕ ಗಲ್ಫ್ ತೈಲದ ಪೂರೈಕೆಯೂ ಕುಸಿದಿರುವುದರಿಂದ ಸಲ್ಫರ್ ಉತ್ಪಾದನೆಯೂ ಜಾಗತಿಕ ಮಟ್ಟದಲ್ಲಿ ಕುಸಿದಿದೆ. ವಿಶ್ವದ ಅತಿ ದೊಡ್ಡ ಸಲ್ಫರ್ ರಫ್ತುದಾರರು ಯಾರೆಂದರೆ, ಯುಎಇ, ಸೌದಿ ಅರೇಬಿಯಾ, ಇರಾನ್ ಮತ್ತು ಕತಾರ್. ಭಾರತಕ್ಕೆ ಸಲ್ಫರ್ ಅತ್ಯಂತ ಅಗತ್ಯವಾದ ಕಚ್ಚಾವಸ್ತುವಾಗಿದೆ. ಇದರ ಕೊರತೆ ಭಾರತದ ಎರಡು ಪ್ರಮುಖ ವಲಯಗಳ ಮೇಲೆ ನೇರ ಪರಿಣಾಮ ಬೀರುತ್ತಿದೆ. ಒಂದು ರಸಗೊಬ್ಬರ ಉದ್ಯಮ, ಎರಡನೆಯದ್ದು ರಾಸಾಯನಿಕ ಮತ್ತು ಔಷಧ ವಲಯ. ಕೃಷಿಗೆ ಅತ್ಯಗತ್ಯವಾದ ಡಿಎಪಿ ಮತ್ತು ಎನ್‌ಪಿಕೆ ರಸಗೊಬ್ಬರಗಳನ್ನು ತಯಾರಿಸಲು ಸಲ್ಫ್ಯೂರಿಕ್ ಆಸಿಡ್ ಬೇಕು. ಇದೆಲ್ಲ ಯುದ್ಧದ ದುಷ್ಪರಿಣಾಮಗಳು. ನಂತರ ಏನಾಯಿತು? ತೈಲ ದರದ ಆಘಾತವನ್ನು ತಡೆಯಲು ಮತ್ತು ಮಾರುಕಟ್ಟೆಯನ್ನು ಸ್ಥಿರವಾಗಿಸಲು ಅಂತಾರಾಷ್ಟ್ರೀಯ ಇಂಧನ ಆಯೋಗದ ಸದಸ್ಯ ರಾಷ್ಟ್ರಗಳು ಸ್ಟ್ರಾಟಜಿಕ್ ರಿಸರ್ವ್‌ಗಳಿಂದ 164 ದಶಲಕ್ಷ ಬ್ಯಾರೆಲ್ ತೈಲ ಬಿಡುಗಡೆಗೊಳಿಸಿತು. ಸೌದಿ ಅರೇಬಿಯಾದ ಸೌದಿ ಅರಾಮ್ಕೊ ಮತ್ತು ಅಬುಧಾಬಿ ನ್ಯಾಶನಲ್ ಆಯಿಲ್ ಕಂಪನಿಯು ಜಲ ಮಾರ್ಗಗಳ ಬದಲಿಗೆ ಭೂಮಾರ್ಗದಲ್ಲಿ ಪೈಪ್ ಲೈನ್ ಮೂಲಕ ತೈಲವನ್ನು ಪೂರೈಸುತ್ತಿವೆ. ಆದರೂ ಇದು ಬೇಡಿಕೆಯನ್ನು ಪೂರ್ಣವಾಗಿ ನೀಗಿಸುತ್ತಿಲ್ಲ. ಹೀಗಾಗಿ ದರ ಇಳಿಯುತ್ತಿಲ್ಲ.

ಅಭಿವೃದ್ಧಿ ಹೊಂದಿರುವ ದೇಶಗಳು ಯುದ್ಧದ ಸಂದರ್ಭದಲ್ಲಿ ಇಂಧನ ಸುರಕ್ಷತೆಗೋಸ್ಕರ ಭೂಗತ ಪೆಟ್ರೋಲಿಯಂ ಸಂಗ್ರಹಾಗಾರಗಳನ್ನು ಈಗಾಗಲೇ ನಿರ್ಮಿಸಿವೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಕಟ್ಟಿವೆ. ಖಾಸಗಿ ರಿಫೈನರೀಸ್‌ಗಳಿಗೆ ಇವುಗಳನ್ನು ಲೀಸ್‌ಗೆ ನೀಡಿವೆ.

ಇರಾನ್ ವಾರ್ ನಡುವೆಯೇ ಒಪೆಕ್ ಒಕ್ಕೂಟದಿಂದ ಯುಎಇ ಹೊರಗೆ ಬಂದಿದೆ. ಒಕ್ಕೂಟದಲ್ಲಿ ನಾಲ್ಕನೇ ಅತಿ ದೊಡ್ಡ ತೈಲೋತ್ಪಾದಕ ರಾಷ್ಟ್ರ ಇದಾಗಿತ್ತು. ಇದರೊಂದಿಗೆ ತೈಲೋತ್ಪಾದನೆಗೆ ಒಪೆಕ್ ನಿರ್ಬಂಧಗಳ ರಗಳೆ ಇನ್ನು ಮುಂದೆ ಯುಎಇಗೆ ಇರುವುದಿಲ್ಲ. ತೈಲೋತ್ಪಾದನೆಯನ್ನು ದಿನಕ್ಕೆ 50 ದಶಲಕ್ಷ ಬ್ಯಾರೆಲ್‌ಗೆ ವೃದ್ಧಿಸಲು ಯುಎಇ ನಿರ್ಧರಿಸಿದೆ. ಜತೆಗೆ ಹಾರ್ಮುಜ್ ಜಲಸಂಧಿಯನ್ನು ಬೈಪಾಸ್ ಮಾಡಿ ಭಾರತಕ್ಕೆ ಹೆಚ್ಚು ತೈಲವನ್ನು ಪೂರೈಸಲು ಈಗ ಹಾದಿ ಸುಗಮವಾದಂತಾಗಿದೆ. ಏಕೆಂದರೆ ಯುಎಇನ ಹಬ್ ಶಾನ್ ಮತ್ತು ಫ್ಯುಜರಾಹ್ ಬಂದರಿನ ನಡುವೆ ಈಗಾಗಲೇ ಪೈಪ್ ಲೈನ್ ನಿರ್ಮಾಣವಾಗಿದೆ.

ಫ್ಯುಜರಾಹ್ ಬಂದರು ಅರಬ್ಬಿ ಸಮುದ್ರಕ್ಕೆ ನೇರವಾಗಿ ಮುಖ ಮಾಡಿದೆ. ಇಲ್ಲಿಂದ ಹೊರಡುವ ತೈಲ ಟ್ಯಾಂಕರ್‌ಗಳು ಯಾವುದೇ ಯುದ್ಧದ ವಲಯಕ್ಕೆ ಸಿಲುಕದೆ, ಅತ್ಯಂತ ಸುರಕ್ಷಿತವಾಗಿ ಭಾರತದ ಗುಜರಾತ್ ಅಥವಾ ಮಂಗಳೂರು ಕರಾವಳಿಯನ್ನು ತಲುಪಬಹುದು.

ಈ ನಡುವೆ ಬ್ರೆಜಿಲ್ ಕೂಡ ಏಷ್ಯಾದ ರಾಷ್ಟ್ರಗಳಿಗೆ ಕಚ್ಚಾ ತೈಲದ ರಫ್ತನ್ನು ಹೆಚ್ಚಿಸಲು ಉದ್ದೇಶಿಸಿದೆ. ಭಾರತವೂ ಬ್ರೆಜಿಲ್ ತೈಲವನ್ನು ಖರೀದಿಸುತ್ತಿದೆ. ಆಫ್ರಿಕನ್ ರಾಷ್ಟ್ರಗಳಾದ ನೈಜೀರಿಯಾ, ಅಂಗೋಲಾ ಮತ್ತು ಲಿಬಿಯಾ ಕೂಡ ಯುರೋಪ್, ಏಷ್ಯಾಕ್ಕೆ ಒಂದಷ್ಟು ತೈಲವನ್ನು ರಫ್ತು ಮಾಡುತ್ತಿವೆ.

ಇತ್ತೀಚೆಗೆ ಚೀನಾಕ್ಕೆ ಭೇಟಿ ನೀಡಿದ್ದ ಟ್ರಂಪ್ ಅವರು, ಅಲ್ಲಿನ ಸ್ವತಂತ್ರ 'ಟೀ ಪಾಟ್' ರಿಫೈನರೀಸ್‌ಗಳ ಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸುವ ಇಂಗಿತವನ್ನು ವ್ಯಕ್ತಪಡಿಸಿದ್ದಾರೆ. ಒಂದು ವೇಳೆ ಚೀನಾವು ಇರಾನ್ ಬದಲಿಗೆ ಅಮೆರಿಕದ ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರೆ, ಟೀ ಪಾಟ್ ರಿಫೈನರೀಸ್ ಮೇಲಿನ ನಿರ್ಬಂಧವನ್ನು ಟ್ರಂಪ್ ತೆರವುಗೊಳಿಸುವ ನಿರೀಕ್ಷೆ ಇದೆ. ಈ ಟೀ ಪಾಟ್ ರಿಫೈನರೀಸ್‌ಗಳು ಇರಾನಿನಿಂದ ಬರುವ ತೈಲವನ್ನು ಸಂಸ್ಕರಿಸುತ್ತವೆ. ಹೀಗಾಗಿ ಅಮೆರಿಕವು ಇವುಗಳ ಮೇಲೆ ನಿರ್ಬಂಧವನ್ನು ಹೇರಿದೆ. ರಷ್ಯಾದ ಕಚ್ಚಾ ತೈಲ ರಫ್ತು ಕೂಡ ಅಮೆರಿಕದ ನಿರ್ಬಂಧಗಳ ರಗಳೆ ಇಲ್ಲದೆ ಮಾರುಕಟ್ಟೆಗೆ ಲಭಿಸುತ್ತಿದೆ. ಚೀನಾ ಮತ್ತು ಭಾರತ ಇದನ್ನು ಹೆಚ್ಚು ಖರೀದಿಸುತ್ತಿವೆ. ಈ ಪರ್ಯಾಯ ವ್ಯವಸ್ಥೆಗಳು ಒಂದು ವೇಳೆ ಇರದಿದ್ದರೆ ಇಷ್ಟು ಹೊತ್ತಿಗೆ ತೈಲ ದರ ಇನ್ನೂ ಮೇಲಕ್ಕೇರುತ್ತಿತ್ತು ಎಂಬುದರಲ್ಲಿ ಅನುಮಾನವೇ ಬೇಡ. ಕೆಲ ವರದಿಗಳ ಪ್ರಕಾರ ಜೂನ್‌ನಲ್ಲಿ ಯುದ್ಧ ಸಮಾಪ್ತಿಯಾಗುವ ನಿರೀಕ್ಷೆ ಇದೆ. ಆದರೂ ಇಂಧನ ಮಾರುಕಟ್ಟೆ ಸ್ಥಿರತೆಗೆ ಬರಬೇಕಿದ್ದರೆ ಮತ್ತಷ್ಟು ಕಾಲಾವಕಾಶ ಬೇಕಾದೀತು.



ಯುದ್ಧ ಎನ್ನುವುದು ಜಾಗತಿಕ ಮಾರುಕಟ್ಟೆಗೆ ಜ್ವರದ ಹಾಗೆ ಪ್ರತಿಕೂಲ ಪ್ರಭಾವ ಬೀರುತ್ತದೆ. ಜ್ವರ ಬಂದಾಗ ಆರೋಗ್ಯ ಅಸ್ತವ್ಯಸ್ತವಾಗುವಂತೆ ತೈಲ ದರ ಹೆಚ್ಚಳವನ್ನು ಸಂಪೂರ್ಣವಾಗಿ ತಡೆಯುವುದು ಅಸಾಧ್ಯ. ಅದರಲ್ಲೂ ಪಶ್ಚಿಮ ಏಷ್ಯಾದಲ್ಲಿ ನಡೆಯುವ ಬಿಕ್ಕಟ್ಟು, ಸಂಘರ್ಷಗಳು ಈ ಹಿಂದಿನಿಂದಲೂ ತೈಲ ದರದ ಮೇಲೆ ನೇರವಾಗಿ ಪ್ರಭಾವ ಬೀರಿರುವುದನ್ನು ಗಮನಿಸಬಹುದು. ಹೀಗಾಗಿ ಪೆಟ್ರೋಲಿಯಂ ದಾಸ್ತಾನು ಕೇಂದ್ರಗಳ ಅಭಿವೃದ್ಧಿ, ಹಾರ್ಮುಜ್ ಹೊರತುಪಡಿಸಿ ಪರ್ಯಾಯ ಮಾರ್ಗಗಳು, ನವೀಕರಿಸಬಹುದಾದ ಇಂಧನ ಮೂಲಗಳ ಮೂಲಕ ಇಂಧನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗುತ್ತದೆ.

ಭಾರತದಲ್ಲಿ ಈಗ ನಡೆಯುತ್ತಿರುವ ಗಮನಾರ್ಹ ಬೆಳವಣಿಗೆಯಲ್ಲಿ ರಿಲಯನ್ಸ್ ಇಂಡಸ್ಟ್ರೀಸ್, ಅದಾನಿ ಸಮೂಹ ಎರಡೂ ದಿಗ್ಗಜ ಕಾರ್ಪೊರೇಟ್ ಕಂಪನಿಗಳು ಪರಮಾಣು ಇಂಧನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಭಾರಿ ಹೂಡಿಕೆಗೆ ನಿರ್ಧರಿಸಿವೆ. ರಿಲಯನ್ಸ್ ಇಂಡಸ್ಟ್ರೀಸ್ 7,200 ಮೆಗಾವ್ಯಾಟ್ ಪರಮಾಣು ವಿದ್ಯುತ್ ಯೋಜನೆಗೆ 2 ಲಕ್ಷ ಕೋಟಿ ರುಪಾಯಿಗಳನ್ನು ಹೂಡಿಕೆ ಮಾಡಲಿದೆ. ಅದಾನಿ ಪವರ್ 6,000 ಮೆಗಾವ್ಯಾಟ್ ಪ್ರಾಜೆಕ್ಟ್‌ಗಳಿಗೆ 1.5 ಲಕ್ಷ ಕೋಟಿ ರುಪಾಯಿ ಹೂಡಿಕೆ ಮಾಡಲು ಉದ್ದೇಶಿಸಿದೆ. ಸಾರ್ವಜನಿಕ ವಲಯದ ಎನ್‌ಟಿಪಿಸಿ 5,000 ಮೆಗಾವ್ಯಾಟ್ ಸಾಮರ್ಥ್ಯದ ಉತ್ಪಾದನೆಗೆ 2 ಲಕ್ಷ ಕೋಟಿ ರುಪಾಯಿ ಹೂಡಿಕೆ ಮಾಡಲಿದೆ.

ಭಾರತವು 2070ರ ವೇಳೆಗೆ ನೆಟ್-ಝೀರೋ (ಸಂಪೂರ್ಣ ಇಂಗಾಲ ಮುಕ್ತ) ದೇಶವಾಗುವ ಗುರಿ ಹೊಂದಿದೆ. ಕೇವಲ ಸೌರಶಕ್ತಿ ಅಥವಾ ಪವನ ಶಕ್ತಿಯಿಂದ 24 ಗಂಟೆಯೂ ನಿರಂತರ ವಿದ್ಯುತ್ ನೀಡಲು ಸಾಧ್ಯವಿಲ್ಲ. ಅದಕ್ಕೆ ಪರಮಾಣು ಶಕ್ತಿಯೇ ಅತ್ಯುತ್ತಮ ಪರ್ಯಾಯ. ಈ ನಿಟ್ಟಿನಲ್ಲಿ ಖಾಸಗಿ ಹೂಡಿಕೆಯ ಬೆಂಬಲ ಅವಶ್ಯವಾದ್ದರಿಂದ ರಿಲಯನ್ಸ್ ಮತ್ತು ಅದಾನಿಯಂತಹ ಕಾರ್ಪೊರೇಟ್ ದಿಗ್ಗಜರ ಹೂಡಿಕೆಯನ್ನು ಮುಕ್ತವಾಗಿ ಸ್ವಾಗತಿಸಲಾಗುತ್ತಿದೆ. 2025ರ ಕೇಂದ್ರ ಬಜೆಟ್‌ನಲ್ಲೂ ಸಣ್ಣ ರಿಯಾಕ್ಟರ್‌ಗಳ ಅಭಿವೃದ್ಧಿ ಮತ್ತು ಸಂಶೋಧನೆಗೆ ಸಾವಿರಾರು ಕೋಟಿ ರುಪಾಯಿಗಳನ್ನು ಮೀಸಲಿಡಲಾಗಿದೆ. ಸ್ಮಾಲ್ ಮಾಡ್ಯುಲರ್ ರಿಯಾಕ್ಟರ್‌ಗಳು ಭಾರತದ ಇಂಧನ ಅಗತ್ಯವನ್ನು ಪೂರೈಸುವಲ್ಲಿ ನಿರ್ಣಾಯಕ ಪಾತ್ರ ವಹಿಸಲಿವೆ. ಸಂಪ್ರದಾಯಿಕ ಪರಮಾಣು ಸ್ಥಾವರಗಳು ದೈತ್ಯ ಗಾತ್ರದಲ್ಲಿರುತ್ತವೆ. ಅವುಗಳನ್ನು ನಿರ್ಮಿಸಲು ಸಾವಿರಾರು ಎಕರೆ ಜಾಗ, ಕೋಟ್ಯಂತರ ರೂಪಾಯಿ ವೆಚ್ಚ ಮತ್ತು ಹಲವು ವರ್ಷಗಳ ಸಮಯ ಬೇಕಾಗುತ್ತದೆ. ಆದರೆ ಎಸ್‌ಎಂಆರ್‌ಗಳು ಹಾಗಲ್ಲ, ಹೆಸರೇ ಸೂಚಿಸುವಂತೆ ಇದು ಸಣ್ಣ ಗಾತ್ರದ್ದು. ಇಡೀ ರಿಯಾಕ್ಟರ್ ಅನ್ನು ಒಂದೇ ಕಡೆ ಕಟ್ಟುವ ಬದಲು, ಅದರ ಬಿಡಿಭಾಗಗಳನ್ನು ಕಾರ್ಖಾನೆಯಲ್ಲೇ ತಯಾರಿಸಿ ನಂತರ ಅದನ್ನು ಬೇಕಾದ ಸ್ಥಳಕ್ಕೆ ಸಾಗಿಸಿ ತ್ವರಿತವಾಗಿ ಜೋಡಿಸಬಹುದು! ಇವೆಲ್ಲವನ್ನೂ ಮಾಡಿದಾಗ ಯುದ್ಧ ಎಲ್ಲೇ ನಡೆದರೂ, ಇಂಧನ ಬಿಕ್ಕಟ್ಟನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಎದುರಿಸಬಹುದು.

ಭಟ್ಟರ್ ಸ್ನ್ಯಾಕ್

- **ಸಂಡೂರು ಭೋಗ ಶೆಟ್ಟಿ, ಮೈಸೂರು**
ಭಟ್ರೇ, ಸೋಮವಾರ ಯಾಕೆ ವಾರದಲ್ಲಿ ಎಲ್ಲರಿಗೂ ಅತಿ ದೊಡ್ಡ ವಿಲನ್?
– **ಭಾನುವಾರದ ಕನಸು ಮುರಿದು ಆಫೀಸಿನ ಕಹಿಯನ್ನ ನೆನಪಿಸುತ್ತೆ ಅಂತ!**

- **ಅನಂತ, ಸಾಗರ**
ಭಟ್ರೇ, ಗೂಗಲ್ ಮ್ಯಾಪ್ ಯಾಕೆ ಕೆಲವೊಮ್ಮೆ ತಪ್ಪು ದಾರಿ ತೋರಿಸುತ್ತದೆ?
– **ಅದಕ್ಕೂ ಪಾಪ, ನಮ್ಮ ಊರಿನ ಗುಂಡಿಗಳ ಬಗ್ಗೆ ಐಡಿಯಾ ಇರಲ್ಲ!**

- **ವಿನೋದ ಸುಳ್ಯ, ಸುಳ್ಯ**
ಭಟ್ರೇ, ಹೋಟೆಲ್ ಮೆನು ಕಾರ್ಡ್‌ನಲ್ಲಿ ಬೆಲೆ ಯಾಕೆ ಬಲಗಡೆ ಇರುತ್ತೆ?
– **ಎಡಗಡೆ ಇರೋ ಪದಾರ್ಥ ನೋಡಿ ಖುಷಿ ಪಡಲಿ, ಬೆಲೆ ನೋಡಿ ಸುಮ್ಮನಾಗಲಿ ಅಂತ!**

- **ಪಾಂಡು ಕೆ., (ಇಮೇಲ್ ಮೂಲಕ)**
ಭಟ್ರೇ, ಹಳೆ ಕಾಲದ ಪ್ರೇಮಕ್ಕೂ ಈಗಿನ ಪ್ರೇಮಕ್ಕೂ ಏನು ವ್ಯತ್ಯಾಸ?
– **ಅವತ್ತು ರಕ್ತದಲ್ಲಿ ಪತ್ರ ಬರೆಯುತ್ತಿದ್ದರು, ಇವತ್ತು ಮಿಸ್ಡ್ ಕಾಲ್ !**

- **ನಿರ್ಮಲ ಸಂಡೂರು, ಭಾಗ್ಯನಗರ**
ಭಟ್ರೇ, ದೇವಸ್ಥಾನದ ಮುಂದೆ ಚಪ್ಪಲಿ ಯಾಕೆ ಕಳ್ಳತನವಾಗುತ್ತದೆ?
– **ನಾವು ದೇವರಿಗೆ ಹರಕೆ ಕಟ್ಟಿರಲ್ಲ, ಚಪ್ಪಲಿ ಕಳ್ಳ ದೇವರಿಗೆ ಲಂಚ ಕೊಟ್ಟಿರುತ್ತಾನೆ!**

- **ರೂಪಾ ಬದಿಯಡ್ಕ, ಮಂಗಳೂರು**
ಭಟ್ರೇ, ಇಂದಿನ ಕಾಲದಲ್ಲಿ 'ಸತ್ಯ' ಮತ್ತು 'ಸುಳ್ಳು' ನಡುವಿನ ವ್ಯತ್ಯಾಸವೇನು?
– **ಸತ್ಯಕ್ಕೆ ಯಾವಾಗಲೂ ಸಾಕ್ಷಿ ಬೇಕು, ಆದರೆ ಸುಳ್ಳಿಗೆ ಸಾಕ್ಷಿಯ ಅಗತ್ಯವೇ ಇಲ್ಲ!**

- **ಅರವಿಂದ ಶೆಟ್ಟಿ, ಬ್ರಹ್ಮಾವರ**
ಭಟ್ರೇ, ಇಂದಿನ ದಿನಗಳಲ್ಲಿ 'ಮೌನ'ಕ್ಕೆ ಇರುವ ಬೆಲೆ ಏನು?
– **ಮೌನವು ಬಂಗಾರ. ಆದರೆ ಇಂದಿನ ಸೋಶಿಯಲ್ ಮೀಡಿಯಾ ಯುಗದಲ್ಲಿ, ಮೌನವಾಗಿದ್ದರೆ 'ಆಫ್ ಲೈನ್' ಆಗಿದ್ದೀಯ ಎಂದರ್ಥ!**

- **ಗಣೇಶ ಸಾಲಿಯಾನ, ಶಿವಮೊಗ್ಗ**
ಭಟ್ರೇ, ಒಬ್ಬ ಬರಹಗಾರನಿಗೆ ಅತಿ ದೊಡ್ಡ ಶತ್ರು ಯಾರು?
– **ಗಂಭೀರವಾಗಿ ಬರೆಯುತ್ತಿರುವಾಗ ಪಾಪ್-ಅಪ್ ಆಗುವ 'ನೋಟಿಫಿಕೇಶನ್‌ಗಳು'!**

- **ರಾಜು, ಅಂಕೋಲಾ**
ಭಟ್ರೇ, ಇಂದಿನ ಕಾಲದಲ್ಲಿ ದೀರ್ಘಕಾಲದ ಸ್ನೇಹ ಎಂದರೇನು?
– **ವರ್ಷಕ್ಕೊಮ್ಮೆ ಫೇಸ್‌ಬುಕ್‌ನಲ್ಲಿ 'ಹ್ಯಾಪಿ ಬರ್ತ್ಡೇ' ಎಂದು ಮೆಸೇಜ್ ಮಾಡಿ, ನಂತರದ 364 ದಿನಗಳು ಪರಸ್ಪರರ ಪ್ರೊಫೈಲ್ ಅನ್ನು ಮೌನವಾಗಿ ಗಮನಿಸುವುದು!**

- **ಸತ್ಯೇಶ ರೆಡ್ಡಿ, ಬಾಣಸವಾಡಿ**
ಭಟ್ರೇ, ಮನುಷ್ಯನ ಅಹಂಕಾರ ಮತ್ತು ಗೂಗಲ್ ಮ್ಯಾಪ್ಸ್ ನಡುವಿನ ಸಾಮ್ಯತೆ?
– **ಎರಡೂ ಕೂಡ ನಿಮಗೆ ದಾರಿ ತಪ್ಪಿಸಿದರೂ, 'ನಾನೇ ಸರಿಯಾದ ದಾರಿಯಲ್ಲಿದ್ದೇನೆ' ಎಂದು ಅಷ್ಟೇ ಆತ್ಮವಿಶ್ವಾಸದಿಂದ ಹೇಳುತ್ತವೆ!**

ಅಬೋಲಿ ಹೂವುಗಳನ್ನು ಬೆಳೆಯುವ ಹಳ್ಳಿ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ನಮ್ಮ ಹಳ್ಳಿಗಳ ಹೆಸರುಗಳ ಮೂಲವು ಎಂದಿಗೂ ಕುತೂಹಲ ಹುಟ್ಟಿಸುವಂತಹದ್ದು; ಒಂದು ಊರಿನ ಅಥವಾ ಜಾಗದ ಹೆಸರಿನ ಹಿನ್ನೆಲೆಯನ್ನು ಹುಡುಕುತ್ತಾ ಹೋಗುವ ಪಯಣವು, ಕೆಲವು ಬಾರಿ ನಿಜಕ್ಕೂ ರೋಮಾಂಚಕ. ಪುರ, ಪಟ್ಟಣ ಎಂಬ ಪದಗಳನ್ನು ಹೊಂದಿರುವ ಊರುಗಳು ಸಾಕಷ್ಟು ಆಧುನಿಕ ಮತ್ತು ಅವುಗಳ ಹೆಸರು ಹೇಗೆ ಬಂತು ಎಂಬುದಕ್ಕೆ ಐತಿಹಾಸಿಕ ದಾಖಲೆಗಳೇ ಇವೆಯಾದ್ದರಿಂದ, ಅದನ್ನು ಬಗೆಯುವದರಲ್ಲಿ ಅಂತಹ ರೋಚಕತೆ ಇಲ್ಲ; ಹಳ್ಳಿಗಳ ಹೆಸರುಗಳ ಹಿಂದೆ ಬಹು ಕುತೂಹಲಕಾರಿ ವಿಚಾರಗಳು ಅಡಗಿರುತ್ತವೆ. ಈ ಹೆಸರುಗಳನ್ನು ಅರಸುತ್ತಾ ಹೊರಡುವುದು ಅದೆಷ್ಟು ಚೇತೋಹಾರಿ ಚಟುವಟಿಕೆ ಎಂದರೆ, ಈ ಕುರಿತು ಹಲವು ಬಾರಿ ನಾನು ಬರೆದದ್ದುಂಟು.

ಆದರೆ, ಸ್ಥಳನಾಮಗಳ ಇತಿಹಾಸವನ್ನು ಬಗೆಯುವುದು ಅಷ್ಟೊಂದು ಸುಲಭವೇನಲ್ಲ; ಶತಶತಮಾನಗಳ ಹಿಂದಿನ ಹೆಸರುಗಳು ಹುಟ್ಟಿಕೊಳ್ಳಲು ಆಗ ಇದ್ದ ಕಾರಣ ಅಥವಾ ಹಿನ್ನೆಲೆಯು, ಈಗಿನ ತಲೆಮಾರಿಗೆ ಪೂರ್ತಿಯಾಗಿ ಮರೆತೇಹೋಗಿರಬಹುದು. ಅನಾದಿ ಕಾಲದಿಂದ ಸ್ಥಳೀಯರಿಗೆ ನೆನಪಿರುವ ಹೆಸರಿನ ನಿಷ್ಪತ್ತಿಯನ್ನು, ಈಚಿನ ತಲೆಮಾರು ಹೊಸದಾಗಿ ತಿಳಿಯುವ ಪ್ರಕ್ರಿಯೆಯೂ ಹೌದು. ಎಷ್ಟೋ ಬಾರಿ ಸರಳ ಎನಿಸುವ ಊರಿನ ಹೆಸರು, ಬೇರೊಂದೇ ಪದನಿಷ್ಪತ್ತಿಯನ್ನು ಹೊಂದಿರಬಹುದು; ಇನ್ನು ಕೆಲವು ಬಾರಿ ತೀರ ಸಂಕೀರ್ಣ ಪದನಿಷ್ಪತ್ತಿ ಎಂದು ಮೇಲ್ನೋಟಕ್ಕೆ ತೋರುವ ಹೆಸರುಗಳ ಅರ್ಥ ಹುಡುಕಿದರೆ ಸರಳ ಎನಿಸಬಹುದು. ಆದರೆ, ಕೆಲವು ಊರುಗಳ ಹೆಸರಿನ ಮೂಲ ಅದೆಷ್ಟು ಪುರಾತನ ಅಥವಾ ಅಪಭ್ರಂಶಗೊಂಡಿದೆ ಎಂದರೆ, ಜಪ್ಪಯ್ಯ ಎಂದರೂ ಸ್ಪಷ್ಟ ಅರ್ಥ ಹೊಳೆಯದೇ ಇರಬಹುದು.

ನಮ್ಮೂರಿನ ಹತ್ತಿರ 'ಜನ್ನಾಡಿ' ಎಂಬ ಹಳ್ಳಿಯಿದೆ; ಮೇಲ್ನೋಟಕ್ಕೆ ಅದು 'ಜೈನರು ಇದ್ದ ಜಾಗ' ಎಂಬ ಅರ್ಥ ಕೊಡುತ್ತದೆ. ನಮ್ಮ ರಾಜ್ಯವನ್ನು, ಕರಾವಳಿಯ ಭಾಗಗಳನ್ನು ಜೈನ ಅರಸರು, ಪಾಳೆಗಾರರು, 'ಒಡೆಯರುಗಳು' ಸಾಕಷ್ಟು ದೀರ್ಘಕಾಲ ಆಳಿದ್ದಾರೆ. ಆದ್ದರಿಂದ ಜೈನರ ಮನೆಗಳು ಅಲ್ಲಿದ್ದವು ಎನ್ನಲು ಅಡ್ಡಿಲ್ಲ. ಕುಂದಗನ್ನಡದಲ್ಲಿ 'ಅಡಿ' ಎಂದರೆ ಒಂದು ಜಾಗ, ತಾಣ ಎಂಬರ್ಥ; ಆದರೆ ಅಲ್ಲಿ ಈಗ ಜೈನರು ಇಲ್ಲ– ಆ ಸುತ್ತಲೆಲ್ಲೂ ಇಂದು ಜೈನರ ವಸತಿ ಇಲ್ಲ. ಹಿಂದೆ ಅಲ್ಲಿದ್ದ ಜೈನರು ಆ ಪ್ರದೇಶವನ್ನು ತೊರೆದು ಹೋಗಿರಬಹುದು ಅಥವಾ ಸುತ್ತಲೂ ಇದ್ದ ಪ್ರಭಾವಿ ಧರ್ಮಕ್ಕೆ ಮತಾಂತರ ಹೊಂದಿರಬಹುದು – ಹೊಯ್ಸಳ ರಾಜ ಬಿಟ್ಟಿದೇವನು ಜೈನ ಮತ ತೊರೆದು, ರಾಮಾನುಜಾಚಾರ್ಯರ ಪ್ರಭಾವದಿಂದ ವೈಷ್ಣವ ಮತಕ್ಕೆ ಸೇರಿಕೊಂಡ ಪ್ರಖ್ಯಾತ ಉದಾಹರಣೆಯೇ ಇದೆಯಲ್ಲ – ಆ ಮಹಾರಾಜನ ಜತೆಯಲ್ಲೇ, ಸಾಕಷ್ಟು ಸಂಖ್ಯೆ ಅಧಿಕಾರಿಗಳು, ಸೈನಿಕರು, ಜನಸಾಮಾನ್ಯರು ಸಹ ಜೈನ ಮತ ತೊರೆದಿದ್ದರು. ಯಾರಿಗ್ಗೊತ್ತು, ಆ ಸಮಯದಲ್ಲೇ ಈ 'ಜೈನಡಿ' (ಜನ್ನಾಡಿ) ಯಲ್ಲಿದ್ದ ಜೈನರು ಬದಲಾಗಿರಲೂಬಹುದು ಅಥವಾ ಬೇರಾವುದೋ ಸಂದರ್ಭದಲ್ಲಿ ಇಂತಹ ಬದಲಾವಣೆ ಆಗಿರುವ ಸಾಧ್ಯತೆ ಇದೆ; ಹಳ್ಳಿಯ ಹೆಸರು ಮಾತ್ರ ಜನ್ನಾಡಿಯಾಗಿ ಈಗಲೂ ಉಳಿದುಕೊಂಡಿದೆ.

'ಜನ್ನಾಡಿ'ಯ ಈಶಾನ್ಯ ದಿಕ್ಕಿಗೆ ಸಾಗಿದರೆ 'ಸೌಡ' ಎಂಬ ಹಳ್ಳಿಯಿದೆ; ಆ ಹೆಸರಿನ ಮೂಲವನ್ನು ತಿಳಿದುಕೊಳ್ಳಲು ನನ್ನಿಂದ ಸಾಧ್ಯವಾಗಲಿಲ್ಲ; ಬಹುಷಃ ಅಲ್ಲಿನ ಶಾಸನಗಳನ್ನು ಅಧ್ಯಯನ ಮಾಡಿದರೆ, ಸ್ಥಳೀಯರ ಜತೆ ಒಡನಾಡಿದರೆ ಆ ಊರಿನ ಹೆಸರು ಹೇಗೆ ಬಂತು ಎಂಬುದನ್ನು ತಿಳಿಯಬಹುದೇನೋ. ಏಕೆಂದರೆ, ಸೌಡವು ಬಹು ಪುರಾತನ ಹಳ್ಳಿ; ಅಲ್ಲಿ ಇಂದಿಗೂ ಹಲವು ದೇವಾಲಯಗಳು ಮತ್ತು ಕೆಲವು ಶಾಸನಗಳು ಇವೆ. ಕೆಲವು ಶತಮಾನಗಳ ಹಿಂದೆ ಕರಾವಳಿಯಲ್ಲಿ ಸಂಬಾರಪದಾರ್ಥಗಳ ವ್ಯಾಪಾರ ಬಿರುಸಾಗಿದ್ದಾಗ, ಸೌಡದ ತನಕ ದೊಡ್ಡ ಗಾತ್ರದ ದೋಣಿಗಳು ಬರುತ್ತಿದ್ದವು; ಪಕ್ಕದಲ್ಲೇ ವಾರಾಹಿ ನದಿ ಹರಿಯುತ್ತದೆ. ಆ ವಾರಾಹಿ ನದಿಯನ್ನು ದಾಟಿದರೆ ದೊರೆಯುವ 'ಶಂಕರನಾರಾಯಣ' ಎಂಬ ಊರಿನ ಹೆಸರು ಮಾತ್ರ ಬಹಳ ಕುತೂಹಲಕಾರಿ. ಎರಡು ಹೆಸರುಗಳನ್ನು ಸಂಯೋಜಿಸಿದಾಗ ಉಂಟಾದ ಶಬ್ದವೇ ಆ ಊರಿನ ಹೆಸರು ಎಂದು ಹೊಸದಾಗಿ ಕೇಳಿದವರಿಗೂ ಅರ್ಥವಾಗುವಷ್ಟು ಸ್ಪಷ್ಟವಾಗಿದೆ ಆ ಹೆಸರು – ಅದೂ ನಿಜವೇ – ಶಂಕರ ಮತ್ತು ನಾರಾಯಣ (ಹರಿಹರ) ದೇವರುಗಳ ದೇಗುಲ ಅಲ್ಲಿರುವುದರಿಂದಾಗಿ 'ಶಂಕರನಾರಾಯಣ' ಎಂಬ ಹೆಸರು ಅಧಿಕೃತ ದಾಖಲೆಗಳಲ್ಲಿ ನಮೂದಾಗಿ, ಪ್ರಚುರಗೊಂಡಿದೆ. ಆದರೆ ಅಲ್ಲಿಗೆ ಹಿಂದೆ ಬೇರೊಂದೇ ಹೆಸರಿತ್ತು! ಮೂರು ರಸ್ತೆ ಕೂಡುವ ಆ ಜಾಗಕ್ಕೆ 'ಗೋಳಿ ಕಟ್ಟೆ' ಎಂಬ ಧ್ವನಿಪೂರ್ಣ ಹೆಸರಿತ್ತು. ಗೋಳಿ ಮರ (ಗೋಣಿ ಮರ)ವು ಅಲ್ಲಿ ಪ್ರಧಾನವಾಗಿದ್ದು, ಅಲ್ಲಿ ಸಂತೆಯೂ ನಡೆಯುತ್ತಿದ್ದುದರಿಂದ, ಆ ಹೆಸರು ಜನಪದರ ಬಾಯಲ್ಲಿ ರೂಪುಗೊಂಡಿರಬೇಕು. ಆದರೆ, ಹೆಚ್ಚು ಪ್ರಸಿದ್ಧಿ ಪಡೆದ ಶಂಕರ-ನಾರಾಯಣ ದೇವರುಗಳ ಪ್ರಭಾವದಿಂದಾಗಿ, ಗೋಳೀಕಟ್ಟೆ ಎಂಬ ಪುರಾತನ ಹೆಸರು ಕ್ರಮೇಣ ಮರೆಯಾಯಿತು.

ಅಲ್ಲಿರುವ ಶಂಕರನಾರಾಯಣ ದೇಗುಲವೂ ಬಹಳ ಪುರಾತನ ಎಂಬುದರಲ್ಲಿ ಸಂಶಯವಿಲ್ಲ. ಕೆರೆಯ ಮೇಲೆ ದೇವತೆಗಳಿಂದ ನಿರ್ಮಾಣಗೊಂಡ ದೇಗುಲ ಎಂಬ ವಿಶೇಷಣ ಹೊಂದಿರುವ ಆ ದೇಗುಲ ಪುರಾತನ ಕಾಲದಿಂದಲೂ ಇದೆ; ಪ್ರಾಗೈತಿಹಾಸಿಕ ಕಾಲದ ಕೆಲವು ಕುರುಹುಗಳನ್ನೊಳಗೊಂಡ ಕಥೆಯೊಂದು ಸಹ ಆ ದೇಗುಲದ ಮೂಲದೊಂದಿಗೆ ಗುರುತಿಸಿಕೊಂಡಿದೆ. ಬೆಟ್ಟದ ಮೇಲೆ ಒಂದು ಗುಹೆಯಲ್ಲಿ ವಾಸವಾಗಿದ್ದ ದೇವರು, ಅಲ್ಲಿಂದ ಕೆಳಗೆ ಹಾರಿದನು ಎಂಬ ಐತಿಹ್ಯವಿದೆ; ಮತ್ತು ಆ ರೀತಿ ಮೇಲಿನಿಂದ ಕೆಳಗೆ ದೇವರು ಹಾರಿದಾಗ, ಆತನ ಹೆಜ್ಜೆಗುರುತು ದೇಗುಲದ ಎದುರಿನ ವಿಶಾಲ ಬಂಡೆ ಹಾಸಿನ ಮೇಲೆ ಒಡಮೂಡಿದೆ ಎಂಬ ನಂಬಿಕೆ. ಆ ಬಂಡೆಯ ಹಾಸಿನ ಮೇಲೆ ಒಟ್ಟು ಎರಡು ಹೆಜ್ಜೆಗುರುತುಗಳು ಕಲ್ಲಿನ ಮೇಲೆ ಸ್ಪಷ್ಟವಾಗಿ ಮೂಡಿವೆ; ಅವು ಹೇಗೆ ಉಂಟಾದವು ಎಂದು ಶಿಲಾತಜ್ಞರು ಗುರುತಿಸಿದರೆ, ಬೇರೊಂದೇ ಕಥೆ ತೆರೆದುಕೊಂಡೀತು! ಬೆಟ್ಟದ ಮೇಲೆ ಮೂಲ ಶಂಕರನಾರಾಯಣದ ಸ್ಥಳ ಇಂದಿಗೂ ಇದೆ. ಸ್ಥಳೀಯ ಜನರ ಬೇಡಿಕೆಯ ಮೇರೆಗೆ, ದೇವರು ಮೇಲಿನಿಂದ ಕೆಳಗೆ ನೆಗೆದು, ಈಗಿರುವ ದೇಗುಲದಲ್ಲಿ ನೆಲೆನಿಂತರು ಎಂಬ ನಂಬಿಕೆ.

ಅಲ್ಲಿಂದ ಹರದಾರಿ ದೂರದ ಸುತ್ತಳತೆಯಲ್ಲಿ, ಒಟ್ಟು ಐದು ಶಂಕರನಾರಾಯಣ (ಹರಿಹರ) ದೇಗುಲಗಳಿದ್ದು, ಬಹು ಹಿಂದೆ ಉದ್ಭವಿಸಿರಬಹುದಾದ ಪಂಥ ಸಂಘರ್ಷ ಮರೆಸಲು ರೂಪುಗೊಂಡ ಸಮನ್ವಯದ ಪ್ರಯತ್ನವನ್ನು ನೆನಪಿಸುತ್ತದೆ. ಕರಾವಳಿಯ ಸಪ್ತ ಪುರಾತನ ಕ್ಷೇತ್ರಗಳಲ್ಲಿ, ಗೋಕರ್ಣವನ್ನೂ ಒಳಗೊಂಡು ಈ ಕ್ಷೇತ್ರಕ್ಕೆ ಸ್ಥಾನವಿದೆ ಎಂದ ಮೇಲೆ, ಕನಿಷ್ಠ 2000 ವರ್ಷಗಳಿಗೂ ಹಿಂದಿನ ಇತಿಹಾಸ ಈ ಸ್ಥಳಕ್ಕಿದೆ ಎನ್ನಬಹುದು. ಆದರೆ, ಹಲವು ಹಕ್ಕಿಗಳಿಗೆ ಆಶ್ರಯ ನೀಡುವ ಗೋಳಿ ಮರವನ್ನು ನೆನಪಿಸುವ 'ಗೋಳಿಕಟ್ಟೆ' ಎಂಬ ಸುಂದರ ಹೆಸರು ಮಾತ್ರ ಇಂದಿಗೂ ಮುಂದುವರಿಯಬೇಕಿತ್ತು ಎಂಬ ಭಾವ ನನ್ನ ಮನದಾಳದಲ್ಲಿ ಕುಳಿತುಬಿಟ್ಟಿದೆ.

ಕೆಲವು ಊರುಗಳ ಹೆಸರನ್ನು ಸ್ಪಷ್ಟವಾಗಿ ವಿವರಿಸಿ ಹೇಳುವುದು ಕಷ್ಟ ಎಂಬುದಕ್ಕೆ ಒಂದು ಉದಾಹರಣೆ ಎಂದರೆ, ನಮ್ಮ ಹಳ್ಳಿಯಾದ ಹಾಲಾಡಿ. 'ಅಡಿ' ಎಂದರೆ ಸ್ಥಳ ಎಂಬುದರಲ್ಲಿ ಅನುಮಾನವಿಲ್ಲ; ಆದರೆ ಹೆಸರಿನ ಮೊದಲ ಭಾಗವನ್ನು ವಿಭಿನ್ನವಾಗಿ ಅರ್ಥೈಸಲಾಗಿದೆ. 'ಹಾಲು' ಇರುವ 'ಅಡಿ' (ಸ್ಥಳ) ಎಂದು ಅಭಿಮಾನದಿಂದ ಈಚೆಗೆ ಕೆಲವರು ಪದನಿಷ್ಪತ್ತಿಯನ್ನು ಮಾಡಿದ್ದಾರೆ; ಆದರೆ, ಹಿಂದೆ 'ಹಾಳು' 'ಅಡಿ' ಎಂದು ಕೆಲವರು ಅರ್ಥೈಸಿದ್ದುಂಟು – ಅಂದರೆ, ಜನರು ವಾಸವಿಲ್ಲದೇ ಇರುವ, ಹಾಳು ಬಿದ್ದ ಜಾಗ ಎಂದು. ಆದರೆ, ಇದನ್ನು ಎಲ್ಲರೂ ಒಪ್ಪುತ್ತಿಲ್ಲ; ಏಕೆಂದರೆ, ಅಲ್ಲಿ ಹಾಳು ಬಿದ್ದ ಐತಿಹಾಸಿಕ ಜಾಗಗಳನ್ನು ಗುರುತಿಸಲು ಸಾಧ್ಯವಾಗಿಲ್ಲ, ಬದಲಿಗೆ ಎಲ್ಲಾ ಕಡೆ, ಕಾಡು, ಗುಡ್ಡಗಳೇ ಇವೆ. ಬಹು ಹಿಂದೆ ಬಾರಕೂರು ಸೀಮೆಯಲ್ಲಿ 'ಹಲ'ರು ಪ್ರಮುಖರು ಎನಿಸಿದ್ದರು; ವ್ಯಾಪಾರದಲ್ಲಿ ಮುಂಚೂಣಿಯಲ್ಲಿದ್ದ 'ಹಲ'ರು, ಇಲ್ಲಿ ತಮ್ಮ ಗೋದಾಮುಗಳನ್ನು ಸ್ಥಾಪಿಸಿರಬಹುದು; ಏಕೆಂದರೆ, ಇಲ್ಲಿನ ನದಿಯನ್ನು ದಾಟಲು ದೋಣಿಯ ಅಗತ್ಯವಿತ್ತು ಮತ್ತು ನದಿಯನ್ನು ದಾಟಿದರೆ ಬಿದನೂರು ನಗರ, ಮೇಗರವಳ್ಳಿ ಮೊದಲಾದ ಘಟ್ಟದ ಮೇಲಿನ ವ್ಯಾಪಾರಿ ಸ್ಥಳಗಳನ್ನು ತಲುಪಬಹುದಾಗಿತ್ತು. ಆದ್ದರಿಂದ, ಹಲ ಎಂಬ ವ್ಯಾಪಾರಿಗಳು ಬಂದು ತಂಗಿದ ಜಾಗವೇ ಹಾಲಾಡಿ ಎಂದು ಅರ್ಥೈಸಿದರೆ, ತರ್ಕಬದ್ಧವಾಗುತ್ತದೆ. ಈ ಕುರಿತು ಭಾಷಾ ತಜ್ಞರು ಮತ್ತು ಇತಿಹಾಸ ತಜ್ಞರು ಇನ್ನಷ್ಟು ಸಂಶೋಧನೆ ಮಾಡಿ, ಬೆಳಕು ಚೆಲ್ಲಬೇಕಾಗಿದೆ.

ಇಲ್ಲಿಗೆ ಎರಡು ಕಿ.ಮೀ. ದೂರದಲ್ಲಿ, ಅಂದರೆ ನಮ್ಮ ಮನೆಯ ಹತ್ತಿರವೇ ಇರುವ 'ಕೋಟೆಹಕ್ಲು' ಎಂಬ ಜಾಗಕ್ಕೆ ಇನ್ನೂ ಪುರಾತನವಾದ ಇತಿಹಾಸ ಇದೆ. ಬಾರಕೂರು ಅರಸರ ಆಳ್ವಿಕೆಯ ವ್ಯಾಪ್ತಿಯಲ್ಲಿ, 'ಮುದ್ದಳ' ಎಂಬಾತನು ಇಲ್ಲಿ ಆಳ್ವಿಕೆ ನಡೆಸುತ್ತಿದ್ದನಂತೆ. ಆದ್ದರಿಂದ ಈ ಪ್ರದೇಶಕ್ಕೆ ಮುದುವೇರಿ (ಮುದುವರಿ) ಅಥವಾ ಮುದೂರಿ ಎಂಬ ಹೆಸರು ಬಂದಿದೆ. ಇಲ್ಲಿರುವ ಒಂದು ಶಾಸನದಲ್ಲಿ ಈ ಪ್ರದೇಶವನ್ನು ಮುದುವರಿ ಎಂದೇ ಕರೆಯಲಾಗಿದೆ. ಈ ರೀತಿ ಮುದುವರಿ ಸ್ಥಳನಾಮ ಹುಟ್ಟಲು, ಅಲ್ಲಿ ಆಳಿದ ಮುದ್ದಳ ಎಂಬಾತನೇ ಕಾರಣವಿರಬಹುದು.

ಆದರೆ, ಈ ಸುತ್ತಮುತ್ತಲೂ ಇರುವ ಇತರ ಕೆಲವು ಸ್ಥಳಗಳ ಪದನಿಷ್ಪತ್ತಿಯನ್ನು ಹುಡುಕುವುದು ಕಷ್ಟವೇ ಸರಿ – ನೀಕ್ಕಡಿ, ಮುಡಾರಿ, ಚೇರ್ಕಿ, ಗೊರಾಜಿ, ತಟ್ಟುವಟ್ಟು, ಹಿಲಿಯಾಣ, ಹೀಗೆ. ಈ ಪ್ರದೇಶದ ದಕ್ಷಿಣ ದಿಕ್ಕಿನಲ್ಲಿರುವ ಚೋರಾಡಿ ಎಂಬ ಹಳ್ಳಿಯ ಹೆಸರಿನ ಪದನಿಷ್ಪತ್ತಿಯು ಸ್ಪಷ್ಟವಿದೆ – ಬಹು ಹಿಂದೆ ಇಲ್ಲಿಗೆ ಬಂದ ಚಾರುರತಿ ಎಂಬ ನಾಗಕನ್ಯೆಯು ನೆಲೆ ನಿಂತ ಜಾಗ (ಅಡಿ) ಇದು ಎಂಬ ನಂಬಿಕೆ. ಇದೇ ರೀತಿ, ಚಾರುರತಿ ಎಂಬಾಕೆಯ ಸಹೋದರಿಯರಾದ ಇನ್ನೂ ನಾಲ್ವರು ನಾಗಕನ್ನಿಕೆಯರು ನೆಲೆ ನಿಂತ ಜಾಗಗಳು ಮಂದರ್ತಿ, ದೇವರತಿ, ನಾಗರತಿ ಮತ್ತು ನೀಲರತಿ; ಅಲ್ಲೆಲ್ಲಾ ಇಂದು ನಾಗದೇವತೆಯ (ಅಮ್ಮನವರು) ದೇಗುಲಗಳಿರುವುದು ವಿಶೇಷ. ಈ ಐವರು ನಾಗಕನ್ನಿಕೆಯರಿಗೆ ಬಹು ಪುರಾತನ ಕಾಲದಲ್ಲೇ ಕಾಡಿನ ನಡುವೆ ಪೂಜಾಸ್ಥಳಗಳನ್ನು ನಿರ್ಮಿಸಲಾಗಿತ್ತು ಮತ್ತು ಸ್ಥಳೀಯರು ಪೂಜಿಸುತ್ತಿದ್ದರು; ಅವೆಲ್ಲವೂ ಈಚಿನ ದಶಕಗಳಲ್ಲಿ ವೈದಿಕ ಪೂಜಾಪದ್ಧತಿಗೆ ಒಳಪಟ್ಟು, ಆ ಪುರಾತನ, ಪೂಜ್ಯ ನಾಗಕನ್ನಿಕೆಯರನ್ನು 'ದುರ್ಗಾಪರಮೇಶ್ವರಿ' ಎಂದು ಕರೆದು, ಪೂಜಿಸುವ ಪದ್ಧತಿ ಬೆಳೆದುಬಂದಿದೆ! ಈ ಬೆಳವಣಿಗೆಯೂ ಸಹ, ಆ ಹಳ್ಳಿಗಳ ಹೆಸರಿನಷ್ಟೇ ಕುತೂಹಲಕಾರಿ ಮತ್ತು ಅಧ್ಯಯನಯೋಗ್ಯ ವಿದ್ಯಮಾನ ಎನ್ನಬಹುದು. ಇಂದು ನಮ್ಮ ರಾಜ್ಯದ ಕರಾವಳಿಯ ಪ್ರಸಿದ್ಧ ಯಾತ್ರಾ ಸ್ಥಳವಾಗಿರುವ 'ಮಂದಾರ್ತಿ' ದೇವಾಲಯದ ಒಳ ಸುತ್ತಿನಲ್ಲಿ, ಗೋಡೆಯ ಮೇಲೆ ಒಂದು ಜಾಗದಲ್ಲಿ 'ವಲ್ಮೀಕ ದರ್ಶನ' ಎಂದು ಬರೆಸಿದ್ದಾರೆ. ಅಲ್ಲಿ ನಿಂತು ನೋಡಿದರೆ, ಗರ್ಭಗುಡಿಯ ಮೇಲ್ಭಾಗದಲ್ಲಿ ಬೃಹತ್ ಹುತ್ತವನ್ನು ಕಾಣಬಹುದು. ಇದು, ಮೂಲ ನಾಗಕನ್ನಿಕೆಯ ತಾಣ ಎಂಬುದಕ್ಕೆ ಈ ಹುತ್ತವೂ ಒಂದು ಪುರಾವೆ.

ಚಾರುರತಿ ಮತ್ತು ನಾಗರತಿಯರ ದೇಗುಲಗಳಿಂದ ಮುಂದೆ ಸಾಗಿ, ನಾಲ್ಕೈದು ಕಿ.ಮೀ. ಕ್ರಮಿಸಿದರೆ, 'ತಾರಿಕಟ್ಟೆ' ಎಂಬ ಪುಟ್ಟ ಹಳ್ಳಿಯಿದೆ. ಅಲ್ಲೊಂದು ದೊಡ್ಡ ಗಾತ್ರದ ತಾರಿ ಮರ ಇರುವುದರಿಂದಾಗ, ಆ ಮರದ ಬುಡದಲ್ಲಿ ಕಟ್ಟಿದ ಕಟ್ಟೆಯಿಂದಾಗಿ ಹಳ್ಳಿಗೆ ಹೆಸರು ಬಂದಿರುವುದು ಸ್ಪಷ್ಟ. ವಿಶೇಷವೆಂದರೆ, ಅಲ್ಲಿ ಒಂದು ವಿಶಾಲವಾದ ತಾರಿಮರ ಇಂದಿಗೂ ಇದೆ – ನಾನು ಬಾಲ್ಯದಲ್ಲಿ ಕಂಡಾಗಲೂ ಆ ಮರ ಇಷ್ಟೇ ದೊಡ್ಡದಾಗಿ, ವಿಶಾಲವಾಗಿ ಬೆಳೆದುಕೊಂಡಿತ್ತು! ಆ ಮರದ ಆಯಸ್ಸು ಈಗ ನೂರು ವರ್ಷ ಮೀರಿದೆ. ಆ ಮರದ ಪಕ್ಕದಲ್ಲೇ ಒಂದು ಕಚ್ಚಾ ರಸ್ತೆ ಇದೆ; ಕೆಲವು ವರ್ಷಗಳ ಹಿಂದೆ ಆ ರಸ್ತೆಯಲ್ಲಿ ಸಾಗುತ್ತಿದ್ದ, ಶಿಲೆಕಲ್ಲು ತುಂಬಿದ್ದ ಲಾರಿಯೊಂದು ಆ ಮರಕ್ಕೆ ಡಿಕ್ಕಿ ಹೊಡೆದು, ಮರದ ಕಾಲು ಭಾಗ ಕುಸಿದು ಬಿತ್ತು; ಆದರೆ, ಮರ ಪುನಃ ಚಿಗುರಿ ಬೆಳೆದಿದೆ. ಆ ಅಪಘಾತದಲ್ಲಿ ಲಾರಿ ಮಾತ್ರ ಜಖಂ ಆಯ್ತು. ನಾಗರಿಕ ಮಾನವನು ತೊಂದರೆ ಕೊಡದೇ ಇದ್ದರೆ, ಆ ತಾರಿ ಮರ ಇನ್ನೂ ನೂರು ವರ್ಷ ಅಲ್ಲೇ ಇದ್ದು, ತಾರಿಕಟ್ಟೆ ಎಂಬ ಊರಿನ ಹೆಸರಿನ ಆಧಾರಸ್ತಂಭದಂತೆ ನಿಂತಿರುವುದರಲ್ಲಿ ಅನುಮಾನವಿಲ್ಲ. ಆದರೆ, ಈಗಿನ ಆಧುನಿಕ ಮಾನವನನ್ನು ನಂಬುವಂತಿಲ್ಲ – ಸುತ್ತಲಿನ ಬಂಡೆಗಳನ್ನು ಒಡೆದು, ಕಲ್ಲುಗಳನ್ನು ಪೇಟೆಗೆ ಸಾಗಿಸುವ ಲಾರಿಗಳು ಸಲೀಸಾಗಿ ಚಲಿಸುವ ಉದ್ದೇಶಕ್ಕಾಗಿ, ಅಲ್ಲಿನ ರಸ್ತೆಯನ್ನು ಇನ್ನಷ್ಟು ಅಗಲ ಮಾಡುವ ನೆಪದಲ್ಲಿ, ಆ ದೊಡ್ಡ, ವಿಶಾಲ, ಪುರಾತನ, ಸುಂದರ, ಐತಿಹಾಸಿಕ ಮರವನ್ನು ಸದ್ಯದಲ್ಲೇ ಯಾರಾದರೂ 'ಕಂತ್ರಾಟುದಾರ' ಕಡಿದುಹಾಕಿದರೂ ಹಾಕಿಯಾನು!

ತಾರಿಕಟ್ಟೆಯ ಹತ್ತಿರವೇ, ಅರ್ಧ ಕಿ.ಮೀ. ದೂರದಲ್ಲಿ ಅಬ್ಲಿಕಟ್ಟೆ ಎಂಬ ಹಳ್ಳಿಯಿದೆ; 'ಅಬ್ಲಿ ಹೂ' (ಕನಕಾಂಬರ) ಗಳನ್ನು ಹೇರಳವಾಗಿ ಬೆಳೆದ ಜಾಗ ಅದಾಗಿರಬಹುದು. ಈ ಅಬ್ಲಿ ಹೂ (ಅಬೋಲಿ) ಅಥವಾ ಕನಕಾಂಬರವು ಪೋರ್ಚುಗೀಸರು ತಂದ ಸಸ್ಯ! ಮೂಲತಃ ದಕ್ಷಿಣ ಆಫ್ರಿಕಾದ ಹೂಗಿಡ ಇದು. ಗೋವಾ ಪ್ರದೇಶದಲ್ಲಿ ಇದನ್ನು 'ಅಬೋಲಿ ಹೂವು' ಎನ್ನುವುದುಂಟು. ಸುಮಾರು ನಾಲ್ಕು ಶತಮಾನಗಳ ಹಿಂದೆ ಗೋವಾದಲ್ಲಿ ನಡೆದ ವಿಪ್ಲವದಿಂದ ಬಚಾವಾಗಲು ಓಡಿಬಂದ ಹಲವು ಜನಾಂಗಗಳಲ್ಲಿ, ಕುಡಿಬಿಯೂ ಪ್ರಮುಖವಾಗಿದ್ದು, ಆ ಜನಾಗಂದವರು ನೆಲೆಸಿದ ಜಾಗವೇ 'ಅಬ್ಲಿಕಟ್ಟೆ' ಎನಿಸಿದೆ; ಅವರು ತಮ್ಮ ಜತೆ ಅಬೋಲಿ ಅಥವಾ ಅಬ್ಲಿ ಹೂಗಿಡಗಳನ್ನೂ ತಂದರು! 'ಅಬೋಲಿ' ಹೂವನ್ನು (ಕನಕಾಂಬರ ಹೂ) ಅವರು ಹೇರಳವಾಗಿ ಬೆಳೆಯುವುದರಿಂದಾಗಿ, ಹೂವಿನ ಹೆಸರನ್ನೇ ಹೊತ್ತ ಹಳ್ಳಿಯಾಗಿ ಆ ತಾಣವು ರೂಪುಗೊಂಡಿದೆ. ಇಂದಿಗೂ ಆ ಪ್ರದೇಶದಲ್ಲಿ ಕನಕಾಂಬರ ಹೂವುಗಳು ಹೇರಳ ಎಂಬುವುದು ಇನ್ನೊಂದು ವಿಶೇಷ.

ಒದುಗರ ಓಣಿ
ಒದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರಸಗೊಬ್ಬರಕ್ಕೆ ಮುಂಜಾಗ್ರತೆ

ಮಧ್ಯಪ್ರಾಚ್ಯ ಬಿಕ್ಕಟ್ಟಿನ ನಡುವೆ ಮುಂಗಾರು ಆರಂಭವಾಗುತ್ತಿದೆ. ರೈತರು ಬಿತ್ತನೆ ಮಾಡಲು ಸಜ್ಜಾಗುತ್ತಿದ್ದಾರೆ. ಆದರೆ, ಇರಾನ್ ಅಮೆರಿಕ ನಡುವಿನ ಉದ್ವಿಗ್ನತೆಯ ಬಿಸಿ ರಸಗೊಬ್ಬರದ ಮೇಲೂ ತಟ್ಟುವ ಆತಂಕ ಇದೀಗ ರೈತರಲ್ಲಿ ಮನೆ ಮಾಡಿದೆ. ಈ ಕುರಿತು ಸ್ವತಃ ಕೃಷಿ ಸಚಿವ ಚಲುವನಾರಾಯಣ ಸ್ವಾಮಿಯವರೇ ತುಟಿ ಬಿಚ್ಚಿದ್ದು, ರಾಜ್ಯಕ್ಕೆ ಅಗತ್ಯ ಗೊಬ್ಬರ ಪೂರೈಕೆಯಾಗುತ್ತಿಲ್ಲ ಎಂದಿದ್ದಾರೆ. ಹಾಗಾಗಿ ಬೆಂಕಿ ಬಿದ್ದ ಮೇಲೆ ಬಾವಿ ತೋಡುವುದನ್ನು ಬಿಟ್ಟು ಸರಕಾರ ಮುಂಜಾಗ್ರತೆ ಕ್ರಮವಾಗಿ ಅಗತ್ಯ ಪರ್ಯಾಯ ವ್ಯವಸ್ಥೆಗೆ ಮುಂದಾಗುವುದು ಅನಿವಾರ್ಯ. ಇಲ್ಲವಾದಲ್ಲಿ ರೈತರಿಗೆ ಗೊಬ್ಬರದ ಸಮಸ್ಯೆ ಬಿಸಿ ತಟ್ಟುತ್ತದೆ. ಕೊನೆಗೆ ಎಲ್ಲ ಮುಗಿದ ಮೇಲೆ ರಾಜ್ಯ ಸರಕಾರ ಕೇಂದ್ರದಿಂದ ಗೊಬ್ಬರ ಬರುತ್ತಿಲ್ಲ ಎಂದು ಹೇಳಿ ಕೈ ತೊಳೆದುಕೊಳ್ಳುವುದಕ್ಕಿಂತಲೂ ಮುಂಚಿತವಾಗಿ ಎಚ್ಚೆತ್ತುಕೊಳ್ಳಬೇಕಿದೆ.

– ಕೆ.ಎನ್. ರಂಗನಾಥ್, ಚಿತ್ರದುರ್ಗ

ಇಷ್ಟವಾದ ಎರಡು ಅಂಕಣಗಳು

ನಿನ್ನೆಯ ಪತ್ರಿಕೆಯಲ್ಲಿ (ಮೇ 22) ವಿಶ್ವೇಶ್ವರ ಭಟ್ಟರ ವಾರದ ಅಂಕಣ 'ನೂರೆಂಟು ವಿಶ್ವ' ನಮ್ಮ ಪ್ರಧಾನ ಮಂತ್ರಿಗಳು ನಡೆಸುವ ಪತ್ರಿಕಾಗೋಷ್ಠಿಯ ಉದ್ದೇಶ, ಮಹತ್ವ ಮತ್ತದರ ಸಂವಿಧಾನಾತ್ಮಕ ಚೌಕಟ್ಟಿನ ಕುರಿತು ಹೇಳುತ್ತದೆ. ಭಟ್ಟರು ಪ್ರತಿಪಾದಿಸಿದಂತೆ ಪತ್ರಿಕಾ ಗೋಷ್ಠಿಯನ್ನು ಪ್ರಧಾನಿ ನಡೆಸಲೇ ಬೇಕಂತಿಲ್ಲ. ಪ್ರಜೆಗಳಿಗೆ ಹೇಳಬೇಕಾದ ಸಂದೇಶವನ್ನು ಮೋದಿಯವರು ಅನೇಕ ಸಾಮಾಜಿಕ ಜಾಲತಾಣಗಳ, ಮಾಧ್ಯಮಗಳ ಮೂಲಕ ಹೇಳುತ್ತಾ ಬಂದಿದ್ದಾರೆ. ಮನ್ ಕೀ ಬಾತ್ ಎಂಬ ವಿಶಿಷ್ಟ ಮಾಧ್ಯಮದ ಮೂಲಕ ಮನದಾಳದ ಮಾತುಗಳನ್ನು ಒಂದು ದಶಕದಿಂದ ಹಂಚಿಕೊಳ್ಳುತ್ತಿದ್ದಾರೆ. ಇನ್ನು, 'ಗಂಟಾಘೋಷ' ಅಂಕಣದಲ್ಲಿ ಗುರುರಾಜ್ ಗಂಟಿಹೊಳೆ ಅವರು ರಾಜ್ಯದಲ್ಲಿ ಪ್ರಸ್ತುತವಿರುವ ಗ್ಯಾರಂಟಿಯ ಅಲ್ಪ ವಯಸ್ಸು, ಅದು ತರುವ ದೀರ್ಘ ಕಾಲದ ಆರ್ಥಿಕ ದಿವಾಳಿತನ ಬಗ್ಗೆ ಒಂದು ಕುಟುಂಬದ ಮುಖ್ಯಸ್ಥ ಮಾಡುವ ಎರಡು ವಿಧದ ಸಾಲದ ಉದಾಹರಣೆ ನೀಡಿ ವಿವರಿಸಿದ್ದಾರೆ. ಮನೆಯ ಮೇಲ್ಛಾವಣಿ ಮಾರಿ ಹಬ್ಬದ ಊಟ ಮಾಡಿ ನಾವೆಷ್ಟು ದಿನ ಬದುಕುತ್ತೇವೆ ? ಈಗಲೇ ಜಾಗೃತರಾಗೋಣ. ಭಟ್ಟರ ಮನದಾಳದ ಸ್ಪಷ್ಟ ನೇರ ನುಡಿ, ಗಂಟಿಹೊಳೆ ಅವರ ಎಚ್ಚರಿಕೆ ಮಾತು ಎರಡೂ ಇಷ್ಟವಾದವು.

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಪಟ್ಟದ ಆನೆ ತರಲು ನಿರ್ಲಕ್ಷ್ಯ ಏಕೆ?

ನಂಜನಗೂಡಿನ ಪ್ರಸಿದ್ಧ ಶ್ರೀಕಂಠೇಶ್ವರ ದೇವಸ್ಥಾನ ಪಟ್ಟದ ಆನೆ ಗೌರಿ ಕಾಲಿನ ಗಾಯ ಹಾಗೂ ಅನಾರೋಗ್ಯದಿಂದ ಬಳಲಿದ ಕಾರಣ ಸೂಕ್ತ ಚಿಕಿತ್ಸೆಗಾಗಿ 2017–2018ರಲ್ಲಿ ಬೆಂಗಳೂರಿನ ವನ್ಯಜೀವಿ ಸಂರಕ್ಷಣೆ ಮತ್ತು ಪುನರ್‌ವಸತಿ ಕೇಂದ್ರಕ್ಕೆ ಉತ್ತಮ ಆರೈಕೆ ಮತ್ತು ಹೆಚ್ಚಿನ ಚಿಕಿತ್ಸೆಗಾಗಿ ವರ್ಗಾಯಿಸಿದ್ದು ಸರಿಯಷ್ಟೇ. ಈಗ, ಸರಿ ಸುಮಾರು 8–9 ವರ್ಷ ಕಳೆದಿದ್ದು ಆನೆ ಗೌರಿ ಇನ್ನೂ ವಾಪಸ್ ಕರೆ ತಂದಿಲ್ಲ. ತರದೇ ಇರಲು ಕಾರಣವು ತಿಳಿಯುತ್ತಿಲ್ಲ. ಸದ್ಯ, ಆನೆಯ ಪ್ರಸ್ತುತ ಸ್ಥಿತಿ ಗುಣಮುಖವಾಗಿ ಚೆನ್ನಾಗಿದೆ ಎನ್ನುವ ಮಾಹಿತಿ ಇದೆ. ಶ್ರೀಕಂಠೇಶ್ವರ ದೇವಸ್ಥಾನದಲ್ಲಿ ನಿರಂತರವಾಗಿ ನಡೆಯುವ ಸಾಂಪ್ರದಾಯಿಕ ಕೈಂಕರ್ಯಗಳು ಅಭಿಷೇಕಕ್ಕಾಗಿ ಕಪಿಲಾ ನದಿಯಿಂದ ನೀರನ್ನು ತರುವುದು ಹಾಗೂ ಉತ್ಸವ ಮೆರವಣಿಗೆಗಳಿಗೆಲ್ಲ ಆನೆಯ ಬಳಕೆಯಿದ್ದು, ಸದಾ ಮುಂಚೂಣಿಯಲ್ಲಿ ಕಾಣುತ್ತಿದ್ದ ಗೌರಿ ಆನೆ ಇಲ್ಲದೆ ತೊಂದರೆ ಆಗುತ್ತಿದೆ. ಗೌರಿ ಆನೆ ತಂಗಿದ್ದ ದೇವಸ್ಥಾನದ ಮುಂಭಾಗದ ಶೆಡ್ ಕೂಡ ಖಾಲಿಯಾಗಿ ಬಿಕೋ ಎನ್ನುತ್ತಿದ್ದು ಆಕರ್ಷಣಾ ಕೇಂದ್ರ ಬಿಂದುವಾಗಿದ್ದ ಈ ಗೌರಿಯ ದರ್ಶನಕ್ಕೆ ಆಗಾಗ ಬರುತ್ತಿದ್ದ ಶಾಲಾ ಮಕ್ಕಳು, ಭಕ್ತ ಸಮೂಹ ಸೇರಿದಂತೆ ಎಲ್ಲರಿಗೂ ಗೌರಿಯ ನೋಡಲಾಗದೆ ನಿರಾಸೆಯಾಗಿದೆ. ಧಾರ್ಮಿಕ ಹಾಗೂ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವಂತಹ ಈ ದೇಗುಲ ಅತಿ ಹೆಚ್ಚು ಆದಾಯ ಬರುವ ರಾಜ್ಯದ ಪ್ರಮುಖ ದೇವಸ್ಥಾನಗಳಲ್ಲಿ ಒಂದು. ವಾರ್ಷಿಕ ಆದಾಯ ಸರಿ ಸುಮಾರು 10–15 ಕೋಟಿ ಇಷ್ಟೆಲ್ಲ, ಭವ್ಯ ಹಿನ್ನೆಲೆ, ಇತಿಹಾಸ ಸಂಪತ್ತು ಇದ್ದರೂ ನಂಜನಗೂಡು ಶ್ರೀಕಂಠೇಶ್ವರ ದೇಗುಲ ಆಡಳಿತ ಮಂಡಳಿ ಆನೆ ಕರೆ ತಂದು ಸಾಕಲು ಹಿಂದೇಟು ಹಾಕುತ್ತಿರುವುದಾದರೂ ಯಾವ ಕಾರಣಕ್ಕೆ? ಅಥವಾ ಆನೆ ಸಾಕಲು ಹಣ ಇಲ್ಲವೇ? ಎನ್ನುವುದು ಇಂದಿಗೂ ಕೂಡ ಅರ್ಥವಾಗದ ಯಕ್ಷಪ್ರಶ್ನೆ. ಇನ್ನಾದರೂ ಸಂಬಂಧಪಟ್ಟವರು ಖುದ್ದಾಗಿ ತುರ್ತು ಗಮನವಹಿಸಬೇಕಿದೆ.

– ಅನಿಲ್ ಕುಮಾರ್, ನಂಜನಗೂಡು

ಭೋಜಶಾಲೆ ತೀರ್ಪು ಗಮನಾರ್ಹ

ಭೋಜಶಾಲೆ ಸರಸ್ವತಿ ದೇಗುಲದ ಬಗ್ಗೆ ಮಧ್ಯಪ್ರದೇಶ ಹೈಕೋರ್ಟ್ ಮಹತ್ವದ ತೀರ್ಪು ನೀಡಿದೆ. ಮಧ್ಯಪ್ರದೇಶದ ಧಾರ್ ಜಿಲ್ಲೆಯ ವಿವಾದಿತ ಭೋಜಶಾಲಾ ಸರಸ್ವತಿ ದೇಗುಲ ಹಿಂದುಗಳಿಗೆ ಸೇರಿದ್ದು ಎಂಬ ತೀರ್ಪು ನಿಜಕ್ಕೂ ಅತ್ಯಂತ ಸ್ವಾಗತಾರ್ಹ. 11ನೇ ಶತಮಾನದಲ್ಲಿ ಪರಮಾರ ರಾಜವಂಶಸ್ಥ ಭೋಜರಾಜ ಈ ದೇವಾಲಯವನ್ನು ನಿರ್ಮಿಸಿದ ಬಗ್ಗೆ ಐತಿಹ್ಯ ಹಾಗು ದಾಖಲೆಗಳಿವೆ. ಈ ಸಂಬಂಧದ ವೈಜ್ಞಾನಿಕ ಸಮೀಕ್ಷೆಗೆ ನ್ಯಾಯಾಲಯ ಆದೇಶಿಸಿತ್ತು. ವಿವಾದಿತ ಸ್ಥಳದಲ್ಲಿ 98 ದಿನಗಳ ವೈಜ್ಞಾನಿಕ ಹಾಗು ರಾಸಾಯನಿಕ ಸಮೀಕ್ಷೆ ಕೈಗೊಂಡ ಪುರಾತತ್ವ ಇಲಾಖೆ ಅತ್ಯಂತ ಮಹತ್ವ ಪೂರ್ಣ ಸಾಕ್ಷ್ಯಾಧಾರಗಳನ್ನು ಕಲೆಹಾಕಿತ್ತು. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದ ಕೋರ್ಟ್ ಪ್ರಸ್ತುತ ತೀರ್ಪು ಅಷ್ಟೇ ಅಲ್ಲ, ಬ್ರಿಟಿಷರು ಕೊಂಡೊಯ್ದು ಲಂಡನ್ ಮ್ಯೂಸಿಯಂನಲ್ಲಿರಿಸಿರುವ ದೇವಿಯ ವಿಗ್ರಹವನ್ನು ಹಿಂಪಡೆದು ಪ್ರತಿಷ್ಠಾಪಿಸಲು ಸೂಚಿಸಿದೆ. ಸನಾತನ ಇತಿಹಾಸದಲ್ಲೇ ಇದು ಅತ್ಯಂತ ಮಹತ್ವದ ತೀರ್ಪು.

– ರಾ. ರಾಮಾರಾಧ್ಯ, ಮೈಸೂರು

ವಿಟಿಯು ನಡೆ ಶ್ಲಾಘನೀಯ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಉಚಿತ ಡ್ರೋನ್ ತರಬೇತಿ ಮತ್ತು ಡಿಜಿಸಿಎ ಲೈಸೆನ್ಸ್ ನೀಡುತ್ತಿರುವುದು ಅತ್ಯಂತ ಪ್ರಶಂಸನೀಯ ಮತ್ತು ದೂರದೃಷ್ಟಿಯ ಹೆಜ್ಜೆಯಾಗಿದೆ. ಸಾಮಾನ್ಯವಾಗಿ ಇದಕ್ಕೆ ಸುಮಾರು 1 ಲಕ್ಷ ವೆಚ್ಚವಾಗಲಿದ್ದು ಗ್ರಾಮೀಣ ವಿದ್ಯಾರ್ಥಿಗಳಿಗೆ ಇದು ಗಗನಕುಸುಮವಾಗಿತ್ತು. ಪ್ರಸ್ತುತ ಜಾಗತಿಕವಾಗಿ ಡ್ರೋನ್ ಮಾರುಕಟ್ಟೆಯು ಶೇಕಡಾ 20ಕ್ಕಿಂತಲೂ ಹೆಚ್ಚಿನ ವಾರ್ಷಿಕ ಬೆಳವಣಿಗೆಯನ್ನು ಕಾಣುತ್ತಿದೆ. ರಕ್ಷಣೆ, ಕೃಷಿ ಮತ್ತು ವಿತರಣಾ ವಲಯಗಳಲ್ಲಿ ಲಕ್ಷಾಂತರ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿವೆ. ಇಂತಹ ಸಮಯದಲ್ಲಿ ವಿಟಿಯುನ ಈ ಉಚಿತ ಉದ್ಯೋಗಾಧಾರಿತ ತರಬೇತಿಯು ವಿದ್ಯಾರ್ಥಿಗಳ ಭವಿಷ್ಯಕ್ಕೆ ದೊಡ್ಡ ಆಸರೆಯಾಗಿದೆ. ಕರ್ನಾಟಕದ ಇತರ ಎಲ್ಲಾ ವಿಶ್ವವಿದ್ಯಾಲಯಗಳೂ ಸಹ ಇದೇ ಮಾದರಿಯನ್ನು ಅಳವಡಿಸಿಕೊಂಡು ತಮ್ಮ ವಿದ್ಯಾರ್ಥಿಗಳಿಗೆ ಇಂತಹ ಅತ್ಯಾಧುನಿಕ ತರಬೇತಿಗಳನ್ನು ನೀಡಬೇಕು. ಇದರಿಂದ ನಮ್ಮ ರಾಜ್ಯದ ಯುವಕರು ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸಲು ಸಾಧ್ಯವಾಗುತ್ತದೆ.

– ಡಾ. ವಿಜಯಕುಮಾರ್ ಎಚ್.ಕೆ

ಕೊಲ್ಲುವ ವಿಧೇಯಕ?

ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇಸ್ರೇಲಿನ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಅವರನ್ನು ಕೊಲ್ಲಲು ಇರಾನ್ ಸರ್ಕಾರ 'ಕಿಲ್ ಟ್ರಂಪ್' ಯೋಜನೆಯಡಿ 563 ಕೋಟಿ ರೂಪಾಯಿ ಮೌಲ್ಯದ ಬಹುಮಾನ ಘೋಷಿಸಿ ವಿಧೇಯಕ ಸಿದ್ಧಪಡಿಸುತ್ತಿದೆ ಎಂಬ ಮಾಧ್ಯಮಗಳ ವರದಿ ಕುತೂಹಲಕಾರಿಯಾಗಿದೆ. ಇರಾನಿನ ಸರ್ವೋಚ್ಚ ನಾಯಕರಾಗಿದ್ದ ಖಮೇನಿಯವರ ಹತ್ಯೆಯ ಸೇಡನ್ನು ತೀರಿಸಿಕೊಳ್ಳಲು ಇರಾನ್ ಈ ನಿರ್ಧಾರಕ್ಕೆ ಬಂದಿದೆ ಎಂದು ಹೇಳಲಾಗುತ್ತಿದೆ. ಆದರೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಆಯ್ಕೆಗೊಂಡ ಸರ್ಕಾರ, ಈ ರೀತಿಯ ಕೊಲೆ ವಿಧೇಯಕವನ್ನು ತನ್ನ ದೇಶದ ಸಂಸತ್ತಿನಲ್ಲಿ ಮಂಡಿಸಬಹುದೇ?

– ಕೆ.ವಿ. ವಾಸು, ವಿವೇಕಾನಂದ ನಗರ, ಮೈಸೂರು

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಎಂಬ ಭಯೋತ್ಪಾದಕ ಕೃತ್ಯ!

ಸಂಗತ
ಡಾ. ವಿಜಯ್ ದರಡಾ
vveditoped@gmail.com

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆಂದು ನಡೆಸುವ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿರುವುದು ಪರೀಕ್ಷೆ ಮುಗಿದ ಹಲವು ದಿನಗಳ ಬಳಿಕ ಇತ್ತೀಚೆಗೆ ಬೆಳಕಿಗೆ ಬಂತು. ಇದು ಕೇವಲ ನಾಚಿಕೆಗೇಡಿನ ಕೃತ್ಯವಷ್ಟೇ ಅಲ್ಲ, ಲಕ್ಷಾಂತರ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ನಡೆಸಿದ ಕ್ರೂರ ದಾಳಿ ಕೂಡ ಹೌದು. ಈ ಘಟನೆಯಿಂದ ಹೊರಹೊಮ್ಮಿದ ಆಘಾತದ ಅಲೆಗಳು ವಿದ್ಯಾರ್ಥಿಗಳ ಸ್ಥೈರ್ಯವನ್ನು ಮಾತ್ರ ಅಲುಗಾಡಿಸಿಲ್ಲ, ಬದಲಿಗೆ ಅವರ ತಂದೆ ತಾಯಿಯರು ಕೂಡ ಅಷ್ಟೇ ಶಾಕ್‌ಗೆ ಒಳಗಾಗಿದ್ದಾರೆ. ಈ ಅಂಕಣ ಬರೆಯಲು ಕುಳಿತಿರುವ ನನಗೆ ಅತ್ಯಂತ ಕ್ರೂರ ಹಾಗೂ ಕಠಿಣ ಪದಗಳೇ ಮನಸ್ಸಿಗೆ ಬರುತ್ತಿವೆ. ಏಕೆಂದರೆ ಈ ಘಟನೆಯಿಂದ ನಾನು ಕೂಡ ಆಘಾತಗೊಂಡಿದ್ದೇನೆ. ಎಷ್ಟು ಯೋಚಿಸಿದರೂ ಸರಳವಾದ ಒಂದು ಪ್ರಶ್ನೆಗೆ ನನಗೆ ಉತ್ತರ ಸಿಗುತ್ತಿಲ್ಲ: ಇಷ್ಟೊಂದು ವಿಸ್ತಾರವಾದ ಭಾರತದಲ್ಲಿ ನಾವು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಗಳನ್ನೇ ನಡೆಸುತ್ತಿರುವಾಗ ಶೈಕ್ಷಣಿಕ ಪರೀಕ್ಷೆಗಳನ್ನು ಪ್ರಾಮಾಣಿಕವಾಗಿ ಹಾಗೂ ನ್ಯಾಯಬದ್ಧವಾಗಿ ನಡೆಸಲು ಏನು ಮಹಾನ್ ಕಷ್ಟವಿದೆ? ಭವಿಷ್ಯದ ಪ್ರಜೆಗಳಾಗಿರುವ ವಿದ್ಯಾರ್ಥಿಗಳನ್ನು ಇಷ್ಟೊಂದು ಕ್ರೂರವಾಗಿ ನಡೆಸಿಕೊಳ್ಳುವುದನ್ನು ನೋಡಿ ನಾವು ಸುಮ್ಮನಿರಲು ಹೇಗೆ ಸಾಧ್ಯ? ಇದು ನಮ್ಮ ಮಕ್ಕಳಿಗೆ ನಾವೇ ಮಾಡುವ ವಂಚನೆಯಲ್ಲವೇ? ನಮ್ಮ ಯುವ ಸಮೂಹದ ಕನಸು ಹಾಗೂ ಆಶೋತ್ತರಗಳನ್ನು ಒಂದಷ್ಟು ದುಷ್ಟರು ಸೇರಿಕೊಂಡು ಹೊಸಕಿಹಾಕುತ್ತಿರುವಾಗ ಒಂದು ಸಮಾಜವಾಗಿ ನಾವು ಹೇಗೆ ಅದನ್ನು ನಿರ್ಲಕ್ಷಿಸಿ ಮುಂದೆ ಹೋಗಲು ಸಾಧ್ಯವಿದೆ?

ನೀಟ್ ಪರೀಕ್ಷೆಗೆ ಹಾಜರಾಗಿದ್ದ 22 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಈ ಪ್ರಶ್ನೆ ಪತ್ರಿಕೆ ಸೋರಿಕೆಯ ಕರ್ಮಕಾಂಡವು ಮಾನಸಿಕವಾಗಿ ಇನ್ನಿಲ್ಲದಂತೆ ಜರ್ಜರಿತಗೊಳಿಸಿದೆ. ಜೊತೆಗೆ, ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಇನ್ನೂ ಅಸಂಖ್ಯಾತ ಯುವಕರನ್ನು ಕೂಡ ಇದು ಕಂಗಾಲು ಮಾಡಿದೆ. ಅವರ ನಂಬಿಕೆಗಳು ಛಿದ್ರವಾಗಿವೆ. ಅವರೆಲ್ಲರ ಮನಸ್ಸಿನಲ್ಲಿ ಈಗ ಅವ್ಯಕ್ತ ಭಯವೊಂದು ಮನೆ ಮಾಡಿದೆ. ನಾವು ಇಷ್ಟೊಂದು ಕಷ್ಟಪಟ್ಟು, ಹಗಲು-ರಾತ್ರಿ ನಿದ್ದೆಗೆಟ್ಟು, ಶಿಸ್ತುಬದ್ಧವಾಗಿ ತಯಾರಾಗಿ, ಪ್ರಾಮಾಣಿಕವಾಗಿ ಪರೀಕ್ಷೆ ಬರೆದರೂ ಕೊನೆಗೆ ಪ್ರಶ್ನೆ ಪತ್ರಿಕೆಗಳನ್ನು ಹಣ ಕೊಟ್ಟು ಖರೀದಿಸಿದವರೇ ಸುಲಭವಾಗಿ ರ್‍ಯಾಂಕ್ ಗಳಿಸಿ ಉನ್ನತ ಹುದ್ದೆಗಳಿಗೆ ಹೋಗುತ್ತಾರಲ್ಲವೇ ಎಂದು ಅವರು ಯೋಚಿಸತೊಡಗಿದ್ದಾರೆ. ಪ್ರಾಮಾಣಿಕ ವಿದ್ಯಾರ್ಥಿಗಳು ಯಾವತ್ತೂ ಕಷ್ಟಪಟ್ಟು ಪರೀಕ್ಷೆಗಳಿಗೆ ತಯಾರಾಗುತ್ತಾರೆ. ಎಲ್ಲಾ ಸುಖ, ಸಂತೋಷಗಳನ್ನು ಬಿಟ್ಟು ಕನಸಿನ ಬೆನ್ನತ್ತಿರುತ್ತಾರೆ. ನೀಟ್ ಪರೀಕ್ಷೆ ಬರೆಯುವವರು ಒಳ್ಳೆಯ ಮೆಡಿಕಲ್ ಕಾಲೇಜಿಗೆ ಸೇರಬೇಕೆಂದು ಇನ್ನೂ ಕಷ್ಟಪಟ್ಟು ಓದುತ್ತಾರೆ. ಉತ್ತಮ ಡಾಕ್ಟರ್ ಆಗಿ ದೇಶಸೇವೆ ಮಾಡುವ ಕನಸು ಕಂಡಿರುತ್ತಾರೆ.

ಆದರೆ ವ್ಯವಸ್ಥೆಯೊಳಗೇ ಇರುವ ಕ್ರಿಮಿನಲ್‌ಗಳು ಅಂತಹವರ ಕನಸನ್ನು ಇನ್ನೆಲ್ಲೋ ಕುಳಿತು ನುಚ್ಚುನೂರು ಮಾಡುತ್ತಾರೆ. ಪರೀಕ್ಷೆಯನ್ನು ಮತ್ತೆ ನಡೆಸಬಹುದು ಎಂಬುದು ನಿಜ. ಆದರೆ ಈ ಮೊದಲು ಬರೆದಷ್ಟೇ ಉತ್ಸಾಹ, ಬದ್ಧತೆ ಹಾಗೂ ಭಾವನಾತ್ಮಕ ತಾದಾತ್ಮ್ಯದಿಂದ ಮಕ್ಕಳು ಮತ್ತೊಮ್ಮೆ ಅದನ್ನು ಬರೆಯಲು ಸಾಧ್ಯವೇ? ಮೊದಲ ಬಾರಿ ಪರೀಕ್ಷೆ ಬರೆಯುವಾಗ ಅವರು ಪಟ್ಟ ಪರಿಶ್ರಮ ಅವರಿಗೇ ಗೊತ್ತಿರುತ್ತದೆ. ಒಮ್ಮೆ ಆ ಓಘಕ್ಕೆ ತಡೆ ಬಿದ್ದರೆ ಇನ್ನೊಮ್ಮೆ ಅದನ್ನು ಗಳಿಸಿಕೊಳ್ಳಲು ಅವರಿಂದ ಸಾಧ್ಯವೇ? ಇನ್ನು, ಅವರ ಅಪ್ಪ ಅಮ್ಮ, ಅಕ್ಕ ತಮ್ಮಂದಿರು, ಕುಟುಂಬದವರು ಹಾಗೂ ಅವರನ್ನು ನೀಟ್ ಪರೀಕ್ಷೆಗೆ ತಯಾರು ಮಾಡಲು ಶ್ರಮಿಸಿದವರು ಅನುಭವಿಸಿದ ಭಾವನಾತ್ಮಕ ನೋವು ಯಾರಿಗೆ ಅರ್ಥವಾಗುತ್ತದೆ?

ಈ ಸಲದ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿರುವ ವಿಷಯ ರಾಷ್ಟ್ರಮಟ್ಟದಲ್ಲಿ ಆಕ್ರೋಶಕ್ಕೆ ಕಾರಣವಾಗಿ, ಸಾರ್ವಜನಿಕ ವಲಯದಲ್ಲೂ ವ್ಯಾಪಕ ಚರ್ಚೆಗೊಳಗಾದ ಕಾರಣಕ್ಕೆ ಪರೀಕ್ಷೆಯನ್ನು ಕೇಂದ್ರ ಸರ್ಕಾರ ರದ್ದುಪಡಿಸಿತು. ಆದರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆಯುವುದು ನಮಗೇನು ಹೊಸತೇ? ಖಂಡಿತ ಅಲ್ಲ. ಇತಿಹಾಸವನ್ನೊಮ್ಮೆ ನೋಡಿದರೆ ಅಂತಹ ಡಜನ್‌ಗಟ್ಟಲೆ ಉದಾಹರಣೆಗಳು ಸಿಗುತ್ತವೆ. ಹಾಗಿರುವಾಗ ಇಂತಹ ಹಗರಣಗಳ ಎಷ್ಟು ಮಾಸ್ಟರ್ ಮೈಂಡ್‌ಗಳನ್ನು ನಾವು ಹಿಡಿದು ಶಿಕ್ಷೆಗೆ ಒಳಪಡಿಸಿದ್ದೇವೆ? ಎಷ್ಟು ಹುಡುಕಿದರೂ ಮೂರ್‍ನಾಲ್ಕು ಉದಾಹರಣೆ ಕೂಡ ಸಿಗುವುದಿಲ್ಲ. ನಿಮಗೆ ಮಧ್ಯಪ್ರದೇಶದ ಕುಖ್ಯಾತ ವ್ಯಾಪಂ ಹಗರಣ ನೆನಪಿರಬಹುದು. ಆ ಹಗರಣ ನಡೆದಾಗ ನೂರಾರು ಆರೋಪಿಗಳನ್ನು ಬಂಧಿಸಲಾಗಿತ್ತು. ಆದರೆ ಕೊನೆಗೆ ಶಿಕ್ಷೆಯಾಗಿದ್ದು ಕೆಲವೇ ಕೆಲವು ಖದೀಮರಿಗೆ. ಅಚ್ಚರಿಯ ಸಂಗತಿಯೆಂದರೆ ಆ ಪ್ರಕರಣದ ತನಿಖೆ ನಡೆಯುತ್ತಿದ್ದಾಗ ಕನಿಷ್ಠ 48 ಆರೋಪಿಗಳು ನಿಗೂಢವಾಗಿ ಸಾವನ್ನಪ್ಪಿದ್ದರು! ಪ್ರಕರಣದಲ್ಲಿ ಅನೇಕ ಪ್ರಭಾವಿ ವ್ಯಕ್ತಿಗಳ ಹೆಸರು ಹೊರಗೆ ಬಂದಿತ್ತು. ಆದರೂ ಕೊನೆಯಲ್ಲಿ ಹಗರಣದ ನಿಜವಾದ ಸೂತ್ರಧಾರಿ ಯಾರೆಂಬುದು ಗೊತ್ತಾಗಲೇ ಇಲ್ಲ. ಸರ್ಕಾರವೊಂದು ಯಾವುದಾದರೂ ಪ್ರಕರಣದಲ್ಲಿ ಸಂಪೂರ್ಣ ಸತ್ಯವನ್ನು ಪತ್ತೆಹಚ್ಚಬೇಕೆಂದು ನಿರ್ಧರಿಸಿ ತನ್ನೆಲ್ಲಾ ಶಕ್ತಿಯನ್ನು ಬಳಸಲು ಮುಂದಾದರೆ ಅಂತಹ ಸತ್ಯವನ್ನು ಬಚ್ಚಿಡಲು ಯಾರಿಗಾದರೂ ಸಾಧ್ಯವಿದೆಯೇ? ನನ್ನ ಪ್ರಕಾರ ಸಾಧ್ಯವೇ ಇಲ್ಲ. ಆದರೂ ಕೆಲವರ ಹಿತಾಸಕ್ತಿಗಳು ಇಂತಹ ಪ್ರಕರಣದಲ್ಲಿ ಒಳಗೊಳಗೇ ಕೆಲಸ ಮಾಡುತ್ತವೆ. ಅವರು ವ್ಯವಸ್ಥೆಯ ಲೋಪಗಳನ್ನು ಬಳಸಿಕೊಂಡು, ತಮಗೆ ಬೇಕಾದವರನ್ನು ಬಚಾವು ಮಾಡಿಕೊಳ್ಳುತ್ತಾರೆ. ನಿಜವಾದ ಮೊಸಳೆಗಳು ಬಲೆಗೆ ಬೀಳದಂತೆ ಅವರೇ ಉದ್ದೇಶಪೂರ್ವಕವಾಗಿ ನೋಡಿಕೊಳ್ಳುತ್ತಾರೆ.

ಸತ್ಯ ಏನೆಂದರೆ, ಈ ಮೊಸಳೆಗಳು ಯಾವತ್ತೂ ಸಿಕ್ಕಿಬೀಳುವುದೇ ಇಲ್ಲ. ತನಿಖಾ ಏಜೆನ್ಸಿಗಳು ಒಂದಷ್ಟು ಸಣ್ಣಪುಟ್ಟ ಮೀನುಗಳನ್ನು ಹಿಡಿದು ತಿಪ್ಪೆ ಸಾರಿಸುತ್ತವೆ. ತಿಮಿಂಗಿಲಗಳು ಅಕ್ರಮದ ಸಮುದ್ರದಲ್ಲಿ ಹಾಗೇ ಈಜಾಡಿಕೊಂಡು ಹಾಯಾಗಿರುತ್ತವೆ. ದೊಡ್ಡ ದೊಡ್ಡ ಮೊಸಳೆಗಳು ಸುರಕ್ಷಿತವಾಗಿ ಬೇಟೆಯಾಡಿಕೊಂಡು ಇರುತ್ತವೆ. ಇದೇನೂ ನನ್ನ ಹೊಸ ಸಂಶೋಧನೆಯಲ್ಲ. ಶಿಕ್ಷಣ ಕ್ಷೇತ್ರದಲ್ಲಿ ಬೇರುಬಿಟ್ಟಿರುವ ಸ್ಥಾಪಿತ ಹಿತಾಸಕ್ತಿಗಳು ಬಹಳ ವರ್ಷಗಳಿಂದ ಅಕ್ರಮಗಳನ್ನು ಎಸಗುತ್ತಾ ಬಂದಿರುವುದೇ ಹೀಗೆ. ಇದಕ್ಕೆ ಸಾಕಷ್ಟು ಉದಾಹರಣೆಗಳು ಬಹಳ ಸುಲಭವಾಗಿ ಸಿಗುತ್ತವೆ.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಹಗರಣವನ್ನು ವಿಸ್ತೃತವಾಗಿ ತನಿಖೆ ನಡೆಸಿ ಸತ್ಯ ಬಯಲಿಗೆಳೆಯುವ ಹೊಣೆಯನ್ನು ಈಗ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವಹಿಸಲಾಗಿದೆ. ಆದರೆ ಸಾಮಾನ್ಯ ಜ್ಞಾನ ಬಳಸಿ ಈ ವಿಷಯವನ್ನು ಅವಲೋಕಿಸಿದರೂ ಕೆಲ ಬಹಿರಂಗ ಸತ್ಯಗಳು ನಮ್ಮ ಕಣ್ಣಿಗೇ ಬೀಳುತ್ತಿವೆ. ಪ್ರಶ್ನೆ ಪತ್ರಿಕೆಗಳ ಸೋರಿಕೆಯ ಹಿಂದೆ ರಾಜಸ್ಥಾನದ ಸಿಕಾರ್ ಜಿಲ್ಲೆಯ ಖಂಡೇಲಾ ತಾಲೂಕಿನ ಸಮರ್ಥಪುರ ಎಂಬ ಹಳ್ಳಿಯ ರಾಕೇಶ್ ಕುಮಾರ್ ಮಂಡವಾರಿಯಾ ಎಂಬವನ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಅವನು ಹತ್ತನೇ ತರಗತಿ ಮುಗಿಸಿ ಊರು ಬಿಟ್ಟವನು ಸಿಕಾರ್‌ಗೆ ಹೋಗಿ ನೆಲೆಸಿದ್ದ. ಅಲ್ಲಿ 15 ವರ್ಷಗಳಿಂದ ವಾಸವಿದ್ದಾನೆ. ಆದರೆ ಅಲ್ಲಿ ಇಷ್ಟು ವರ್ಷಗಳಿಂದ ಏನು ಮಾಡುತ್ತಿದ್ದಾನೆ ಎಂಬುದನ್ನು ಕೆದಕಿದರೆ ಕುತೂಹಲಕರ ಅಂಶಗಳು ಹೊರಬೀಳುತ್ತಿವೆ. ಕಳೆದ ಹಲವಾರು ವರ್ಷಗಳಿಂದ ಅವನು 'ಕನ್ಸಲ್ಟೆನ್ಸಿ ಆಫೀಸ್' ಎಂಬ ಕಚೇರಿಯೊಂದನ್ನು ನಡೆಸುತ್ತಿದ್ದಾನೆ. ಅದು ಸಿಕಾರ್‌ನ ಪಿಪ್ರಾಲಿ ರಸ್ತೆಯ ನೀಟ್ ಕೋಚಿಂಗ್ ಸೆಂಟರ್‌ನ ಎದುರಿಗೇ ಇದೆ. ಅವನು ಕೋಚಿಂಗ್ ಕೇಂದ್ರದ ನೌಕರನಲ್ಲ. ಅವನ ಕನ್ಸಲ್ಟೆನ್ಸಿ ಆಫೀಸ್ ಎಂಬುದು ಅವನದೇ ಸ್ವಂತ ಸಂಸ್ಥೆ. ಆದರೆ ಅದು ಏನು ಮಾಡುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ. ಎಂತಹ ಕನ್ಸಲ್ಟೆನ್ಸಿ ಸೇವೆಯನ್ನು ಅವನು ನೀಡುತ್ತಾನೆ? ಯಾರಲ್ಲೂ ಉತ್ತರವಿಲ್ಲ. ಅವನ ವಿರುದ್ಧ ಕೇಳಿಬಂದಿರುವ ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಇನ್ನೂ ಸಾಬೀತಾಗಿಲ್ಲವಾದರೂ, ಅವನ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಹಗರಣದಲ್ಲಿ ಅವನ ಪಾತ್ರ ಎಂತಹವರಿಗಾದರೂ ತಿಳಿಯುತ್ತದೆ.

ಹಾಗಂತ ಅವನೇನೂ ಒಬ್ಬನೇ ಈ ಕೃತ್ಯ ಎಸಗಿರಲು ಸಾಧ್ಯವಿಲ್ಲ. ಹಗರಣದಲ್ಲಿ ಹೊರಗೆ ಕಾಣಿಸುತ್ತಿರುವ ಮುಖವಷ್ಟೇ ಅವನದು. ಆದರೆ ಅವನ ಹಿಂದೆ ಇನ್ನೂ ದೊಡ್ಡ ತಂಡವೇ ಇದೆ. ಅದು ಬಹುಶಃ ದೊಡ್ಡದೊಂದು ಸಿಂಡಿಕೇಟ್ ರೀತಿಯಲ್ಲಿ ಕೆಲಸ ಮಾಡುತ್ತಿರಬಹುದು. ಇಲ್ಲವಾದರೆ ನೀಟ್ ಪ್ರಶ್ನೆಪತ್ರಿಕೆಗಳು ಅಷ್ಟು ದೊಡ್ಡ ರಾಜ್ಯವಾದ ರಾಜಸ್ಥಾನದ ಉದ್ದಗಲಕ್ಕೂ ಹರಿದಾಡಿ, ಅಲ್ಲಿಂದ ಬಿಹಾರ, ಹರ್ಯಾಣ, ಮಹಾರಾಷ್ಟ್ರ, ಜಮ್ಮು ಮತ್ತು ಕಾಶ್ಮೀರ, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಗೆಲ್ಲ ಹೋಗಿ ತಲುಪಲು ಹೇಗೆ ಸಾಧ್ಯ? ಶಿಕ್ಷಣ ತಜ್ಞ ಖಾನ್ ಸರ್ ಈ ವಿಷಯದಲ್ಲಿ ಬಹಳ ತಾರ್ಕಿಕವಾಗಿ ಮಾತನಾಡಿದ್ದಾರೆ. ನಾವೊಂದು ಸಾಮಾನ್ಯ ಡೈಪರ್ ಖರೀದಿಸಿದರೂ ಅದು ಸೋರುವುದಿಲ್ಲ. ಆದರೆ ಇಲ್ಲಿ ರಾಷ್ಟ್ರ ಮಟ್ಟದ ಪರೀಕ್ಷಾ ವ್ಯವಸ್ಥೆಯೇ ಸೋರಿಕೆಗೆ ಸಂಪೂರ್ಣ ಕುಸಿದುಬಿದ್ದಿದೆ.

ನೀಟ್ ಪರೀಕ್ಷೆಯನ್ನು ನಡೆಸುವ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಒಂಬತ್ತು ವರ್ಷಗಳ ಹಿಂದೆ ಪರೀಕ್ಷಾ ವ್ಯವಸ್ಥೆಯ ಪಾವಿತ್ರ್ಯ ಮತ್ತು ದಕ್ಷತೆಯನ್ನು ಕಾಪಾಡುವುದಕ್ಕೆಂದೇ ಹುಟ್ಟಿಕೊಂಡಿದೆ. ಆದರೆ ಆ ಸಂಸ್ಥೆಯನ್ನು ಹುಟ್ಟುಹಾಕಿದ ಮೇಲೆ ಪರಿಸ್ಥಿತಿ ಸುಧಾರಣೆಯಾಗಿದೆಯೇ? ಖಂಡಿತ ಇಲ್ಲ!

ನನ್ನ ಪ್ರಕಾರ ಪ್ರಶ್ನೆ ಪತ್ರಿಕೆ ಸೋರಿಕೆಯೆಂಬುದು ಸಾಮಾನ್ಯ ಅಪರಾಧ ಅಲ್ಲ. ಅದು ಶಿಕ್ಷಣ ಮಾಫಿಯಾದ ಮೂಲಕ ನಡೆಯುವ ಬಹುದೊಡ್ಡ ಮಸಲತ್ತು. ಅದು ಡ್ರಗ್ ಮಾಫಿಯಾಕ್ಕಿಂತ ಅಪಾಯಕಾರಿ. ಏಕೆಂದರೆ, ಒಬ್ಬ ಅಸಮರ್ಥ ವ್ಯಕ್ತಿ ಹಣ ಕೊಟ್ಟು ಪ್ರಶ್ನೆ ಪತ್ರಿಕೆಗಳನ್ನು ಖರೀದಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪಾಸಾಗಿ ದೊಡ್ಡ ಹುದ್ದೆಗೆ ಹೋದರೆ ಅವನು ಮಾಡಬಹುದಾದ ಅನಾಹುತಗಳನ್ನು ಕಲ್ಪನೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಅವನು ಡಾಕ್ಟರ್ ಆದರೆ ರೋಗಿಗಳ ಪರಿಸ್ಥಿತಿ ಏನಾಗಬೇಕು? ಮನುಷ್ಯರನ್ನು ಕಾಪಾಡುವ ಬದಲು ಅವನು ಸಾಯಿಸುತ್ತಾನೆ. ಆದರೆ ಅವನಿಗೆ ಶಿಕ್ಷೆಯಾಗುವುದಿಲ್ಲ. ಏಕೆಂದರೆ ಅವನು ಡಾಕ್ಟರ್! ಹೀಗಾಗಿ ಪ್ರಶ್ನೆ ಪತ್ರಿಕೆ ಸೋರಿಕೆಯಂತಹ ಅಪರಾಧಗಳನ್ನು ದೇಶದ್ರೋಹವೆಂದು ಪರಿಗಣಿಸಬೇಕು. ಅದಕ್ಕೆ ನೀಡುವ ಶಿಕ್ಷೆ ಅತ್ಯಂತ ಕಠಿಣವಾಗಿರಬೇಕು. ಎಷ್ಟು ಕಠಿಣವಾಗಿರಬೇಕು ಅಂದರೆ, ಪ್ರಶ್ನೆ ಪತ್ರಿಕೆ ಸೋರಿಕೆಗೆ ಕೈಹಾಕುವವರು ಗಡಗಡ ನಡುಗಬೇಕು. ಇಷ್ಟಕ್ಕೂ ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡುವುದು ಕೂಡ ಒಂದು ರೀತಿಯಲ್ಲಿ ಭಯೋತ್ಪಾದನೆಯೇ ಆಗಿದೆ!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:126

ಸಮಾಚಾರ ಸಣ್ಣದಲ್ಲ

ಹೊರ್ಮುಜ್ ಹಿಡಿತಕ್ಕೆ ಹೊಸಗಡಿ ಗುರುತು

ಟೆಹರಾನ್: ಹೊರ್ಮುಜ್ ಜಲಸಂಧಿಯ ಪ್ರಾಮುಖ್ಯತೆಯನ್ನು ಫೆ.28ರ ನಂತರದ ಯುದ್ಧದಲ್ಲಿ ಕಂಡುಕೊಂಡಿರುವ ಇರಾನ್ ಸರಕಾರ, ಈಗ ಈ ಕಿರಿದಾದ ಜಲಮಾರ್ಗದ ಮೇಲೆ ಮತ್ತಷ್ಟು ಹಿಡಿತ ಸಾಧಿಸಲು ಮುಂದಾಗಿದೆ. ಅದೇ ಕಾರಣವಾಗಿ ಹೊಸದಾಗಿ 'ಪರ್ಷಿಯನ್ ಗಲ್ಫ್ ಜಲಸಂಧಿ ಪ್ರಾಧಿಕಾರ'(ಪಿಜಿಎಸ್ಎ)ವನ್ನು ರಚಿಸಿದೆ. ಆ ಮೂಲಕ ಹೊರ್ಮುಜ್ ಜಲಸಂಧಿ ನಿರ್ವಹಣಾ ಮೇಲ್ವಿಚಾರಣಾ ಪ್ರದೇಶದ ಗಡಿಗಳನ್ನು ಹೊಸದಾಗಿ ಗುರುತು ಮಾಡುವ ಕಾರ್ಯವನ್ನು ಇತ್ತೀಚೆಗೆ ನಡೆಸಿದೆ. ಇರಾನ್‌ನ ಕುಹ್ ಮೊಬಾರಕ್ ಮತ್ತು ಹೊರ್ಮುಜ್ ಜಲಸಂಧಿಯ ಪೂರ್ವ ಭಾಗದಲ್ಲಿರುವ 'ಯುಎಇ' ಪುಜೈರಾದ ದಕ್ಷಿಣವನ್ನು ಸಂಪರ್ಕಿಸುವ ರೇಖೆಯಿಂದ 'ಪಿಜಿಎಸ್ಎ'ಯ ಮೇಲ್ವಿಚಾರಣಾ ಪ್ರದೇಶ ಆರಂಭವಾಗುತ್ತದೆ. ಇರಾನ್‌ನ ಕೇಶ್ಮ್ ದ್ವೀಪದ ಅಂತ್ಯ ಹಾಗೂ ಹೊರ್ಮುಜ್ ಜಲಸಂಧಿಯ ಪಶ್ಚಿಮದಲ್ಲಿರುವ 'ಯುಎಇ' ದೇಶದ 'ಉಮ್ ಅಲ್-ಖೈವೈನ್'ನ್ನು ಸಂಪರ್ಕಿಸುವ ರೇಖೆಯವರೆಗೂ ಇದೆ ಎಂದು ಇರಾನ್ ಹೇಳಿದೆ.

ರುದ್ರಪ್ರಯಾಗ ಭೂ ಕುಸಿತ, ಜನರ ರಕ್ಷಣೆ

ಡೆಹರಾಡೂನ್: ಉತ್ತರಾಖಂಡ ರಾಜ್ಯದ ಪುಣ್ಯಕ್ಷೇತ್ರ ರುದ್ರಪಯಾಗ ಮಾರ್ಗದಲ್ಲಿ ಬುಧವಾರ ನಸುಕಿನಲ್ಲಿ ಭೂಕುಸಿತವಾಗಿದೆ. ಪರಿಣಾಮವಾಗಿ 10 ಸಾವಿರಕ್ಕೂ ಅಧಿಕ ಯಾತ್ರಿಕರು ಸಂಕಷ್ಟಕ್ಕೆ ಸಿಲುಕಿದ್ದರು. ಕೇಂದ್ರದ ಎನ್‌ಡಿಆರ್‌ಎಫ್ ಮತ್ತು ರಾಜ್ಯದ ರಕ್ಷಣಾ ತಂಡಗಳು ಜಂಟಿ ಕಾರ್ಯಾಚರಣೆ ನಡೆಸಿ 10,450 ಯಾತ್ರಿಕರನ್ನು ರಕ್ಷಣೆ ಮಾಡಿವೆ. ಸುರಕ್ಷಿತ ಸ್ಥಳಕ್ಕೆ ಕರೆತಂದು ಬಿಟ್ಟಿವೆ.

ಮದರಸಾಗಳಲ್ಲೂ ವಂದೇಮಾತರಂ...

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿನ ನೂತನ ಬಿಜೆಪಿ ಸರಕಾರ, ರಾಜ್ಯದಲ್ಲಿರುವ ಮದರಸಾಗಳಲ್ಲಿಯೂ 'ವಂದೆ ಮಾತರಂ ರಾಷ್ಟ್ರೀಯ ಗೀತೆಯ ಗಾಯನ ಕಡ್ಡಾಯ. ಇದು ತಕ್ಷಣದಿಂದಲೇ ಜಾರಿಗೆ ಬರಬೇಕು' ಎಂಬ ಆದೇಶವನ್ನು ಗುರುವಾರ ಹೊರಡಿಸಿದೆ. ಶಾಲೆಗಳಲ್ಲಿ ತರಗತಿ ಆರಂಭಕ್ಕೆ ಮುನ್ನ ರಾಷ್ಟ್ರಗೀತೆಗಳ ಸಾಮೂಹಿಕ ಗಾಯನ ನಡೆಯುವಂತೆಯೇ ಮದರಸಾದಲ್ಲಿಯೂ ವಂದೇಮಾತರಂ ಮತ್ತು ರಾಷ್ಟ್ರಗೀತೆ ಜನಗಣಮನವನ್ನು ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಕಡ್ಡಾಯ ಹಾಡಿಸಬೇಕು ಎಂದು ಶಿಕ್ಷಣ ಇಲಾಖೆಯ ಆದೇಶದಲ್ಲಿ ಹೇಳಲಾಗಿದೆ. ಶಿಕ್ಷಣ ಇಲಾಖೆ ಅಡಿ ಕಾರ್ಯನಿರ್ವಹಿಸುವ ಸರಕಾರಿ ಮದರಸಾ, ಅನುದಾನಿತ ಮದರಸಾ, ಸರಕಾರದ ಅನುಮೋದನೆ ಪಡೆದ ಶಿಶುಶಿಕ್ಷಣ ಸಂಸ್ಥೆಗಳಿಗೆ ಈ ಆದೇಶ ಅನ್ವಯ ಎಂದು ತಿಳಿಸಲಾಗಿದೆ.

ಪಂಜಾಬ್ ಪೆಟ್ರೋಲ್ ಬಂಕ್ ಖಾಲಿ-ಬೀಗ

ಚಂಡೀಗಢ: ಪೆಟ್ರೋಲ್-ಡೀಸೆಲ್ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದರಿಂದ ಪಂಜಾಬ್ ರಾಜ್ಯದ ಕೆಲವೆಡೆ ಪೆಟ್ರೋಲ್ ಬಂಕ್‌ಗಳು ಅನಿವಾರ್ಯವಾಗಿ

ಬಂದ್ ಆಗಿವೆ. ಇಂಧನ ಪೂರೈಕೆಯಲ್ಲಿನ ಈ ಸಮಸ್ಯೆ ಪರಿಹರಿಸಲು ಸರಕಾರ ತಕ್ಷಣ ಮಧ್ಯ ಪ್ರವೇಶಿಸಬೇಕು ಎಂದು ಪೆಟ್ರೋಲ್ ಬಂಕ್‌ಗಳ ಮಾಲೀಕರ ಒಕ್ಕೂಟ ಮುಖ್ಯಮಂತ್ರಿ ಭಗವಂತ್ ಮಾನ್ ಅವರಿಗೆ ಇಮೇಲ್ ಮೂಲಕ ಒತ್ತಾಯಿಸಿದೆ. ರಾಜ್ಯದಲ್ಲಿ 3,700 ಪೆಟ್ರೋಲ್ ಬಂಕ್‌ಗಳಿದ್ದು, ಶೇ.25ರಷ್ಟು ಬಂಕ್‌ಗಳು ಗ್ರಾಮೀಣ ಭಾಗದಲ್ಲಿವೆ. ಗೋಧಿ ಕೊಯ್ಲು ಶುರುವಾಗಿರುವುದರಿಂದ ಡೀಸೆಲ್‌ಗೆ ಬೇಡಿಕೆ ಹೆಚ್ಚಿದೆ. ಪೆಟ್ರೋಲ್ ಬಂಕ್‌ಗಳಲ್ಲಿ 1000 ಲೀ. ಪೆಟ್ರೋಲ್ ಮತ್ತು 2000 ಲೀ. ಡೀಸೆಲ್ ಸಂಗ್ರಹವನ್ನು ಕಾಯ್ದುಕೊಳ್ಳುವಂತೆ ಜಿಲ್ಲಾಧಿಕಾರಿ ಗಳು ಸೂಚನೆ ನೀಡಿದ್ದರೂ ಸಮಸ್ಯೆ ಬಿಗಡಾಯಿಸಿದೆ.

ಉ.ಪ್ರ. ಕಾಲೇಜಿಗೂ 'ಸಮವಸ್ತ್ರ ಕಡ್ಡಾಯ'

ಲಖನೌ: ಉತ್ತರ ಪ್ರದೇಶದಲ್ಲಿನ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಲ್ಲಿನ ವಿದ್ಯಾರ್ಥಿಗಳಿಗೂ ಸಮವಸ್ತ್ರವನ್ನು ಕಡ್ಡಾಯಗೊಳಿಸಲಾಗಿದೆ. ಈ ಸಂಬಂಧ ರಾಜ್ಯಪಾಲರಾದ ಆನಂದಿ ಬೆನ್ ಅವರ ಕಚೇರಿಯಿಂದ ಸುತ್ತೋಲೆ ಹೊರಡಿಸಲಾಗಿದೆ. ಶಾಲೆಗಳಲ್ಲಿ ಇರುವಂತೆ ಕಾಲೇಜುಗಳಲ್ಲಿಯೂ ಸಮಾನತಾ ಭಾವ ಮೂಡಬೇಕು. ಬಡವ-ಶ್ರೀಮಂತ ಭೇದ ಕಾಣಬಾರದು ಎಂಬ ಕಾರಣಕ್ಕಾಗಿಯೇ ಸಮವಸ್ತ್ರವನ್ನು ಕಡ್ಡಾಯಗೊಳಿಸಲಾಗಿದೆ ಎಂದು ರಾಜ್ಯಪಾಲರ ನಿರ್ದೇಶನದಲ್ಲಿ ವಿವರಿಸಲಾಗಿದೆ.

{ ಇಕ್ಬಾಲ್ ಅನ್ಸಾರಿ } ಬಾಬರಿ ಮಸೀದಿ ಅರ್ಜಿದಾರ

ಗೋವನ್ನು ಹಿಂದೂಗಳು ಪೂಜಿಸುತ್ತಾರೆ. ಮುಸ್ಲಿಮರೂ ಗೋವುಗಳನ್ನು ಗೌರವಿಸಬೇಕು, ಹಾಗಾಗಿ ಗೋಹತ್ಯೆಯನ್ನು ನಿಲ್ಲಿಸಬೇಕು. ಏಕೆಂದರೆ, ಗೋಹತ್ಯೆ ವಿಚಾರವನ್ನೇ ಮುಂದಿಟ್ಟು ಕೋಮುಗಲಭೆ ಸೃಷ್ಟಿಸುವ ಹಾಗೂ ಸಮುದಾಯವನ್ನು ಕೆಣಕುವ ಕೆಲಸಗಳಾಗುತ್ತಿವೆ. ಹಾಗಾಗಿ ಕೇಂದ್ರ ಸರಕಾರ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು.

ಕೇಂದ್ರ ಆರೋಗ್ಯ ಸಚಿವಾಲಯದಿಂದ ರಾಜ್ಯಗಳಿಗೆ ಮಾರ್ಗಸೂಚಿ | ಅಂತಾರಾಷ್ಟ್ರೀಯ ವಿ.ನಿಲ್ದಾಣ, ಬಂದರುಗಳಲ್ಲಿ ಸ್ಕ್ರೀನಿಂಗ್ ಆರಂಭ | ಮುಖ್ಯವಾಗಿ ಆಫ್ರಿಕಾ ಖಂಡ ದೇಶಗಳ ಹಾದುಬಂದವರ ತಪಾಸಣೆ | ಮೊದಲಿಗೆ ಕಾಂಗೊ, ಬಳಿಕ ಉಗಾಂಡಾದಲ್ಲಿ ಕಾಣಿಸಿಕೊಂಡ ವೈರಾಣು

ಇಬೋಲಾ ತಡೆಗೆ ವಿಮಾನ ನಿಲ್ದಾಣಗಳಲ್ಲಿ ಕಟ್ಟೆಚ್ಚರ

ದೆಹಲಿ: ಆಫ್ರಿಕಾ ಖಂಡದ ಕಾಂಗೊ ಮತ್ತು ಉಗಾಂಡಾದಲ್ಲಿ ಮಾರಣಾಂತಿಕ 'ಬುಂಡಿಬುಗ್ಯೊ' ಎಬೋಲಾ ವೈರಸ್ ವೇಗವಾಗಿ ಹರಡುತ್ತಿದ್ದು, 139 ಜನರನ್ನು ಆಹುತಿ ತೆಗೆದುಕೊಂಡಿದೆ. 600ಕ್ಕೂ ಅಧಿಕ ಮಂದಿಯನ್ನು ಸೋಂಕಿತರಾಗಿ ಸಾವು-ಬದುಕಿನ ನಡುವೆ ಹೋರಾಡುವಂತೆ ಮಾಡಿದೆ. ಹಾಗಾಗಿಯೇ 'ವಿಶ್ವ ಆರೋಗ್ಯ ಸಂಸ್ಥೆ'(ಡಬ್ಲ್ಯುಎಚ್‌ಒ) ಜಾಗತಿಕ ಮಟ್ಟದ 'ಆರೋಗ್ಯ ತುರ್ತು ಪರಿಸ್ಥಿತಿ' ಘೋಷಿಸಿದೆ.

ಇದರಿಂದ ಎಚ್ಚೆತ್ತ ಭಾರತ ಸರಕಾರವೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿದೆ. ದೇಶದ ಪ್ರಮುಖ ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಕಟ್ಟೆಚ್ಚರ ಘೋಷಿಸಿದ್ದು, ಇಲ್ಲಿಗೆ ವಿಮಾನ, ಹಡಗುಗಳಲ್ಲಿ ಬರುವ ಪ್ರಯಾಣಿಕರನ್ನು ಕಟ್ಟುನಿಟ್ಟಿನಿಂದ ಆರೋಗ್ಯ ತಪಾಸಣೆಗೆ ಒಳಪಡಿಸುವುದೂ ಸೇರಿದಂತೆ ಸ್ಪಷ್ಟ ಮಾರ್ಗಸೂಚಿ ಪ್ರಕಟಿಸಿದೆ. ಕೇಂದ್ರ ಆರೋಗ್ಯ ಕಾರ್ಯದರ್ಶಿ ಪುಣ್ಯಸಲಿಲ ಶ್ರೀವಾಸ್ತವ ಅವರ ನೇತೃತ್ವದಲ್ಲಿ ಉನ್ನತ ಮಟ್ಟದ ಸಭೆ ನಡೆಸಲಾಗಿದ್ದು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಸರಕಾರಗಳು 'ಎಬೋಲಾ' ವೈರಸ್ ಭಾರತ ಪ್ರವೇಶಿಸದಂತೆ ತಡೆಯಲು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಲಾಗಿದೆ.

ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ವೈದ್ಯಕೀಯ ತಪಾಸಣೆ, ಮಾಸ್ಕ್ ಧರಿಸುವುದು, ಸೋಂಕಿನ ಶಂಕೆ ಇದ್ದವರಿಗೆ ಕ್ವಾರಂಟೈನ್ (ಏಕಾಂತವಾಸ) ವ್ಯವಸ್ಥೆ, ಬೇರೆ ರೋಗಗಳಿದ್ದವರ ನಿರ್ವಹಣೆ, ಪ್ರಯೋಗಾಲಯ ಪರೀಕ್ಷೆಗಳಿಗೆ ಸಂಬಂಧಿಸಿ ಪ್ರಕಟಿದ ಮಾರ್ಗಸೂಚಿ ಅನುಸರಿಸಲು ಶ್ರೀವಾಸ್ತವ ಸೂಚನೆ ನೀಡಿದ್ದಾರೆ. ಸಂಬಂಧಪಟ್ಟ ಸಚಿವಾಲಯ-ಇಲಾಖೆಗಳು ಆರೋಗ್ಯ ಸಚಿವಾಲಯದ ಜತೆ ನಿರಂತರ ಸಮನ್ವಯ ಸಾಧಿಸಿರಬೇಕು. ಕಾಂಗೋ, ಉಗಾಂಡಾ ಮತ್ತು ದಕ್ಷಿಣ ಸುಡಾನ್‌ನಲ್ಲಿ ಎಬೋಲಾ ಸೋಂಕು ಹರಡಿದ್ದು, ಈ ದೇಶಗಳಿಂದ ಬರುವ ಅಥವಾ ಆ ದೇಶಗಳ ಮಾರ್ಗವಾಗಿ ಪ್ರಯಾಣಿಸುವವರ ಬಗ್ಗೆ ಇಮಿಗ್ರೇಷನ್ ಕ್ಲಿಯರೆನ್ಸ್‌ಗೂ ಮುನ್ನ ವಿಮಾನ ನಿಲ್ದಾಣ/ಬಂದರಿನಲ್ಲಿರುವ ಹೆಲ್ತ್‌ಡೆಸ್ಕ್ ಕಡ್ಡಾಯವಾಗಿ ಮಾಹಿತಿ ನೀಡಬೇಕು ಎಂದೂ ಹೇಳಿದ್ದಾರೆ.

ಭಾರತದಲ್ಲಿ ಸದ್ಯ ಇಬೋಲಾ ಪ್ರಕರಣ ಕಂಡುಬಂದಿಲ್ಲ. ಈಗ ಕೈಗೊಂಡಿರುವುದು ಕೇವಲ ಮುನ್ನೆಚ್ಚರಿಕೆ ಕ್ರಮಗಳ ಭಾಗವಾಗಿವೆ. ಹಾಗಾಗಿ ಯಾರೂ ಆತಂಕಕ್ಕೆ ಒಳಗಾಗಬೇಕಿಲ್ಲ ಎಂದೂ ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟಪಡಿಸಿದೆ.

ಭಾರತದ ವಿಮಾನ ನಿಲ್ದಾಣಗಳಲ್ಲಿ ಆಫ್ರಿಕಾ ಖಂಡದಿಂದ ಬಂದ ಪ್ರಯಾಣಿಕರ ಆರೋಗ್ಯ ತಪಾಸಣೆ.



ಸಾರ್ವಜನಿಕರಿಗೆ ಸೂಚನೆ

- ಮಾರ್ಗಸೂಚಿಯಲ್ಲಿ ಕಾಂಗೋ, ಉಗಾಂಡ ಮತ್ತು ದಕ್ಷಿಣ ಸುಡಾನ್ ಮೊದಲಾದ ಆಫ್ರಿಕಾ ಖಂಡದ ದೇಶಗಳನ್ನು ಹೈ-ರಿಸ್ಕ್ ದೇಶಗಳ ಪಟ್ಟಿಗೆ ಸೇರಿಸಲಾಗಿದೆ.
- ಎಬೋಲಾ ಸೋಂಕಿತ ವ್ಯಕ್ತಿಯ ಸಂಪರ್ಕಕ್ಕೆ ಒಳಪಟ್ಟ ಪ್ರಯಾಣಿಕರು ಇಮಿಗ್ರೇಷನ್ ಪ್ರಕ್ರಿಯೆಗೂ ಮುನ್ನವೇ ವಿಮಾನ ನಿಲ್ದಾಣ/ಬಂದರಿನಲ್ಲಿರುವ ಹೆಲ್ತ್‌ಡೆಸ್ಕ್ ಅಥವಾ ಆರೋಗ್ಯ ಅಧಿಕಾರಿಗೆ ಸ್ವತಃ ವರದಿ ಮಾಡಿಕೊಳ್ಳಬೇಕು.
- ಸುರಕ್ಷತೆ-ಅಂತಾರಾಷ್ಟ್ರೀಯ ಆರೋಗ್ಯ ನಿಯಮಗಳ ಪಾಲನೆಗಾಗಿ ವಿಮಾನ ನಿಲ್ದಾಣ/ಬಂದರಿನಲ್ಲಿ ಎಲ್ಲಾ ಪ್ರಯಾಣಿಕರೂ ನಿಗದಿತ ಆರೋಗ್ಯ ತಪಾಸಣೆಗೆ ಒಳಗಾಗಬೇಕು.
- ದೆಹಲಿ ಸಹಿತ ದೇಶದ ಪ್ರಮುಖ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ಕ್ರಮಗಳನ್ನು ಕಡ್ಡಾಯಗೊಳಿಸಲಾಗಿದೆ. ಇಬೋಲಾ ಸೋಂಕಿನ ಕುರಿತು ಸ್ಪಷ್ಟ ಮಾರ್ಗಸೂಚಿ ಪ್ರದರ್ಶಿಸಲಾಗಿದೆ.
- ಜ್ವರ, ತೀವ್ರ ನಿಶ್ಯಕ್ತಿ, ತಲೆನೋವು, ಸ್ನಾಯು ನೋವು, ವಾಂತಿ, ಭೇದಿ, ಗಂಟಲು ನೋವು ಮತ್ತು ದೇಹದಲ್ಲಿ ಅಸಹಜ ರಕ್ತಸ್ರಾವ ಲಕ್ಷಣಗಳು ಕಂಡುಬಂದ ಪ್ರಯಾಣಿಕರು ತಕ್ಷಣ ವಿಮಾನ ನಿಲ್ದಾಣ/ಬಂದರು ಹೆಲ್ತ್ ಡೆಸ್ಕ್ ಸಂಪರ್ಕಿಸಬೇಕು.
- ಆಫ್ರಿಕಾ ಖಂಡದ ಪ್ರವಾಸ ಮುಗಿಸಿ ಬಂದವರು 21 ದಿನಗಳ ಅವಧಿಯಲ್ಲಿ ಜ್ವರ ಅಥವಾ ಬೇರಾವುದೇ ರೋಗಲಕ್ಷಣ ಕಂಡುಬಂದರೆ, ತಕ್ಷಣ ತಜ್ಞ ವೈದ್ಯರನ್ನು ಸಂಪರ್ಕಿಸಬೇಕು ಮತ್ತು ತಮ್ಮ ಪ್ರಯಾಣದ ವಿವರಗಳನ್ನು ತಪ್ಪದೇ ವೈದ್ಯರಿಗೆ ನೀಡಬೇಕು.

2 ಲಸಿಕೆ ಸಿದ್ಧ: ಕ್ಲಿನಿಕಲ್ ಟೆಸ್ಟ್ ಬಾಕಿ

ಕಾಂಗೊ ದೇಶವೊಂದರಲ್ಲೇ ಎಬೊಲಾಗೆ 80 ಮಂದಿ ಬಲಿಯಾಗಿದ್ದಾರೆ. 250ಕ್ಕೂ ಅಧಿಕ ಮಂದಿಯಲ್ಲಿ ಎಬೊಲಾ ವೈರಸ್ ಸೋಂಕಿನ ಲಕ್ಷ್ಣಗಳು ಕಾಣಿಸಿಕೊಂಡಿವೆ ಎಂದು ವರದಿಯಾಗಿದೆ.

ಈಗ ಕಾಣಿಸಿಕೊಂಡಿರುವ ಎಬೋಲಾ ವೈರಸ್ 'ಬುಂಡಿಬುಗ್ಯೊ ಸ್ಪೀಸೀಸ್' ಎಂದು ತಿಳಿದುಬಂದಿದೆ. ಇದು ಮಾರಣಾಂತಿಕ ವೈರಾಣುವಾಗಿದೆ. ಈ ವೈರಸ್ ಅನ್ನು ಮನುಷ್ಯರ ದೇಹ ಪ್ರವೇಶಿಸಿದಲ್ಲಿ ಅದನ್ನು ನಿಖರವಾಗಿ ನಾಶ ಪಡಿಸುವಂತಹ ವ್ಯಾಕ್ಸಿನ್ ಕಂಡು ಹಿಡಿಯಲು ಏನಿಲ್ಲವೆಂದರೂ 9 ತಿಂಗಳುಗಳೇ ಬೇಕಾಗಲಿವೆ.

ಸದ್ಯಕ್ಕೆ ಬುಂಡಿಬುಗ್ಯೋ ಸ್ಪೀಸೀಸ್ ಎಬೊಲಾ ವೈರಾಣುಗಳ ಹರಡುವಿಕೆಯನ್ನು ತಡೆಯಲು ಸಾಧ್ಯವಾಗುವಂತಹ ಎರಡು ಸಂಭಾವ್ಯ ಲಸಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಆದರೆ, ಈ ಎರಡೂ ಲಸಿಕೆಗಳನ್ನು ಕ್ಲಿನಿಕಲ್ ಟೆಸ್ಟ್‌ಗೆ(ಮಾನವರ ಮೇಲೆ ಪ್ರಯೋಗಕ್ಕೆ) ಒಳಪಡಿಸಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆಗೆ ಹಿರಿಯ ಸಲಹೆಗಾರರಾದ ಡಾ.ವಸೀ ಮೂರ್ತಿ ಜಿನೀವಾದಲ್ಲಿನ ವಿಶ್ವ ಆರೋಗ್ಯ ಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೊದಲಿಗೆ ಎಬೋಲಾ ಸೋಂಕು ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೊದಲ್ಲಿ ಕಾಣಿಸಿಕೊಂಡಿತು. ಆ ಬಳಿಕ ನೆರೆಯ ಉಗಾಂಡಾದಲ್ಲಿ ಇಬ್ಬರು ಸೋಂಕಿತರು ಪತ್ತೆಯಾದರು. ಸದ್ಯ ಕಾಂಗೊದಲ್ಲಿ 51 ಮಂದಿಗೆ ಸೋಂಕು ತಗುಲಿರುವುದು ದೃಢಪಟ್ಟಿದೆ. ಪ್ರಸ್ತುತ 600ಕ್ಕೂ ಅಧಿಕ ಜನರಲ್ಲಿ ಎಬೊಲಾ ಸೋಂಕು ಇರುವ ಶಂಕೆ ಇದೆ. ಅವರನ್ನು ಏಕಾಂತ ವಾಸದಲ್ಲಿರಿಸಲಾಗಿದೆ. ಈವರೆಗೆ ಎಬೊಲಾ ಸೋಂಕಿಗೆ ಆಫ್ರಿಕಾ ಖಂಡದ 3 ದೇಶಗಳಲ್ಲಿ ಒಟ್ಟು 139 ಮಂದಿ ಸಾವಿಗೀಡಾಗಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥರಾದ ಡಾ.ಟೆಡ್ರೋಸ್ ಅಧನೋಮ್ ಘೆಬ್ರೆಯೇಸಸ್ ಜಿನೀವಾದಲ್ಲಿನ ಡಬ್ಲ್ಯುಎಚ್‌ಒ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.



ಎಬೊಲಾ ರೋಗ ಲಕ್ಷಣಗಳು

ಎಬೊಲಾ ವೈರಸ್ ಮಾರಣಾಂತಿಕ. ಅವು ಅರಣ್ಯದಲ್ಲಿ ಹಣ್ಣುಗಳನ್ನು ತಿನ್ನುವ ಬಾವಲಿಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆ ಹಣ್ಣುಗಳನ್ನು ಸೇವಿಸುವ ಮನುಷ್ಯರ ದೇಹವನ್ನು ಎಬೊಲಾ ವೈರಸ್ ಪ್ರವೇಶಿಸುತ್ತದೆ. ಬಳಿಕ ಅವರ ಸಂಪರ್ಕಕ್ಕೆ ಬರುವವರೆಲ್ಲರಲ್ಲೂ ಹರಡುತ್ತಾ ಹೋಗುತ್ತದೆ.



- ದೇಹ ತಾಪಮಾನ ಏಕಾಏಕಿ 101.5 ಡಿ. ಫ್ಯಾರನ್‌ಹೀಟ್ (38.6 ಡಿಗ್ರಿ ಸೆಲ್ಸಿಯಸ್)ಗಿಂತಲೂ ಅಧಿಕವಾಗುತ್ತದೆ.
- ದೇಹದಲ್ಲಿ ಅಲ್ಲಲ್ಲಿ ರಕ್ತ ಹೆಪ್ಪುಗಟ್ಟುವುದು ಇಲ್ಲವೇ ರಕ್ತಸೋರುವುದು

ದೆಹಲಿ ಶೃಂಗ ಮುಂದಕ್ಕೆ

ಹೊಸದಿಲ್ಲಿ: ಆಫ್ರಿಕಾದ ಕೆಲವು ಭಾಗಗಳಲ್ಲಿ ಆರೋಗ್ಯ ಪರಿಸ್ಥಿತಿ ವಿಷಮಿಸಿದ ಹಿನ್ನೆಲೆಯಲ್ಲಿ ಮೇ 28ರಿಂದ ದೆಹಲಿಯಲ್ಲಿ ನಡೆಯಬೇಕಿದ್ದ ಭಾರತ-ಆಫ್ರಿಕಾ ಒಕ್ಕೂಟ ನಡುವಿನ ಶೃಂಗಸಭೆಯನ್ನು ಮುಂದೂಡಲಾಗಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಸ್ಪಷ್ಟಪಡಿಸಿದೆ. ಆಫ್ರಿಕಾದ ಹಲವಾರು ಭಾಗಗಳಲ್ಲಿ ಮಾರಕ ಎಬೋಲಾ ವೈರಸ್ ಪ್ರಕರಣಗಳು ವರದಿಯಾಗಿವೆ. ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯದ ದಕ್ಷಿಣ ಕಿವು ಪ್ರಾಂತ್ಯದಲ್ಲಿ ಹೆಚ್ಚಿನ ಪ್ರಕರಣಗಳು ದಾಖಲಾಗಿದ್ದು, ಆಫ್ರಿಕಾದ ಇತರ ಭಾಗಗಳಿಗೂ ಹರಡುವ ಭೀತಿ ಎದುರಾಗಿದೆ. ಭಾರತ ಮತ್ತು ಆಫ್ರಿಕನ್ ಒಕ್ಕೂಟವು ನಾಲ್ಕನೇ ಭಾರತ-ಆಫ್ರಿಕಾ ವೇದಿಕೆಯ ಶೃಂಗಸಭೆಯನ್ನು ನಡೆಸಲು ಸಿದ್ಧತೆ ನಡೆಸುತ್ತಿದ್ದಾಗ, ಆಫ್ರಿಕಾದಲ್ಲಿನ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು, ಶೃಂಗಸಭೆಯನ್ನು ಮುಂದೂಡುವ ಬಗ್ಗೆ ಒಮ್ಮತದ ತೀರ್ಮಾನ ಕೈಗೊಳ್ಳಲಾಗಿದೆ ಎಂದರು.

ಕಾಂಗ್ರೆಸ್‌ಗೆ 6 ದಶಕ ಬಳಿಕ ತ.ನಾಡಿನಲ್ಲಿ ಅಧಿಕಾರ | ವಂದೇಮಾತರಂ ಗಾಯನ

ಟಿವಿಕೆಯ 21, ಕಾಂಗ್ರೆಸ್‌ನ ಇಬ್ಬರು ಸಚಿವರಾಗಿ ಪ್ರತಿಜ್ಞೆ

ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಸಚಿವ ಸಂಪುಟ ವಿಸ್ತರಿಸಿದ್ದು, ತಮಿಳಿಗ ವೆಟ್ರಿ ಕಳಗಂ(ಟಿವಿಕೆ) ಪಕ್ಷದ 21 ಹಾಗೂ ಕಾಂಗ್ರೆಸ್‌ನ ಇಬ್ಬರು ಶಾಸಕರು ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಲೋಕ ಭವನದಲ್ಲಿ ಗುರುವಾರ ಬೆಳಗ್ಗೆ 10ಕ್ಕೆ ನಡೆದ ಸಮಾರಂಭದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್, ನೂತನ 23 ಸಚಿವ ರಿಗೆ ಅಧಿಕಾರ- ಗೌಪ್ಯತೆಯ ಪ್ರತಿಜ್ಞಾವಿಧಿ ಬೋಧಿಸಿದರು. ಇದರೊಂದಿಗೆ, ಸಿಎಂ ಜೋಸೆಫ್ ವಿಜಯ್ ನೇತೃತ್ವದ ಸಚಿವ ಸಂಪುಟದ ಬಲ 33ಕ್ಕೆ ಹೆಚ್ಚಿದೆ. ಇನ್ನೂ ಇಬ್ಬರಿಗೆ ಸಂಪುಟದಲ್ಲಿ ಅವಕಾಶ ಇದೆ. ಟಿವಿಕೆಯಿಂದ ಶ್ರೀನಾಥ್, ಕಮಲಿ ಎಸ್., ಸಿ.ವಿಜಯಲಕ್ಷ್ಮಿ, ಆರ್.ವಿ.ರಂಜಿತ್ ಕುಮಾರ್, ವಿನೋದ್, ರಾಜೀವ್, ಬಿ.ರಾಜಕುಮಾರ್, ವಿ. ಗಾಂಧಿರಾಜ್, ಮದನ್ ರಾಜಾ ಪಿ., ಜಗದೇಶ್ವರಿ ಕೆ. ಮತ್ತು ಎಂ.ವಿಜಯ್ ಬಾಲಾಜಿ ಹಾಗೂ ಕಾಂಗ್ರೆಸ್‌ನಿಂದ ಎಸ್.ರಾಜೇಶ್ ಕುಮಾರ್ ಮತ್ತು ಪಿ. ವಿಶ್ವನಾಥನ್ ಸಂಪುಟ ಸೇರಿದ್ದಾರೆ.

ಕೈಗೆ ಕಡೆಗೂ ಅಧಿಕಾರ: ಕಾಂಗ್ರೆಸ್ ಪಕ್ಷಕ್ಕೆ ಆರು ದಶಕಗಳ ನಂತರ ತಮಿಳುನಾಡಿನಲ್ಲಿ ಅಧಿಕಾರ ಸಿಕ್ಕಿದೆ. ಆದರೆ ಟಿವಿಕೆ ಪಕ್ಷ ನೇತೃತ್ವದ ಸಮ್ಮಿಶ್ರ ಸರಕಾರಕ್ಕೆ ಬೇಷ ರತ್ ಬೆಂಬಲ ನೀಡಿರುವ

ಚೆನ್ನೈನ ಲೋಕಭವನದಲ್ಲಿ ಗುರುವಾರ 23 ಸಚಿವರು ಪ್ರಮಾಣವಚನ ಸ್ವೀಕರಿಸಿದ ಬಳಿಕ ವಂದೇಮಾತರಂ ರಾಷ್ಟ್ರೀಯ ಗೀತೆಗೆ ಸಿಎಂ ವಿಜಯ್, ರಾಜ್ಯಪಾಲ ಅರ್ಲೇಕರ್ ಮತ್ತಿತರ ಗಣ್ಯರು ದನಿಗೂಡಿಸಿದರು.

ಎಐಎಡಿಎಂಕೆ ಬಂಡಾಯ ಬಣದ 25 ಶಾಸಕರಲ್ಲಿ ಒಬ್ಬರಿಗೂ ಸಚಿವರಾಗುವ ಅವಕಾಶ ಸಿಕ್ಕಿಲ್ಲ.

ಈ ಮಧ್ಯೆ, 'ಭಾರತೀಯ ಯೂನಿಯನ್ ಮುಸ್ಲಿಂ ಲೀಗ್'(ಐಯುಎಂಎಲ್) ಕೂಡಾ ವಿಜಯ್ ಸಂಪುಟಕ್ಕೆ ಸೇರಲು ಸಮ್ಮತಿಸಿದೆ. ಆದರೆ ಯಾರು ಸಚಿವರಾಗಬೇಕು ಎಂಬುದನ್ನು ನಿರ್ಧರಿಸಿಲ್ಲ. ಇನ್ನೊಂದೆಡೆ ವಿದುತಲೈ ಚಿರುತೈಗಲ್ ಕಚ್ಚಿ(ವಿಸಿಕೆ) ಪಕ್ಷ ಸಂಪುಟ ಸೇರಬೇಕೆ ಬೇಡವೇ ಎಂಬ ಗೊಂದಲದಲ್ಲೇ ಇದೆ.

ಕಾಂಗ್ರೆಸ್ ಶಾಸಕನ ಲೋಪ ತಿದ್ದಿದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್

ಕಿಳ್ಳಿಯೂರು ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ರಾಜೇಶ್ ಕುಮಾರ್ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ

ವೇಳೆ ಪ್ರತಿಜ್ಞಾವಿಧಿಯ ಬದಲಾಗಿ ಲಿಖಿತ ಪ್ರತಿಜ್ಞಾವಿಧಿ ಓದುವ ಬದಲಾಗಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾಗಿದ್ದ ದಿವಂಗತ ಕಾಮರಾಜ್ ಮತ್ತು ರಾಜೀವ್ ಗಾಂಧಿ ಹಾಗೂ ಹಾಲಿ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಹೆಸರು ಶ್ಲಾಘಿಸಲಾರಂಭಿಸಿದರು. ತಕ್ಷಣವೇ ರಾಜೇಶ್‌ರನ್ನು ತಡೆದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್, 'ಇದು ಸಚಿವ ಸಂಪುಟ ಪ್ರಮಾಣ ವಚನ ಸ್ವೀಕಾರ ಸಮಾರಂಭ. ನೀವು ಹೇಳುತ್ತಿರುವುದು ಪ್ರಮಾಣ ವಚನದ ಭಾಗವಲ್ಲ. ನಿಮಗೆ ಅನಿಸಿದ್ದನ್ನೆಲ್ಲಾ ಹೇಳುವಂತಿಲ್ಲ. ನಿಮಗೆ ನೀಡಲಾಗಿರುವ ಲಿಖಿತ ಪ್ರತಿಜ್ಞಾವಿಧಿಯನ್ನಷ್ಟೇ ಓದಬೇಕು' ಎಂದು ತಿಳಿಹೇಳಿದರು. ವೇದಿಕೆಯಲ್ಲಿದ್ದ ಲೋಕಭವನದ ಅಧಿಕಾರಿ, ಶಾಸಕ ರಾಜೇಶ್ ಕೈಯಲ್ಲಿದ್ದ ಲಿಖಿತ ಪ್ರತಿಜ್ಞಾವಿಧಿಯ ಪ್ರತಿಯನ್ನು ತೋರಿಸಿದರು.

ನೀತಿ-ನಿಯಮ ಇಲ್ಲದ ಪಾಕ್: ಭಾರತ ಗುಡುಗು

ಸ್ವಂತ ಪ್ರಜೆಗಳ ಮೇಲೇ ಬಾಂಬ್ ಹಾಕುವ ಪಾಕ್: ಪರ್ವತನೇನಿ

ವಿಶ್ವಸಂಸ್ಥೆ: ತನ್ನದೇ ಪ್ರಜೆಗಳ ಮೇಲೆ ಬಾಂಬ್ ದಾಳಿ ನಡೆಸುವ ದೇಶ ಪಾಕಿಸ್ತಾನ ವ್ಯವಸ್ಥಿತ ನರಮೇಧದಲ್ಲಿ ತೊಡಗಿದೆ.

ನಿಯಮ, ನೈತಿಕತೆ ಇಲ್ಲದ ದೇಶದಲ್ಲಿ

ಇಂಥ ಹೇಯ ಕೃತ್ಯಗಳು ಎಂದಿಗೂ ಆಶ್ಚರ್ಯ ತರುವುದಿಲ್ಲ ಎಂದು ವಿಶ್ವಸಂಸ್ಥೆಯಲ್ಲಿ ಭಾರತ ತರಾಟೆ ತೆಗೆದುಕೊಂಡಿದೆ.

'ಸಶಸ್ತ್ರ ಸಂಘರ್ಷಗಳಲ್ಲಿ ನಾಗರಿಕರ ರಕ್ಷಣೆ' ಕುರಿತು ವಿಶ್ವಸಂಸ್ಥೆಯಲ್ಲಿನ ವಾರ್ಷಿಕ ಚರ್ಚೆ ಸಂದರ್ಭ ಪಾಕಿಸ್ತಾನದ ಪ್ರತಿನಿಧಿ ಆಸಿಮ್ ಇಫ್ತಿಖಾರ್ ಅಹ್ಮದ್, ಜಮ್ಮು-ಕಾಶ್ಮೀರ ವಿಷಯ ಪ್ರಸ್ತಾಪಿಸಿ ಭಾರತ ಸರಕಾರದ ವಿರುದ್ಧ ಆರೋಪ ಮಾಡಿದರು. ಅದರಿಂದ ಕ್ರುದ್ಧರಾದ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ ಪಾಕ್‌ನ ವಾಸ್ತವ ಸ್ಥಿತಿಯನ್ನು ಜಗತ್ತಿನೆದುರು ಅನಾವರಣಗೊಳಿಸಿ ನೆರೆ ದೇಶದ ಬಾಯಿ ಮುಚ್ಚಿಸಿದರು. ಅಫ್ಘಾನಿಸ್ತಾನ ಗಡಿಯಲ್ಲಿ ಪಾಕ್ ಸೇನೆ ಬಾಂಬ್ ದಾಳಿ ನಡೆಸುತ್ತಿದೆ. ನೂರಾರು ಅಮಾಯಕರ ಸಾವಿಗೆ ಕಾರಣವಾಗುತ್ತಿದೆ ಎಂದು ಗಮನ ಸೆಳೆದ ಹರೀಶ್, ಪಾಕ್‌ಗೆ ಸರಣಿ ಜನಾಂಗೀಯ ಹತ್ಯೆಗಳ ಇತಿಹಾಸವಿದೆ. ಅಂತಹ ಕಳಂಕಿತಕ್ಕೆ ದೇಶ ಭಾರತದ ವಿಚಾರವಾಗಿ ಮಾತನಾಡುವುದಕ್ಕೆ ಅರ್ಹತೆಯೇ ಇಲ್ಲ ಎಂದು ಗುಡುಗಿದರು.

ಮಾರ್ಚ್‌ನಲ್ಲಿ ಅಫ್ಘಾನಿಸ್ತಾನದ ಗಡಿಯಂಚಿನ 'ಒಮೀದ್ ಅಡಿಕ್ಷನ್ ಟ್ರೀಟ್‌ಮೆಂಟ್ ಸೆಂಟರ್' ಮೇಲೆ ಪಾಕ್ ದಾಳಿ ನಡೆಸಿದಾಗ 269 ರೋಗಿಗಳು ಸಾವನ್ನಪ್ಪಿ, 122 ಮಂದಿ ಗಾಯಗೊಂಡರು. ಹೀಗೆ 2026ರ ಮೊದಲ 3 ತಿಂಗಳಲ್ಲಿಯೇ ದೇಶದ ಗಡಿ ಬಳಿ ಪಾಕ್ ನಡೆಸಿದ ದಾಳಿಗಳಿಂದ ಅಫ್ಘನ್ ನೂರಾರು ಅಮಾಯಕರು ಸಾವಿಗೀಡಾಗಿ, 750 ನಾಗರಿಕರು ಗಾಯಗೊಂಡಿದ್ದಾರೆ. 94 ದಾಳಿಗಳಿಗೆ ಪಾಕ್‌ನ ಭದ್ರತಾ ಪಡೆಗಳೇ ಕಾರಣ ಎಂದು ವಿಶ್ವಸಂಸ್ಥೆ ವರದಿಯಲ್ಲಿದೆ. ಅದನ್ನೇ ಉಲ್ಲೇಖಿಸಿ ಪಾಕ್ ವಿರುದ್ಧ ಭಾರತದ ಪ್ರತಿನಿಧಿ ವಾಗ್ದಾಳಿ ನಡೆಸಿದರು.

'ಆಕ್ಸಿಸ್ ಮೈ ಇಂಡಿಯ' ಮುಖ್ಯಸ್ಥ ಗುಪ್ತಾ ವಿಶ್ಲೇಷಣೆ

ಪ.ಬಂ ಬಿಜೆಪಿ ಸರಕಾರ ಬರಲು ಕಾರಣವೇ 15 ವರ್ಷದ ಭಯ!

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿ ಕೇಸರಿ ಧ್ವಜ ಹಾರಾಟಕ್ಕೆ, ಭಾರತೀಯ ಜನತಾ ಪಕ್ಷದ ಸರಕಾರ ರಚನೆಗೆ ಪ್ರಧಾನಿ ನರೇಂದ್ರ ಮೋದಿ

ಅವರ ವರ್ಚಸ್ಸು ಹಾಗೂ ಅಮಿತ್ ಶಾ ಮತ್ತು ಆರ್‌ಎಸ್‌ಎಸ್ ಸಂಘಟನಾ ಸಾಮರ್ಥ್ಯವಷ್ಟೇ ಕಾರಣವಾಗಿಲ್ಲ. ಅವುಗಳ ಜತೆಗೇ ತೃಣ ಮೂಲ ಕಾಂಗ್ರೆಸ್(ಟಿಎಂಸಿ) ಪಕ್ಷದ 15 ವರ್ಷಗಳ ದುರಾಡಳಿತ, ಸಿಎಂ ಮಮತಾ ಬ್ಯಾನರ್ಜಿ ಬಂಟರು ಸೃಷ್ಟಿಸಿದ್ದ ಭಯದ ವಾತಾವರಣವೂ ಅಷ್ಟೇ ಪ್ರಮಾಣದಲ್ಲಿ ಕಾರಣವಾಗಿದೆ. ಇದೆಲ್ಲವೂ ಸೇರಿ ಬಂಗಾಳ ಜನರ ಮನಸ್ಸಿನ ಮೇಲೆ ಪರಿಣಾಮ ಬೀರಿ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತಂದಿವೆ ಎಂದು ಚುನಾವಣಾ ಸಮೀಕ್ಷಾ ಸಂಸ್ಥೆ 'ಆಕ್ಸಿಸ್ ಮೈ ಇಂಡಿಯ' ವ್ಯಾಖ್ಯಾನಿಸಿದೆ.

ಹಿಂದೂ ಮತಗಳ ಕ್ರೋಢೀಕರಣದಿಂದಷ್ಟೇ ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಸರಕಾರ ಪದಚ್ಯುತಗೊಂಡಿಲ್ಲ. ಅದಕ್ಕೆ ಬೇರೆಯ ಕಾರಣಗಳೂ ಇವೆ ಎಂದು 'ಆಕ್ಸಿಸ್ ಮೈ ಇಂಡಿಯ'ದ ಮುಖ್ಯಸ್ಥ ಪ್ರದೀಪ್ ಗುಪ್ತಾ ಮಾಧ್ಯಮ ಸಂದರ್ಶನದಲ್ಲಿ ಹೇಳಿದ್ದಾರೆ. ಪುಟ್ಟ ಹಳ್ಳಿಯಿಂದ ದೊಡ್ಡ ನಗರದವರೆಗಿನ ವಂಗ ನಾಡಿನ ಮತದಾರರು ಪ್ರಬುದ್ಧರು. ಚುನಾವಣಾ ಭರವಸೆ, ಉಚಿತ ಕೊಡುಗೆ, ಧರ್ಮ ಯಾವುದೂ ಅವರ ಮೇಲೆ ಹೆಚ್ಚು ಪ್ರಭಾವ ಬೀರಿಲ್ಲ. ಧರ್ಮ ಧ್ರುವೀಕರಣಕ್ಕಿಂತ ಉತ್ತಮ ಆಡಳಿತದ ವಿಚಾರ ಬಿಜೆಪಿಯ ಪ್ರಾಬಲ್ಯವನ್ನು ಪಶ್ಚಿಮ ಬಂಗಾಳದಲ್ಲಿ ಸ್ಥಾಪಿಸಲು ಸಹಾಯ ಮಾಡಿದೆ ಎಂದು ಗುಪ್ತಾ ಪ್ರತಿಪಾದಿಸಿದ್ದಾರೆ.

ನಿರ್ದಿಷ್ಟವಾಗಿ ಪಶ್ಚಿಮ ಬಂಗಾಳದ ಬಗೆಗೆ ಮಾತನಾಡುವುದಾದರೆ ರಾಜ್ಯದಲ್ಲಿ ಟಿಎಂಸಿ ಭಯದ ವಾತಾವರಣ ಸೃಷ್ಟಿಸಿತ್ತು. ಏ.23 ರಂದು ಮೊದಲ ಸುತ್ತಿನ ಮತದಾನ ನಂತರ ಸಮೀಕ್ಷೆಗೆ ನಮ್ಮ ಸಂಸ್ಥೆ ಮುಂದಾದಾಗ ಮತದಾರರು ಮಾತನಾಡಲೇ ಹೆದರಿದರು. ಅವರು ಟಿಎಂಸಿ ಬದಲು ಬಿಜೆಪಿಗೆ ಮತ ಹಾಕಿದ್ದಾರೆ ಎಂಬುದು ಅದರಿಂದ ನಮಗೆ ಸ್ಪಷ್ಟವಾಯಿತು. ಜನರಿಗೆ ಬೇಕಿರುವುದು ಆಹಾರ. ಅದು ಪೂಜೆಗಿಂತ ಮುಖ್ಯ. ಆದರೆ, ಜೀವನ, ಆಹಾರಕ್ಕಿಂತ ಮುಖ್ಯವಾಗುತ್ತದೆ ಎಂದು ಗುಪ್ತಾ ಹೇಳಿದ್ದಾರೆ.

ಆಕ್ಸಿಸನ್ನೂ ಕಾಡಿದ್ದ 'ಟಿಎಂಸಿ' ಭಯ

'ಆಕ್ಸಿಸ್ ಮೈ ಇಂಡಿಯ', ತಮಿಳುನಾಡು, ಅಸ್ಸಾಂ, ಕೇರಳ ಮತ್ತು ಪುದುಚೇರಿ ಚುನಾವಣಾ ಫಲಿತಾಂಶವನ್ನು ನಿಖರವಾಗಿ ಊಹಿಸಿತ್ತು. ಆದರೆ, ಪಶ್ಚಿಮ ಬಂಗಾಳದ ಮತದಾನೋತ್ತರ ಸಮೀಕ್ಷೆ ಪ್ರಕಟಿಸದಿರಲು ನಿರ್ಧರಿಸಿತು. ಏಕೆಂದರೆ, ಆ ಸಂಸ್ಥೆಗೂ 'ಟಿಎಂಸಿ'ಯ ಭಯ ಕಾಡಿತ್ತು. ನಮ್ಮ ಸಮೀಕ್ಷಾದಾರರನ್ನು ಬೆದರಿಸಲು, ಕೆಲ ಸಂದರ್ಭ ಬಂಧಿಸಲು ಟಿಎಂಸಿ ಪಕ್ಷ ಪೊಲೀಸರನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಗುಪ್ತಾ ಆರೋಪಿಸಿರುವುದೇ ಇದಕ್ಕೆ ಸಾಕ್ಷಿ.

ಹೈಕೋರ್ಟ್‌ಗಳಲ್ಲಿ ಆನ್‌ಲೈನ್ ವಿಚಾರಣೆ: 'ಸಿಜೆಐ' ಸಲಹೆ

ದೆಹಲಿ: ಪಶ್ಚಿಮ ಏಷ್ಯಾದಲ್ಲಿನ ಎರಡೂ ಮುಕ್ಕಾಲು ತಿಂಗಳ ಸಂಘರ್ಷದಿಂದ ದೇಶದಲ್ಲಿ ತೈಲ ಬಿಕ್ಕಟ್ಟು ಎದುರಾಗಿದೆ. ಇಂಧನ ಉಳಿತಾಯಕ್ಕೆ ಕಚೇರಿ ಕೆಲಸ ಮನೆಯಿಂದಲೇ ಮಾಡಿ ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ

ಬೆನ್ನಲ್ಲೇ ದೇಶದ ಎಲ್ಲಾ ಹೈಕೋರ್ಟ್‌ಗಳು ಆನ್‌ಲೈನ್‌ನಲ್ಲಿ ವಿಚಾರಣೆ ನಡೆಸಲಿ ಎಂದು ಸಲಹೆ ನೀಡಿರುವೆ. ಬಹುತೇಕ ಎಲ್ಲಾ ಪೀಠಗಳೂ ಅದನ್ನು ಜಾರಿಗೆ ತಂದಿವೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯ ಕಾಂತ್ ಗುರುವಾರ ಹೇಳಿದ್ದಾರೆ.

ದೇಶದ ಹಿತದೃಷ್ಟಿಯಿಂದ ನ್ಯಾಯಾಲಯಗಳೆಲ್ಲಾ 3 ತಿಂಗಳ ಕಾಲ ಆನ್‌ಲೈನ್ ವಿಚಾರಣೆ ನಡೆಸಲು ಸೂಚಿಸಿ ಎಂದು ವಕೀಲರೊಬ್ಬರು ಸಲ್ಲಿಸಿದ್ದ ಮನವಿಯ ತುರ್ತು ವಿಚಾರಣೆ ಕೋರಿ ಸಿಜೆಐ ನೇತೃತ್ವದ ಪೀಠದಲ್ಲಿ ಪ್ರಸ್ತಾಪಿಸಿದಾಗ ನ್ಯಾ. ಸೂರ್ಯಕಾಂತ್ ಅವರು ಹೈಕೋರ್ಟ್‌ಗಳಿಗೆ ನೀಡಿದ ಸೂಚನೆಯನ್ನು ಬಹಿರಂಗಪಡಿಸಿದರು. ಇಂಥ ಕ್ರಮ ಬಾರ್ ಅಂಡ್ ಬೆಂಚ್ ಸ್ವಯಂಪ್ರೇರಿತ ನಿರ್ಧಾರವಾಗಿರಬೇಕು. ಜಿಲ್ಲಾ ನ್ಯಾಯಾಲಯಗಳು ಹೈಕೋರ್ಟ್ ಆಡಳಿತಕ್ಕೆ ಒಳಪಡುತ್ತವೆ. ಅವರೇ ನಿರ್ಧಾರ ತೆಗೆದುಕೊಳ್ಳಬಹುದು. ನಾನೂ ಜಿಲ್ಲಾ ನ್ಯಾಯಾಲಯಗಳಿಗೆ ಕರೆ ನೀಡಿದ್ದೇನೆ ಎಂದು 'ಸಿಜೆಐ' ವಿವರಿಸಿದರು.

ಕನ್ನಡದಲ್ಲಿ ಶಾಸಕ ಅಶ್ರಫ್ ಪ್ರತಿಜ್ಞೆ

ತಿರುವನಂತಪುರಂ: ಮಲಯಾಳಂ ಭಾಷೆಯೇ ಪ್ರಧಾನವಾದ ಕೇರಳಂ ರಾಜ್ಯದ ವಿಧಾನಸಭೆಯಲ್ಲಿ ಗುರುವಾರ 'ಕನ್ನಡನುಡಿ' ಮಾರ್ದನಿಸಿದೆ.

ಕೇರಳಂ-ಕರ್ನಾಟಕ ಗಡಿಯಂಚಿನ ವಿಧಾನಸಭಾ ಕ್ಷೇತ್ರ ಮಂಜೇಶ್ವರದಿಂದ ಕೇರಳಂ ವಿಧಾನಸಭೆಗೆ ಆಯ್ಕೆಯಾಗಿರುವ ಎ.ಕೆ.ಎಂ.ಅಶ್ರಫ್, ವಿಧಾನಸಭೆಯಲ್ಲಿ ಶಾಸಕರಾಗಿ ಕನ್ನಡದಲ್ಲೇ ಪ್ರಮಾಣವಚನ ಸ್ವೀಕರಿಸಿದರು. ಆ ಮೂಲಕ ಸದನದ ಗಮನ ಸೆಳೆದರು. ಜನಪರ ಕಾಳಜಿ ಮತ್ತು ನಿರೀಕ್ಷೆಗಳ ಸಾಕ್ಷಾತ್ಕಾರದ ಸಂಕಲ್ಪದೊಂದಿಗೆ, ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುತ್ತೇನೆಂದು, ಇನ್ನು ಮುಂದಿನ ಕೆಲಸಗಳನ್ನು ಶ್ರದ್ಧಾಪೂರ್ವಕವಾಗಿ ಮಾಡುತ್ತೇನೆಂದು 16ನೇ ಕೇರಳಂ ವಿಧಾನಸಭೆಯ ಸದಸ್ಯನಾಗಿ ಸೃಷ್ಟಿಕರ್ತನ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸುತ್ತೇನೆ ಎಂದು ಶಾಸಕ ಅಶ್ರಫ್ ಕನ್ನಡ ಭಾಷೆಯಲ್ಲೇ ಪ್ರತಿಜ್ಞಾವಿಧಿ ಕೈಗೊಂಡಿದ್ದಾರೆ. ಈ ಸಂದರ್ಭದ 1 ನಿಮಿಷದ ವಿಡಿಯೊವನ್ನು ಎಕೆಎಂ ಅಶ್ರಫ್ ಹೆಸರಿನ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಅಭಿಜಿತ್ ದೀಪ್ಕೆ ಹುಟ್ಟುಹಾಕಿದ ಜಿರಲೆ ಜನತಾ ಪಾರ್ಟಿಗೆ 5 ದಿನದಲ್ಲಿ 1.4 ಕೋಟಿ ಫಾಲೋವರ್ಸ್

'ಸಿಜೆಪಿ' ಜಾಲತಾಣಕ್ಕೆ ಭಾರತದಲ್ಲಿ ನಿರ್ಬಂಧ

ದೆಹಲಿ: ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ 'ಜಿರಳೆ' ಟೀಕೆ ವಿರುದ್ಧ ಸದ್ಯ ವಿದೇಶದಲ್ಲಿ ನೆಲೆಸಿರುವ ಅಭಿಜಿತ್ ದೀಪ್ಕೆ ಎಂಬ ಯುವಕ ಆನ್‌ಲೈನ್‌ನಲ್ಲಿ ಆರಂಭಿಸಿರುವ 'ಕಾಕ್ರೋಚ್ ಜನತಾ ಪಾರ್ಟಿ' (ಸಿಜೆಪಿ) ಸಾಮಾಜಿಕ ಜಾಲತಾಣವನ್ನು ಭಾರತದಲ್ಲಿ ಗುರುವಾರದಿಂದ ನಿರ್ಬಂಧಿಸಲಾಗಿದೆ.

ಅಮೆರಿಕ ಮೂಲದ 'ಮೆಟಾ' ಮತ್ತು 'ಎಕ್ಸ್' ಕಂಪನಿಗಳು ತಮ್ಮ ಇನ್‌ಸ್ಟಾಗ್ರಾಮ್, ಫೇಸ್‌ಬುಕ್, ಎಕ್ಸ್ ವೇದಿಕೆಯಲ್ಲಿ 'ಕಾಕ್ರೋಚ್ ಜನತಾ ಪಾರ್ಟಿ'ಯ ಖಾತೆಗಳನ್ನು ಭಾರತದಲ್ಲಿ ಪ್ರಸಾರವಾಗುವುದನ್ನು ತಡೆಹಿಡಿದಿವೆ. ಕಾನೂನು ಪ್ರಕಾರ ಬಂದಿರುವ ಕೋರಿಕೆ ಮೇರೆಗೆ ಈ ಸಾಮಾಜಿಕ ಜಾಲತಾಣ ಖಾತೆಗಳನ್ನು ಭಾರತದಲ್ಲಿ ನಿರ್ಬಂಧಿಸಲಾಗಿದೆ ಎಂಬ ಸಂದೇಶವನ್ನೂ ಆ ಖಾತೆಗಳಲ್ಲಿ ಬಿತ್ತರಿಸಲಾಗಿದೆ.

5 ದಿನಗಳ ಹಿಂದೆ ಅಭಿಜಿತ್ ದೀಪ್ಕೆ ಎಂಬ ಭಾರತ ಮೂಲದ ಯುವಕ ಹುಟ್ಟುಹಾಕಿದ 'ಜಿರಲೆ ಜನತಾ ಪಕ್ಷ'ಕ್ಕೆ ಈವರೆಗೆ 1.40 ಕೋಟಿ ಫಾಲೋವರ್ಸ್‌ಗಳಾಗಿದ್ದಾರೆ. ಈ ಹಿಂದೆ ಆಮ್ ಆದ್ಮಿ ಪಕ್ಷ ಚುನಾವಣಾ ಪ್ರಚಾರದಲ್ಲಿ ಕೆಲಸ ಮಾಡುತ್ತಿದ್ದ ಅಭಿಜಿತ್ ದೀಪ್ಕೆಯೇ ಈ ಆನ್‌ಲೈನ್ 'ಕಾಕ್ರೋಚ್ ಜನತಾ ಪಾರ್ಟಿ' ಸೃಷ್ಟಿಕರ್ತ. 'ಯಾವಾಗ ಭಾರತವನ್ನು ಗಟಾರ(ಒಳಚರಂಡಿ)ವಾಗಿ ಮಾಡಲಾಗುವುದೊ ಆಗ ಅಲ್ಲಿ ಜಿರಲೆಗಳೇ ಜನ್ಮತಾಳುತ್ತವೆ. ಇದು ನಮ್ಮ ತಪ್ಪಲ್ಲ, ವ್ಯವಸ್ಥೆಯ ಲೋಪ' ಎಂಬ ಘೋಷಣೆಯನ್ನು ಬರೆಯಲಾಗಿದೆ.

ಭ್ರಷ್ಟಾಚಾರ ಎಂಬುದು ಜನರನ್ನು ರೊಟ್ಟಿ ಎಂದುಕೊಂಡು ತಿಂದು ಹಾಕುತ್ತದೆ. ಕಳಪೆ ಶಿಕ್ಷಣ ವ್ಯವಸ್ಥೆ ಪದವಿಯನ್ನಷ್ಟೇ ನೀಡುತ್ತದೆ-ಕೌಶಲ ಕಲಿಸುವುದಿಲ್ಲ. ಪದವಿ ಪತ್ರ ಕೊಡುತ್ತೆ, ಆದರೆ, ಭವಿಷ್ಯವೇ ಇರುವುದಿಲ್ಲ. ನಾವು ತೆರಿಗೆ ಕಟ್ಟುತ್ತೇವೆ, ಆದರೆ, ಆಸ್ಪತ್ರೆಗಳಲ್ಲಿ ಸೌಲಭ್ಯವೇ ಇರುವುದಿಲ್ಲ. ಎಷ್ಟೇ ಓದಿ ಬರೆದರೂ ನಿರುದ್ಯೋಗಕ್ಕೆ ಪರಿಹಾರವೇ ಇಲ್ಲ ಎಂಬ ಘೋಷಣಾ ಪತ್ರಗಳನ್ನೂ ಜಾಲತಾಣದಲ್ಲಿ ಹಂಚಲಾಗಿದೆ.

ಸಮಾಚಾರ ಸಣ್ಣದಲ್ಲ

ನಾಳೆ ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಆರಂಭಗೊಂಡಿರುವ ನನ್ನ ಇ-ಖಾತಾ ನನ್ನ ಹಕ್ಕು ಅಭಿಯಾನಕ್ಕೆ ನಾಗರಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಮೇ23ರಂದು ಐದು ನಗರ ಪಾಲಿಕೆಗಳ ವ್ಯಾಪ್ತಿಯ 52 ಕೇಂದ್ರಗಳಲ್ಲಿ ಸೇವಾ ಶಿಬಿರ ನಡೆಯಲಿದೆ. ಇ-ಖಾತಾ, ಹೊಸ ಖಾತಾ, ಬಿ-ಖಾತಾದಿಂದ ಎ-ಖಾತಾಗೆ ಪರಿವರ್ತನೆ ಹಾಗೂ ದೋಷ ತಿದ್ದುಪಡಿ ಸೇವೆಗಳನ್ನು ನಾಗರಿಕರ ಮನೆ ಬಾಗಿಲಿಗೆ ತಲುಪಿಸುವ ಉದ್ದೇಶದಿಂದ ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಕಳೆದ ವಾರ ನಡೆದ ಮೊದಲ ಶನಿವಾರದ ಅಭಿಯಾನದಲ್ಲಿ ಒಟ್ಟು 2,939 ಅರ್ಜಿಗಳು ಸ್ವೀಕರಿಸಲ್ಪಟ್ಟಿದ್ದು, ಅವುಗಳಲ್ಲಿ 1,242 ಅರ್ಜಿಗಳನ್ನು ಸ್ಥಳದಲ್ಲೇ ಪರಿಶೀಲಿಸಿ ಅಂತಿಮ ಇ-ಖಾತಾಗಳನ್ನು ವಿತರಿಸಲಾಗಿದೆ. ಉಳಿದ 1,697 ಅರ್ಜಿಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡಲು ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ. ಇದಲ್ಲದೆ, ಜಿಬಿಎ ವ್ಯಾಪ್ತಿಯ ಆಸ್ತಿಗಳಿಗೆ ಬಿ ಖಾತಾದಿಂದ ಎ ಖಾತಾಗೆ ಪರಿವರ್ತನೆಗೆ ರಾಜ್ಯ ಸರಕಾರದ ವಿಶೇಷ ರಿಯಾಯಿತಿ ಘೋಷಿಸಿದ್ದು, 2026ರ ಆಗಸ್ಟ್ 23ರವರೆಗೆ ಮಾರ್ಗಸೂಚಿ ಮೌಲ್ಯದ ಶೇ.5ರ ಬದಲು ಶೇ.2 ಶುಲ್ಕ ಮಾತ್ರ ವಿಧಿಸಲಾಗುತ್ತಿದೆ. ಈ ಅವಕಾಶವನ್ನು ಸುಮಾರು 7 ಲಕ್ಷ ಆಸ್ತಿ ಮಾಲೀಕರು ಬಳಸಿಕೊಳ್ಳುವಂತೆ ಜಿಬಿಎ ಮನವಿ ಮಾಡಿದೆ. ಪ್ರತಿ ಶನಿವಾರ ನಡೆಯುವ ಈ ಅಭಿಯಾನದ ಮೂಲಕ ಬಾಕಿ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವುದು, ಪಾರದರ್ಶಕತೆ ಹೆಚ್ಚಿಸುವುದು ಹಾಗೂ ನಾಗರಿಕ ಸ್ನೇಹಿ ಇ-ಖಾತಾ ಸೇವೆಗಳನ್ನು ವೇಗವಾಗಿ ಒದಗಿಸುವುದು ಸರಕಾರದ ಉದ್ದೇಶವಾಗಿದೆ. ನಾಗರಿಕರು ತಮ್ಮ ಆಸ್ತಿ ದಾಖಲೆಗಳು, ಗುರುತಿನ ಚೀಟಿ ಹಾಗೂ ಸಂಬಂಧಿತ ದಾಖಲೆಗಳೊಂದಿಗೆ ಸಮೀಪದ ಕೇಂದ್ರಗಳಿಗೆ ಭೇಟಿ ನೀಡಿ ಸೇವೆ ಪಡೆಯುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ.

28ರಿಂದ ಹಸ್ತನಿರ್ಮಿತ ಫೋಟೊ ಪ್ರದರ್ಶನ

ಬೆಂಗಳೂರು: ಕಾಂಪ್ಲುಯೆನ್ಸ್ 2026 ಮತ್ತು ಹಸ್ತನಿರ್ಮಿತ ಫೋಟೋ ಮುದ್ರಣಗಳ ಪ್ರದರ್ಶನ ಮೇ 28ರಿಂದ 21ರವರೆಗೆ ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಲಾಗಿದೆ. ಪ್ರದರ್ಶನದಲ್ಲಿ ಹತ್ತಕ್ಕೂ ಹೆಚ್ಚು ಪರ್ಯಾಯ ಛಾಯಾಮುದ್ರಣ ವಿಧಾನ ಮತ್ತು ಆರು ಕಲಾವಿದರ ಎಪ್ಪತ್ತು ಚಿತ್ರಗಳು ಪ್ರದರ್ಶನವಾಗುತ್ತಿವೆ. ವಿಶೇಷವಾಗಿ ದೇಬಾಂಜನ್ ದಾಸ್ ಗುಪ್ತ, ರಾಜಕುಮಾರ ಕೃಷ್ಣ, ರಾಘವೇಂದ್ರ ಉಡುಪ, ರಮೇಶ ಅಡ್ಕೋಳಿ, ಸಬೀರ್ ಅಹ್ಮದ್ ಮತ್ತು ಶಂಕರ ಕಿರಗಿ ಅವರ ಒಟ್ಟು ಎಪ್ಪತ್ತು ಹಸ್ತ ನಿರ್ಮಿತ ಫೋಟೋ ಮುದ್ರಣಗಳನ್ನು ಪ್ರದರ್ಶಿಸಲಾಗುತ್ತಿದೆ. ಡಿಜಿಟಲ್ ಛಾಯಾಗ್ರಹಣಕ್ಕಿಂತ ಸಂಪೂರ್ಣ ಭಿನ್ನವಾದ ಈ ಕೃತಿಗಳು ಕಲಾವಿದರ ನೇರ ಶ್ರಮದ ಫಲ. ಕಾಗದದ ಮೇಲೆ ಬೆಳಕು-ಸಂವೇದನಾ ರಾಸಾಯನಿಕ ಲೇಪನ ಹಚ್ಚಿ, ತಾಪಮಾನ, ತೇವಾಂಶ ಹಾಗೂ ನೇರಳಾತೀತ ಬೆಳಕನ್ನು ನಿಯಂತ್ರಿಸುತ್ತವೆ. ಸಾರ್ವಜನಿಕರಿಗೆ ಬೆಳಿಗ್ಗೆ 11ರಿಂದ ಸಂಜೆ 7 ಪ್ರದರ್ಶನ ವೀಕ್ಷಿಸಲು ಅವಕಾಶವಿದ್ದು, ಉಚಿತ ಪ್ರವೇಶವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ 9916300280, 9380787295 ಸಂಪರ್ಕಿಸಬಹುದು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

3 ದಿನಗಳಲ್ಲಿ 256 ರಸ್ತೆ ಗುಂಡಿ ದುರಸ್ತಿ

ಬೆಂಗಳೂರು: ಮಳೆಗಾಲದ ಮುನ್ನ ಸಾರ್ವಜನಿಕರಿಗೆ ಸುರಕ್ಷಿತ ಹಾಗೂ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಬೆಂಗಳೂರು ಉತ್ತರ ನಗರ ಪಾಲಿಕೆ ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಚುರುಕುಗೊಳಿಸಿದೆ ಎಂದು ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು. ಈ ಕುರಿತು ಮಾತನಾಡಿದ ಅವರು, ಮೇ 18ರಿಂದ 20ರವರೆಗೆ ನಗರದ ವಿವಿಧ ವಿಭಾಗಗಳಲ್ಲಿ ರಸ್ತೆ ಪರಿಶೀಲನೆ ನಡೆಸಿ, ಗುಂಡಿ ಬಿದ್ದ ಹಾಗೂ ಹಾಳಾಗಿರುವ ರಸ್ತೆಗಳಲ್ಲಿ ಪ್ಯಾಚ್ ವರ್ಕ್ ಮತ್ತು ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಮೂರು ದಿನ ಗಳಲ್ಲಿ ಒಟ್ಟು 256 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದ್ದು, ಸುಮಾರು 2112.5 ಚದರ ಮೀಟರ್ ವ್ಯಾಪ್ತಿಯಲ್ಲಿ ರಸ್ತೆ ದುರಸ್ತಿ ಕಾರ್ಯ ಪೂರ್ಣಗೊಂಡಿದೆ. ವಿಭಾಗವಾರು ಬ್ಯಾಟರಾಯನ ಪುರದಲ್ಲಿ ಅತಿ ಹೆಚ್ಚು 143 ರಸ್ತೆ ಗುಂಡಿಗಳನ್ನು ದುರಸ್ತಿ ಮಾಡಲಾಗಿದ್ದು, ಸರ್ವಜ್ಞನಗರದಲ್ಲಿ 45, ಹೆಬ್ಬಾಳದಲ್ಲಿ 28 ಹಾಗೂ ಯಲಹಂಕ ವಿಭಾಗದಲ್ಲಿ 40 ರಸ್ತೆ ಗುಂಡಿಗಳನ್ನು ಮುಚ್ಚಲಾಗಿದೆ ಎಂದರು. ಕಾಮಗಾರಿಗಳ ಗುಣಮಟ್ಟ ಕಾಪಾಡಿ, ರಸ್ತೆ ಗುಂಡಿ ಸಮಸ್ಯೆ ಮರುಕಳಿಸದಂತೆ ಶಾಶ್ವತ ಪರಿಹಾರ ಕ್ರಮ ಕೈಗೊಳ್ಳುವಂತೆ ಆಯುಕ್ತರು ಅಧಿಕಾರಿಗಳಿಗೆ ನಿರ್ದೇಶನ ನೀಡಿ, ಇದರೊಂದಿಗೆ ಮಳೆಗಾಲದಲ್ಲಿ ಜಲಾವೃತ ಸಮಸ್ಯೆ ಉಂಟಾಗದಂತೆ ನಗರದ ಎಲ್ಲಾ ಏಳು ವಿಭಾಗಗಳಲ್ಲಿ ಚರಂಡಿ ಹಾಗೂ ರಾಜ ಕಾಲುವೆಗಳ ಹೂಳೆತ್ತುವ ಕಾರ್ಯವೂ ಭರದಿಂದ ಸಾಗುತ್ತಿದೆ ಎಂದರು.

{ ಚಲುವರಾಯಸ್ವಾಮಿ } ಕೃಷಿ ಸಚಿವ

ಕರ್ನಾಟಕ ಸರಕಾರ 2003ರಿಂದಲೇ ಪ್ರತ್ಯೇಕ ಮತ್ತು ಸ್ಪಷ್ಟ ಮಾನದಂಡದ ಆಧಾರದ ಮೇಲೆ ರೈತರ ಆತ್ಮಹತ್ಯೆ ಪ್ರಕರಣಗಳನ್ನು ದಾಖಲಿಸುತ್ತಿದೆ. ಈ ಮಾನದಂಡದ ಪ್ರಕಾರ 2023ರಲ್ಲಿ 1,090 ಹಾಗೂ 2024ರಲ್ಲಿ 1,032, 2025ರಲ್ಲಿ 644 ಪ್ರಕರಣಗಳು ದಾಖಲಾಗಿವೆ. ನಮ್ಮ ಸರಕಾರ ಯಾವುದೇ ಮಾಹಿತಿ ಮುಚ್ಚಿಟ್ಟಿಲ್ಲ ಎಂಬುದು ಸ್ಪಷ್ಟವಾಗಿದೆ.

ಮೆಜೆಸ್ಟಿಕ್, ಕೆ.ಆರ್.ಮಾರ್ಕೆಟ್, ಕಾರ್ಪೊರೇಷನ್, ಕೆ.ಆರ್. ವೃತ್ತದಲ್ಲಿ ಭಾರೀ ಟ್ರಾಫಿಕ್ ಜಾಮ್

ದಿಢೀರ್ ಮಳೆಗೆ ಸಂಚಾರ ಅಸ್ತವ್ಯಸ್ತ

ಬೆಂಗಳೂರು: ಸುಡು ಬಿಸಿಲಿನಿಂದ ಹೈರಾಣಾಗಿದ್ದ ಬೆಂಗಳೂರಿಗೆ ಸಂಜೆ ಮಳೆರಾಯ ತಂಪೆರೆದಿದ್ದಾನೆ. ರಾಜಧಾನಿಯ ಹಲವೆಡೆ ಗುರುವಾರ ಸಂಜೆ ಆಲಿಕಲ್ಲು ಸಹಿತ ಧಾರಾಕಾರ ಮಳೆಯಾಗಿದ್ದು, ಸಂಜೆಯ ಮಳೆ ಜನಕ್ಕೆ ಹಿತವಾದ ಅನುಭವ ನೀಡಿದರೂ, ವಾಹನ ಸವಾರರು ಮತ್ತು ಕಚೇರಿಯಿಂದ ಮನೆಗೆ ಮರಳುವ ಉದ್ಯೋಗಿಗಳಿಗೆ ದಿಢೀರ್ ಮಳೆ ಸಾಕಷ್ಟು ಸಂಕಷ್ಟ ತಂದೊಡ್ಡಿದೆ. ನಗರದ ಪ್ರಮುಖ ರಸ್ತೆಗಳು ಜಲಾವೃತವಾಗಿದ್ದು, ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಗುರುವಾರ ಸಂಜೆ ಐದು ಗಂಟೆಯ ಸುಮಾರಿಗೆ ನಗರದಲ್ಲಿ ವಾತಾವರಣ ದಿಢೀರ್ ಬದಲಾಗಿ ದಟ್ಟವಾದ ಕಾರ್ಮೋಡಗಳು ಕವಿದು ಕತ್ತಲು ಆವರಿಸಿದಂತಾಗಿ, ನೋಡನೋಡುತ್ತಿದ್ದಂತೆಯೇ ಬಿರುಸಿನ ಮಳೆ ಸುರಿಯಲಾರಂಭಿಸಿತು. ವರದಿಯ ಪ್ರಕಾರ, ನಗರದ ಚಾಮರಾಜಪೇಟೆ, ಬಸವೇಶ್ವರ ನಗರ ಮತ್ತು ಹಗದೂರು ಭಾಗಗಳಲ್ಲಿ ಅತಿ ಹೆಚ್ಚು ಮಳೆಯಾಗಿದೆ. ಇದರ ಜತೆಗೆ ಪ್ರಮುಖ ಜಂಕ್ಷನ್‌ಗಳಾದ ಕೆ.ಆರ್. ವೃತ್ತ, ಚಾಲುಕ್ಯ ವೃತ್ತ, ಐಟಿ ಕಾರಿಡಾರ್, ಕೋರಮಂಗಲ, ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ, ಮಲ್ಲೇಶ್ವರ, ಶೇಷಾದ್ರಿಪುರ, ಹೆಬ್ಬಾಳ, ಯಶವಂತಪುರ, ರಾಜಾಜಿನಗರ, ವಿಧಾನಸೌಧ ಹಾಗೂ ಶಿವಾಜಿನಗರ ಸೇರಿದಂತೆ ನಗರದ ಬಹುತೇಕ ಎಲ್ಲಾ ಭಾಗಗಳಲ್ಲಿ ವರುಣನ ಆರ್ಭಟ ಜೋರಾಗಿತ್ತು.

ಸಂಜೆ ಕಚೇರಿ, ಶಾಲಾ-ಕಾಲೇಜು ಬಿಡುವ ಸಮಯದಲ್ಲೇ ಮಳೆ ಸುರಿದಿದ್ದರಿಂದ ವಾಹನ ಸವಾರರು ತೀವ್ರವಾಗಿ ಪರದಾಡುವಂತಾಯಿತು. ಪ್ರಮುಖ ರಸ್ತೆಗಳಲ್ಲಿ ಮಳೆನೀರು ಸರಾಗವಾಗಿ ಹರಿದು ಹೋಗದೆ ರಸ್ತೆಯಲ್ಲೇ ನಿಂತು ದೊಡ್ಡ ಹೊಂಡಗಳಂತಾಗಿದ್ದವು. ಮೆಜೆಸ್ಟಿಕ್, ಕೆ.ಆರ್. ಮಾರುಕಟ್ಟೆ ಹಾಗೂ ಕಾರ್ಪೊರೇಷನ್ ವೃತ್ತದಂತಹ ಜನದಟ್ಟಣೆಯ ಪ್ರದೇಶಗಳಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಗಿತ್ತು.

ನಗರ್ತಪೇಟೆಯಲ್ಲಿ ಜೋರು ಮಳೆ

ನಗರ ನಗರ್ತಪೇಟೆಯಲ್ಲಿ ಸಂಜೆ ಆಲಿಕಲ್ಲು ಸಹಿತ ಜೋರು ಮಳೆ ಸುರಿದಿದೆ. ರಸ್ತೆ ಮೇಲೆಲ್ಲ ಆಲಿಕಲ್ಲುಗಳು ಬಿದ್ದಿದ್ದು, ಎಲ್ಲಿ ನೋಡಿದರೆ ಆಲಿಕಲ್ಲುಗಳು ಕಂಡು ಬಂದಿದೆ. ಸುಮಾರು ಅರ್ಧಗಂಟೆಗೂ ಹೆಚ್ಚು ಹೊತ್ತು ಮಳೆ ಆಗಿದೆ ಎಂದು ಹವಾಮಾನ ಇಲಾಖೆ ಮೂಲಗಳು ತಿಳಿಸಿವೆ.

ಮೇ 24ರ ವರೆಗೆ ಯೆಲ್ಲೋ ಅಲರ್ಟ್

ಮೇ 21 ರಿಂದ ಮೇ 24 ರವರೆಗೆ ನಗರದಲ್ಲಿ ಗುಡುಗು ಮತ್ತು ಮಿಂಚು ಸಹಿತ ಮಳೆಯಾಗುವ ಸಾಧ್ಯತೆಯಿದ್ದು. ಮುಂದಿನ ಮೂರು ದಿನ 75 ಮಿಲಿ ಮೀಟರ್‌ನಿಂದ 115 ಮಿಲಿ ಮೀಟರ್‌ವರೆಗೆ ಗುಡುಗು ಸಹಿತ ಭಾರೀ ಮಳೆ ಆಗಲಿದ್ದು, ಹವಾಮಾನ ಇಲಾಖೆ ಬೆಂಗಳೂರಿಗೆ ಈ ಮೂರು ದಿನ ಯೆಲ್ಲೋ ಅಲರ್ಟ್ ಘೋಷಿಸಿದೆ.

ಟ್ಯಾಲಿ ಎಜುಕೇಶನ್‌ಗೆ 10 ಲಕ್ಷದ ಮೈಲುಗಲ್ಲು

ಬೆಂಗಳೂರು: ಲೆಕ್ಕಪತ್ರ ಮತ್ತು ಹಣಕಾಸು ಕ್ಷೇತ್ರದಲ್ಲಿ ಉದ್ಯೋಗಕ್ಕೆ ಸಿದ್ಧ ಪ್ರತಿಭೆಗಳನ್ನು ರೂಪಿಸುವ ದಿಕ್ಕಿನಲ್ಲಿ ಮಹತ್ವದ ಸಾಧನೆ ಮಾಡಿರುವ ಟ್ಯಾಲಿ ಸೊಲ್ಯೂಷನ್ಸ್‌ನ ಶಿಕ್ಷಣ ವಿಭಾಗವಾದ ಟ್ಯಾಲಿ ಎಜುಕೇಶನ್ 10 ಲಕ್ಷಕ್ಕೂ ಹೆಚ್ಚು ಕಲಿಯುವವರ ಮೈಲುಗಲ್ಲು ತಲುಪಿದೆ. ದೇಶದಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾರ್ಹತೆ ಕುರಿತ ಚರ್ಚೆಗಳು ವೇಗ ಪಡೆಯುತ್ತಿರುವ ಸಂದರ್ಭದಲ್ಲಿ, ಈ ಸಾಧನೆ ಉದ್ಯೋಗದಾತರು ನಂಬುವ ಪ್ರಮಾಣಪತ್ರ ವ್ಯವಸ್ಥೆಯ ಮಹತ್ವ ಸಾಬೀತುಪಡಿಸಿದೆ.

ಈ ಕುರಿತು ಪ್ರತಿಕ್ರಿಯಿಸಿದ ಟ್ಯಾಲಿ ಸೊಲ್ಯೂಷನ್ಸ್ ವ್ಯವಸ್ಥಾಪಕ ನಿರ್ದೇಶಕ ತೇಜಸ್ ಗೋಯಂಕಾ ಮಾತನಾಡಿ, ಜನರು ಹಲವು ವರ್ಷಗಳಿಂದ ಟ್ಯಾಲಿ ಕಲಿಯುತ್ತಿದ್ದರು. ಆ ಕೌಶಲ್ಯಗಳ ಮೇಲೆ ಉದ್ಯೋಗದಾತರಿಗೆ ವಿಶ್ವಾಸ ಮೂಡಿಸುವುದೇ ದೊಡ್ಡ ಸವಾಲಾಗಿತ್ತು. ಪ್ರಮಾಣಪತ್ರಗಳ ಮೂಲಕ ಆ ವಿಶ್ವಾಸವನ್ನು ನಿರ್ಮಿಸುವುದು ನಮ್ಮ ಪ್ರಮುಖ ಉದ್ದೇಶವಾಗಿತ್ತು. ಕೇವಲ ತರಬೇತಿ ನೀಡುವುದಷ್ಟೇ ಅಲ್ಲದೆ, ಉದ್ಯೋಗ ಕ್ಷೇತ್ರಕ್ಕೆ ನೇರವಾಗಿ ಸಂಪರ್ಕ ಕಲ್ಪಿಸುವ ಮಾದರಿ ರೂಪಿಸಿರುವುದರಿಂದ ಕಲಿಯುವವರಲ್ಲಿ ಸರಾಸರಿ ಶೇ. 75 ಪ್ಲೇಸ್‌ಮೆಂಟ್ ಸಾಧಿಸಲಾಗಿದೆ. ವಿಶೇಷವಾಗಿ ಶ್ರೇಣಿ-2 ಮತ್ತು ಶ್ರೇಣಿ 3 ಪಟ್ಟಣಗಳ ಯುವಕರು ಇದರ ಪ್ರಮುಖ ಲಾಭಾರ್ಥಿಗಳು ಎಂದರು. ಟ್ಯಾಲಿ ಎಜುಕೇಶನ್‌ನ ಎಕ್ಸಿಕ್ಯೂಟಿವ್ ವೈಸ್ ಪ್ರೆಸಿಡೆಂಟ್ ಭುವನೇಶ್ವರಿ ಬಿ. ಮಾತನಾಡಿ, ಇಂದಿನ ಯುವಕರು ಕಲಿಕೆಯ ಜತೆಗೆ ಸ್ಪಷ್ಟ ಉದ್ಯೋಗ ಫಲಿತಾಂಶ ನಿರೀಕ್ಷಿಸುತ್ತಿದ್ದಾರೆ ಎಂದರು.

ನೀಲಿ ಮೆಟ್ರೋ: ನಾಲ್ಕನೇ ಗರ್ಡರ್ ಸ್ಥಾಪನೆ ಯಶಸ್ವಿ

ಬೆಂಗಳೂರು: ನೀಲಿ ಮೆಟ್ರೋ ಮಾರ್ಗದ ನಿರ್ಮಾಣ ಕಾಮಗಾರಿ ಬರದಿಂದ ಸಾಗುತ್ತಿದ್ದು, ಈ ಮಾರ್ಗದಲ್ಲಿ 4ನೇ ಗರ್ಡರ್ ನಿರ್ಮಾಣ ಬುಧವಾರ ಯಶಸ್ವಿಯಾಗಿದೆ. ಬೆಂಗಳೂರಿನ ಸಿಲ್ಕ್‌ಬೋರ್ಡ್‌ನಿಂದ ಹೊರ ವರ್ತುಲ ರಸ್ತೆ ಮಾರ್ಗವಾಗಿ ಕೆ.ಆರ್.ಪುರಂ ಮೂಲಕ ಬೆಂಗಳೂರು ದೇವನಹಳ್ಳಿ ಏರ್‌ಪೋರ್ಟ್ ಮೆಟ್ರೋ ನೀಲಿ ಮಾರ್ಗ ಎರಡು ಹಂತಗಳಲ್ಲಿ ಕಾಮಗಾರಿ ನಡೆಯುತ್ತಿದೆ. ಈ ಮಾರ್ಗದ ರಾಮಮೂರ್ತಿನಗರ ಅಂಡರ್‌ಪಾಸ್‌ನಲ್ಲಿ ಬುಧವಾರ ರಾತ್ರಿ 65 ಮೀಟರ್ ಸಂಯೋಜಿತ ಗರ್ಡರ್ ಅನ್ನು ಯಶಸ್ವಿಯಾಗಿ ಸ್ಥಾಪಿಸಲಾಗಿದೆ ಎಂದು ಬೆಂಗಳೂರು ಮೆಟ್ರೋ ರೈಲು ನಿಗಮ ಮೂಲಗಳು ತಿಳಿಸಿವೆ.

26ರಂದು ವಿದ್ಯಾಪೀಠಕ್ಕೆ ಚಾಲನೆ

ಬೆಂಗಳೂರು: ಬಸವನಗುಡಿಯ ಶ್ರೀ ಗೋವರ್ಧನ ಕ್ಷೇತ್ರ ಉಡುಪಿ ಶ್ರೀ ಪುತ್ತಿಗೆ ಮಠದ ಶಾಖೆಯಲ್ಲಿ ಮಕ್ಕಳಿಗೆ ಶ್ರೀ ಸುಗುಣ ಸ್ಕೂಲ್, ವಿಪ್ರ ಮಹಿಳೆಯರಿಗೆ ಮಹಿಳಾ ವಿದ್ಯಾಪೀಠ ಹಾಗೂ ವಿಪ್ರ ಪುರುಷರಿಗೆ ಸಂಧ್ಯಾ ವಿದ್ಯಾಪೀಠ ಆರಂಭವಾಗಲಿದೆ. ಮೇ 26ರಂದು ಸಂಜೆ 6 ಗಂಟೆಗೆ ಬಸವನಗುಡಿಯ ಶ್ರೀಗೋವರ್ಧನ ಕ್ಷೇತ್ರದಲ್ಲಿ ನಡೆಯಲಿರುವ ಈ ವಿದ್ಯಾಪೀಠದ ಉದ್ಘಾಟನಾ ಸಮಾರಂಭದಲ್ಲಿ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದಂಗಳವರು, ಉಡುಪಿ ಪುತ್ತಿಗೆ ಮಠ, ಶ್ರೀಭಂಡಾರಕೇರಿ ಮಠದ ಪೀಠಾಧಿಪತಿ ಶ್ರೀವಿದ್ಯೇಶ ತೀರ್ಥ ಶ್ರೀಪಾದಂಗಳವರು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿಗಳಾದ ಅಹಲ್ಯ ಶರ್ಮ ಹಾಗೂ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಅಸಗೋಡು ಜಯಸಿಂಹ ಪಾಲ್ಗೊಳ್ಳಲಿದ್ದಾರೆ. ತ್ರಿಮತಸ್ಥ ವಿಪ್ರ ಮಹಿಳೆಯರಿಗೆ ಪ್ರತಿದಿನ ಸಾಯಂಕಾಲ ನಾಲ್ಕು ಗಂಟೆಗೆ ನಡೆಯಲಿರುವ ಈ ವಿದ್ಯಾಪೀಠದಲ್ಲಿ ಸ್ತೋತ್ರಗಳು, ಭಜನೆ, ಹಾಡುಗಳನ್ನು ಹೇಳಿಕೊಡಲಾಗುವುದು ಅಂತೆಯೇ ವಿಪ್ರ ಪುರುಷರಿಗೆ ವೇದ- ಶಾಸ್ತ್ರಗಳ ಪರಿಚಯ, ಮಂತ್ರಗಳು ಹಾಗೂ ಸ್ತೋತ್ರಗಳನ್ನು ಹೇಳಿಕೊಡಲಾಗುತ್ತದೆ.

ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಡಾ.ಎಂ.ಸುಬ್ರಮಣಿ, ಡಾ. ಗಿರೀಶ್ ಕುಮಾರ್, ಉಷಾ ಸಂತೋಷ್, ಉಮಾ ನಾರಾಯಣ ಅವರಿಗೆ ಕಲಾದರ್ಪಣ ಸೇವಾರತ್ನ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ, ಸಾಹಿತಿ ಡಾ. ಅಶೋಕ ನರೋಡೆ, ಬಹರೈನ್ ಕನ್ನಡ ಸಂಘದ ಮಾಜಿ ಪ್ರಧಾನ ಕಾರ್ಯದರ್ಶಿ, ವಿಶ್ವವಾಣಿ ಅಂಕಣಕಾರ ಕಿರಣ್ ಉಪಾಧ್ಯಾಯ, ಚಿತ್ರ ಕಲಾವಿದೆ ಹೇಮಾ ಪಾಟೀಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪರೀಕ್ಷೆ ವೇಳೆ ಸಾರಿಗೆ ನೌಕರರ ಮುಷ್ಕರ ಸಲ್ಲ

ಬೆಂಗಳೂರು: ರಾಜ್ಯಾದ್ಯಂತ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆ ನಡೆಯುತ್ತಿದ್ದು, ಈ ಸಂದರ್ಭದಲ್ಲಿ ಮುಷ್ಕರ ಸರಿಯಾದ ಕ್ರಮವಲ್ಲ. ಸರಕಾರ ಮತ್ತು ಸಾರಿಗೆ ನೌಕರರ ಜಗಳದಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗಬಾರದು ಎಂದು ತಿಳಿಸಿರುವ ಹೈಕೋರ್ಟ್, ಸಾರಿಗೆ ನೌಕರರ ಮುಷ್ಕರ ನಡೆಸಲು ಅನುಮತಿ ನೀಡಲು ನಿರಾಕರಿಸಿದೆ.

ಮುಷ್ಕರ ಹಿಂಪಡೆಯಲು ಜಂಟಿ ಕ್ರಿಯಾ ಸಮಿತಿಗೆ ನಿರ್ದೇಶಿಸಬೇಕು ಎಂದು ಕೋರಿ ಮನೆ ಕೆಲಸ ಮಾಡುತ್ತಿರುವ ಬೆಂಗಳೂರಿನ ಸಿ. ವೇದಾವತಿ ಹಾಗೂ ಕಟ್ಟಡ ಕಾರ್ಮಿಕ ಎಚ್. ವಿ. ಶ್ರೀಧರ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜು ಮತ್ತು ನ್ಯಾಯಮೂರ್ತಿ ಮನ್ಮಥರಾವ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿ ವಿಚಾರಣೆ ಮುಂದೂಡಿದೆ. ಅಲ್ಲದೆ, ಸರಕಾರ ಮತ್ತು ಸಾರಿಗೆ ನೌಕರರ ಸಂಘದ ಪದಾಧಿಕಾರಿಗಳ ನಡುವೆ ರಾಜಿ ಸಂಧಾನ ಮಾತುಕತೆ ನಡುವೆ ಮುಷ್ಕರ ನಡೆಸುವುದು ಸೂಕ್ತವಲ್ಲ ಎಂದು ತಿಳಿಸಿದೆ. ವಿಚಾರಣೆ ಆರಂಭವಾಗುತ್ತಿದ್ದಂತೆ ಸರಕಾರಿ ವಕೀಲರು, ಬಹುತೇಕ ಸಾರಿಗೆ ಸಂಘಟನೆಗಳು ವೇತನ ಏರಿಕೆ ಒಪ್ಪಿಕೊಂಡಿವೆ. ಈಗ ಮುಷ್ಕರಕ್ಕೆ ಕರೆ ಕೊಟ್ಟಿರುವ ಸಂಘಗಳು ಸಾರಿಗೆ ಕಾರ್ಮಿಕರನ್ನು ಪ್ರತಿನಿಧಿಸುವುದಿಲ್ಲ. ಕಾರ್ಮಿಕ ಆಯುಕ್ತರ ರಾಜಿ ಸಂಧಾನ ಮೇ 25ಕ್ಕೆ ನಿಗದಿಯಾಗಿದೆ ಎಂದು ತಿಳಿಸಿದರು. ವಾದ ಆಲಿಸಿದ ಪೀಠ, ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿದ್ದು, ಅಲ್ಲಿಯವರೆಗೆ ಮುಷ್ಕರ ನಡೆಸದಂತೆ ವಿಧಿಸಿದ್ದ ನಿರ್ಬಂಧ ವಿಸ್ತರಿಸಿದೆ.

ಸಚಿವ ಮಧು ಬಂಗಾರಪ್ಪ ಅವರ ನೇತೃತ್ವದಲ್ಲಿ ಶಿವಮೊಗ್ಗ ವಕೀಲರ ಸಂಘದ ಪದಾಧಿಕಾರಿಗಳ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿಯಾಗಿ, ಶಿವಮೊಗ್ಗಕ್ಕೆ ಹೈಕೋರ್ಟ್ ಸಂಚಾರಿ ಪೀಠದ ಅಗತ್ಯತೆಯ ಕುರಿತು ಚರ್ಚಿಸಿ ಮನವಿ ಪತ್ರ ಸಲ್ಲಿಸಿತು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಎ.ಎಸ್.ಪೊನ್ನಣ್ಣ ಉಪಸ್ಥಿತರಿದ್ದರು.

ಹೆಚ್ಚುವರಿ ಮೊತ್ತ ಪಾವತಿಗೆ ನಿರಾಕರಿಸಲಾಗದು: ಹೈಚ

ಬೆಂಗಳೂರು: ರಾಜ್ಯ ಸರಕಾರ ಕನಿಷ್ಠ ವೇತನ ಪರಿಷ್ಕರಣೆ ಮಾಡಿದಾಗ ಚಾಲ್ತಿಯಲ್ಲಿರುವ ಗುತ್ತಿಗೆ ಒಪ್ಪಂದದ ನೆಪವೊಡ್ಡಿ ಕಾರ್ಮಿಕರಿಗೆ ವೇತನ ಪಾವತಿಸಲು ಗುತ್ತಿಗೆದಾರರಿಗೆ ಹೆಚ್ಚುವರಿ ಮೊತ್ತ ಪಾವತಿಸಲು ನಿರಾಕರಿಸುವುದಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಬೆಂಗಳೂರಿನ ಏಷ್ಯನ್ ಸೆಕ್ಯೂರಿಟಿ ಆ್ಯಂಡ್ ಪರ್ಸನಲ್ ಅರೇಂಜ್‌ಮೆಂಟ್ಸ್ ಸಂಸ್ಥೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಹೊರಡಿಸಿತು.

ಭದ್ರತಾ ಸಿಬ್ಬಂದಿ ಪೂರೈಸುವ ಸಂಸ್ಥೆಗೆ 3.5 ಕೋಟಿ ರು.ಬಾಕಿ ಹಣ ಶೇ.12ರಷ್ಟು ಬಡ್ಡಿಯೊಂದಿಗೆ ಪಾವತಿಸುವಂತೆ ಕರ್ನಾಟಕ ವಿಧಾನ ಸಭಾ ಸಚಿವಾಲಯಕ್ಕೆ ನಿರ್ದೇಶನ ನೀಡಿದೆ. ಕನಿಷ್ಠ ವೇತನ ಪರಿಷ್ಕರಣೆ ಮಾಡಿದ ಸರಕಾರ ಗುತ್ತಿಗೆಗಾರರಿಗೆ ಹೆಚ್ಚುವರಿಯಾಗುವ ಮೊತ್ತ ಪಾವತಿಸದೆ ನಿರಾಕರಿಸುವುದು ಅತ್ಯಂತ ಅಸಂಬದ್ಧ, ತರ್ಕಹೀನ ಮತ್ತು ಸಾರ್ವಜನಿಕ ನೀತಿಗೆ ವಿರುದ್ಧ ಎಂದು ತಿಳಿಸಿದೆ. ರಾಜ್ಯ ಸಕರಾರ ಮಾಡಿಕೊಳ್ಳುವ ಯಾವುದೇ ಖಾಸಗಿ ಅಥವಾ ವಾಣಿಜ್ಯ ಗುತ್ತಿಗೆ ಒಪ್ಪಂದಗಳು ದೇಶದ ಶಾಸನಬದ್ಧ ಕಾನೂನನ್ನು ಮೀರುವಂತಿಲ್ಲ. ಹಳೆಯ ದರಗಳ ಆಧಾರದ ಮೇಲೆ ಒಪ್ಪಂದವಾಗಿದೆ ಎಂಬ ಕಾರಣಕ್ಕೆ ಸರಕಾರಿ ಆದೇಶದ ಮೂಲಕ ಹೆಚ್ಚಿಸಲಾದ ಕನಿಷ್ಠ ವೇತನ ನೀಡದೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಪೀಠ ಹೇಳಿತು.

ಮಾದರಿಯಾಗಬೇಕು: ಅರ್ಜಿದಾರರು ಮತ್ತು ಸರಕಾರದ ನಡುವೆ ಆಗಿರುವ ಒಪ್ಪಂದದಲ್ಲಿ ವೇತನ ಏರಿಕೆಗೆ ಸಂಬಂಧಿಸಿದಂತೆ ಪ್ರಸ್ತಾಪಿಸಿಲ್ಲ. ವೇತನ ಏರಿಕೆ ಪರಿಷ್ಕರಣೆಯನ್ನು ಗುತ್ತಿಗೆದಾರರೇ ಭರಿಸಬೇಕು ಎಂದು ಸೂಚಿಸುವ ಷರತ್ತು ಇದ್ದರೂ, ಸಂವಿಧಾನದ ವಿಧಿ 12ರ ಅಡಿಯಲ್ಲಿ ಬರುವ ಸರಕಾರ ಮತ್ತು ಅದರ ಅಂಗ ಸಂಸ್ಥೆಗಳು ಕೇವಲ ಲಾಭದ ಉದ್ದೇಶ ಹೊಂದಿರುವ ಖಾಸಗಿ ಕಂಪನಿಗಳಂತೆ ವರ್ತಿಸಬಾರದು. ಅವು ಸಮಾಜಕ್ಕೆ ಮಾದರಿ ಉದ್ಯೋಗದಾತರಾಗಬೇಕು. ಗುತ್ತಿಗೆಯ ಕಟ್ಟುನಿಟ್ಟಿನ ನಿಯಮ ಮುಂದಿಟ್ಟುಕೊಂಡು, ಕಾರ್ಮಿಕ ಕಲ್ಯಾಣ ಕಾಯ್ದೆಗಳ ಉಲ್ಲಂಘನೆಗೆ ಪರೋಕ್ಷವಾಗಿ ಕಾರಣವಾಗಬಾರದು ಎಂದು ಪೀಠ ಹೇಳಿದೆ.

ಪ್ರಕರಣದ ಹಿನ್ನೆಲೆ ಏನು?

ಅರ್ಜಿದಾರ ಸಂಸ್ಥೆಯು ಕರ್ನಾಟಕ ವಿಧಾನಸಭೆ ಸಚಿವಾಲಯಕ್ಕೆ ಹೌಸ್‌ಕೀಪಿಂಗ್ ಮತ್ತು ಭದ್ರತಾ ಸಿಬ್ಬಂದಿ ಒದಗಿಸಿತ್ತು. 2016ರಲ್ಲಿ ರಾಜ್ಯ ಸರಕಾರ ಕನಿಷ್ಠ ವೇತನ ಹೆಚ್ಚಿಸಿ ಅಧಿಸೂಚನೆ ಹೊರಡಿಸಿತ್ತು. ಈ ಹಿನ್ನೆಲೆಯಲ್ಲಿ ಸಂಸ್ಥೆಯು ಕಾರ್ಮಿಕರಿಗೆ ಹೆಚ್ಚಿನ ವೇತನ ನೀಡಿ, ಆ ಹೆಚ್ಚುವರಿ ಮೊತ್ತವಾದ 3.5 ಕೋಟಿ ರುಪಾಯಿ ಭರಿಸುವಂತೆ ವಿಧಾನಸಭೆ ಸಚಿವಾಲಯಕ್ಕೆ ಬಿಲ್ ಸಲ್ಲಿಸಿತ್ತು. ಆದರೆ, ಗುತ್ತಿಗೆ ನೀಡಿರುವ ಒಪ್ಪಂದ ಹಳೆಯ ದರದಲ್ಲಿದೆ. ಆದ್ದರಿಂದ ಹೆಚ್ಚುವರಿ ವೆಚ್ಚವನ್ನು ಗುತ್ತಿಗೆದಾರರೇ ಭರಿಸಬೇಕು ಎಂದು ಹೇಳಿ ಬಿಲ್‌ನ್ನು ಸರಕಾರ 2024ರಲ್ಲಿ ತಿರಸ್ಕರಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರ ಸಂಸ್ಥೆ ಹೈಕೋರ್ಟ್ ಮೆಟ್ಟಿಲೇರಿತ್ತು.

7 ರಾಜ್ಯದಲ್ಲಿ 6 ಡಿಸಿ ಫಾಸ್ಟ್ ಚಾರ್ಜರ್

ಬೆಂಗಳೂರು: ದೇಶದಲ್ಲಿ ಎಲೆಕ್ಟ್ರಿಕ್ ದ್ವಿಚಕ್ರ ವಾಹನಗಳ ಬೇಡಿಕೆ ವೇಗವಾಗಿ ಏರುತ್ತಿರುವ ನಡುವೆ, ಅಲ್ಟ್ರಾವಯೋಲೆಟ್ ಆಟೋಮೋಟಿವ್ ಮತ್ತು ಬೋಲ್ಟ್ ಅರ್ಥ್ ಸಂಸ್ಥೆಗಳು ಟೈಪ್-6 ಡಿಸಿ ಫಾಸ್ಟ್ ಚಾರ್ಜಿಂಗ್ ಜಾಲವನ್ನು ಮತ್ತಷ್ಟು ವಿಸ್ತರಿಸಿವೆ. ಮಾರ್ಚ್ 2026ರಲ್ಲಿ ಆರಂಭವಾದ ತಂತ್ರಜ್ಞಾನದ ಸಹಭಾಗಿತ್ವದಡಿ ಈಗಾಗಲೇ ದೇಶದ ಏಳು ರಾಜ್ಯಗಳಲ್ಲಿ 130ಕ್ಕೂ ಹೆಚ್ಚು ಟೈಪ್-6 ಡಿಸಿ ಫಾಸ್ಟ್ ಚಾರ್ಜರ್‌ಗಳನ್ನು ಸ್ಥಾಪಿಸಲಾಗಿದೆ.

ಈ ಕುರಿತು ಅಲ್ಟ್ರಾವಯೋಲೆಟ್ ಆಟೋಮೋಟಿವ್ ಸಂಸ್ಥೆಯ ಸಿಟಿಒ ನಿರಾಜ್ ರಾಜ್ ಮೋಹನ್ ಮಾತನಾಡಿ, ದೇಶದಲ್ಲಿ ಕಚ್ಚಾ ತೈಲದ ಅನಿಶ್ಚಿತತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ವಿದ್ಯುತ್ ಆಧಾರಿತ ಸಂಚಾರ ವ್ಯವಸ್ಥೆ ಬಲಪಡಿಸುವ ಅಗತ್ಯ ಎದುರಾಗಿದೆ. ಚಾರ್ಜಿಂಗ್ ವ್ಯವಸ್ಥೆ ವಿಶ್ವಾಸಾರ್ಹ ಹಾಗೂ ಎಲ್ಲರಿಗೂ ಸುಲಭವಾಗಿ ಲಭ್ಯವಾಗುವಂತಾಗಬೇಕು. ಆರಂಭದಲ್ಲಿ 50 ಚಾರ್ಜರ್‌ಗಳನ್ನು ಅಳವಡಿಸುವ ಗುರಿ ಇಟ್ಟಿದ್ದರು, ಅದನ್ನು ದ್ವಿಗುಣಕ್ಕಿಂತ ಹೆಚ್ಚು ಸಾಧಿಸಿರುವುದಾಗಿ ಕಂಪನಿಗಳು ತಿಳಿಸಿವೆ. ಮುಂದಿನ ಎರಡು ತಿಂಗಳಲ್ಲಿ ಇನ್ನೂ 200 ಹೊಸ ಚಾರ್ಜರ್‌ಗಳನ್ನು ಕಾರ್ಯಾಚರಣೆಗೆ ತರುವ ಯೋಜನೆಯೂ ರೂಪಿಸಲಾಗಿದೆ. ಆಂಧ್ರ ಪ್ರದೇಶ, ಕರ್ನಾಟಕ, ಕೇರಳ, ಮಹಾರಾಷ್ಟ್ರ, ತಮಿಳುನಾಡು, ತೆಲಂಗಾಣ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಈ ಜಾಲ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ಇದರಿಂದ ಎಲೆಕ್ಟ್ರಿಕ್ ಮೋಟಾರ್‌ಸೈಕಲ್ ಸವಾರರಿಗೆ ದೂರ ಪ್ರಯಾಣದ ವೇಳೆ ವೇಗದ ಚಾರ್ಜಿಂಗ್ ಸೌಲಭ್ಯ ಸುಲಭವಾಗಿ ಲಭ್ಯವಾಗಲಿದೆ ಎಂದರು. ಇದೇ ವೇಳೆ ಬೋಲ್ಟ್ ಅರ್ಥ್ ಸಂಸ್ಥೆಯ ಸಂಸ್ಥಾಪಕ ಮೋಹಿತ್ ಯಾದವ್, ಮುಂದಿನ ಎರಡು ವರ್ಷಗಳಲ್ಲಿ ದೇಶಾದ್ಯಂತ 10,000 ಟೈಪ್-6 ಬ್ಲೇಝ್ ಡಿಸಿ ಫಾಸ್ಟ್ ಚಾರ್ಜರ್‌ಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದೇವೆ. ಭಾರತದಲ್ಲಿ ವಿಶ್ವಾಸಾರ್ಹ ಸಾರ್ವಜನಿಕ ಫಾಸ್ಟ್ ಚಾರ್ಜಿಂಗ್ ಜಾಲ ನಿರ್ಮಾಣ ನಮ್ಮ ಪ್ರಮುಖ ಉದ್ದೇಶ ಎಂದರು.

ಕೆಪಿಎಸ್ ಶಾಲೆಗಳ ಪರಿಕಲ್ಪನೆಯ ಮರುಚಿಂತನೆ ಅಗತ್ಯ

ಬೆಂಗಳೂರು: ರಾಜ್ಯಸರಕಾರ ಪ್ರಸ್ತುತ ಆರಂಭಿಸುತ್ತಿರುವ ಕರ್ನಾಟಕ ಪಬ್ಲಿಕ್ ಸ್ಕೂಲ್ ಪರಿಕಲ್ಪನೆಯ ಪರಿಣಾಮಗಳ ಕುರಿತು ಮರುಪರಿಶೀಲನೆ ಅತ್ಯಗತ್ಯವೆಂದು ನಾಡೋಜ ಬರಗೂರು ರಾಮಚಂದ್ರಪ್ಪ ತಿಳಿಸಿದರು. ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿವಿ ಕನ್ನಡ ಅಧ್ಯಯನ ವಿಭಾಗದ ವತಿಯಿಂದ ಸೆಂಟ್ರಲ್ ಕಾಲೇಜಿನಲ್ಲಿ ಆಯೋಜಿಸಿದ್ದ ಅನ್ನದ ಭಾಷೆಯಾಗಿ ಕನ್ನಡ ಎಂಬ ವಿಷಯದ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಈ ಹೊಸ ಯೋಜನೆಯಿಂದ ಸುತ್ತಮುತ್ತಲಿನ ಸರಕಾರಿ ಶಾಲೆಗಳು ಮುಚ್ಚುವ ಗಂಭೀರ ಬಿಕ್ಕಟ್ಟು ಸೃಷ್ಟಿ ಯಾಗಬಹುದು. ಈ ಬಗ್ಗೆ ಮುಖ್ಯಮಂತ್ರಿಯವರು ತಕ್ಷಣ ಗಮನ ಹರಿಸಬೇಕು. ಒಂದು ವೇಳೆ ಸರಕಾರದ ಕ್ರಮದಿಂದ ಸರಕಾರಿ ಪ್ರಾಥಮಿಕ ಶಾಲೆಗಳು ಮುಚ್ಚಿದರೆ ಅದು ಹತ್ಯೆಯಾಗುವುದು ಅಥವಾ ಅವುಗಳು ತಾವಾಗಿಯೇ ಮುಚ್ಚಿದರೆ ಆತ್ಮಹತ್ಯೆ ಯಾಗುವುದು ಎಂದರು.

ಕೆಪಿಎಸ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ಶಿಕ್ಷಣ ನೀಡುವ ಅಗತ್ಯವಾದರೂ. ಒಂದೇ ಸೂರಿನಡಿಯಲ್ಲಿ ವಿಭಿನ್ನ ವಯೋಮಾನದ ವಿದ್ಯಾರ್ಥಿಗಳು ಕಲಿಯುವುದು ಸಂಕೀರ್ಣ ಸವಾಲಾಗಬಹುದು. ಈಗಾಗಲೇ ನಿರ್ಧರಿಸಿರುವಂತೆ ಒಂದನೇ ತರಗತಿಯಿಂದಲೇ ಇಂಗ್ಲಿಷ್ ಭಾಷೆಯನ್ನು ಸಮರ್ಪಕವಾಗಿ ಕಲಿಸುವ ಜತೆಗೆ ಎಲ್ಲ ಸರಕಾರಿ ಶಾಲೆಗಳ ಗುಣಮಟ್ಟ ಸುಧಾರಣೆಗೆ ರಾಜ್ಯ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. 1995ರ ನಂತರ ಪ್ರಾರಂಭಿಸಲಾದ ಖಾಸಗಿ ಕನ್ನಡ ಶಾಲೆಗಳಿಗೂ ಅನುದಾನ ನೀಡುವಂತೆ ರಾಜ್ಯ ಸರಕಾರವನ್ನು ಆಗ್ರಹಿಸಲಾಗುತ್ತಿದೆ ಜತೆಗೆ ಸ್ಥಳೀಯರಿಗೆ ಉದ್ಯೋಗ ಆದ್ಯತೆ ನೀಡುವ ರಾಷ್ಟ್ರೀಯ ನೀತಿ ಜಾರಿಯಾಗಬೇಕು ಎಂದರು. ಬೆಂ.ನ.ವಿ.ವಿಯ ಕುಲಪತಿ ಪ್ರೊ. ರಮೇಶ್.ಬಿ. ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಡಾ.ಕೆ.ವೈ.ನಾರಾಯಣಸ್ವಾಮಿ, ಹಿರಿಯ ಲೇಖಕರಾದ ಡಾ. ರಾಜಪ್ಪ ದಳವಾಯಿ ಮತ್ತು ಡಾ.ಎಚ್.ಎಲ್.ಪುಷ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ನಾಡೋಜ ಬರಗೂರು ರಾಮಚಂದ್ರಪ್ಪ ಉದ್ಘಟಿಸಿದರು. ಈ ವೇಳೆ ಬೆಂ.ನ.ವಿ.ವಿಯ ಕುಲಪತಿ ಪ್ರೊ. ರಮೇಶ್.ಬಿ., ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಪ್ರಭಾರ ಕುಲಪತಿ ಡಾ.ಕೆ.ವೈ.ನಾರಾಯಣಸ್ವಾಮಿ ಸೇರಿದಂತೆ ಇನ್ನಿತರರು ಇದ್ದರು.

ಸಮಾಚಾರ ಸಣ್ಣದಲ್ಲ

ಎಸ್‌ಬಿಐ: 7,150 ಅಪ್ರೆಂಟಿಸ್ ಹುದ್ದೆ

ದೆಹಲಿ: ಭಾರತದ ಅತಿ ದೊಡ್ಡ ಬ್ಯಾಂಕಿಂಗ್ ಸಮೂಹವಾಗಿರುವ 'ಭಾರತೀಯ ಸ್ಟೇಟ್ ಬ್ಯಾಂಕ್'(ಎಸ್‌ಬಿಐ)ನಲ್ಲಿ 7,150 ಅಪ್ರೆಂಟಿಸ್ ಹುದ್ದೆಗಳಿಗಾಗಿ ಪದವೀಧರರಿಂದ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಆಯ್ಕೆಯಾದವರಿಗೆ ಒಂದು ವರ್ಷ ತರಬೇತಿ ಜತೆ ಮಾಸಿಕ 15 ಸಾವಿರ ರು. ಸ್ಟೈಫಂಡ್ ನೀಡಲಾಗುವುದು. ತರಬೇತಿ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರಿಗೆ ಭವಿಷ್ಯದಲ್ಲಿ ಎಸ್‌ಬಿಐ ಕ್ಲರಿಕಲ್ ಹುದ್ದೆ ನೇಮಕ ಸಂದರ್ಭ ಆದ್ಯತೆ ದೊರೆಯಲಿದೆ. ಅಪ್ರೆಂಟಿಸ್ ಹುದ್ದೆಗೆ ಅರ್ಜಿ ಸಲ್ಲಿಸಲು ಜೂ.8 ಕಡೆ ದಿನ. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ರಾಜ್ಯದ ಅಧಿಕೃತ ಸ್ಥಳೀಯ ಭಾಷೆ ಓದಲು, ಬರೆಯಲು, ಮಾತನಾಡಲು ಮತ್ತು ಅರ್ಥಮಾಡಿಕೊಳ್ಳಲು ತಿಳಿದಿರಬೇಕು. ಏ.1 ರನ್ವಯ ಅಭ್ಯರ್ಥಿ ವಯಸ್ಸು ಕನಿಷ್ಠ 20-ಗರಿಷ್ಠ 28 ವರ್ಷವಾಗಿರಬೇಕು. ಸರಕಾರದ ನಿಯಮಾನುಸಾರ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ವಿಶೇಷ ಚೇತನ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ಅನ್ವಯಿಸುತ್ತದೆ. ಜುಲೈನಲ್ಲಿ 100 ಅಂಕಗಳಿಗೆ ಆನ್‌ಲೈನ್ ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಎಸ್‌ಬಿಐ ಪ್ರಕಟಣೆ ತಿಳಿಸಿದೆ.

ಥೈರಾಯ್ಡ್ ಅಸ್ವಸ್ಥತೆ ಹೆಚ್ಚಳ: ಡಾ.ವಿದ್ಯಾ ಭಟ್

ಬೆಂಗಳೂರು: ನಗರ ಪ್ರದೇಶಗಳ ಮಹಿಳೆಯರಲ್ಲಿ ಥೈರಾಯ್ಡ್ ಅಸ್ವಸ್ಥತೆ ಹೆಚ್ಚಾಗುತ್ತಿದ್ದು, ಇದು ಬಂಜೆತನ, ಅನಿಯಮಿತ ಋತುಚಕ್ರ ಹಾಗೂ ಪದೇಪದೇ ಗರ್ಭಪಾತಕ್ಕೆ ಪ್ರಮುಖ ಕಾರಣವಾಗುತ್ತಿದೆ ಎಂದು ರಾಧಾಕೃಷ್ಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ.ವಿದ್ಯಾ ಭಟ್ ತಿಳಿಸಿದರು. ಮಹಿಳೆಯರಲ್ಲಿ ಥೈರಾಯ್ಡ್ ಅಸಮತೋಲನ, ಲವತ್ತತೆ ಮತ್ತು ಗರ್ಭಪಾತದ ನಡುವಿನ ಗುಪ್ತ ಸಂಬಂಧ ಕುರಿತು ಗುರುವಾರ ವರ್ಚುವಲ್ ಮೂಲಕ ಸಂವಾದ ನಡೆಸಿದ ಅವರು, ಥೈರಾಯ್ಡ್ ಸಮಸ್ಯೆಗಳು ಮಹಿಳೆಯರ ಫಲವತ್ತತೆಯನ್ನು ಗಂಭೀರವಾಗಿ ಪರಿಣಾಮಗೊಳಿಸುತ್ತಿವೆ. ಬಹಳಷ್ಟು ಮಹಿಳೆಯರು ಗರ್ಭಧಾರಣೆಗೆ ವರ್ಷಗಳ ಕಾಲ ಪ್ರಯತ್ನಿಸಿ ವಿಲವಾದ ಬಳಿಕ ಅಥವಾ ಪದೇ-ಪದೇ ಗರ್ಭಪಾತ ಅನುಭವಿಸಿದ ನಂತರ ಚಿಕಿತ್ಸೆಗಾಗಿ ಬರುತ್ತಾರೆ. ಆದರೆ, ಇದರ ಹಿಂದೆ ಥೈರಾಯ್ಡ್ ಅಸಮತೋಲನವೇ ಪ್ರಮುಖ ಕಾರಣವಾಗಿರುತ್ತದೆ. ಥೈರಾಯ್ಡ್ ಗ್ರಂಥಿ ಹಾರ್ಮೋನ್ ನಿಯಂತ್ರಣ, ಅಂಡೋತ್ಪತ್ತಿ, ಮಾಸಿಕ ಋತುಚಕ್ರ, ಗರ್ಭಧಾರಣೆಯ ಆರೋಗ್ಯ ಹಾಗೂ ಭ್ರೂಣದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೈಪೋಥೈರಾಯ್ಡ್ ಹಾಗೂ ಹೈಪರ್ ಥೈರಾಯ್ಡ್ ಎರಡೂ ಮಹಿಳೆಯರ ಸಲವತ್ತತೆಯನ್ನು ಹಾನಿಗೊಳಿಸಬಹುದು. ಇದರಿಂದ ಅಂಡೋತ್ಪತ್ತಿ ಅಸ್ತವ್ಯಸ್ತವಾಗುವುದು, ಅಂಡಾಣುಗಳ ಗುಣಮಟ್ಟ ಕುಸಿಯುವುದು ಹಾಗೂ ಗರ್ಭಧಾರಣೆಯ ಸಮಸ್ಯೆಗಳು ಹೆಚ್ಚಾಗುವ ಸಾಧ್ಯತೆ ಇದೆ ಎಂದರು.

ಶಿಥಿಲ ಕಟ್ಟಡಗಳ ತೆರವಿಗೆ ಪಾಲಿಕೆ ಪರಿಶೀಲನೆ

ಬೆಂಗಳೂರು: ಮಳೆಗಾಲ ಪೂರ್ವ ಮುನ್ನೆಚ್ಚರಿಕಾ ಕ್ರಮಗಳ ಭಾಗವಾಗಿ ಬೆಂಗಳೂರು ಉತ್ತರ ನಗರ ಪಾಲಿಕೆಯ ಪುಲಿಕೇಶಿನಗರ ವಿಭಾಗದ ವಿವಿಧ ವಾರ್ಡ್‌ಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳು ಹಾಗೂ ಅಪಾಯಕಾರಿ ಕಾಂಪೌಂಡ್ ಗೋಡೆಗಳ ಪರಿಶೀಲನೆ ಆರಂಭಿಸಿದೆ ಎಂದು ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು. ಈ ಕುರಿತು ಮಾತನಾಡಿದ ಅವರು, ಶ್ಯಾಂಪುರ, ಕಾವಲ್ ಬೈರಸಂದ್ರ, ಶಕ್ತಿನಗರ, ಪೆರಿಯಾರ್ ನಗರ, ಅರುಣ್ ಆಸಿಫ್ ಅಲಿ, ವರಲಕ್ಷ್ಮೀನಗರ, ದೊಡ್ಡಣ್ಣನಗರ, ಕುಶಾಲನಗರ, ಸಗಾಯಪುರಂ, ಪುಲಿಕೇಶಿನಗರ ಹಾಗೂ ಎಸ್.ಕೆ. ಗಾರ್ಡನ್ ಪ್ರದೇಶಗಳಲ್ಲಿ ಸರಕಾರಿ ಮತ್ತು ಖಾಸಗಿ ಕಟ್ಟಡಗಳು, ಶಾಲೆಗಳು ಹಾಗೂ ಕಾಂಪೌಂಡ್ ಗೋಡೆಗಳ ಸ್ಥಿತಿ ಪರಿಶೀಲಿಸಲಾಗುತ್ತಿದೆ. ಸಾರ್ವಜನಿಕರಿಗೆ ಅಪಾಯ ಉಂಟುಮಾಡುವ ಸಾಧ್ಯತೆಯಿರುವ ಶಿಥಿಲ ಕಟ್ಟಡಗಳು ಮತ್ತು ಗೋಡೆಗಳನ್ನು ಗುರುತಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಖಾಸಗಿ ಶಾಲೆಗಳು ಹಾಗೂ ಖಾಸಗಿ ಕಟ್ಟಡಗಳ ಮಾಲೀಕರು ಅಪಾಯಕಾರಿ ಸ್ಥಿತಿಯಲ್ಲಿರುವ ಗೋಡೆಗಳು ಮತ್ತು ಕಟ್ಟಡಗಳನ್ನು ತಮ್ಮ ಸ್ವಂತ ವೆಚ್ಚದಲ್ಲಿ ತಕ್ಷಣ ತೆರವುಗೊಳಿಸಿ ಸುರಕ್ಷತಾ ಕ್ರಮ ಕೈಗೊಳ್ಳಬೇಕು. ನಿಯಮ ಪಾಲಿಸದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಯಾವುದೇ ಅನಾಹುತ ಸಂಭವಿಸಿದರೆ ಸಂಬಂಧಪಟ್ಟ ಮಾಲೀಕರೇ ನೇರ ಹೊಣೆಗಾರರಾಗಿರುತ್ತಾರೆ. ಸಾರ್ವಜನಿಕರು ತಮ್ಮ ಪ್ರದೇಶದಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ಕಟ್ಟಡಗಳು ಅಥವಾ ಗೋಡೆಗಳು ಕಂಡುಬಂದಲ್ಲಿ ಪುಲಿಕೇಶಿನಗರ ವಿಭಾಗದ ಅಧಿಕಾರಿಗಳಿಗೆ 9538004111, 9886153161 ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ.

ಅಗಲಿದ ಜೀವ

ಮಾತೆ ರುಕ್ಮಿಣಿ ನಿಧನ

ಬೆಂಗಳೂರು: ರಾಷ್ಟ್ರ ಸೇವಿಕಾ ಸಮಿತಿಯ ಪೂರ್ವ ಅಖಿಲ ಭಾರತ ಸಹಕಾರ್ಯವಾಹಿಕೆಯಾಗಿ ಕಾರ್ಯನಿರ್ವಹಿಸಿದ್ದ



ಮಾತೆ ರುಕ್ಮಿಣಿ (98) ಅವರು ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ ಗುರುವಾರ ರಾತ್ರಿ ನಿಧನರಾಗಿದ್ದಾರೆ. ಶುಕ್ರವಾರ ಬೆಳಗ್ಗೆ 7 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಮೃತರ ಸ್ವಗೃಹದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ, ನಂತರ ಹರಿಶ್ಚಂದ್ರಘಾಟ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

{ ರಾಹುಲ್ ಗಾಂಧಿ } ವಿರೋಧ ಪಕ್ಷದ ನಾಯಕ

ನಮ್ಮ ದೇಶದಲ್ಲಿ ಆರ್ಥಿಕ ತಲ್ಲಣ ಇದ್ದರೂ ಪ್ರಧಾನಿ ಮೋದಿಯವರು ಇಟಲಿಯಲ್ಲಿ ಮಿಠಾಯಿಗಳನ್ನು ಹಂಚುತ್ತಿದ್ದಾರೆ. ದೇಶದ ರೈತರು, ಯುವಕರು, ಮಹಿಳೆಯರು, ಕಾರ್ಮಿಕರು ಮತ್ತು ಸಣ್ಣ ವ್ಯಾಪಾರಿಗಳೆಲ್ಲರೂ ಕಣ್ಣೀರು ಹಾಕುತ್ತಿದ್ದರೆ ಅವರು ಅಲ್ಲಿ ನಗುತ್ತಾ ರೀಲ್‌ಗಳನ್ನು ಮಾಡುತ್ತಿದ್ದು ಅದಕ್ಕೆ ಬಿಜೆಪಿಯವರು ಚಪ್ಪಾಳೆ ತಟ್ಟುತ್ತಿದ್ದಾರೆ. ಇದು ನಾಯಕತ್ವವಲ್ಲ, ಒಂದು ಪ್ರಹಸನ.

ಭಾರತದ ಪ್ರಮುಖ ವಲಯಗಳಲ್ಲಿ ಹೊಸ ಹೂಡಿಕೆಗಳು ಮತ್ತು ವಿಸ್ತರಣಾ ಯೋಜನೆಗಳಿಗೆ ಒಪ್ಪಿಗೆ

5 ರಾಷ್ಟ್ರಗಳ ಮೋದಿ ಪ್ರವಾಸ: 40 ಬಿಲಿಯನ್ ಡಾಲರ್ ಬಂಡವಾಳ

ದೆಹಲಿ: ಪ್ರಧಾನಮಂತ್ರಿ, ನರೇಂದ್ರ ಮೋದಿಯವರ ಇತ್ತೀಚಿನ ಐದು ರಾಷ್ಟ್ರಗಳ ಭೇಟಿಯು ಭಾರತಕ್ಕೆ ಸುಮಾರು 40 ಶತಕೋಟಿ ಡಾಲರ್ ಮೌಲ್ಯದ ಹೂಡಿಕೆ ಮಾರ್ಗವನ್ನು ಭದ್ರಪಡಿಸಿಕೊಳ್ಳಲು ಸಹಾಯ ಮಾಡಿದೆ. ಹಲವಾರು ಬಹುರಾಷ್ಟ್ರೀಯ ಸಂಸ್ಥೆಗಳು, ಭಾರತದ ಪ್ರಮುಖ ವಲಯಗಳಲ್ಲಿ ಹೊಸ ಹೂಡಿಕೆಗಳು ಮತ್ತು ವಿಸ್ತರಣಾ ಯೋಜನೆಗಳಿಗೆ ಒಪ್ಪಿಗೆ ಸೂಚಿಸಿವೆ.

ಪ್ರಧಾನಿ ಮೋದಿ ಅವರ ಈ ಪ್ರವಾಸದ ಸಮಯದಲ್ಲಿ ಸೆಮಿಕಂಡಕ್ಟರ್‌ಗಳು, ಲಾಜಿಸ್ಟಿಕ್ಸ್, ಮೂಲಸೌಕರ್ಯ, ರಕ್ಷಣೆ, ಇಂಧನ ಮತ್ತು ತಂತ್ರಜ್ಞಾನದಂತಹ ಕ್ಷೇತ್ರಗಳನ್ನು ಒಳಗೊಂಡ 50ಕ್ಕೂ ಹೆಚ್ಚು ಜಾಗತಿಕ ಕಂಪನಿಗಳ ಮುಖ್ಯ ಕಾರ್ಯನಿರ್ವಾಹಕರು ಮತ್ತು ಹಿರಿಯ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದ್ದಾರೆ. ಈ ಕಂಪನಿಗಳ ಒಟ್ಟಾರೆ ಮಾರುಕಟ್ಟೆ ಮೌಲ್ಯಮಾಪನ 2.7 ಟ್ರಿಲಿಯನ್‌ನಿಂದ 3 ಟ್ರಿಲಿಯನ್ ಡಾಲರ್‌ವರೆಗೆ ಇದೆ ಎಂದು ಅಂದಾಜಿಸಲಾಗಿದೆ.

ಈ ಸಂಸ್ಥೆಗಳ ಪೈಕಿ ಹಲವು ಈಗಾಗಲೇ ಭಾರತದಲ್ಲಿ ಹೂಡಿಕೆ ಹೊಂದಿದ್ದು, ಮತ್ತಷ್ಟು ಬಂಡವಾಳ ಹೂಡಿಕೆಗೆ ಸಮ್ಮತಿ ಸೂಚಿಸಿವೆ. ಅವುಗಳ ಸಂಚಿತ ಹೂಡಿಕೆಗಳು ಮತ್ತು ವ್ಯವಹಾರದ ಮಾನ್ಯತೆ, ಸುಮಾರು 180 ಬಿಲಿಯನ್ ಡಾಲರ್ ಎಂದು ಅಂದಾಜಿಸಲಾಗಿದೆ. ಭಾರತದ ಬಲವಾದ ಆರ್ಥಿಕ ಬೆಳವಣಿಗೆ ಮತ್ತು ಹೆಚ್ಚುತ್ತಿರುವ ದೇಶೀಯ ಬೇಡಿಕೆಯಿಂದ ಲಾಭ ಪಡೆಯಲು ಹಲವಾರು ಕಂಪನಿಗಳು ಈಗ ಕಾರ್ಯಾಚರಣೆಯನ್ನು ವಿಸ್ತರಿಸಲು ಯೋಜಿಸುತ್ತಿವೆ.

ಪ್ರಮುಖ ಹೂಡಿಕೆ ಘೋಷಣೆಗಳು: ಮೋದಿಯವರ ಐದು ದೇಶಗಳ ಪ್ರವಾಸವು ಯುಎಇ, ನೆದರ್ಲೆಂಡ್ಸ್, ಸ್ವೀಡನ್, ನಾರ್ವೆ ಮತ್ತು ಇಟಲಿಯನ್ನು ಒಳಗೊಂಡಿತ್ತು.

ಭಾರತ-ನಾರ್ಡಿಕ್ ಸಂಬಂಧ ವಿಸ್ತರಣೆ

ಪ್ರಧಾನಿ ಮೋದಿ ಅವರು ನಾರ್ವೆಯಲ್ಲಿ, ಮೂರನೇ ಭಾರತ-ನಾರ್ಡಿಕ್ ಶೃಂಗಸಭೆಯಲ್ಲಿ ಭಾಗವಹಿಸಿದರು. ನಾರ್ಡಿಕ್ ನಾಯಕರೊಂದಿಗಿನ ದ್ವಿಪಕ್ಷೀಯ ಸಭೆಗಳಲ್ಲಿ, ಪ್ರಮುಖ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಭಾರತ-ನಾರ್ಡಿಕ್ ಸಂಬಂಧಗಳಲ್ಲಿ ಗಮನಾರ್ಹ ಫಲಿತಾಂಶಗಳು ಮತ್ತು ಹೊಸ ಆವೇಗದಿಂದ ಗುರುತಿಸಲ್ಪಟ್ಟ ಒಪ್ಪಂದಗಳು, ಪ್ರಧಾನಿ ಮೋದಿ ಅವರ ನಾರ್ವೆ ಪ್ರವಾಸವನ್ನು ಯಶಸ್ವಿಗೊಳಿಸಿದೆ ಎಂದು ಭಾರತದ ವಿದೇಶಾಂಗ ಸಚಿವಾಲಯ ಹೇಳಿದೆ.

ಈ ಸಮಯದಲ್ಲಿ ಭಾರತವು ಹಲವಾರು ಒಪ್ಪಂದಗಳಿಗೆ ಸಹಿ ಹಾಕಿತ್ತು ಮತ್ತು ಹಲವಾರು ರಾಷ್ಟ್ರಗಳೊಂದಿಗೆ ಸಂಬಂಧವನ್ನು ನವೀಕರಿಸಿತು.

ಪ್ರಧಾನಿ ಮೋದಿ ಅವರು ಸಂಯುಕ್ತ ಅರಬ್ ಸಂಸ್ಥಾನಕ್ಕೆ ಭೇಟಿ ನೀಡುವ ಮೂಲಕ, ತಮ್ಮ ಐದು ರಾಷ್ಟ್ರಗಳ ಪ್ರವಾಸಕ್ಕೆ ಚಾಲನೆ ನೀಡಿದ್ದರು. ಈ ವೇಳೆ ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಪ್ರಧಾನಿ ಮೋದಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಈ ಪೈಕಿ ಭಾರತದಲ್ಲಿ 5 ಬಿಲಿಯನ್ ಡಾಲರ್ ಹೂಡಿಕೆ ಮಾಡಲು ಯುಎಇ ಒಪ್ಪಿಗೆ ಸೂಚಿಸಿದ್ದು ಅತ್ಯಂತ ಪ್ರಮುಖವಾಗಿತ್ತು. ಈ ಒಪ್ಪಂದ ರಕ್ಷಣೆ, ಅರೆವಾಹಕಗಳು ಮತ್ತು ಇಂಧನ ಸಂಬಂಧಗಳನ್ನು ಒಳಗೊಂಡಿದೆ.



ಅದೇ ರೀತಿ ಭಾರತ ಮತ್ತು ನೆದರ್ಲೆಂಡ್ಸ್ ತಮ್ಮ ದ್ವಿಪಕ್ಷೀಯ ಸಂಬಂಧಗಳನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಏರಿಸಿದವು. ವ್ಯಾಪಾರ, ಅರೆವಾಹಕಗಳು, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ಕಂಪ್ಯೂಟಿಂಗ್, ಹಸಿರು ಹೈಡ್ರೋಜನ್ ಮತ್ತು ಕಡಲ ಭದ್ರತೆಯನ್ನು ಒಳಗೊಂಡ ಮಾರ್ಗಸೂಚಿಯನ್ನು ಅನಾವರಣಗೊಳಿಸಿದವು. ಈ ಭೇಟಿಯು ನಿರ್ಣಾಯಕ ಖನಿಜಗಳು, ನವೀಕರಿಸಬಹುದಾದ ಇಂಧನ ಮತ್ತು ರಕ್ಷಣಾ ಉತ್ಪಾದನೆಯಲ್ಲಿ ಸಹಕಾರ ಸೇರಿದಂತೆ 17 ಒಪ್ಪಂದಗಳನ್ನು ಸಹ ರೂಪಿಸಿತು.

ಸ್ವೀಡನ್ ದೇಶವು ಈಗ ಭಾರತದ ಕಾರ್ಯತಂತ್ರದ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮಿದೆ. ಹಸಿರು ಪರಿವರ್ತನೆ, ಉದಯೋನ್ಮುಖ ತಂತ್ರಜ್ಞಾನಗಳು, ವ್ಯಾಪಾರ, ರಕ್ಷಣೆ ಮತ್ತು ಹವಾಮಾನ ಕ್ರಿಯೆಯ ಮೇಲೆ ಕೇಂದ್ರೀಕರಿಸಿದ 2026-2030ರ ಜಂಟಿ ಕ್ರಿಯಾ ಯೋಜನೆಯನ್ನು ಎರಡೂ ದೇಶಗಳು ಅನುಮೋದಿಸಿವೆ.

ಒಟ್ಟಿನಲ್ಲಿ ಪ್ರಧಾನಿ ಮೋದಿ ಅವರ ಐದು ರಾಷ್ಟ್ರಗಳ ಭೇಟಿಯ ಸಮಯದಲ್ಲಿ ಚರ್ಚಿಸಲಾದ ಒಟ್ಟಾರೆ ಹೂಡಿಕೆ ಬದ್ಧತೆಗಳು ಮತ್ತು ವ್ಯವಹಾರ ವಿಸ್ತರಣಾ ಪ್ರಸ್ತಾಪಗಳು, ಭಾರತದ ದೀರ್ಘಕಾಲೀನ ಆರ್ಥಿಕ ನಿರೀಕ್ಷೆಗಳು ಮತ್ತು ಕಾರ್ಯತಂತ್ರದ ಪ್ರಾಮುಖ್ಯತೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚುತ್ತಿರುವ ವಿಶ್ವಾಸವನ್ನು ಪ್ರತಿಬಿಂಬಿಸುತ್ತವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ಭಾರತ-ಇಟಲಿ ಒಪ್ಪಂದ

ಪ್ರಧಾನಿ ಮೋದಿ ಅವರ ಈ ಬಾರಿಯ ಇಟಲಿ ಪ್ರವಾಸ ಅನೇಕ ಹೊಸ ಒಪ್ಪಂದಗಳಿಗೆ ಸಾಕ್ಷಿಯಾಗಿದೆ. ಪ್ರಧಾನಿ ಮೋದಿ ಮತ್ತು ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ನಡುವಿನ ದ್ವಿಪಕ್ಷೀಯ ಮಾತುಕತೆಗಳು, ಭಾರತ-ಇಟಲಿ ರಾಜತಾಂತ್ರಿಕ ಸಂಬಂಧಕ್ಕೆ ಹೊಸ ಭಾಷ್ಯ ಬರೆದಿದೆ. ಎರಡೂ ರಾಷ್ಟ್ರಗಳು ತಮ್ಮ ಸಂಬಂಧವನ್ನು ಕಾರ್ಯತಂತ್ರದ ಪಾಲುದಾರಿಕೆಗೆ ಹೆಚ್ಚಿಸಿವೆ. ಇಟಲಿಗೆ ಅತ್ಯಂತ ಉತ್ಪಾದಕ ಭೇಟಿಯನ್ನು ಮುಕ್ತಾಯಗೊಳಿಸಲಾಗಿದೆ. ಪ್ರಧಾನಿ ಜಾರ್ಜಿಯಾ ಮೆಲೋನಿ ಅವರೊಂದಿಗಿನ ನನ್ನ ಚರ್ಚೆಗಳು ವ್ಯಾಪಕ ಶ್ರೇಣಿಯನ್ನು ಒಳಗೊಂಡಿವೆ ಎಂದು ಪ್ರಧಾನಿ ಮೋದಿ ಅವರು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಭಾರತ ಮತ್ತು ಇಟಲಿ ರಕ್ಷಣಾ ಉತ್ಪಾದನೆ, ನಿರ್ಣಾಯಕ ಖನಿಜಗಳು, ಉನ್ನತ ಶಿಕ್ಷಣ, ಕಡಲ ಸಹಕಾರ, ಹವಾಮಾನ ಸಂಶೋಧನೆ, ಆರೋಗ್ಯ ರಕ್ಷಣೆ ಮತ್ತು ಆಯುರ್ವೇದವನ್ನು ಒಳಗೊಂಡ ಒಪ್ಪಂದಗಳಿಗೆ ಸಹಿ ಹಾಕಿದವು.

ಸಾರ್ವಜನಿಕ ಎಚ್ಚರಿಕೆ ಪ್ರಕಟಿಸಿದ ಕೇಂದ್ರ ಔಷಧ ಮಾನದಂಡ ನಿಯಂತ್ರಣ ಸಂಸ್ಥೆ

ಇಂಜೆಕ್ಷನ್ ರೂಪದ ಸೌಂದರ್ಯ ವರ್ಧಕ ಬಳಕೆ ಕಾನೂನು ಬಾಹಿರ

ದೆಹಲಿ: ಸೌಂದರ್ಯ ವರ್ಧಕಗಳನ್ನು ಇಂಜೆಕ್ಷನ್ ರೂಪದಲ್ಲಿ ಬಳಸುವುದು ಅಥವಾ ಬಳಸಲು ಅವಕಾಶ ನೀಡುವುದು ಕಾನೂನುಬಾಹಿರ ಎಂದು ಕೇಂದ್ರ ಔಷಧ ಮಾನದಂಡ ನಿಯಂತ್ರಣ ಸಂಸ್ಥೆ (ಸಿಡಿಎಸ್‌ಸಿಒ) ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಕೇಂದ್ರ ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯದ ಅಧೀನದಲ್ಲಿರುವ ಸಿಡಿಎಸ್‌ಸಿಒ ಈ ಕುರಿತು ಸಾರ್ವಜನಿಕ ಎಚ್ಚರಿಕೆಯನ್ನು ಪ್ರಕಟಿಸಿದೆ. ಡ್ರಗ್ ಆ್ಯಂಡ್ ಕಾಸ್ಮೆಟಿಕ್ಸ್ ಕಾಯ್ದೆ-1940 ಹಾಗೂ ಕಾಸ್ಮೆಟಿಕ್ ನಿಯಮಗಳು-2020 ಅನ್ವಯ ಸೌಂದರ್ಯ ವಸ್ತುಗಳ ತಯಾರಿಕೆ, ಮಾರಾಟ ಮತ್ತು ಬಳಕೆಗೆ ಕಟ್ಟುನಿಟ್ಟಿನ ನಿಯಮಗಳಿವೆ ಎಂದು ತಿಳಿಸಿದೆ. ಎಚ್ಚರಿಕೆಯ ಪ್ರಕಾರ ಸೌಂದರ್ಯ ವರ್ಧಕಗಳು ಮಾನವ ದೇಹವನ್ನು ಸ್ವಚ್ಛಗೊಳಿಸಲು, ಸೌಂದರ್ಯ ಹೆಚ್ಚಿಸಲು, ಆಕರ್ಷಣೆ ವೃದ್ಧಿಸಲು ಅಥವಾ ದೇಹದ ರೂಪದಲ್ಲಿ ಬದಲಾವಣೆ ತರಲು ಮಾತ್ರ ಬಳಕೆಯಾಗಬೇಕು. ಇವುಗಳನ್ನು ದೇಹಕ್ಕೆ ಇಂಜೆಕ್ಷನ್ ರೂಪದಲ್ಲಿ ಬಳಸಲು ಯಾವುದೇ ಅನುಮತಿ ಇಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಇದೇ ವೇಳೆ ವೈದ್ಯಕೀಯ ಚಿಕಿತ್ಸೆಗಾಗಿ ಅಥವಾ ವೃತ್ತಿಪರರು ಬಳಸುವ ಚಿಕಿತ್ಸಾ ವಿಧಾನಗಳಲ್ಲಿ ಕಾಸ್ಮೆಟಿಕ್ಸ್ ಬಳಸುವಂತಿಲ್ಲ. ಕಾಸ್ಮೆಟಿಕ್ಸ್ ಅನ್ನು ದೇಹದ ಮೇಲೆ ಹಚ್ಚುವುದು, ಎರಚುವುದು, ಪುಡಿ ರೂಪದಲ್ಲಿ ಬಳಕೆ ಮಾಡುವುದು ಅಥವಾ ಸ್ಪ್ರೇ ಮಾಡುವ ಮಟ್ಟಕ್ಕೆ ಮಾತ್ರ ಸೀಮಿತವಾಗಿರಬೇಕು ಎಂದು ಸೂಚಿಸಲಾಗಿದೆ.

ಸೌಂದರ್ಯ ಉತ್ಪನ್ನಗಳ ಲೇಬಲ್‌ಗಳಲ್ಲಿ ತಪ್ಪು ಮಾಹಿತಿ ನೀಡುವುದು, ಅತಿರಂಜಿತ ಅಥವಾ ದಾರಿ ತಪ್ಪಿಸುವ ಜಾಹೀರಾತು ಮಾಡುವುದು ಕೂಡ ಕಾನೂನು ಉಲ್ಲಂಘನೆಯಾಗುತ್ತದೆ ಎಂದು ಸಿಡಿಎಸ್‌ಸಿಒ ಎಚ್ಚರಿಸಿದೆ. ನಿಷೇಧಿತ ಪದಾರ್ಥಗಳ ಬಳಕೆ, ತಪ್ಪು ಪ್ರಚಾರ, ಇಂಜೆಕ್ಷನ್ ಮೂಲಕ ಸೌಂದರ್ಯ ಚಿಕಿತ್ಸೆ ನೀಡುವುದು ಸೇರಿದಂತೆ ಯಾವುದೇ ಉಲ್ಲಂಘನೆ ಕಂಡುಬಂದರೆ ಸಾರ್ವಜನಿಕರು ಸಿಡಿಎಸ್‌ಸಿಒ ಹಾಗೂ ರಾಜ್ಯ ಪರವಾನಗಿ ಪ್ರಾಧಿಕಾರಗಳಿಗೆ ದೂರು ನೀಡಬಹುದು ಎಂದು ಸಂಸ್ಥೆ ಮನವಿ ಮಾಡಿದೆ.

ಶಿಕ್ಷಣಕ್ಕೆ ಉತ್ತೇಜನ ಕಲಾಜಾಥಾ ಅಭಿಯಾನದ ಉದ್ದೇಶ

ಬೆಂಗಳೂರು: ತ್ಯಾಜ್ಯ ಸಂಗ್ರಹಿಸುವ ಸಮುದಾಯಗಳ ಪ್ರತಿಯೊಂದು ಮಗು ಶಾಲೆ ಹಾಗೂ ಅಂಗನವಾಡಿಗೆ ಸೇರಿ ಶಿಕ್ಷಣ ಮತ್ತು ಸಮಗ್ರ ಅಭಿವೃದ್ಧಿಯ ಅವಕಾಶ ಪಡೆಯಬೇಕು ಎಂಬುದೇ ಕಲಾಜಾಥಾ ಅಭಿಯಾನದ ಉದ್ದೇಶ ಎಂದು ಸ್ಪರ್ಶ ಟ್ರಸ್ಟ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಗೋಪಿನಾಥ್ ಆರ್. ಹೇಳಿದರು.

ಸ್ಪರ್ಶ ಟ್ರಸ್ಟ್ ವತಿಯಿಂದ 'ಕಲಾಜಾಥಾ ನನ್ನ ನಡೆ ಶಿಕ್ಷಣದೆಡೆಗೆ 2026-27' ಅಭಿಯಾನ ಚಾಲನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬೆಂಗಳೂರಿನ 40 ತ್ಯಾಜ್ಯ ಸಂಗ್ರಹಿಸುವ ಸಮುದಾಯಗಳ ಮಕ್ಕಳಲ್ಲಿ ಶಾಲಾ ದಾಖಲಾತಿ ಹೆಚ್ಚಿಸಿ, ಶಾಲಾ ಬಿಟ್ಟು ಹೋಗುವಿಕೆ ಕಡಿಮೆ ಮಾಡುವ ಉದ್ದೇಶದಿಂದ ಈ ಜಾಗೃತಿ ಅಭಿಯಾನ ಆರಂಭಿಸಲಾಗಿದೆ ಎಂದರು. ಶಾಲೆ ಬಿಟ್ಟಿರುವ ಅಥವಾ ಎಂದಿಗೂ ಶಾಲೆಗೆ ಹೋಗದ ಮಕ್ಕಳನ್ನು ಗುರುತಿಸಿ, ಸರಕಾರಿ ಶಾಲೆಗಳು, ಅಂಗನವಾಡಿಗಳು ಮತ್ತು ಎನ್‌ಐಒಎಸ್ ಶಿಕ್ಷಣ ವ್ಯವಸ್ಥೆಗಳಿಗೆ ಸೇರಿಸುವುದು ಅಭಿಯಾನದ ಪ್ರಮುಖ ಉದ್ದೇಶವಾಗಿದೆ. ಈ ವರ್ಷ 120ಕ್ಕೂ ಹೆಚ್ಚು ಮಕ್ಕಳನ್ನು ಔಪಚಾರಿಕ ಶಿಕ್ಷಣ ವ್ಯವಸ್ಥೆಗೆ ಸೇರಿಸುವ ಗುರಿ ಹೊಂದಲಾಗಿದೆ. ಸ್ಪರ್ಶ ಟ್ರಸ್ಟ್ 2024-26ರ ಅವಧಿಯಲ್ಲಿ ನಡೆಸಿದ 'ಕಲಾಜಾಥಾ ನನ್ನ ನಡೆ ಶಾಲೆ ಕಡೆ' ಅಭಿಯಾನದ ಮೂಲಕ 497 ಮಕ್ಕಳನ್ನು ಸರಕಾರಿ ಶಾಲೆಗೆ ದಾಖಲು ಮಾಡಿಸಲಾಗಿದೆ ಎಂದರು.

ಸ್ಪರ್ಶ ಟ್ರಸ್ಟ್ ವತಿಯಿಂದ 'ಕಲಾಜಾಥಾ ನನ್ನ ನಡೆ ಶಿಕ್ಷಣದೆಡೆಗೆ 2026-27' ಅಭಿಯಾನಕ್ಕೆ ಕಾರ್ಮಿಕ ಇಲಾಖೆ ಜಂಟಿ ಕಾರ್ಮಿಕ ಆಯುಕ್ತ ಡಾ.ಎಸ್.ಬಿ.ರವಿಕುಮಾರ್ , ಸ್ಪರ್ಶ ಟ್ರಸ್ಟ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಗೋಪಿನಾಥ್ ಆರ್. ಚಾಲನೆ ನೀಡಿದರು.

ಶಿಕ್ಷಣವು ಪ್ರತಿಯೊಂದು ಮಗುವಿನ ಸಂವಿಧಾನಬದ್ಧ ಹಕ್ಕಾಗಿದ್ದು, ಅದನ್ನು ಖಚಿತಪಡಿಸುವುದು ಸರಕಾರ ಹಾಗೂ ಸಮಾಜದ ಜವಾಬ್ದಾರಿ. ವಿವಿಧ ಇಲಾಖೆಗಳ ಸಮನ್ವಯದಿಂದ ಮಕ್ಕಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು.
-ಡಾ.ಎಸ್.ಬಿ.ರವಿಕುಮಾರ್, ಕಾರ್ಮಿಕ ಇಲಾಖೆ ಜಂಟಿ ಕಾರ್ಮಿಕ ಆಯುಕ್ತ

ಕುಮಾರವ್ಯಾಸರಿಗೆ ಶೇಕ್ಸ್‌ಪಿಯರ್ ಮಟ್ಟದ ಗೌರವ ಸಿಗಬೇಕು

ಬೆಂಗಳೂರು: ಭಾರತೀಯ ಸಂಸ್ಕೃತ ನಾಟಕಗಳ ಮಹತ್ವವನ್ನು ಜಗತ್ತಿನ ಮಟ್ಟದಲ್ಲಿ ಗುರುತಿಸಬೇಕಾದ ಅಗತ್ಯವಿದೆ ಎಂದು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದ್ ರಾಜ್ ತಿಳಿಸಿದರು.

ನಗರದ ಕಲಾಗ್ರಾಮದಲ್ಲಿ ಬುಧವಾರ ಆಯೋಜಿಸಿದ್ದ ದೃಶ್ಯ ನಾಟಕೋತ್ಸವ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶೇಕ್ಸ್‌ಪಿಯರ್ ವಿಶ್ವನಾಟಕಕಾರ ಎಂಬ ಗೌರವ ಸಿಕ್ಕಿದೆ. ಆದರೆ ಭಾಸನಂತಹ ಮಹಾನ್ ನಾಟಕಕಾರರನ್ನು ನಾವು ಭಾರತದ ಗಡಿಗಳೊಳಗೆ ಮಾತ್ರ ಸೀಮಿತಗೊಳಿಸಿದ್ದೇವೆ. ಇದು ಸರಿಯಲ್ಲ. ಕಾಳಿ ದಾಸ, ಅಶ್ವಘೋಷ, ಭಾಸರಂತಹವರು ಭಾರತೀಯ ರಂಗಭೂಮಿಗೆ ಅಪಾರ ಕೊಡುಗೆ ನೀಡಿದ್ದಾರೆ. ಭಾಸನ ಸಾಹಿತ್ಯ ಬಹಳ ತಡವಾಗಿ ದೊರಕಿದ್ದು ನಮ್ಮ ದುರಾದೃಷ್ಟ. ಸಾವಿರ ವರ್ಷಗಳ ಹಿಂದೆ ಬದುಕಿದ್ದ ಭಾಸನ ಬಗ್ಗೆ ಭಾರತೀಯರಿಗೆ ತಿಳಿದುಕೊಳ್ಳಲು ಶತಮಾನಗಳ ಕಾಲ ಬೇಕಾಯಿತು. ಕನ್ನಡದ ಆದಿಕವಿ ಪಂಪನನ್ನು ಕನ್ನಡಿಗರಿಗೆ ಬಿ.ಎಲ್.ರೈಸ್ ಅವರು 1898ರಲ್ಲಿ ಪರಿಚಯಿಸಿದರು ಎಂದರು. ಭಾಸನ ನಾಟಕಗಳಲ್ಲಿ ಮಹಿಳೆಯ ಮನೋವ್ಯಥೆ, ಸಮಾಜದ ಸೂಕ್ಷ್ಮತೆಗಳನ್ನು ಚಿತ್ರಿಸಲಾಗಿದೆ. ಹೆಣ್ಣನ್ನು ನಿರ್ಲಕ್ಷ್ಯದಿಂದ ನೋಡುತ್ತಿದ್ದ ಕಾಲದಲ್ಲೇ ಅವಳ ನೋವು, ಸಂಕಟ, ಮನಸ್ಸಿನ ಅಂತರಂಗವನ್ನು ಭಾಸ ತನ್ನ ನಾಟಕಗಳಲ್ಲಿ ಕಟ್ಟಿಕೊಟ್ಟಿದ್ದಾನೆ. ಶೇಕ್ಸ್‌ಪಿಯರ್ ಈ ಜಗತ್ತೇ ಒಂದು ರಂಗಭೂಮಿ, ನಾವೆಲ್ಲ ಪಾತ್ರಧಾರಿಗಳು ಎಂಬುದನ್ನು ತಿಳಿಸಿದ್ದಾನೆ. ಅವನ ಸಾಹಿತ್ಯ ಯಾವುದೇ ಒಂದು ಕಾಲಕ್ಕೆ ಸೀಮಿತವಾಗಿಲ್ಲ. ಅದಕ್ಕೇ ಇಂದಿಗೂ ಜೀವಂತ. ಭಾರತೀಯ ಸಾಹಿತ್ಯ ವಿಶ್ವ ಮಟ್ಟಕ್ಕೆ ಕೊಂಡೊಯ್ಯುವಲ್ಲಿ ನಾವು ಹಿಂದೆಬಿದ್ದಿದ್ದೇವೆ. ಇಂಗ್ಲಿಷರು ಶೇಕ್ಸ್‌ಪಿಯರ್‌ನನ್ನು ಜಗತ್ತಿನಾದ್ಯಂತ ಕೊಂಡೊಯ್ದರು. ಆದರೆ ನಾವು ಕುಮಾರವ್ಯಾಸರನ್ನು ನಮ್ಮ ಮನೆಮನೆಗೂ ತಲುಪಿಸಲಿಲ್ಲ ಎಂದರು.

ಕಾರ್ಯಕ್ರಮದಲ್ಲಿ ರಂಗ ನಿರ್ದೇಶಕ ಜೋಸೆಫ್ ಜಾನ್, ಕಲಾವಿದೆ ಲಕ್ಷ್ಮೀ ಚಂದ್ರಶೇಖರ್, ಪ್ರಾಧ್ಯಾಪಕಿ ಶೋಭಾ, ಅತಿಥಿ ಉಪನ್ಯಾಸಕ ಡಾ.ಪ್ರಭುರಾಜ್ ಸೇರಿದಂತೆ ಇನ್ನಿರರು ಉಪಸ್ಥಿತರಿದ್ದರು.

ದೃಶ್ಯ ನಾಟಕೋತ್ಸವ ನಾಟಕ ಪ್ರದರ್ಶನ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದ್ ರಾಜ್ ಉದ್ಘಾಟಿಸಿದರು. ಈ ವೇಳೆ ರಂಗ ನಿರ್ದೇಶಕ ಜೋಸೆಫ್ ಜಾನ್, ಕಲಾವಿದೆ ಲಕ್ಷ್ಮೀ ಚಂದ್ರಶೇಖರ್, ಪ್ರಾಧ್ಯಾಪಕಿ ಶೋಭಾ, ಅತಿಥಿ ಉಪನ್ಯಾಸಕ ಡಾ.ಪ್ರಭುರಾಜ್ ಸೇರಿದಂತೆ ಇನ್ನಿರರು ಉಪಸ್ಥಿತರಿದ್ದರು.

ಕುಮಾರವ್ಯಾಸರ ಕಾವ್ಯಗಳಲ್ಲಿ ಅಪಾರ ದೃಶ್ಯ ವೈಭವವಿದೆ. ಕುಮಾರವ್ಯಾಸರು ಜಗತ್ತಿನ ಮೊದಲ ಸಿನಿಮಾ ಸ್ಕ್ರಿಪ್ಟ್ ರೈಟರ್ ಎಂದರೂ ತಪ್ಪಾಗದು. ಬಾಹುಬಲಿ ಸಿನಿಮಾದಂತಹ ಭವ್ಯ ದೃಶ್ಯಗಳು ಅವರ ಕಾವ್ಯದಲ್ಲೇ ಇವೆ. ನಮ್ಮ ಸಾಹಿತ್ಯ, ಸಂಸ್ಕೃತಿ, ಕಾವ್ಯಗಳಲ್ಲಿ ಅಪಾರ ಸಂಪತ್ತು ಇದೆ. ಯಾವುದೇ ಕಾರಣಕ್ಕೂ ನಾವು ಕೀಳರಿಮೆಯಿಂದ ನರಳುವ ಅಗತ್ಯವಿಲ್ಲ.
-ಎಲ್.ಎನ್.ಮುಕುಂದ್ ರಾಜ್, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಈಜೀಪುರ ಮೇಲ್ಸೇತುವೆ ಕಾಮಗಾರಿ ಅಕ್ಟೋಬರ್ ಒಳಗೆ ಪೂರ್ಣಗೊಳಿಸಿ

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ನಡೆಯಿತು.

ಬೆಂಗಳೂರು: ನಗರ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ನಿರ್ಮಾಣವಾಗುತ್ತಿರುವ ಈಜೀಪುರ ಮೇಲ್ಸೇತುವೆ ಕಾಮಗಾರಿ ಅಕ್ಟೋಬರ್ ಅಂತ್ಯದೊಳಗಾಗಿ ಪೂರ್ಣಗೊಳಿಸಿ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮ ಗಾರಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಿಗದಿತ ಅವಧಿ ಯಲ್ಲಿ ಕಾಮಗಾರಿ ಪೂರ್ಣಗೊಳ್ಳಲು ಹೆಚ್ಚುವರಿ ಸಿಬ್ಬಂದಿ ಮತ್ತು ಕಾರ್ಮಿಕರನ್ನು ನಿಯೋಜಿಸಬೇಕು. ಮಡಿವಾಳ ಭಾಗದ ಸೈಡ್ ರ್‍ಯಾಂಪ್ ಕಾಮಗಾರಿ ನಡೆಯುವ ಪ್ರದೇಶದಲ್ಲಿರುವ ಬೆಸ್ಕಾಂನ ಆರ್‌ಎಂಯು ಘಟಕವನ್ನು ತಕ್ಷಣ ಸ್ಥಳಾಂತರಿಸಿ, ಕೇಂದ್ರೀಯ ಸದನದ ಎದುರಿನ ಮೂರು ಮರಗಳನ್ನು ನಾಲ್ಕು ದಿನಗಳೊಳಗೆ ತೆರವುಗೊಳಿಸಿ ಕಾಮಗಾರಿ ಆರಂಭಿಸಲು ಸೂಚಿಸಲಾಯಿತು.

ದೊಮ್ಮಲೂರು ಭಾಗದ ಡೌನ್ ರ್‍ಯಾಂಪ್ ಕಾಮಗಾರಿ ಶೇ.70 ರಷ್ಟು ಪೂರ್ಣ ಗೊಂಡಿದ್ದು, ಉಳಿದ ಕಾಮಗಾರಿ 15 ದಿನಗಳೊಳಗೆ ಮುಗಿಸಬೇಕು. ಬಳಿಕ ಸರ್ಜಾಪುರ ಭಾಗದ ಡೌನ್ ರ್‍ಯಾಂಪ್ ಕಾಮಗಾರಿ ತ್ವರಿತವಾಗಿ ಕೈಗೆತ್ತಿಕೊಳ್ಳುವಂತೆ ಸೂಚನೆ ನೀಡಲಾಯಿತು. ಈಜೀಪುರ ಸಿಗ್ನಲ್ ಸಮೀಪ ಆರಂಭಗೊಂಡಿರುವ ನಾಲ್ಕು ಸ್ಪಾನ್‌ಗಳ ಲಾಂಚಿಂಗ್ ಕಾರ್ಯ ಎರಡು ತಿಂಗಳೊಳಗೆ ಪೂರ್ಣಗೊಳಿಸಬೇಕು. ಜತೆಗೆ ಐದು ಪೋರ್ಟಲ್ ಫ್ರೇಮ್‌ಗಳ ಕಾಮಗಾರಿ ವೇಗ ಗೊಳಿಸಿ ಪ್ರಮುಖ ಮೇಲ್‌ಸೇತುವೆ ಕಾಮಗಾರಿ ಅಕ್ಟೋಬರ್ ಒಳಗಾಗಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಯಿತು. 2.59 ಕಿ.ಮೀ ಉದ್ದದ ಈ ಮೇಲ್‌ಸೇತುವೆ ಕಾಮಗಾರಿ ಒಟ್ಟು 762 ಸೆಗ್‌ಮೆಂಟ್‌ಗಳ ಪೈಕಿ 731 ಸೆಗ್‌ಮೆಂಟ್‌ಗಳ ಕಾಸ್ಟಿಂಗ್ ಪೂರ್ಣಗೊಂಡಿದ್ದು, 66 ಸ್ಪಾನ್‌ಗಳ ಪೈಕಿ 52 ಸ್ಪಾನ್‌ಗಳ ಅಳವಡಿಕೆ ಮುಗಿದಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿದೆ ಎಂದರು.

ರಾಹುಲ್ ಗಾಂಧಿ ಕ್ಷಮೆ ಯಾಚಿಸಲು ವಿಜಯೇಂದ್ರ ಆಗ್ರಹ

ಬೆಂಗಳೂರು: ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಬಿಜೆಪಿಯ ಗೆಲುವು ರಾಹುಲ್ ಗಾಂಧಿಗೆ ಸಹಿಸಲು ಆಗುತ್ತಿಲ್ಲ. ಅವರು ದೇಶದ ಜನರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಸಿದ್ದಾರೆ.

ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಎಲುಬಿಲ್ಲದ ನಾಲಿಗೆ ಏನೂ ಬೇಕಾದರೂ ನುಡಿಯಬಾರದು. ಪ್ರಧಾನಿ ಮತ್ತು ಕೇಂದ್ರ ಗೃಹ ಸಚಿವರ ಬಗ್ಗೆ ಅವಮಾನಕರವಾಗಿ ಮಾತನಾಡಬಾರದು. ಹಿಂದುಳಿದ ಸಮಾಜಕ್ಕೆ ಸೇರಿದ ಮೋದಿ ಅವರು ಪ್ರಧಾನಿಯಾಗಿ ಮೂರನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾರೆ. ದೇಶ ನಾಲ್ಕನೇ ಆರ್ಥಿಕ ಶಕ್ತಿಯಾಗಿ ಮಾಡಿದ್ದಾರೆ. ದೇಶದ ಅಭಿವೃದ್ಧಿ ಸಹಿಸದೆ ರಾಹುಲ್ ಗಾಂಧಿ ಈ ರೀತಿ ಮಾತನಾಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು.

ಕಾಶ್ಮೀರದಲ್ಲಿ ಆರ್ಟಿಕಲ್ 370 ಅನ್ನು ಕಿತ್ತು ಹಾಕುವ ಧೈರ್ಯ ಕಾಂಗ್ರೆಸ್‌ಗೆ ಇರಲಿಲ್ಲ. ಅದನ್ನು ಕಿತ್ತು ಹಾಕಿದ್ದು ಅಮಿತ್ ಶಾ. ಇದಕ್ಕೆ ರಾಹುಲ್ ಗಾಂಧಿ ಅವರು ಅಮಿತ್ ಶಾ ಅವರನ್ನು ದೇಶದ್ರೋಹಿ ಎಂದು ಕರೆಯುತ್ತಾರೆಯೇ? ದೇಶದಲ್ಲಿ ನಕ್ಸಲರನ್ನು ಬುಡಸಮೇತ ನಾಶ ಮಾಡುವಲ್ಲಿ ಅಮಿತ್ ಶಾ ಕೆಲಸ ಮಾಡಿದ್ದಾರೆ. ಪ್ರಧಾನಿ ಮೋದಿ ಅವರು ಭ್ರಷ್ಟಾಚಾರರಹಿತ ಆಡಳಿತ ನೀಡಿದ್ದಾರೆ. ಅದನ್ನು ರಾಹುಲ್ ಗಾಂಧಿಗೆ ಸಹಿಸಲು ಆಗುತ್ತಿಲ್ಲ ಎಂದರು.

ಐದೇ ದಿನದಲ್ಲಿ ಒಂದು ಕೋಟಿಗೂ ಹೆಚ್ಚು ಫಾಲೋವರ್ಸ್ ಮೂಲಕ ಜಿರಲೆ ಸದ್ದು

ಕಾಕ್ರೋಚ್ ಅಬ್ಬರ: ರಾಜಕಾರಣದಲ್ಲಿ ಸಂಚಲನ

ದೆಹಲಿ: ಸೋಷಿಯಲ್ ಮೀಡಿಯಾದಲ್ಲಿ ಕಾಕ್ರೋಚ್ ಜನತಾ ಪಾರ್ಟಿ (Cockroach Janta Party) ಅಬ್ಬರ ಜೋರಾಗಿದೆ. ಫಾಲೋವರ್ಸ್ ಸಂಖ್ಯೆಯಲ್ಲಿ ಐದೇ ದಿನಕ್ಕೆ ಬಿಜೆಪಿಯನ್ನು ಸಿಜೆಪಿ ಹಿಂದಿಕ್ಕಿ ಅಚ್ಚರಿ ಮೂಡಿಸಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಬಿಜೆಪಿಯು 87 ಲಕ್ಷ ಫಾಲೋವರ್ಸ್ ಹೊಂದಿದ್ದರೆ, ಈ ಡಿಜಿಟಲ್ ಪಾರ್ಟಿಯು ಬರೋಬ್ಬರಿ 1.5 ಕೋಟಿ ಫಾಲೋವರ್ಸ್ ದಾಟಿದೆ. ಈ ಮೂಲಕ ಕಾಕ್ರೋಚ್ ಜನತಾ ಪಾರ್ಟಿ ಹೊಸ ದಾಖಲೆಯನ್ನು ಬರೆದಿದ್ದು, ಭಾರತದ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದೆ.

ಇದರ ಬೆನ್ನಿಗೇ ಈ ಡಿಜಿಟಲ್ ಪಾರ್ಟಿಯ ಸಂಸ್ಥಾಪಕ ಅಭಿಜೀತ್ ದಿಪ್ಕೆ ಹೆಸರು ಮುನ್ನಲೆಗೆ ಬಂದಿದೆ. ಸಿಜೆಪಿ ಎನ್ನುವುದು ಸಾಮಾಜಿಕ ಜಾಲತಾಣದಲ್ಲಿ ಆರಂಭವಾದ ವಿಡಂಬನಾತ್ಮಕ ಅಭಿಯಾನವಾದರೂ ಮುಂದೊಂದು ದಿನ ಇದು ನೇಪಾಳ, ಬಾಂಗ್ಲಾ ಮಾದರಿಯಲ್ಲಿ ದೇಶದ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಬಹುದೇ ಎನ್ನುವ ಚರ್ಚೆ ಜೋರಾಗಿದೆ. ಅಭಿಜಿತ್ ದಿಪ್ಕೆ ಎಂಬ ಯುವಕ ಆರಂಭಿಸಿದ ಈ ಅಭಿಯಾನ ಈಗ Gen-z ಸಂಘಟನೆಯಾಗಿ ಬದಲಾಗುತ್ತಿದೆ.

ಏನಿದು ಕಾಕ್ರೋಚ್ ಜನತಾ ಪಾರ್ಟಿ?

ಹಿರಿಯ ವಕೀಲರ ಹುದ್ದೆಯ ಪದನಾಮಕ್ಕೆ ಸಂಬಂಧಿಸಿದ ಅರ್ಜಿಯೊಂದರ ವಿಚಾರಣೆ ನಡೆಸುತ್ತಿದ್ದಾಗ ಉದ್ಯೋಗ ಸಿಗದ ಕೆಲವು ಯುವಕರು ವ್ಯವಸ್ಥೆಯ ವಿರುದ್ಧ ತಿರುಗಿಬೀಳುತ್ತಾರೆ. ಅವರು ಮಾಧ್ಯಮ, ಸಾಮಾಜಿಕ ಜಾಲತಾಣ ಅಥವಾ ಆರ್‌ಟಿಐ ಕಾರ್ಯಕರ್ತರ ರೂಪದಲ್ಲಿ ಜಿರಳೆಗಳಂತೆ ಎಲ್ಲರ ಮೇಲೆ ದಾಳಿ ಮಾಡುತ್ತಾರೆ ಎಂದು ಸಿಜೆಐ ಸೂರ್ಯಕಾಂತ್ ನೇತೃತ್ವದ ನ್ಯಾಯಪೀಠ ಟೀಕಿಸಿತ್ತು.

ನ್ಯಾ. ಸೂರ್ಯಕಾಂತ್ ಹೇಳಿಕೆಯನ್ನೇ ಆನ್‌ಲೈನ್ ಮಾಧ್ಯಮವಾಗಿ ಪರಿವರ್ತಿಸಿದ ಅಭಿಜಿತ್ ದಿಪ್ಕೆ, ಕಾಕ್ರೋಚ್ ಜನತಾ ಪಾರ್ಟಿ ಹೆಸರಿನಲ್ಲಿ ಸಾಮಾಜಿಕ ಜಾಲತಾಣಗಳಾದ ಎಕ್ಸ್, ಇನ್ಸ್ಟಾಗ್ರಾಮ್‌ಗಳಲ್ಲಿ ಪೋಸ್ಟ್ ಮಾಡಲಾರಂಭಿಸಿದ್ದರು. ಇದು Gen&Z ಸಮುದಾಯವನ್ನು ಆಕರ್ಷಿಸಿದ್ದು, ನಂಬಲಸಾಧ್ಯ ಸಂಖ್ಯೆಯ ಫಾಲೋವರ್ಸ್‌ಗಳನ್ನು ಗಳಿಸಿದೆ. ಸಿಜೆಐ ಹೇಳಿಕೆ ವಿರುದ್ಧ ಆನ್‌ಲೈನ್‌ನಲ್ಲಿ ವ್ಯಂಗ್ಯೋಕ್ತಿಗಳು, ಮೀಮ್ಸ್‌ಗಳು ಹರಿದಾಡುತ್ತಿವೆ.

cockroachjantaparty ಹ್ಯಾಂಡಲ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಖಾತೆ, ಗುರುವಾರ ಒಂದು ಕೋಟಿ ಫಾಲೋವರ್ಸ್ ಗಡಿ ದಾಟಿದೆ. ಆಡಳಿತಾರೂಢ ಬಿಜೆಪಿಯ ಅಧಿಕೃತ ಇನ್‌ಸ್ಟಾಗ್ರಾಮ್ ಖಾತೆ bjp4india ಪ್ರಸ್ತುತ ಸುಮಾರು 87 ಲಕ್ಷ ಅನುಯಾಯಿಗಳನ್ನು ಹೊಂದಿದೆ. ಕಾಂಗ್ರೆಸ್‌ನ incindia ಖಾತೆಯು ಸುಮಾರು 13.4 ಮಿಲಿಯನ್ ಅನುಯಾಯಿಗಳನ್ನು ಹೊಂದಿದೆ. 2012 ರಲ್ಲಿ ಸ್ಥಾಪನೆಯಾದ ಆಮ್ ಆದ್ಮಿ ಪಕ್ಷ (ಆಪ್) ಸುಮಾರು 1.9 ಮಿಲಿಯನ್ ಫಾಲೋವರ್ಸ್ ಹೊಂದಿದೆ.

ಅಕೌಂಟ್ ಬ್ಲಾಕ್: ಸದ್ಯ ಕಾಕ್ರೋಚ್ ಜನತಾ ಪಾರ್ಟಿಯ ಎಕ್ಸ್ ಹ್ಯಾಂಡಲ್‌ನ್ನು ಬ್ಲಾಕ್ ಮಾಡಲಾಗಿದ್ದು, ಅಭಿಜಿತ್ ದಿಪ್ಕೆ ಅವರು ಇನ್ಸ್ಟಾಗ್ರಾಮ್ ಹ್ಯಾಂಡಲ್‌ನ್ನೂ ಬ್ಲಾಕ್ ಮಾಡುವ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. ಇಒಕ2029 ಯೂಸರ್‌ನೇಮ್ ಹೊಂದಿರುವ ಈ ಖಾತೆಗೆ ಹೋದಾಗ »Account Withheld ಮಾಡಲಾಗಿದೆ ಎಂದು ತೋರಿಸಲಾಗುತ್ತದೆ. CJP2029 has been withheld in response to a ¯legal demand ಎಂದು ಕಾಣಿಸುತ್ತದೆ. ಆದರೆ ಯಾವುದೇ ಕಾರಣಕ್ಕೂ ತಮ್ಮ ಅಭಿಯಾನವನ್ನು ನಿಲ್ಲಿಸುವುದಿಲ್ಲ ಎಂದಿರುವ ಅಭಿಜಿತ್ ದಿಪ್ಕೆ, ದೇಶದ ಯುವ ಸಮುದಾಯದ ಧ್ವನಿಯಾಗಿ ಕರ್ತವ್ಯ ನಿರ್ವಹಿಸುವುದನ್ನು ಮುಂದುವರಿಸುವುದಾಗಿ ಸ್ಪಷ್ಟಪಡಿಸಿದ್ದಾರೆ.

ಯಾರೀ ಅಭಿಜಿತ್ ದಿಪ್ಕೆ ?

'ಕಾಕ್ರೋಚ್' ಹೆಸರಿನಲ್ಲಿ ರಾಜಕೀಯ ಪಕ್ಷದ ವೆಬ್‌ಸೈಟ್ ಮತ್ತು ಸೋಶಿಯಲ್ ಮೀಡಿಯಾ ಅಕೌಂಟ್ ತೆರೆಯಲಾಗಿತ್ತು. ಅಭಿಜಿತ್ ದಿಪ್ಕೆ 'ಕಾಕ್ರೋಚ್ ಜನತಾ ಪಾರ್ಟಿ' ಯನ್ನುಎಕ್ಸ್‌ನಲ್ಲಿ ಸ್ಥಾಪಿಸಿ ಪ್ರಚಾರ ಮಾಡುತ್ತಿದ್ದಾರೆ. ಪ್ರಸುತ್ತ ರಾಜಕೀಯ ವ್ಯವಸ್ಥೆ ಪ್ರಶ್ನೆ ಮಾಡ್ತಿರುವ ದಿಪ್ಕೆ ಈ ವಿನೂತನ ಪ್ರಯತ್ನಕ್ಕೆ ದೇಶದ ಜೆನ್ ಜಿಗಳಿಂದ ಬೆಂಬಲ ವ್ಯಕ್ತವಾಗುತ್ತಿದೆ.

ಪುಣೆಯಲ್ಲಿ ಪತ್ರಿಕೋದ್ಯಮದಲ್ಲಿ ಪದವಿ ಮುಗಿಸಿರುವ ದಿಪ್ಕೆ , ಪ್ರಸ್ತುತ ಅಮೆರಿಕದ ಬೋಸ್ಟನ್ ವಿಶ್ವವಿದ್ಯಾಲಯದಲ್ಲಿ ಸಾರ್ವಜನಿಕ ಸಂಪರ್ಕ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಿದ್ದಾರೆ. ಇವರು ಈ ಹಿಂದೆ (2020 ರಿಂದ 2023 ರವರೆಗೆ) ಆಮ್ ಆದ್ಮಿ ಪಕ್ಷದ ಸೋಷಿಯಲ್ ಮೀಡಿಯಾ ಮತ್ತು ಡಿಜಿಟಲ್ ಪ್ರಚಾರ ತಂಡದಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ್ದರು. 2020ರ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ, ಅರವಿಂದ್ ಕೇಜ್ರಿವಾಲ್ ನೇತೃತ್ವದ ಆಪ್ ಪಕ್ಷವ ಪ್ರಮುಖ ಗೆಲುವು ಸಾಧಿಸಿದಾಗ, ಆಗ 24 ವರ್ಷದವರಾಗಿದ್ದ ಅಭಿಜಿತ್ ದಿಪ್ಕೆ, ಮೀಮ್-ಚಾಲಿತ ಡಿಜಿಟಲ್ ಅಭಿಯಾನಗಳಲ್ಲಿ ಭಾರೀ ಕೊಡುಗೆ ನೀಡಿದ್ದರು. ಈತ ಆಪ್ ಬೆಂಬಲಿಗ ಎಂದು ಎಕ್ಸ್‌ನಲ್ಲಿ ಪೋಸ್ಟ್ ಹಾಕುತ್ತಿದ್ದಾರೆ. ಅಭಿಜಿತ್ ದಿಪ್ಕೆ ಬಿಜೆಪಿ ಮಾತ್ರವಲ್ಲ ಕಾಂಗ್ರೆಸ್ ಪಕ್ಷದ ವಿರುದ್ಧವೂ ಪೋಸ್ಟ್ ಹಾಕಿದ್ದರು. ಆದರೆ ಕಾಕ್ರೋಚ್ ಜನತಾ ಪಾರ್ಟಿ ದೊಡ್ಡ ಮಟ್ಟದಲ್ಲಿ ಸದ್ದು ಮಾಡುತ್ತಿರುವ ಕಾರಣ ಹಳೆಯ ಪೋಸ್ಟ್‌ಗಳನ್ನು ಡಿಲೀಟ್ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಖಾತೆ ಆರಂಭವಾದ ಕೆಲವೇ ದಿನಗಳಲ್ಲಿ ಇಷ್ಟೊಂದು ಬೆಂಬಲ ಸಿಗುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ. ಪಾಕಿಸ್ತಾನ, ಬಾಂಗ್ಲಾದೇಶ, ಟರ್ಕಿ, ಸೌದಿ ಅರೇಬಿಯಾದಲ್ಲಿರುವ ಜನರು ಫಾಲೋ ಮಾಡುತ್ತಿರುವುದು ಬೆಳಕಿಗೆ ಬಂದಿದೆ. ಒಟ್ಟಿನಲ್ಲಿ ಈಗ ಸಾಮಾಜಿಕ ಜಾಲತಾಣದಲ್ಲಿ Cockroach Janata Party ಪರ, ವಿರುದ್ಧ ಅಭಿಪ್ರಾಯ ವ್ಯಕ್ತವಾಗುತ್ತಿದೆ.

ಭಾವುಕತೆ

ಸಗಣಿಯೇ ಸ್ವರ್ಗ

ಒಂದೇ ವಿಹಾರದಲ್ಲಿದ್ದ ಇಬ್ಬರು ಜೆನ್ ಯತಿಗಳು ಗೆಳೆಯರಾಗಿದ್ದರು. ಇಬ್ಬರಿಗೂ ವಯಸ್ಸಾಗಿ, ಒಂದೆರಡು ತಿಂಗಳ ಅಂತರದಲ್ಲಿ ನಿಧನರಾದರು. ಒಬ್ಬ ಸ್ವರ್ಗ ಸೇರಿದ. ಅಲ್ಲಿನ ಸುಖಗಳನ್ನು ಅನುಭವಿಸುತ್ತಿದ್ದ. ಆತನ ಗೆಳೆಯ ಎಲ್ಲೂ ಕಾಣಿಸಲಿಲ್ಲ. ಎಲ್ಲಿದ್ದಾನೆ ಎಂದು ಸ್ವರ್ಗ, ನರಕ, ಪಾತಾಳಗಳನ್ನು ಒಂದು ಮಾಡಿ ಹುಡುಕಿದವನಿಗೆ ಆತ ಕಾಣಿಸಿದ್ದು ಒಂದು ಸಗಣಿಮುದ್ದೆಯಲ್ಲಿ ಹುಳವಾಗಿ. ಆತನ ಸ್ಥಿತಿ ನೋಡಿ ಮನಕರಗಿ ಈ ಯತಿ, ಅವನನ್ನು ಹೇಗಾದರೂ ಮಾಡಿ ಸ್ವರ್ಗ ಸೇರಿಸೋಣ ಎಂದು ಕೊಂಡು ಹುಳವಿದ್ದಲ್ಲಿಗೆ ಬಂದ. 'ನನ್ನ ಜೊತೆ ಬಾ' ಎಂದು ಕರೆದ. 'ಯಾರು ನೀನು? ಎಂದಿತು ಹುಳ. 'ನಿನ್ನ ಪೂರ್ವಜನ್ಮದ ಮಿತ್ರ. ಈಗ ಸ್ವರ್ಗದಲ್ಲಿದ್ದೇನೆ. ನೀನೂ ನನ್ನ ಜೊತೆ ಸ್ವರ್ಗಸುಖ ಅನುಭವಿಸುವೆಯಂತೆ, ಬಾ' ಎಂದು ಕರೆದ ಯತಿ. 'ಇಲ್ಲೇನು ಕಡಿಮೆಯಾಗಿದೆ? ಇದೇ ನನ್ನ ಸ್ವರ್ಗ' ಎಂದು ಆ ಹುಳ ಇನ್ನಷ್ಟು ಒಳಸರಿಯಿತು.

ಸುತ್ತಮುತ್ತ

ಕೇಸರೀಕರಣ

ನಿಜವಾದ 'ಕೇಸರೀಕರಣ' ಆಗಿರುವುದು ಜಮ್ಮು- ಕಾಶ್ಮೀರದಲ್ಲಿ. ತಮಾಷೆಯಲ್ಲ- ಕೇಸರಿ ಹೆಚ್ಚಾಗಿ ಬೆಳೆಯುವ ಜಮ್ಮು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಪಾಂಪೋರ್ ತೆಹಸೀಲನ್ನು 'ಕೇಸರಿ ಟೌನ್ ಆಫ್ ಇಂಡಿಯಾ' ಎಂದು ಹೇಳಲಾಗುತ್ತದೆ. ನಾವು ನೀವೆಲ್ಲ ಕೇಸರಿಬಾತ್‌ಗೆ ಬಳಸುವ, ಬಸುರಿಯರು ಹಾಲಿಗೆ ಸೇರಿಸಿಕೊಂಡು ಸವಿಯುವ ಕೇಸರಿ ಎಳೆಗಳು ಬರುವುದು ಇಲ್ಲಿಂದಲೇ. ಭಾರತದ ಶೇ.90 ಕೇಸರಿ ಬೆಳೆಯುವುದು ಇಲ್ಲಿ. ವಾರ್ಷಿಕವಾಗಿ ಸುಮಾರು 16 ಟನ್ ಬೆಳೆಯುತ್ತಾರೆ. ಪಾಂಪೋರ್ ಕೇಸರಿಯ ಗಾಢ ಪರಿಮಳ, ದಟ್ಟ ಬಣ್ಣ ಅದನ್ನು ಜಗತ್ತಿನ ಬೆಸ್ಟ್ ಕ್ವಾಲಿಟಿ ಕೇಸರಿಯಾಗಿಸಿದೆ. 2000 ವರ್ಷಗಳ ಬೆಳೆಯ ಇತಿಹಾಸ ಹೊಂದಿರುವ ಇದಕ್ಕೆ ಜಿಐ ಟ್ಯಾಗ್ ಕೂಡ ಇದೆ. ಭಾರತ ಕೇಸರಿ ಉತ್ಪಾದನೆಯಲ್ಲಿ ಎರಡನೇ ದೇಶ. ಮೊದಲ ಸ್ಥಾನ ಅನುಮಾನ ಬೇಡ- ಇರಾನ್‌ಗೆ. ಮೂರನೆಯದು ಅಫ್ಘಾನಿಸ್ತಾನ.

ಮಾತು ಗೀತೆ

ಪ್ರೀತಿಯ ವಿವರಣೆ

ಪ್ರೀತಿ ಎಂದರೆ ಕಾಮನೆ ಎಂದಷ್ಟೇ ನಾವು ಅರ್ಥ ಮಾಡಿಕೊಂಡಿದ್ದೇವೆ. ಆದರೆ ಭಗವದ್ಗೀತೆ ಹೇಳುವ ಪ್ರೀತಿಯ ಅರ್ಥ ಬಹು ವಿಸ್ತಾರವಾದುದು. 'ವಿಹಾಯ ಕಾಮನ್ಯಹಃ ಸರ್ವಾನ್ ಪುಮಾಂಶ್ಚರತಿ ನಿಃಸ್ಪೃಹಃ, ನಿರ್ಮಮೋ ನಿರಹಂಕಾರಃ ಸ ಶಾಂತಿಮಧಿಗಚ್ಛತಿ' ಎನ್ನುತ್ತಾನೆ ಶ್ರೀಕೃಷ್ಣ. ಹಾಗೆಂದರೆ ಯಾರು ಎಲ್ಲಾ ಜೀವಿಗಳ ಮೇಲೂ ದ್ವೇಷವಿಲ್ಲದೆ, ಸ್ನೇಹಭಾವ ಮತ್ತು ಕರುಣೆಯಿಂದಿರುತ್ತಾರೋ, ನನ್ನದು ಎಂಬ ಅಹಂಕಾರವಿಲ್ಲದೆ ಸುಖ-ದುಃಖಗಳಲ್ಲಿ ಸಮಭಾವದಿಂದ ಕ್ಷಮಾಶೀಲರಾಗಿರುತ್ತಾರೋ- ಅವರು ದೇವರಿಗೆ ಪ್ರಿಯರು. ಗೀತೆಯ ಪ್ರಕಾರ ನಿಜವಾದ ಪ್ರೀತಿ ಎಂದರೆ ಯಾರನ್ನೂ ದ್ವೇಷಿಸದಿರುವುದು, ಕರುಣೆ ತೋರಿಸುವುದು, ಸ್ವಾರ್ಥಕ್ಕಿಂತ ಸಂಬಂಧವನ್ನು ದೊಡ್ಡದಾಗಿ ನೋಡುವುದು, ಕಷ್ಟದಲ್ಲಿಯೂ ಶಾಂತವಾಗಿರುವುದು. ಇಂತಹ ಪ್ರೀತಿ ಕೇವಲ ಪ್ರೇಮ ಸಂಬಂಧಕ್ಕೆ ಮಾತ್ರ ಅಲ್ಲ. ಅದು ಮನುಷ್ಯರನ್ನೇ ಉತ್ತಮವಾಗಿಸುವ ಜೀವನದ ಮಾರ್ಗ.

ಹನಿಹನಿ ಕವಿತೆ

ಹನಿಮುಗಿಲು

ಎಲ್ಲೋ ತುಂಬಿಕೊಂಡ
ಕಾಳಮೇಘ
ಇಲ್ಲಿ ಹನಿದ ಮುಗಿಲಾಗಿ
ಮತ್ತೆಲ್ಲೋ ಬರಿದು ಮೋಡವಾಗಿ
ವಿರಹಿಗೆ ದೂತನಾಗುವುದು
ಎಂಥ ಚೋದ್ಯ!

• ವಿನಯ ಪರ್ಲಡಿ

ಕಾಡಬೇಡಿ ಕಾಡಿದ್ದರೆ ನಾಡು

• ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)

ಜೀವಶಾಸ್ತ್ರಜ್ಞ ಇ.ಓ. ಲ್ಸನ್ ಅವರು ಕಾಡು, ಪ್ರಾಣಿ ಮತ್ತು ಪಕ್ಷಿಗಳು ಕೇವಲ ಪ್ರಕೃತಿಯ ಆಸ್ತಿಯಲ್ಲ. ಅವು ಮಾನವನ ಅಸ್ತಿತ್ವದ ಮೂಲಾಧಾರ ಎಂದು ಹೇಳಿದ್ದಾರೆ. ಪ್ರಕೃತಿಯು ಒಂದು ಅದ್ಭುತವಾದ ಸೃಷ್ಟಿಯ ಕೊಡುಗೆ. ಅದು ಹಸಿರಾದ ಪರಿಸರ, ಜೀವ ರಾಶಿಗಳು, ಹಳ್ಳಕೊಳ್ಳಗಳು, ಅರಣ್ಯ, ಸಸ್ಯಗಳ ಪ್ರಬೇಧ ಮತ್ತು ಪ್ರಾಣಿ-ಪಕ್ಷಿಗಳ ಸಂಕುಲವನ್ನೇ ಒಳಗೊಂಡಿದೆ. ಜೀವ ವೈವಿಧ್ಯತೆ ಎಂದರೆ ಭೂಮಿಯ ಮೇಲಿನ ಜೀವ ವೈವಿಧ್ಯತೆ ಮತ್ತು ನೈಸರ್ಗಿಕ ಪರಿಕರಗಳನ್ನು ಒಳಗೊಂಡ ಸುತ್ತಮುತ್ತಲಿನ ಪರಿಸರದ ವ್ಯವಸ್ಥೆಯಾಗಿದೆ. ಇದೊಂದು ನಿರ್ಧಷ್ಟ ಪರಿಸರ ವ್ಯವಸ್ಥೆಯಾಗಿದ್ದು, ಇಡೀ ಭೂಮಿಯಲ್ಲಿ ವೈವಿಧ್ಯಮಯವಾದ ಜೀವ, ಸಸ್ಯ ಮತ್ತು ಪ್ರಾಣಿ ಸಂಕುಲಗಳು, ಸರೋವರ, ಅರಣ್ಯ, ಮರುಭೂಮಿ, ಕೃಷಿ ಜಮೀನು ಇನ್ನಿತರ ಜೈವಿಕ ಪ್ರಬೇಧಗಳನ್ನು ಒಳಗೊಂಡಿದೆ. ಹಣ ಗಳಿಕೆ, ನಗರೀಕರಣ, ಕೈಗಾರಿಕೆ, ಸಂಶೋಧನೆ, ಹೊಸ ಅಷ್ಕಾರ, ಅಣ್ವಸ್ತ್ರ ಪ್ರಯೋಗ, ಐಷಾರಾಮಿ ವಸ್ತುಗಳ ಬಳಕೆ ಮತ್ತು ಜ್ಞಾನ-ತಂತ್ರಜ್ಞಾನದ ಮಿತಿಮೀರಿದ ಉಪಯೋಗದಿಂದ ಭೂಮಿಯ ಮೇಲಿನ ಪರಿಸರವನ್ನು ಹಾಳು ಮಾಡುತ್ತಿದ್ದಾನೆ.

ಪ್ರಕೃತಿ-ಪರಿಸರದ್ದರೆ ನಾವು ಎಂಬುದನ್ನು ಮನಗಾಣಬೇಕು: ಅಭಿವೃದ್ಧಿಯ ಹೆಸರಿನಲ್ಲಿ ಮಾನವ ಇಂದು ಮರಗಳ ಮಾರಣಹೋಮ ಮಾಡುತ್ತಿದ್ದು, ಕಾಡು-ಅರಣ್ಯ ಸಂಪತ್ತು ನಾಶವಾಗುತ್ತಿದೆ. ಮನುಷ್ಯನ ಅಭಿವೃದ್ಧಿಪರ ಚಟುವಟಿಕೆಗಳು ಜೀವ ವೈವಿಧ್ಯಗಳ ನಾಶಕ್ಕೆ ಕಾರಣವಾಗಿವೆ. ಕಾಡುಗಳ ನಾಶ, ಹವಾಮಾನ ಬದಲಾವಣೆ, ಮಿತಿ ಮೀರಿದ ವಾಹನಗಳ ಸಂಚಾರ ಮತ್ತು ಪ್ರಾಣಿಗಳ ಬೇಟೆ ಸೇರಿದಂತೆ ಕಾರಣಗಳಿಂದ ಇಂದು ಜೀವ ವೈವಿಧ್ಯತೆಯು ನಾಶದ ಅಂಚಿನಲ್ಲಿದೆ. ವಿಶ್ವ ಜೀವ ವೈವಿಧ್ಯತೆ ದಿನವನ್ನು ಆಚರಿಸುವ ಉದ್ದೇಶದಿಂದ ಜೈವ ವೈವಿಧ್ಯ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಜಾಗತಿಕ ಮಟ್ಟದಲ್ಲಿ ಭೂ ಪರಿಸರ, ಪ್ರಕೃತಿ ಮತ್ತು ಜೀವ ವೈವಿಧ್ಯತೆಯ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಮೇ 22 ರಂದು ಜಾಗತಿಕ ಜೀವ ವೈವಿಧ್ಯತೆಯ ದಿನವನ್ನು ಆಚರಿಸಲು ತೀರ್ಮಾನಿಸಲಾಯಿತು. ಜೀವ ವೈವಿಧ್ಯ ನಷ್ಟವನ್ನು ತಡೆಯುವುದು, ರಕ್ಷಿಸುವುದು ಮತ್ತು ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಸಾಧಿಸುವ ಮಹೋನ್ನತವಾದ ಉದ್ದೇಶದಿಂದ ಈ ದಿನವನ್ನು ಆಚರಿಸಲು ಕರೆ ನೀಡಲಾಯಿತು. ನೈಸರ್ಗಿಕ ಪರಿಸರದೊಂದಿಗೆ ನಾವು ಉತ್ತಮ ಸಂಬಂಧವನ್ನು ಹೊಂದುತ್ತಾ, ಪರಿಸರ ಅಸಮತೋಲನ ಉಂಟಾಗದಂತೆ ಮತ್ತು ಅದರ ಕರಾಳ ಮುಖವನ್ನು ತೋರದಂತೆ ಎಚ್ಚರಿಕೆಯ ಹೆಜ್ಜೆಗಳನ್ನು ಇಡಬೇಕಾಗಿರುವುದು ಇಂದಿನ ಅಗತ್ಯತೆಯಾಗಿದೆ.

2026ನೇಯ ವರ್ಷದ ಘೋಷವಾಕ್ಯ: ಜಾಗತಿಕ ಪ್ರಭಾವಕ್ಕಾಗಿ ಸ್ಥಳೀಯವಾಗಿ ಕಾರ್ಯನಿರ್ವಹಿಸುವುದು ಎಂಬ ಘೋಷವಾಕ್ಯದೊಂದಿಗೆ ಆಚರಿಸಲ್ಪಡುವ ಈ ವರ್ಷದ ಜೀವ ವೈವಿಧ್ಯತೆಯ ದಿನವು ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಸಸ್ಯ, ಪಕ್ಷಿ ಮತ್ತು ಪ್ರಾಣಿ ಸಂಕುಲ ಕೂಡ ಮಹತ್ವದ ಪಾತ್ರವನ್ನು ವಹಿಸುತ್ತವೆ ಎಂಬುದನ್ನು ನಾವೆಲ್ಲರೂ ಅರಿತುಕೊಳ್ಳಬೇಕೆಂಬ ಸಂದೇಶವನ್ನು ತಿಳಿಸುತ್ತದೆ. ಕುನುಂಗ್-ಮಾಂಟ್ರಿಯಾಲ್ ಜಾಗತಿಕ ಜೀವವೈವಿಧ್ಯತೆಯ ವಿಶ್ವ ಸಮ್ಮೇಳದಲ್ಲಿ ಘೋಷಿಸಿದಂತೆ 23 ಜಾಗತಿಕ ಗುರಿಗಳನ್ನು ಸಾಧಿಸಲು ವನ್ಯಜೀವಿಗಳು ಆಳಿನಂಚಿನಲ್ಲಿರುವ ಸಸ್ಯ ಪ್ರಭೇದ ಮತ್ತು ಪ್ರಾಣಿ-ಪಕ್ಷಿಗಳ ಸಂರಕ್ಷಣೆಗಾಗಿ ಪ್ರಪಂಚದಾದ್ಯಂತ ಜನರು, ಸಮುದಾಯ, ಸಮಾಜ, ಯುವಕರು ಹಾಗೂ ಎನ್‌ಜಿಓ ಸಂಸ್ಥೆಗಳಲ್ಲಿ ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತಿದೆ.

ಇಂದು ಜಾಗತಿಕ ಜೀವ ವೈವಿಧ್ಯತೆ ದಿನ

ಜೀವವೈವಿಧ್ಯತೆ ನಾಶವಾದರೆ ಜಗತ್ತಿಗೆ ಕಂಟಕ ತಪ್ಪಿದ್ದಲ್ಲ ಎಚ್ಚರಿಕೆಯಿರಲಿ: ಪರಿಸರ ಪ್ರೇಮಿ ಥಾಮಸ್ ಐಸ್ನರ್ ಅವರು, ಈ ಜೀವ ವೈವಿಧ್ಯತೆಯು ನಮಗೆ ನಿಸರ್ಗ ಕೊಟ್ಟ ಶ್ರೇಷ್ಠ ಕಾಣಿಕೆ. ಇದನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮ ಮೇಲಿದೆ. ಒಂದು ವೇಳೆ ನಾಶಮಾಡಿದರೆ ನಮಗಲ್ಲ ಇಡೀ ಜಗತ್ತಿಗೆ ಕಂಟಕ ತಪ್ಪಿದ್ದಲ್ಲ ಮತ್ತು ಅದಕ್ಕೆ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದ್ದರಿಂದ ಭೂಮಿಯ ಮೇಲೆ ವಾಸಿಸುವ ಪ್ರತಿಯೊಂದು ಜೀವಿಯು ತನ್ನ ಹಾಗೂ ಮುಂದಿನ ಪೀಳಿಗೆಯ ಬದುಕಿಗೆ ಉತ್ತಮ ಪರಿಸರವನ್ನು ನೀಡಬೇಕಾಗಿರುವುದು ಇಂದಿನ ಅವಶ್ಯಕತೆ. ಮನುಕುಲದ ಉಳಿವಿಗಾಗಿ ಪ್ರಕೃತಿ, ಪರಿಸರ ಮತ್ತು ಇಡೀ ಜೀವ ವೈವಿಧ್ಯತೆಯ ಸಂರಕ್ಷಣೆ ಅತ್ಯಗತ್ಯ, ಪ್ರಕೃತಿ ಸಂಪತ್ತಿನ ಆಕರಗಳನ್ನು ಮುಂದಿನ ತಲೆಮಾರಿನವರಿಗೂ ಉಳಿಸಿ ಕೊಡಬೇಕಾದ ಜವಾಬ್ದಾರಿ ನಮ್ಮ-ನಿಮ್ಮೆಲ್ಲಡಿ ರ ಮೇಲಿದೆ. ಹೀಗೆಯೇ ಪರಿಸ್ಥಿತಿ ಕೈ ಮೀರಿ ಹೋಗುವ ಮುನ್ನವೇ ಮತ್ತು ಪ್ರಕೃತಿ ತನ್ನ ಇನ್ನೊಂದು ಮುಖವನ್ನು ತೋರ್ಪಡಿಸುವ ಮುನ್ನವೇ ನಾವೆಲ್ಲರೂ ಎಚ್ಚೆತ್ತುಕೊಂಡು ಪೃಥ್ವಿ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಸೂಕ್ತ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯ. ಈ ದಿಶೆಯಲ್ಲಿ ಜಾಗತಿಕ ಮಟ್ಟದಲ್ಲಿ ಅನೇಕ ಸಮ್ಮೇಳನ, ಚರ್ಚೆ, ಸಭೆ ಮತ್ತು ಒಪ್ಪಂದಗಳು ಏರ್ಪಟ್ಟು ಪರಿಸರ ರಕ್ಷಣೆ ಮತ್ತು ಹವಾಮಾನದಲ್ಲಾಗುತ್ತಿರುವ ಬದಲಾವಣೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಹೊಸ ಪರಿಸರಾತ್ಮಕ ನೀತಿಗಳು, ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಮತ್ತು ಶಾಲೆ-ಕಾಲೇಜುಗಳಲ್ಲಿ ಜೀವ ವೈವಿಧ್ಯತೆಯ ಮಹತ್ವ, ಅವುಗಳ ರಕ್ಷಣೆಯಿಂದಾಗುವ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸಿದಾಗ ಮಾತ್ರ ಪೃಥ್ವಿ, ಪರಿಸರ ಮತ್ತು ನೈಸರ್ಗಿಕ ಪ್ರಕೃತಿಯ ಕೊಡುಗೆಗಳು ನಮ್ಮ ಮುಂದಿನ ಜನಾಂಗಕ್ಕೆ ಉಳಿಯಲು ಸಾಧ್ಯ. ಜಾಗತಿಕ ಜೀವ ವೈವಿಧ್ಯತೆ ದಿನದ ಶುಭಾಶಯಗಳು!

ಮಳೆಗಾಲದಿ ಮನಸೆಳೆವ ಲಿಲ್ಲಿ ಹೂಗಳು

• ಡಾ. ಮೈತ್ರಿ ಭಟ್, ವಿಟ್ಲ

ಮಳೆಗಾಲವೆಂದರೆ ಪ್ರಕೃತಿಗೆ ನವಚೈತನ್ಯ ತುಂಬುವ ಪರ್ವಕಾಲ. ಬೇಸಿಗೆಯ ಬಿಸಿಲಿಗೆ ಬಾಡಿ ಬಸವಳಿದ ಪ್ರಕೃತಿಯು ಮಳೆಯ ತುಂತುರು ಸ್ಪರ್ಶದಿಂದ ಹಸಿರಿನ ಹೊದಿಕೆಯನ್ನು ಹೊದ್ದುಕೊಳ್ಳುವ ರಂಗಿನ ಕಾಲ. ಮಳೆ ಹನಿಯ ಸ್ಪರ್ಶಕ್ಕೆ ಬೆಟ್ಟ-ಗುಡ್ಡಗಳು, ಹೊಲ-ಗದ್ದೆಗಳು, ಕಾಡು-ಕಾನನಗಳು ಎಲ್ಲವೂ ಹೊಸ ಚೈತನ್ಯದಿಂದ ಕಂಗೊಳಿಸುತ್ತವೆ. ಈ ಕ್ಷಣ ಮತ್ತಷ್ಟು ಮೆರುಗು ನೀಡುವಂತೆ ಮಳೆಗಾಲದಲ್ಲಿ ಅರಳುವ ಹೂಗಳು ಮಳೆ ಹನಿಗಳ ಸಾನ್ನಿಧ್ಯದಲ್ಲಿ ನಲಿದು ನಗುತ್ತಾ ಪ್ರಕೃತಿಯ ಮುಖದಲ್ಲಿ ಮೂಡುವ ಮಧುರ ನಗುವಿನಂತೆ ಕಾಣಿಸುತ್ತವೆ. ತಮ್ಮ ಮನಮೋಹಕ ಬಣ್ಣ, ಮಧುರ ಪರಿಮಳ ಮತ್ತು ಮನಸೆಳೆವ ಸೊಬಗಿನಿಂದ ಮನಸ್ಸಿಗೆ ಹರ್ಷ ನೀಡುವ ಇವು ಪ್ರಕೃತಿಯ ಅದ್ಭುತ ಕಲಾಕೃತಿಗಳೇ ಸರಿ.

ಅದರಲ್ಲೂ ಮಳೆಯ ಹನಿ ಭುವಿಯ ಸೋಕಿದ ತಕ್ಷಣ ಅರಳಿ ನಲಿವ ಲಿಲ್ಲಿ ಹೂಗಳು ಪ್ರಕೃತಿಯ ಅತ್ಯಂತ ಸುಂದರ ಮತ್ತು ಮನಮೋಹಕ ಹೂಗಳಲ್ಲಿ ಪ್ರಮುಖವಾದವು. ಇದರ ವೈಜ್ಞಾನಿಕ ಹೆಸರು ಲಿಲಿಯಂ. ಇದು ತನ್ನ ಆಕರ್ಷಕ ಬಣ್ಣ, ಸೊಗಸಾದ ಆಕಾರ ಮತ್ತು ಮಧುರ ಪರಿಮಳದಿಂದ ಎಲ್ಲರ ಮನಸೆಳೆಯುತ್ತದೆ. ಮುಖ್ಯವಾಗಿ ಶೀತ ಮತ್ತು ಸಮಶೀತೋಷ್ಣ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವ ಲಿಲ್ಲಿ ಹೂವಿನ ಗಿಡಗಳನ್ನು ಇಂದು ಅಲಂಕಾರಿಕ ಗಿಡಗಳಾಗಿ ಎಲ್ಲೆಡೆ ಬೆಳೆಸಲಾಗುತ್ತಿದೆ.

ಲಿಲ್ಲಿ ಹೂಗಳು ಬಿಳಿ, ಗುಲಾಬಿ, ಹಳದಿ, ಕಿತ್ತಳೆ, ಕೆಂಪು ಮುಂತಾದ ಹಲವು ಬಣ್ಣಗಳಲ್ಲಿ ದೊರೆಯುತ್ತವೆ. ಲಿಲ್ಲಿ ಹೂಗಳಿಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಮಹತ್ವವೂ ಇದೆ. ಕೆಲವು ದೇಶಗಳಲ್ಲಿ ಈ ಹೂವನ್ನು ಶುಭದ ಸಂಕೇತವಾಗಿ ಪರಿಗಣಿಸಲಾಗುತ್ತದೆ. ಅದರಲ್ಲೂ ಬಿಳಿ ಲಿಲ್ಲಿಯನ್ನು ಶುದ್ಧತೆ ಮತ್ತು ಶಾಂತಿಯ ಸಂಕೇತವೆಂದು ಪರಿಗಣಿಸಲಾಗುತ್ತದೆ. ಕೆಲವು ಲಿಲ್ಲಿ ಹೂಗಳಿಗೆ ಮಧುರವಾದ ಸುಗಂಧವಿದ್ದು, ಅವು ಮನೆ ಮತ್ತು ತೋಟಗಳಿಗೆ ವಿಶೇಷ ಸೌಂದರ್ಯವನ್ನು ನೀಡುತ್ತವೆ. ಮದುವೆ, ಪೂಜೆ ಹಾಗೂ ವಿವಿಧ ಸಮಾರಂಭಗಳಲ್ಲಿ ಲಿಲ್ಲಿ ಹೂಗಳನ್ನು ಅಲಂಕಾರ ಕ್ಕಾಗಿ ಬಳಸುತ್ತಾರೆ. ಗಡ್ಡೆಯ ಮೂಲಕ ಬೆಳೆಸಲಾಗುವ ಇವು ಮೆದು ಮಣ್ಣು ಮತ್ತು ಕಡಿಮೆ ಬಿಸಿಲಿನಲ್ಲಿ ಚೆನ್ನಾಗಿ ಬೆಳೆಯುತ್ತವೆ. ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುವ ಲಿಲ್ಲಿ ಹೂಗಳು ಪರಿಸರಕ್ಕೂ ಉಪಯುಕ್ತ. ಜೇನುನೊಣಗಳು ಮತ್ತು ಚಿಟ್ಟೆಗಳನ್ನು ಆಕರ್ಷಿಸುವ ಮೂಲಕ ಪರಾಗಸ್ಪರ್ಶ ಕ್ರಿಯೆಗೆ ಸಹಾಯ ಮಾಡುವ ಈ ಲಿಲ್ಲಿ ಹೂಗಳು ಕೇವಲ ಅಲಂಕಾರಿಕ ಸಸ್ಯಗಳಾಗಿರದೆ ಪ್ರಕೃತಿಯ ಚೈತನ್ಯ ಹೆಚ್ಚಿಸುವ ಅವಿಭಾಜ್ಯ ಅಂಗಗಳಾಗಿವೆ.

• ಶಿವರಾಜ ಸೂ. ಸಣಮನಿ, ಮದಗುಣಕಿ

ಬೇಸಿಗೆಯ ಬಿರುಬಿಸಿಲಿಗೆ ಮರಗಿಡಗಳೆಲ್ಲಾ ಒಣಗುತ್ತಿದ್ದರೂ, ಸಮೃದ್ಧನ ಮನೆಯ ಹಿತ್ತಲಿನಲ್ಲಿರುವ ಪುಟ್ಟ ಕೈತೋಟದಲ್ಲಿ ಮಾತ್ರ ತಂಪಾದ ವಾತಾವರಣ. ಅಲ್ಲಿ ನಾನಾ ಬಗೆಯ ಹೂವುಗಳು ಅರಳಿ ನಿಂತಿದ್ದವು. ಬೆಳಗಾಗುತ್ತಲೇ ಆ ತೋಟಕ್ಕೆ ಬಣ್ಣ-ಬಣ್ಣದ ಚಿಟ್ಟೆಗಳು ಮಕರಂದ ಹೀರಲು ಬರುತ್ತಿದ್ದವು.

ಸಮೃದ್ಧನಿಗೆ ಆ ಚಿಟ್ಟೆಗಳನ್ನು ಕಂಡರೆ ಎಲ್ಲಿಲ್ಲದ ಕುತೂಹಲ. ಅವುಗಳನ್ನು ಹಿಡಿದು ಗಾಜಿನ ಡಬ್ಬಿಯಲ್ಲಿ ಕೂಡಿಡಬೇಕು ಎಂಬುದು ಅವನ ಆಸೆ. ತೋಟಕ್ಕೆ ಬರುವ ಚಿಟ್ಟೆಗಳ ಹಿಂದೆ ಅವನು ಓಡುತ್ತಿದ್ದ. ಆದರೆ ಆ ಚಿಟ್ಟೆಗಳು ಅವನ ಕೈಗೆ ಸಿಗದೆ ಹಾರಿಹೋಗುತ್ತಿದ್ದವು.

ಹೀಗಿರುವಾಗ ಒಂದು ದಿನ, ಹೊಳೆಯುವ ನೀಲಿ ಬಣ್ಣದ ಸುಂದರ ಚಿಟ್ಟೆಯೊಂದು ಗುಲಾಬಿ ಹೂವಿನ ಮೇಲೆ ಕುಳಿತಿತ್ತು. ಸಮೃದ್ಧ ಸದ್ದಿಲ್ಲದೆ, ಬೆಕ್ಕಿನಂತೆ ಹೆಜ್ಜೆ ಹಾಕುತ್ತಾ ಹೋಗಿ ಪಟ್ ಎಂದು ಅದನ್ನು ತನ್ನ ಎರಡು ಕೈಗಳ ಮಧ್ಯೆ ಮುಚ್ಚಿ ಹಿಡಿದೇ ಬಿಟ್ಟ. ಆದರೆ, ಕೈಯೊಳಗಿದ್ದ ಆ ಪುಟ್ಟ ಜೀವ ಭಯದಿಂದ ತನ್ನ ರೆಕ್ಕೆಗಳನ್ನು ಬಿಡಿಸಿಕೊಳ್ಳಲು ಪಟ ಪಟ... ಪಟ ಪಟ ಎಂದು ಬಡಿದುಕೊಳ್ಳಲಾರಂಭಿಸಿತು. ಸ್ವಲ್ಪ ಹೊತ್ತಿನ ನಂತರ ಸಮೃದ್ಧ ಮೆಲ್ಲನೆ ಕೈ ಬಿಚ್ಚಿ ನೋಡಿದ. ಆ ಸುಂದರ ನೀಲಿ ಚಿಟ್ಟೆಯ ರೆಕ್ಕೆಯ ಬಣ್ಣವೆಲ್ಲಾ ಅವನ ಬೆರಳುಗಳಿಗೆ ಅಂಟಿಕೊಂಡಿತ್ತು. ಜಖಂಗೊಂಡಿದ್ದ ಆ ಚಿಟ್ಟೆ ಹಾರಲಾಗದೆ ಒದ್ದಾಡುತ್ತಾ ನೆಲಕ್ಕೆ ಬಿತ್ತು. ಅದನ್ನು ನೋಡಿದ ಸಮೃದ್ಧನಿಗೆ ಅಳು ಬಂತು.

ಇದನ್ನೆಲ್ಲಾ ಗಮನಿಸುತ್ತಿದ್ದ ಅಜ್ಜಿ, ಸಮೃದ್ಧನ ಬಳಿ ಬಂದು ಪ್ರೀತಿಯಿಂದ ತಲೆ ಸವರಿದರು. ಮಗೂ, ನಿಜವಾದ ಪ್ರೀತಿ ಎಂದರೆ ಮುಕ್ತವಾಗಿ ಹಾರಾಡಲು ಬಿಡುವುದು, ನಮ್ಮ ಸ್ವಾರ್ಥಕ್ಕಾಗಿ ಕಟ್ಟಿಹಾಕುವುದಲ್ಲ. ಬಲವಂತವಾಗಿ ಪಡೆದುಕೊಂಡರೆ ಹೀಗೆಯೇ ನೋವಾಗುತ್ತದೆ. ಅವು ತಾವಾಗಿಯೇ ನಿನ್ನ ಬಳಿ ಬರುವಂತೆ ಮಾಡಲು ನಾನೊಂದು ದಾರಿ ಹೇಳಿಕೊಡು ತ್ತೇನೆ ಎಂದು ಹೇಳಿ ಅವನ ಕೈಗೊಂದು ಸಣ್ಣ ಬೀಜವನ್ನು ಕೊಟ್ಟರು. ಸಮೃದ್ಧ ಅಜ್ಜಿಯ ಮಾತಿನಂತೆ ಆ ಬೀಜವನ್ನು ಒಂದು ಕುಂಡದಲ್ಲಿ ನೆಟ್ಟು, ಪ್ರತಿದಿನ ನೀರುಣಿಸಿ, ಗೊಬ್ಬರ ಹಾಕಿ ಪ್ರೀತಿಯಿಂದ ಆರೈಕೆ ಮಾಡತೊಡಗಿದ. ದಿನಗಳು ಕಳೆದವು, ಸಮೃದ್ಧನ ಕಾಯುವಿಕೆಗೆ ಫಲವಾಗಿ ಅದರಲ್ಲಿ ಒಂದು ಗಿಡ ಮೊಳೆತು, ಕೆಂಪಾದ ಆಕರ್ಷಕ ಹೂವೊಂದು ಅರಳಿತು. ಹೂವಿನಿಂದ ಸಿಹಿಯಾದ ಸುವಾಸನೆ ಸುಸುತ್ತಿತ್ತು. ಮರುದಿನ ಬೆಳಗ್ಗೆ ಸಮೃದ್ಧ ಆ ಹೂವಿನ ಗಿಡದ ಬಳಿ ಸುಮ್ಮನೆ ನೋಡುತ್ತಾ ಕುಳಿತಿದ್ದ. ಆಗ ಇದ್ದಕ್ಕಿದ್ದಂತೆ, ಚಿನ್ನದ ಬಣ್ಣದ ದೊಡ್ಡ ಚಿಟ್ಟೆಯೊಂದು ಹಾರಿಬಂದು ಆ ಕೆಂಪು ಹೂವಿನ ಮೇಲೆ ಕುಳಿತು ಮಕರಂದ ಹೀರಿತು. ಸಮೃದ್ಧ ಈ ಬಾರಿ ಅದನ್ನು ಹಿಡಿಯಲು ಹೋಗಲಿಲ್ಲ. ಬದಲಾಗಿ, ಅದರ ಸೌಂದರ್ಯವನ್ನು ಕಣ್ತುಂಬಿ ಕೊಳ್ಳುತ್ತಾ ಶಾಂತವಾಗಿ ಕುಳಿತ. ಸ್ವಲ್ಪ ಹೊತ್ತಿನ ನಂತರ, ಆ ಚಿಟ್ಟೆ ಹೂವಿನಿಂದ ಮೇಲಕ್ಕೆದ್ದು, ಹಾರುತ್ತಾ ಬಂದು ಸಮೃದ್ಧನ ಭುಜದ ಮೇಲೆ ನಿರಾಳವಾಗಿ ಕುಳಿತುಕೊಂಡಿತು. ಸಮೃದ್ಧನಿಗೆ ಆ ಕ್ಷಣ ಜಗತ್ತನ್ನೇ ಗೆದ್ದಷ್ಟು ಸಂತೋಷವಾಯಿತು. ಬಲವಂತದಿಂದ ಸಿಗದ ಖುಷಿ, ತಾಳ್ಮೆ ಮತ್ತು ಪ್ರೀತಿಯಿಂದ ಒಲಿದು ಬಂದಿತ್ತು. ಯಾವುದೇ ಒಳ್ಳೆಯ ಪ್ರತಿಫಲ ಸಿಗಬೇಕಾದರೆ ತಾಳ್ಮೆ ಅತ್ಯಗತ್ಯ. ಪ್ರಕೃತಿಯನ್ನು ಮತ್ತು ಇತರ ಜೀವಿಗಳನ್ನು ಪ್ರೀತಿಸುವುದೆಂದರೆ ಅವುಗಳ ಸ್ವಾತಂತ್ರ್ಯವನ್ನು ಗೌರವಿಸುವುದು.

ತ್ರಿಗುಣಗಳ ಸುಳಿಯಲ್ಲಿ ಸ್ವಭಾವಗಳು

ಅಂಗೈನ ಐದು ಬೆರಳುಗಳು ಹೇಗೆ ಸಮಾನವಾಗಿಲ್ಲವೋ ಅದೇ ರೀತಿಯಲ್ಲಿ ಮನುಜರ ಸ್ವಭಾವಗಳು ಕೂಡ. ನಮ್ಮ ಸ್ವಭಾವಗಳ ಭಿನ್ನತೆಗೆ ತ್ರಿಗುಣಗಳೇ ಕಾರಣ ಎಂಬುದನ್ನು ಶಾಸ್ತ್ರಗಳು ಹೇಳುತ್ತವೆ. ಸತ್ವ, ರಜೋ ಮತ್ತು ತಮೋ ಎಂಬ ಮೂರು ಗುಣಗಳೇ ನಮ್ಮ ಸ್ವಭಾವಗಳನ್ನು ನಿರ್ಧರಿಸುತ್ತವೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಈ ಗುಣಗಳ ಕುರಿತು ಹೇಳಿರುವನು. ಸತ್ವ ಗುಣಗಳು ನಮ್ಮಲ್ಲಿ ಉತ್ತಮ ಚಿಂತನೆ, ಸಹನೆ, ಸಂಯಮ, ನಿರ್ವಿಕಾರ, ವಿವೇಕ ಮುಂತಾದವುಗಳನ್ನು ಮೂಡಿಸುತ್ತವೆ. ಸತ್ವ ಗುಣವಿರುವವನು ಸದಾಚಾರ, ಪ್ರಾಮಾಣಿಕತೆ, ದೈವಭಕ್ತಿಯನ್ನು ಹೊಂದಿರುತ್ತಾನೆ. ಅವನ ನಡವಳಿಕೆಗಳಲ್ಲಿ ಶಿಸ್ತು ಕಾಣಿಸುತ್ತದೆ. ಸತ್ವ ಗುಣಗಳಿಂದ ಆವೃತವಾದ ಮನವು ಸದಾ ಒಳ್ಳೆಯ ಪರಿಣಾಮಗಳನ್ನೇ ನೀಡುತ್ತದೆ.

ರಜೋ ಗುಣದ ಪ್ರಭಾವದಿಂದ ನಮ್ಮಲ್ಲಿ ಆಸೆಗಳ, ಬೇಕುಗಳ, ಸದಾ ಒಂದಿಲ್ಲೊಂದು ವಿಷಯದ ಸಾಧನೆಗಾಗಿ ಕುಣಿಯುವ ಪ್ರವೃತ್ತಿ ಉಂಟಾಗುತ್ತದೆ. ಅನವರತ ಚಡಪಡಿಕೆಯಲ್ಲಿ ಇರುವವರು ರಜೋ ಗುಣಧಾರಿಗಳು. ಸಂಪತ್ತಿನ ಕೂಡಿಕೆ, ಅಧಿಕಾರದ ದಾಹ, ಸುಖ ಭೋಗ ವಸ್ತುಗಳನ್ನು ಹೊಂದುವ ವಿಚಾರಗಳು ಇವರಿಗೆ ಬಹು ಪ್ರಿಯವಾಗಿರುತ್ತವೆ.

ಇನ್ನೂ ತಮೋ ಗುಣವು ಸೋಮಾರಿತನ, ಹಿಂಸೆ, ಅನ್ಯಾಯ, ಅಕ್ರಮ, ದ್ವೇಷ, ಅತಿಯಾದ ಮೋಹ



ಇವುಗಳ ಆಕರವಾಗಿದೆ. ತಮೋ ಗುಣಿಯು ಉತ್ತಮ ಚಿಂತನೆಗಳಿಂದ ಬಲು ದೂರವಾಗಿರುತ್ತಾನೆ. ಗೀತೆಯಲ್ಲಿ ಭಗವಂತನು ಶ್ರದ್ಧೆ, ಸುಖ, ಬುದ್ಧಿ, ತಪಸ್ಸನ್ನು ತ್ರಿಗುಣಗಳಲ್ಲಿ ವರ್ಗೀಕರಿಸಿ ದ್ದಾನೆ. ನಮ್ಮ ಪ್ರತಿ ಚಿಂತನೆಯೂ, ವರ್ತನೆಯೂ, ನಿರ್ಧಾರವೂ ನಮ್ಮಲ್ಲಿರುವ ತ್ರಿಗುಣಗಳನ್ನು ಅನುಸರಿಸಿಯೇ ಆಗುವಂಥವುಗಳು. ಯೋಗ, ಧ್ಯಾನ, ಜಪ, ಪೂಜೆ, ಸತ್ಸಂಗ, ಪುರಾಣಗಳ ಅಧ್ಯಯನಗಳು ಸತ್ವ ಗುಣ ವರ್ಧಿಸುತ್ತ, ರಜೋ ಮತ್ತು ತಮೋ ಗುಣಗಳನ್ನು ಶಿಥಿಲಗೊಳಿಸುತ್ತವೆ.

• ವಿದ್ಯಾಶಂಕರ ಶರ್ಮ, ಸಿದ್ಧಾಪುರ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಟೆ



ಎಡದಿಂದ ಬಲಕ್ಕೆ

1. ದಿನವೂ ರಾಜನ ಜತೆಗಿದ್ದ ಮಂತ್ರಿ (3)
4. ಗಣೇಶನಿಗೆ ಪ್ರಿಯವಾದ ಹುಲ್ಲು (3)
6. ಏಳು ದಿನಗಳ ನಡುವೆ ಸಿಗುವ ಕಪಿ (3)
8. ಪ್ರತಿನಿತ್ಯ ನಡೆಯುವ ಘಟನೆಗಳನ್ನು ಬರೆದಿಡುವ ಪುಸ್ತಕ (4)
10. ಮದುವೆಯ ಗಂಡಿನ ಜತೆಗಿನ ಆದಾಯ (4)
12. ನಡುವೆ ಮತ್ತೊಬ್ಬ ಸೂರ್ಯ ತಿರುಗಿರುವ ನಿರಂತರ (4)
15. ದಯೆಗೆ ಮತ್ತೊಂದು ಹೆಸರು (4)
17. ಮರದ ನಡುವೆ ಇರುವ ಸಿಹಿ (3)
19. ಕೋಟೆಯ ಸುತ್ತಲಿರುವ ಅಗಳು (3)
20. ಕಣ್ಣಿಗೆ ಹಚ್ಚಿಕೊಳ್ಳುವ ಅಂಜನ (3)

ಮೇಲಿಂದ ಕೆಳಕ್ಕೆ

2. ಗಾಳಿ, ಬೆಳಕು ಧಾರಾಳವಾಗಿ ಬರಲೆಂದು ಮಾಡಿದ ಕಿಂಡಿ (4)
3. ಮೂರಕ್ಷರದ ಹೋಮ (3)
5. ತಲೆಕೆಳಗಾದ ಹೊಡೆದಾಟ (4)
6. ಎರಡಕ್ಷರದ ನೀರು (2)
7. ಮದುವೆಯ ಗಂಡು ತಲೆಕೆಳಗಾದರೆ ಸಿಕ್ಕುವ ಸದ್ದು (2)
9. ಚರ್ಮದ ಕೆಲಸ ಮಾಡುವವನು (3)
11. ಕೊನೆಗೆ ನಿಜವಾದ ಇರುಳು (3)
13. ಪಂಡಿತನ ಕೊನೆಗೆ ಮತ್ತೊಂದು ಬೆಲೆಯು ತಿರುಗಿದೆ (4)
14. ಕತ್ತಲೆ ಅಥವಾ ಅಜ್ಞಾನ (2)
15. ಎರಡಕ್ಷರದ ಕೈ (2)
16. ಕರಬೂಜದ ಜಾತಿಗೆ ಸೇರಿದ ಹಣ್ಣು ಬೇಸಗೆಯಲ್ಲಿ ಹೆಚ್ಚು ಬಳಸಲಾಗುತ್ತದೆ (4)
18. ಜನರ ಗುಂಪಿನ ಮುಖಂಡ (3)

ಸರಿಯುತ್ತರಗಳು

ವಯಸ್ಸು ದೇಹಕ್ಕಷ್ಟೇ, ಮನಸ್ಸಿಗಲ್ಲ!

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

1951ರ ಜುಲೈ ತಿಂಗಳ ಮುಂಜಾನೆ, ಸ್ವೀಡನ್‌ನ ಉತ್ತರ ತುದಿಯ ಹಪರಾಂಡಾದಲ್ಲಿ ಚಳಿಯ ಗಾಳಿ ಬೀಸುತ್ತಿತ್ತು. ಅಲ್ಲಿ ದೇಶದ ಅತ್ಯಂತ ಕಠಿಣ, 1,764 ಕಿಲೋಮೀಟರ್‌ಉದ್ದದ 'ಸ್ವರಿಗಲೋಪೆಟ್' ಸೈಕಲ್ ಪಂದ್ಯಾವಳಿ ಆರಂಭವಾಗಲು ಕ್ಷಣಗಣನೆ ನಡೆದಿತ್ತು. ಯುವ, ಬಲಿಷ್ಠ ಕ್ರೀಡಾಪಟುಗಳು ಪಂದ್ಯದ ಉತ್ಸಾಹದಲ್ಲಿ ನಿಂತಿದ್ದರು. ಆದರೆ, ಆ ಗುಂಪಿನಿಂದ ಸ್ವಲ್ಪ ದೂರದಲ್ಲಿ, ಬಿಳಿ ಗಡ್ಡದ, 66 ವರ್ಷದ ವೃದ್ಧರೊಬ್ಬರು ತಮ್ಮ ಹಳೆಯ ಸೈಕಲ್ ಹಿಡಿದು ಶಾಂತವಾಗಿ ನಿಂತಿದ್ದರು. ಅವರೇ ಗುಸ್ತಾಫ್ ಹಾಕನ್ಸನ್.

ವಯಸ್ಸು 40 ದಾಟಿದೆ ಎಂಬ ಒಂದೇ ಕಾರಣಕ್ಕೆ ಸಂಘಟಕರು ಅವರಿಗೆ ಸ್ಪರ್ಧಿಸಲು ಅವಕಾಶ ನಿರಾಕರಿಸಿದ್ದರು. ನಿಮಗೆ ವಯಸ್ಸಾಗಿದೆ, ಈ ದೂರವನ್ನು ಕ್ರಮಿಸುವುದು ನಿಮ್ಮ ಕೈಲಾಗದ ಕೆಲಸ ಎಂದು ಜಗತ್ತು ಅವರ ಮುಖಕ್ಕೆ ಹೊಡೆದಂತೆ ಹೇಳಿತ್ತು. ಆದರೆ ಗುಸ್ತಾಫ್ ಅವರ ಮನಸ್ಸಿನ ಗಟ್ಟಿ ಸಂಕಲ್ಪವನ್ನು ತಡೆಯಲು ಆ ನಿಯಮಗಳಿಗೆ ಸಾಧ್ಯವಿರಲಿಲ್ಲ. ಅವರು ಮನೆಗೆ ಮರಳಲಿಲ್ಲ. ಬದಲಿಗೆ, ಅವರ ಪತ್ನಿ ಪ್ರೀತಿಯಿಂದ ಕೈಯಾರೆ ಹೊಲಿದುಕೊಟ್ಟಿದ್ದ ಬಿಳಿ ಬಟ್ಟೆಯ ಮೇಲೆ ಕೆಂಪು ಬಣ್ಣದಲ್ಲಿ ಸೊನ್ನೆ ಎಂಬ ಸಂಖ್ಯೆಯನ್ನು ಬರೆದು ತಮ್ಮ ಅಂಗಿಗೆ ಸಿಕ್ಕಿಸಿಕೊಂಡರು. ಜಗತ್ತು ಅವರನ್ನು ಶೂನ್ಯ ಎಂದು ಪರಿಗಣಿಸಿದ್ದರೆ, ಅವರು ಅದನ್ನೇ ತಮ್ಮ ಹೆಮ್ಮೆಯ ಗುರುತಾಗಿ ಸ್ವೀಕರಿಸಿದ್ದರು.

ಕೊನೆಯ ಅಧಿಕೃತ ಸೈಕಲ್ ಸವಾರ ಹೊರಟ ಒಂದು ನಿಮಿಷದ ನಂತರ, ಗುಸ್ತಾಫ್ ತಮ್ಮ ಹಳೆಯ, ಮಡ್‌ಗಾರ್ಡ್‌ಗಳಿದ್ದ ಭಾರೀ ಸೈಕಲ್ ತುಳಿಯಲು ಆರಂಭಿಸಿದರು. ಅವರ ಬಳಿ ಯಾವುದೇ ಆಧುನಿಕ ಕ್ರೀಡಾ ಸೈಕಲ್ ಇರಲಿಲ್ಲ, ಕೇವಲ ಒಂದು ಸಣ್ಣ ದೀಪವಿತ್ತು. ಸ್ಪರ್ಧೆ ಮುಂದುವರಿದಂತೆ, ಯುವ ಸವಾರರು ರಾತ್ರಿಯಾಗುತ್ತಿದ್ದಂತೆ ಆಯಾಸಗೊಂಡು, ವಿಶ್ರಾಂತಿ ಗೃಹಗಳಲ್ಲಿ ಮಲಗುತ್ತಿದ್ದರು. ಆದರೆ ಗುಸ್ತಾಫ್ ನಿಲ್ಲಲಿಲ್ಲ. ಇಡೀ ದೇಶವೇ ನಿದ್ರಿಸುತ್ತಿರುವಾಗ, ಕತ್ತಲ ಹಾದಿಯಲ್ಲಿ ಆ ಸಣ್ಣ ದೀಪದ ಬೆಳಕಿನಲ್ಲಿ ಅವರು ಸೈಕಲ್ ತುಳಿಯುತ್ತಲೇ ಇದ್ದರು. ದಣಿವಾರಿಸಿಕೊಳ್ಳಲು ರಸ್ತೆಬದಿಯಲ್ಲಿ ಕೆಲವೇ ನಿಮಿಷಗಳು ಕಣ್ಣು ಮುಚ್ಚುತ್ತಿದ್ದರು, ನಂತರ ಮತ್ತೆ ಪಯಣ ಮುಂದುವರಿಸುತ್ತಿದ್ದರು. ವಯಸ್ಸಿನ ಮಿತಿಯನ್ನು ಹೇರಿದ ಸಮಾಜಕ್ಕೆ, ತನು ಮುಪ್ಪಾದರೂ ಮನಸ್ಸು ಮುಪ್ಪಾಗುವುದಿಲ್ಲ ಎಂಬುದನ್ನು ಅವರು ಸಾಬೀತುಪಡಿಸಬೇಕಿತ್ತು. ದಿನಗಳು ಕಳೆದವು. ಸ್ವೀಡನ್‌ನ ದಕ್ಷಿಣ ತುದಿಯ ಇಸ್ತಾಡ್ (Ystad) ನಗರದಲ್ಲಿ ಜನರು ಅಧಿಕೃತ ವಿಜೇತರಿಗಾಗಿ ಕಾಯುತ್ತಿದ್ದರು. ಆದರೆ, ಅಲ್ಲಿಗೆ ಮೊದಲು ತಲುಪಿದ್ದು ಯಾರು ಗೊತ್ತೇ? ಇಡೀ ದೇಶವೇ ಆಶ್ಚರ್ಯಚಕಿತರಾಗುವಂತೆ,

ಯಾವುದೇ ಅಧಿಕೃತ ಸೌಲಭ್ಯವಿಲ್ಲದ, ನಿದ್ದೆಯಿಲ್ಲದೆ ಸೈಕಲ್ ತುಳಿದಿದ್ದ ಆ ಬಿಳಿ ಗಡ್ಡದ ತಾತ!

6 ದಿನಗಳು, 14 ಗಂಟೆಗಳು ಮತ್ತು 20 ನಿಮಿಷಗಳ ಸತತ ಸೈಕಲಿಂಗ್ ನಂತರ, ಗುಸ್ತಾಫ್ ಹಾಕನ್ಸನ್ ಯುವ ಸ್ಪರ್ಧಿಗಳಿಗಿಂತ ಇಡೀ ಒಂದು ದಿನ (24 ಗಂಟೆಗಳು) ಮುಂಚಿತವಾಗಿಯೇ ಗುರಿ ತಲುಪಿದ್ದರು. ಅಂದು ಇಸ್ತಾಡ್ ನಗರದಲ್ಲಿ ನೆರೆದಿದ್ದ ಸಹಸ್ರಾರು ಜನರ ಕಣ್ಣುಗಳಲ್ಲಿ ಆನಂದ ಬಾಷ್ಪವಿತ್ತು. ಇಡೀ ದೇಶವೇ ಅವರನ್ನು ಸ್ಟಾಲ್ಫಾರ್ಫರ್ ಉಕ್ಕಿನ ತಾತ ಎಂದು ಪ್ರೀತಿಯಿಂದ ಕರೆದು ಸಂಭ್ರಮಿಸಿತು. ಪತ್ರಿಕೆಗಳು ಅವರ ಸಾಹಸವನ್ನು ಕೊಂಡಾಡಿದವು, ಸ್ವೀಡನ್ ದೇಶದ ರಾಜ ಆರನೇ ಗುಸ್ತಾಫ್ ಅಡಾಲ್ಫ್ ಅವರೇ ಸ್ವತಃ ಈ ಮಹಾನ್ ಚೇತನವನ್ನು ಆಹ್ವಾನಿಸಿ ಗೌರವಿಸಿದರು. ಗುಸ್ತಾಫ್ ಕೇವಲ ಒಂದು ಸೈಕಲ್ ಪಂದ್ಯವನ್ನು ಗೆಲ್ಲಲಿಲ್ಲ, ಬದಲಿಗೆ ವಯಸ್ಸಿನ ಹೆಸರಿನಲ್ಲಿ ಮನುಷ್ಯನ ಕನಸುಗಳಿಗೆ ಬೇಲಿ ಹಾಕುವ ಸಮಾಜದ ಕಲ್ಪನೆಯನ್ನು ಗೆದ್ದರು. ಅವರು ತಮ್ಮ 100ರ ಹರೆಯದಲ್ಲೂ ಸೈಕಲ್ ತುಳಿಯುವುದನ್ನು ನಿಲ್ಲಿಸಲಿಲ್ಲ. ತಮ್ಮ 102ನೇ ಹುಟ್ಟುಹಬ್ಬದ ಕೆಲವೇ ದಿನಗಳ ಮುನ್ನ ಅವರು ಜಗತ್ತನ್ನು ತೊರೆದರು.

ನಮ್ಮ ಕನಸುಗಳನ್ನು ಬೆನ್ನಟ್ಟಲು ವಯಸ್ಸು ಕೇವಲ ಒಂದು ಸಂಖ್ಯೆಯಷ್ಟೇ. ಮನಸ್ಸಿನಲ್ಲಿ ಛಲವಿದ್ದರೆ, ಜಗತ್ತು ಮುಗಿಯಿತು ಅಂದುಕೊಂಡ ಕಡೆಯಿಂದಲೇ ನಾವು ಹೊಸ ಇತಿಹಾಸವನ್ನು ಸೃಷ್ಟಿಸಬಹುದು. ದಿನನಿತ್ಯದ ವ್ಯಾಯಾಮ ಮಾಡಲು, ಹೊಸ ವಿಚಾರ, ಒಂದನ್ನು ಕಲೆಯೊಂದನ್ನು ಕಲಿಯಲು ಸದಾ ನಾವು ನೂರು ನೆಪಗಳನ್ನು ಹುಡುಕುತ್ತೇವೆ. ಆದರೆ ನಮ್ಮಲ್ಲೇ ಒಬ್ಬರು ವಯಸ್ಸಿನ ಹಂಗಿಲ್ಲದೆ ಸಾಧಿಸಿ ತೋರಿಸಿದಾಗ ಬೆರಗಾಗುತ್ತೇವೆ. ವಯಸ್ಸು ದೇಹಕ್ಕೆ ಮಾತ್ರ ಮನಸ್ಸಿಗೆ ಅಲ್ಲ. ಅದನ್ನು ಅರಿತಾಗ ನಮಗೆ ಯಾವ ಮಿತಿಯೂ ಇರುವುದಿಲ್ಲ.

ನೀವೂ ಬರೆಯಬಹುದು

ನಮ್ಮ ವಿಳಾಸ ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

ಐಪಿಎಲ್-2026 ಅಂಕಪಟ್ಟಿ

	ತಂಡ	ಪಂದ್ಯ	ಗೆಲುವು	ಸೋಲು	ಅಂಕ
Q	ಬೆಂಗಳೂರು	13	9	4	18
Q	ಗುಜರಾತ್	14	9	5	18
Q	ಹೈದರಾಬಾದ್	13	8	5	16
	ರಾಜಸ್ಥಾನ್	13	7	6	14
	ಪಂಜಾಬ್	13	6	6	13
	ಕೋಲ್ಕತಾ	13	6	6	13
	ಚೆನ್ನೈ	14	6	8	12
	ಡೆಲ್ಲಿ	13	6	7	12
	ಮುಂಬೈ	12	4	9	8
	ಲಖನೌ	13	4	9	8

ಸಮಾಚಾರ ಸಣ್ಣದಲ್ಲ

ನಿಯಮ ಉಲ್ಲಂಘನೆ: ಪಾಂಡ್ಯಗೆ ಶೇ.10 ದಂಡ

ಕೋಲ್ಕತಾ: ಬುಧವಾರ ಇಲ್ಲಿನ ಈಡನ್ ಗಾರ್ಡನ್ಸ್‌ನಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ವಿರುದ್ಧದ ಪಂದ್ಯದಲ್ಲಿ ಐಪಿಎಲ್ ನೀತಿ ಸಂಹಿತೆಯ ಲೆವೆಲ್ 1 ಅನ್ನು

ಉಲ್ಲಂಘಿಸಿದ್ದಕ್ಕಾಗಿ ಮುಂಬೈ ಇಂಡಿಯನ್ಸ್ ನಾಯಕ ಹಾರ್ದಿಕ್ ಪಾಂಡ್ಯ ಅವರಿಗೆ ಪಂದ್ಯ ಶುಲ್ಕದ ಶೇ.10ರಷ್ಟು ದಂಡ ಮತ್ತು ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ. ಐಪಿಎಲ್ ನೀತಿ ಸಂಹಿತೆಯ ಆರ್ಟಿಕಲ್ 2.2 ಅನ್ನು ಪಾಂಡ್ಯ ಉಲ್ಲಂಘಿಸಿರುವುದು ಕಂಡುಬಂದಿದೆ, ಅದು ಪಂದ್ಯದ ಸಮಯದಲ್ಲಿ ಕ್ರಿಕೆಟ್ ಉಪಕರಣಗಳು ಅಥವಾ ಬಟ್ಟೆ, ನೆಲದ ಉಪಕರಣಗಳ ದುರುಪಯೋಗಕ್ಕೆ ಸಂಬಂಧಿಸಿದೆ ಎಂದು ಬಿಸಿಸಿಐ ಹೇಳಿದೆ. ಪಂದ್ಯದ ಎರಡನೇ ಇನ್ನಿಂಗ್ಸ್‌ನ 10ನೇ ಓವರ್‌ನ ನಾಲ್ಕನೇ ಎಸೆತದಲ್ಲಿ ಆ ಘಟನೆ ಸಂಭವಿಸಿದ್ದು, ಹಾರ್ದಿಕ್ ಪಾಂಡ್ಯ ತನ್ನ ರನ್ ಅಪ್‌ಗೆ ಹಿಂತಿರುಗುವಾಗ, ವಿಕೆಟ್‌ನ ಬೇಲ್ಸ್‌ಗಳನ್ನು ಬಲವಾಗಿ ಕೆಡವಿದ್ದರು.

ಜು.4ರಿಂದ ಲಂಕಾದಲ್ಲಿ ಅಂಡರ್-19 ಸರಣಿ

ದೆಹಲಿ: ಭಾರತ ಅಂಡರ್-19 ತಂಡವು 3 ಏಕದಿನ ಪಂದ್ಯಗಳು ಮತ್ತು 4 ದಿನಗಳ 2 ಟೆಸ್ಟ್ ಸರಣಿಗಳಿಗಾಗಿ ಶ್ರೀಲಂಕಾ ಪ್ರವಾಸ ಕೈಗೊಳ್ಳಲಿದ್ದು, ಸರಣಿ ಜುಲೈ 4ರಿಂದ 23ರ ವರೆಗೆ ನಡೆಯಲಿದೆ. ಜೂನ್ 30ರಂದು ಕೊಲಂಬೊಗೆ ತಂಡವು ಆಗಮಿಸಲಿದ್ದು, ನಂತರ ಹಂಬಂಟೋಟಕ್ಕೆ ಪ್ರಯಾಣ ಬೆಳೆಸಲಿದೆ. ಅಲ್ಲಿ ಜುಲೈ 4, 6 ಮತ್ತು 9ರಂದು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಎರಡು ರೆಡ್‌ಬಾಲ್ ಪಂದ್ಯಗಳಲ್ಲಿ ಮೊದಲನೆಯದು ಜುಲೈ 13ರಿಂದ 16ರ ವರೆಗೆ ಗ್ಯಾಲೆಯಲ್ಲಿ ನಡೆಯಲಿದ್ದು, ಎರಡನೇ ಪಂದ್ಯ ಜುಲೈ 20 ರಿಂದ 23ರ ವರೆಗೆ ಕೊಲಂಬೊದಲ್ಲಿ ನಡೆಯಲಿದೆ.

ಹೈದರಾಬಾದ್‌ಗೆ ಅಗ್ರಸ್ಥಾನದ ಮೇಲೆ ಕಣ್ಣು | ಚಿಕ್ಕ ಅಂತರದಲ್ಲಿ ಸೋತರೂ ಆರ್‌ಸಿಬಿಯೇ ಟೇಬಲ್ ಟಾಪರ್

ಹೈದರಾಬಾದ್‌ನಲ್ಲಿ ಇಂದು ಅಗ್ರಸ್ಥಾನಕ್ಕೆ ಹಣಾಹಣಿ

ಹೈದರಾಬಾದ್: ಇಂದು ಇಲ್ಲಿನ ರಾಜೀವ್ ಗಾಂಧಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ 67ನೇ ಪಂದ್ಯದಲ್ಲಿ ಆತಿಥೇಯ ಸನ್ ರೈಸರ್ಸ್ ಹೈದರಾಬಾದ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಸೆಣಸಲಿದೆ. ಈಗಾಗಲೇ ಎರಡೂ ತಂಡಗಳೂ ಪ್ಲೇ ಆಫ್ ಪ್ರವೇಶಿಸಿರುವ ಕಾರಣ ಈ ಪಂದ್ಯದಲ್ಲಿ ಬಹು ದೊಡ್ಡ ಅಂತರದಲ್ಲಿ ಗೆದ್ದರೆ ಮಾತ್ರ ಎಸ್‌ಆರ್‌ಎಚ್‌ಗೆ ಅಗ್ರಸ್ಥಾನ ದೊರೆಯಬಹುದೇ ವಿನ: ಆರ್‌ಸಿಬಿ ಚಿಕ್ಕ ಅಂತರದಿಂದ ಸೋತರೂ ಅಗ್ರಸ್ಥಾನವನ್ನು ಉಳಿಸಲು ಸಾಧ್ಯ.

ರಜತ್ ಪಾಟೀದಾರ್ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ವರೆಗೆ 13 ಪಂದ್ಯಗಳನ್ನು ಆಡಿದೆ. ಅವುಗಳ ಪೈಕಿ 9ರಲ್ಲಿ ಗೆದ್ದು, 4ರಲ್ಲಿ ಸೋಲುಂಡು 18 ಅಂಕ ಪಡೆದಿದೆ. ಹೈದರಾಬಾದ್ ವಿರುದ್ಧದ ಮೊದಲ ಮುಖಾಮುಖಿಯಲ್ಲಿ ಆರ್‌ಸಿಬಿ ಮೇಲುಗೈ ಸಾಧಿಸಿ ಈ ಆವೃತ್ತಿಯಲ್ಲಿ ತನ್ನ ಶುಭಾರಂಭ ಮಾಡಿತ್ತು. ತಂಡದ ಹಿರಿಯ ಆಟಗಾರ ವಿರಾಟ್ ಕೊಹ್ಲಿ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಉಳಿದ ಬ್ಯಾಟ್ಸ್ ಮ್ಯಾನ್ ಮತ್ತು ಬೌಲರ್‌ಗಳೂ ಬಹುತೇಕ ಪಂದ್ಯಗಳಲ್ಲೂ ಸಂಘಟಿತ ಪ್ರದರ್ಶನ ತೋರಿದ್ದಾರೆ.

ಹೈದರಾಬಾದ್ ತಂಡವು ಆಡಿರುವ 13 ಪಂದ್ಯಗಳಲ್ಲಿ ಎಂಟು ಪಂದ್ಯಗಳನ್ನು ಗೆದ್ದು, 5 ಪಂದ್ಯಗಳಲ್ಲಿ ಸೋತು 16 ಅಂಕಗಳನ್ನು ಸಂಪಾದಿಸಿದೆ. ಹೆನ್ರಿಕ್ ಕ್ಲಾಸೆನ್ ಮತ್ತು ಅಭಿಷೇಕ್ ಶರ್ಮಾ ಅವರ ಸ್ಫೋಟಕ ಬ್ಯಾಟಿಂಗ್ ಪ್ಯಾಟ್ ಕಮ್ಮಿನ್ಸ್ ನೇತೃತ್ವದ ತಂಡಕ್ಕೆ ಬಹುತೇಕ ಪಂದ್ಯಗಳಲ್ಲಿ ನೆರವಾಗಿದೆ.

ಮೊದಲು ಹೈದರಾಬಾದ್ ಬ್ಯಾಟಿಂಗ್ ಮಾಡಿ, ಕನಿಷ್ಠ 85+ ರನ್‌ಗಳ ಅಂತರದಿಂದ ಗೆದ್ದರೆ ಮಾತ್ರ ಅದು ಅಂಕಪಟ್ಟಿಯಲ್ಲಿ ಆರ್‌ಸಿಬಿ ತಂಡವನ್ನು ಹಿಂದಿಕ್ಕಬಹುದು. ಒಂದುವೇಳೆ ಸನ್‌ರೈಸರ್ಸ್ ಚೇಸಿಂಗ್ ಮಾಡಿದರೆ ಕನಿಷ್ಠ ಹತ್ತು ಓವರ್‌ಗಳನ್ನು ಬಾಕಿ ಇರಿಸಿ ಗೆದ್ದರೆ ಮಾತ್ರ ಅದು ಟೇಬಲ್ ಟಾಪರ್ ಆಗಲು ಸಾಧ್ಯ.

ಮುಖಾಮುಖಿ: ಉಭಯ ತಂಡಗಳು ಈವರೆಗೆ 27 ಬಾರಿ ಮುಖಾಮುಖಿಯಾಗಿವೆ. ಈ ಪೈಕಿ ಹೈದರಾಬಾದ್ ತಂಡ 14 ಪಂದ್ಯಗಳನ್ನು ಜಯಿಸಿದರೆ, ಆರ್‌ಸಿಬಿ 12 ಪಂದ್ಯಗಳಲ್ಲಿ ಜಯಿಸಿದೆ. 1 ಪಂದ್ಯ ಫಲಿತಾಂಶ ಕಂಡಿಲ್ಲ.

ಪಿಚ್ ರಿಪೋರ್ಟ್: ಬ್ಯಾಟಿಂಗ್‌ಸ್ನೇಹಿಯಾದ ರಾಜೀವ್ ಗಾಂಧಿ ಸ್ಟೇಡಿಯಂ ಪಿಚ್‌ನಲ್ಲಿ ನಡೆದ ಬಹುತೇಕ ಪಂದ್ಯಗಳಲ್ಲಿ 200ಕ್ಕಿಂತ ಹೆಚ್ಚಿನ ಮೊತ್ತ ದಾಖಲಾಗಿವೆ. ಈ ಐಪಿಎಲ್‌ನಲ್ಲಿ ಆಡಿದ ಆರು ಪಂದ್ಯಗಳಲ್ಲಿ 2ನೇ ಸಲ ಬ್ಯಾಟಿಂಗ್ ಮಾಡಿದ ನಾಲ್ಕು ತಂಡಗಳು ಪಂದ್ಯ ಗೆದ್ದಿವೆ.

ಇಂದಿನ ಪಂದ್ಯ

ಆರ್‌ಸಿಬಿ-ಹೈದರಾಬಾದ್

ಸ್ಥಳ: ರಾಜೀವ್ ಗಾಂಧಿ ಸ್ಟೇಡಿಯಂ, ಹೈದರಾಬಾದ್

ಸಮಯ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಲೈವ್ ಸ್ಟ್ರೀಮಿಂಗ್: ಜಿಯೋ ಹಾಟ್‌ಸ್ಟಾರ್

ಆರ್‌ಸಿಬಿ ಸಂಭಾವ್ಯ ತಂಡ: ರಜತ್ ಪಾಟಿದಾರ್ (ನಾಯಕ), ವೆಂಕಟೇಶ್ ಅಯ್ಯರ್, ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಜಿತೇಶ್ ಶರ್ಮಾ (ಕೀಪರ್), ಟಿಮ್ ಡೇವಿಡ್, ರೊಮಾರಿಯೋ ಶೆಫರ್ಡ್, ಕೃನಾಲ್ ಪಾಂಡ್ಯ, ಭುವನೇಶ್ವರ್ ಕುಮಾರ್, ಜೋಶ್ ಹೇಜಲ್‌ವುಡ್, ಸುಯಾಶ್ ಶರ್ಮಾ.

ಇಂಪ್ಯಾಕ್ಟ್ ಪ್ಲೇಯರ್: ಜಾಕೋಬ್ ಡಫಿ.

ಹೈದರಾಬಾದ್ ಸಂಭಾವ್ಯ ತಂಡ: ಪ್ಯಾಟ್ ಕಮಿನ್ಸ್ (ನಾಯಕ), ಅಭಿಷೇಕ್ ಶರ್ಮಾ, ಇಶಾನ್ ಕಿಶನ್ (ಕೀಪರ್), ಹೆನ್ರಿಚ್ ಕ್ಲಾಸೆನ್, ಸಲಿಲ್ ಅರೋರಾ, ಸ್ಮರಣ್ ರವಿಚಂದ್ರನ್, ನಿತೀಶ್ ಕುಮಾರ್ ರೆಡ್ಡಿ, ಶಿವಂಗ್ ಕುಮಾರ್, ಈಶಾನ್ ಮಾಲಿಂಗ, ಸಾಕಿಬ್ ಹುಸೇನ್, ಪ್ರಫುಲ್ ಹಿಂಗೆ.

ಇಂಪ್ಯಾಕ್ಟ್ ಪ್ಲೇಯರ್: ಟ್ರಾವಿಸ್ ಹೆಡ್.

ಸ್ಕೋರ್ ಬೋರ್ಡ್

ಗುಜರಾತ್ 229/4 20 ಓವರ್

	ರನ್	ಎಸೆತ	4s	6s
ಸಾಯಿ ಸುದರ್ಶನ್ ಸಿ ಮ್ಯಾಟ್ ಶಾರ್ಟ್, ಬಿ ಕಾಂಬೋಜ್	84	53	7	4
ಶುಭ್‌ಮನ್ ಗಿಲ್ ಸಿ ಡ್ಯೂಬ್, ಬಿ ಜಾನ್ಸನ್	64	37	7	3
ಜೋಸ್ ಬಟ್ಲರ್ ನಾಟ್ ಔಟ್	57	26	5	4
ತೆವಾಟಿಯಾ ರನ್ ಔಟ್	0	1	0	0
ಸುಂದರ್ ಸಿ ಪಟೇಲ್, ಬಿ ಚೌಧರಿ	7	3	0	1

ಚೆನ್ನೈ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಮುಖೇಶ್ ಚೌಧರಿ	4	0	36	1
ಸ್ಪೆನ್ಸರ್ ಜಾನ್ಸನ್	4	0	47	1
ಗುರ್ಜಪ್ನೀತ್	4	0	31	0
ಕಾಂಬೋಜ್	4	0	56	1
ನೂರ್ ಅಹ್ಮದ್	3	0	41	0
ಶಿವಂ ದುಬೆ	1	0	15	0

ವಿಕೆಟ್ ಪತನ: 1/125, 2/207, 3/207, 4/229

ಚೆನ್ನೈ 140/10 13.4 ಓವರ್

	ರನ್	ಎಸೆತ	4s	6s
ಸಂಜು ಸ್ಯಾಮ್ಸನ್ ಸಿ ಬಟ್ಲರ್, ಬಿ ಸಿರಾಜ್	0	1	0	0
ಮ್ಯಾಥ್ಯೂ ಶಾರ್ಟ್ ಸಿ ಪ್ರಸಿದ್ಧ್, ಬಿ ರಬಾಡ	24	14	3	1
ಗಾಯಕ್ವಾಡ್ ಬಿ ಸಿರಾಜ್	16	7	1	2
ಉರ್ವಿಲ್ ಪಟೇಲ್ ಸಿ ಪ್ರಸಿದ್ಧ್, ಬಿ ಸಿರಾಜ್	0	2	0	0
ಕಾರ್ತಿಕ್ ಶರ್ಮಾ ರನೌಟ್	19	15	3	0
ಡೆವಾಲ್ಡ್ ಬ್ರೆವಿಸ್ ಸಿ ಹೋಲ್ಡರ್, ಬಿ ರಶೀದ್	8	10	0	0
ಶಿವಂ ದುಬೆ ಸಿ ಗಿಲ್, ಬಿ ರಶೀದ್	47	17	4	4
ಕಾಂಬೋಜ್ ಸಿ ಹೋಲ್ಡರ್, ಬಿ ರಶೀದ್	19	8	1	2
ನೂರ್ ಅಹ್ಮದ್ ಸಿ ಆ್ಯಂಡ್ ಬಿ ರಬಾಡ	1	5	0	0
ಮುಖೇಶ್ ಚೌಧರಿ ರನ್ ಔಟ್	2	2	0	0
ಸ್ಪೆನ್ಸರ್ ಜಾನ್ಸನ್ ಸಿ ಬಟ್ಲರ್ ಬಿ ರಬಾಡ	0	1	0	0

ಗುಜರಾತ್ ಬೌಲಿಂಗ್

	ಓವರ್	ಮೇಡನ್	ರನ್	ವಿಕೆಟ್
ಮೊಹಮ್ಮದ್ ಸಿರಾಜ್	3	0	26	3
ಕಗಿಸೊ ರಬಾಡ	3.4	0	32	3
ಅರ್ಷದ್ ಖಾನ್	2	0	24	0
ಜೇಸನ್ ಹೋಲ್ಡರ್	2	0	27	0
ರಶೀದ್ ಖಾನ್	2	0	18	3
ಪ್ರಸಿದ್ಧ್ ಕೃಷ್ಣ	1	0	13	0

ವಿಕೆಟ್ ಪತನ : 1/0, 2/29, 3/29, 4/51, 5/63, 6/116, 7/136, 8/138, 9/140. 10/140

ಪ್ಲೇಯರ್ ಆಫ್ ದಿ ಮ್ಯಾಚ್ ▶▶ ಮೊಹಮ್ಮದ್ ಸಿರಾಜ್ (ಗುಜರಾತ್)

ವಿರಾಮ ಪ್ರತಿ ಭಾನುವಾರ

ಟೈಟಾನ್ಸ್ ಸಂಘಟಿತ ಪ್ರದರ್ಶನ | ಪ್ಲೇಆಫ್‌ನಿಂದ ಹೊರಬಿದ್ದ ಗಾಯಕ್ವಾಡ್ ಪಡೆ

ಚೆನ್ನೈ ವಿರುದ್ಧ ಗೆದ್ದು ಬೀಗಿದ ಗುಜರಾತ್

ಅಹಮದಾಬಾದ್: ಬ್ಯಾಟಿಂಗ್ ಹಾಗೂ ಬೌಲಿಂಗ್ ಎರಡೂ ವಿಭಾಗಗಳಲ್ಲಿ ಸಂಘಟಿತ ಪ್ರದರ್ಶನವನ್ನು ತೋರಿದ ಗುಜರಾತ್ ಟೈಟಾನ್ಸ್ ತಂಡವು ಗುರುವಾರ ಇಲ್ಲಿ ನಡೆದ ಐಪಿಎಲ್ ಟೂರ್ನಿಯ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು 89 ರನ್‌ಗಳ ಭರ್ಜರಿ ಜಯ ದಾಖಲಿಸಿತು.

ಇದೀಗ 18 ಅಂಕಗಳನ್ನು ಕಲೆ ಹಾಕಿದ ಶುಭಮನ್ ಗಿಲ್ ನಾಯಕತ್ವದ ಜಿಟಿ, ಪಾಯಿಂಟ್ಸ್ ಟೇಬಲ್‌ನಲ್ಲಿ 2ನೇ ಸ್ಥಾನವನ್ನು ಇನ್ನಷ್ಟು ಗಟ್ಟಿ ಮಾಡಿಕೊಂಡಿತು. ಈ ಸೋಲಿನ ಮೂಲಕ ಋತುರಾಜ್ ಗಾಯಕ್ವಾಡ್ ನಾಯಕತ್ವದ ಸಿಎಸ್‌ಕೆ ತಂಡವು ಪ್ಲೇಆಫ್ ರೇಸ್‌ನಿಂದ ಅಧಿಕೃತವಾಗಿ ಹೊರ ನಡೆಯಿತು.

ಗುಜರಾತ್ ಟೈಟಾನ್ಸ್ ನೀಡಿದ್ದ 230 ರನ್‌ಗಳ ಗುರಿಯನ್ನು ಹಿಂಬಾಲಿಸಿದ ಚೆನ್ನೈ ತಂಡ ಮೊದಲನೇ ಎಸೆತದಿಂದಲೂ ಆಕ್ರಮಣಕಾರಿ ಬ್ಯಾಟಿಂಗ್‌ಗೆ ಕೈ ಹಾಕಿತು. ಆದರೆ ಪವರ್‌ಪ್ಲೇನಲ್ಲಿ ಮೊಹಮ್ಮದ್ ಸಿರಾಜ್ ಮಾರಕ ದಾಳಿ ನಡೆಸಿದ ಮೊಟ್ಟ ಮೊದಲ ಎಸೆತದಲ್ಲಿ ಸಂಜು ಸ್ಯಾಮ್ಸನ್ ಸೇರಿದಂತೆ ಋತುರಾಜ್ ಗಾಯಕ್ವಾಡ್ ಹಾಗೂ ಊರ್ವಿಲ್ ಪಟೇಲ್ ಅವರನ್ನು ಔಟ್ ಮಾಡಿ ಸಿಎಸ್‌ಕೆಗೆ ಪೆಟ್ಟು ನೀಡಿದರು.

14 ಎಸೆತಗಳಲ್ಲಿ 24 ರನ್ ಗಳಿಸಿ ಆಡುತ್ತಿದ್ದ ಮ್ಯಾಥ್ಯೂ ಶಾರ್ಟ್ ಅವರನ್ನು ಕಗಿಸೊ ರಬಾಡ ಔಟ್ ಮಾಡಿದರು. ಕಾರ್ತಿಕ್ ಶರ್ಮಾ ರನ್ ಔಟ್ ಆದರು. ಶಿವಂ ದುಬೇ ಕೇವಲ 17 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 4 ಬೌಂಡರಿಗಳೊಂದಿಗೆ 47 ರನ್ ಸಿಡಿಸಿ ಸಿಎಸ್‌ಕೆ ಭರವಸೆ ಮೂಡಿಸಿದ್ದರೂ, ಅವರನ್ನು ಔಟ್ ಮಾಡುವಲ್ಲಿ ರಶೀದ್ ಖಾನ್ ಯಶಸ್ವಿಯಾದರು. 8 ಎಸೆತಗಳಲ್ಲಿ 19 ರನ್ ಸಿಡಿಸಿದ ಬಳಿಕ ಅನ್ಶುಲ್ ಕಾಂಬೋಜ್ ಹಾಗೂ ಡೆವಾಲ್ ಬ್ರೆವಿಸ್ ಅವರನ್ನು ರಶೀದ್ ಖಾನ್ ಸ್ಪಿನ್ ಮೋಡಿಯಿಂದ ಪೆವಿಲಿಯನ್‌ಗೆ ಕಳಿಸಿದರು. ಅಂತಿಮವಾಗಿ ಚೆನ್ನೈ 13.4 ಓವರ್‌ಗಳಿಗೆ 140 ರನ್‌ಗಳಿಗೆ ಆಲ್ ಔಟ್ ಆಯಿತು.

ಗುಜರಾತ್ ಪರ ನಿರ್ಣಾಯಕ ಮೂರು ವಿಕೆಟ್‌ಗಳನ್ನು ಪಡೆದ ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ರಬಾಡ ಹಾಗೂ ರಶೀದ್ ತಲಾ ಮೂರು ವಿಕೆಟ್‌ಗಳನ್ನು ಕಿತ್ತರು.

ಗುಜರಾತ್ ಬೃಹತ್ ಮೊತ್ತ: ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಗುಜರಾತ್ ಟೈಟಾನ್ಸ್ ತಂಡವು ಶುಭಮನ್ ಗಿಲ್, ಸಾಯಿ ಸುದರ್ಶನ್ ಹಾಗೂ ಜೋಸ್ ಬಟ್ಲರ್ ಅವರ ಅರ್ಧಶತಕಗಳ ಬಲದಿಂದ ನಾಲ್ಕು ವಿಕೆಟ್‌ಗಳ ನಷ್ಟಕ್ಕೆ 229 ರನ್‌ಗಳನ್ನು ಕಲೆ ಹಾಕಿತ್ತು.

ಗಿಲ್-ಸುದರ್ಶನ್ ಜತೆಯಾಟ: ಇನಿಂಗ್ಸ್ ಆರಂಭಿಸಿದ ಸಾಯಿ ಸುದರ್ಶನ್ ಹಾಗೂ ಶುಭಮನ್ ಗಿಲ್ ಆರಂಭದಿಂದಲೂ ಆಕ್ರಮಣಕಾರಿ ಆಟವನ್ನು ಆಡಿದರು. ಈ ಇಬ್ಬರೂ ಮೊದಲನೇ ವಿಕೆಟ್‌ಗೆ 12.2 ಓವರ್‌ಗಳಿಗೆ 125 ರನ್‌ಗಳ ಜತೆಯಾಟವಾಡಿದರು. ಆ ಮೂಲಕ ಟೈಟಾನ್ಸ್‌ಗೆ ಭರ್ಜರಿ ಆರಂಭ ತಂದುಕೊಟ್ಟರು. ಸ್ಫೋಟಕ ಬ್ಯಾಟಿಂಗ್ ಪ್ರದರ್ಶನವನ್ನು ತೋರಿದ ನಾಯಕ ಗಿಲ್ 37 ಎಸೆತಗಳಲ್ಲಿ 3 ಸಿಕ್ಸರ್ ಹಾಗೂ 7 ಬೌಂಡರಿಗಳೊಂದಿಗೆ 64 ರನ್ ಗಳಿಸಿದ ಬಳಿಕ ಸ್ಪೆನ್ಸರ್ ಜಾನ್ಸನ್‌ಗೆ ವಿಕೆಟ್ ಒಪ್ಪಿಸಿದರು.

ಸುದರ್ಶನ್ ಸತತ 5ನೇ ಅರ್ಧಶತಕ: ಗಿಲ್ ವಿಕೆಟ್ ಒಪ್ಪಿಸಿದ ಬಳಿಕ ತಮ್ಮ ಬ್ಯಾಟಿಂಗ್ ವೇಗವನ್ನು ಹೆಚ್ಚಿಸಿದ ಸಾಯಿ ಸುದರ್ಶನ್ ಆಡಿದ 53 ಎಸೆತಗಳಲ್ಲಿ 4 ಸಿಕ್ಸರ್ ಹಾಗೂ 7 ಬೌಂಡರಿಗಳೊಂದಿಗೆ 84 ರನ್‌ಗಳನ್ನು ಕಲೆ ಹಾಕಿದರು. ಜೋಸ್ ಬಟ್ಲರ್ ಕೊನೆಯಲ್ಲಿ ಸ್ಫೋಟಕ ಬ್ಯಾಟ್ ಮಾಡಿ 27 ಎಸೆತಗಳಲ್ಲಿ 57 ರನ್‌ಗಳನ್ನು ಬಾರಿಸಿ ಗುಜರಾತ್ ತಂಡವು ದೊಡ್ಡ ಮೊತ್ತವನ್ನು ಕಲೆ ಹಾಕಲು ನೆರವಾದರು.

ಸಾಯಿ ಸುದರ್ಶನ್ ಸ್ಫೋಟಕ ಬ್ಯಾಟಿಂಗ್

ಪಂದ್ಯಶ್ರೇಷ್ಠ ಮೊಹಮ್ಮದ್ ಸಿರಾಜ್

ಹೊಸ ಹೆಜ್ಜೆಯಿಟ್ಟ ಕೆವಿಎನ್

ಖ್ಯಾತ ನಿರ್ಮಾಣ ಸಂಸ್ಥೆ ಕೆವಿಎನ್ ಕನ್ನಡದ ಕೆಡಿ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ಮಾಣ ಮಾಡಿದೆ. ದೊಡ್ಡ ತಾರಾಗಣದಲ್ಲಿಯೇ ಗಮನಸೆಳೆದ ಕೆಡಿ ಬಲು ಅದ್ದೂರಿಯಾಗಿ ಮೂಡಿಬಂದಿತ್ತು. ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಗಳಿಕೆಯನ್ನು ಕಂಡಿತ್ತು. ಈ ಸಿನಿಮಾದ ಜತೆಗೆ ಕೆವಿಎನ್ ಜನನಾಯಕ್ ಚಿತ್ರವನ್ನು ನಿರ್ಮಾಣ ಮಾಡಿದೆ. ಅಂದುಕೊಂಡಂತೆ ಆಗಿದ್ದರೆ ಜನನಾಯಕನ್ ಇಷ್ಟೊತ್ತಿಗೆ ಅದ್ದೂರಿಯಾಗಿ ತೆರೆಗೆ ಬರಬೇಕಿತ್ತು. ಆದರೆ ಸೆನ್ಸಾರ್ ಮಂಡಳಿಯ ಜಟಾಪಟಿಯಿಂದ ಸಿನಿಮಾ ತೆರೆಗೆ ಬರುವುದು ತಡವಾಗಿದೆ. ಇದರ ಜತೆಗೆ ಯಶ್ ಅಭಿನಯದ ಟಾಕ್ಸಿಕ್ ಚಿತ್ರಕ್ಕೂ ಕೆವಿಎನ್ ಪ್ರೊಡಕ್ಷನ್ಸ್ ಬಂಡವಾಳ ಹೂಡಿದೆ. ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಟಾಕ್ಸಿಕ್ ಕೂಡ ಎರಡು ಬಾರಿ ಬಿಡುಗಡೆಯ ದಿನಾಂಕವನ್ನು ಮುಂದೂಡಿದೆ. ಟಾಕ್ಸಿಕ್ ಯಾವಾಗ ತೆರೆಗೆ ಬರಲಿದೆ ಎಂಬ ಬಗ್ಗೆ ನಿರ್ಮಾಣ ಸಂಸ್ಥೆ ಇನ್ನೂ ಖಚಿತಪಡಿಸಿಲ್ಲ. ಈ ನಡುವೆಯೇ ಕೆವಿಎನ್ ಪ್ರೊಡಕ್ಷನ್ಸ್ ತೆಲುಗು ಚಿತ್ರರಂಗಕ್ಕೂ ಎಂಟ್ರಿಕೊಟ್ಟಿದ್ದು, ತೆಲುಗಿನ ಮೆಗಾಸ್ಟಾರ್ ಚಿರಂಜೀವಿ ಅಭಿನಯದ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದೆ. ಈ ಚಿತ್ರದ ಮುಹೂರ್ತ ಅದ್ದೂರಿಯಾಗಿ ನೆರವೇರಿದೆ. ಆಂಧ್ರ ಪ್ರದೇಶದ ಉಪ ಮುಖ್ಯಮಂತ್ರಿ, ನಟ ಪವನ್ ಕಲ್ಯಾಣ್ ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿ ಶುಭಕೋರಿದರು. ಈ ಹಿಂದೆ ಚಿರಂಜೀವಿ ಅಭಿನಯದ ವಾಲ್ತೇರು ವೀರಯ್ಯ ಚಿತ್ರವನ್ನು ನಿರ್ದೇಶನ ಮಾಡಿದ್ದ ನಿರ್ದೇಶಕ ಬಾಬಿ ಕೊಲ್ಲಿ ಈ ಚಿತ್ರದ ನಿರ್ದೇಶನದ ಸಾರಥ್ಯ ವಹಿಸಿಕೊಂಡಿದ್ದಾರೆ. ಸಾಹಸ ಪ್ರಧಾನ ಕಥೆಯ ಜತೆಗೆ ಸೆಂಟಿಮೆಂಟ್ ಸ್ಟೋರಿ ಕೂಡ ಕಥೆಯಲ್ಲಿ ಬೆರೆತಿದ್ದು, ಚಿರಂಜೀವಿ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳ ಲಿದ್ದಾರೆ. ಅದಾಗಲೇ ಚಿತ್ರಕ್ಕಾಗಿ ಭರ್ಜರಿ ತಯಾರಿಯನ್ನೂ ಆರಂಭಿಸಿದ್ದಾರೆ. ಈ ಚಿತ್ರ ಮುಂದಿನ ವರ್ಷದ ಸಂಕ್ರಾಂತಿಯ ಹಬ್ಬದಂದು ತೆರೆಗೆ ಬರಲಿದೆ.

ಹೊಸ ಅವತಾರದಲ್ಲಿ ಸೆಂಚುರಿ ಸ್ಟಾರ್

ಶಿವಣ್ಣನಿಗೆ ಶಿವಣ್ಣನೇ ಸಾಟಿ

ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್ ಅಂದರೆ ಎಲ್ಲರಿಗೂ ಅಚ್ಚುಮೆಚ್ಚು. ಶಿವಣ್ಣ ಇಂದಿಗೂ ಯುವಕರನ್ನು ನಾಚಿಸುವಂತೆ ಭರ್ಜರಿಯಾಗಿ ಹೆಜ್ಜೆ ಹಾಕುತ್ತಾರೆ. ಶಿವಣ್ಣ ಕನ್ನಡ ಮಾತ್ರವಲ್ಲ, ತಮಿಳು, ತೆಲುಗು ಚಿತ್ರರಂಗದಲ್ಲಿಯೂ ಬಲು ಬೇಡಿಕೆ ಪಡೆದಿದ್ದಾರೆ. ಅಲ್ಲಿಯೂ ಅಪಾರ ಅಭಿಮಾನಿಗಳನ್ನು ಹೊಂದಿದ್ದಾರೆ. ಶಿವಣ್ಣ ಅಭಿನಯದ ಸಿನಿಮಾವನ್ನು ನಿರ್ದೇಶನ ಮಾಡಬೇಕು ಎಂಬುದು ಬಹುತೇಕ ನಿರ್ದೇಶಕರ ಕನಸಾಗಿದೆ. ಹಾಗಾಗಿಯೇ ವರ್ಷದಲ್ಲಿ ಶಿವಣ್ಣ ಅಭಿನಯದ ಇಪ್ಪತ್ತಕ್ಕೂ ಹೆಚ್ಚು ಸಿನಿಮಾಗಳು ಸೆಟ್ಟೇರುತ್ತವೆ. ಹಲವು ಸಿನಿಮಾಗಳು ತೆರೆಗೆ ಬರುತ್ತವೆ. ಪರಭಾಷೆಯಲ್ಲಿಯೂ ಅಭಿನಯಿಸುತ್ತಿರುವ ಶಿವಣ್ಣ ಪ್ರತಿ ಸಿನಿಮಾದಲ್ಲಿಯೂ ವಿಭಿನ್ನ ಪಾತ್ರಗಳನ್ನು ಆಯ್ದುಕೊಳ್ಳುತ್ತಿದ್ದಾರೆ.

ಬಾಂಡ್ ಅವತಾರ

ಸಪ್ತ ಸಾಗರದಾಚೆ ಎಲ್ಲೋ ಕಥೆ ಹೇಳಿ ಮನಗೆದ್ದ ಹೇಮಂತ್.ಎಂ.ರಾವ್, 666 ಆಪರೇಷನ್ ಡ್ರಿಮ್ ಥಿಯೇಟರ್ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದು ರೆಟ್ರೋ ಶೈಲಿಯ ಸಿನಿಮಾವಾಗಿದ್ದು ಈ ಚಿತ್ರದಲ್ಲಿ ಶಿವಣ್ಣ, ಬಾಂಡ್ ಪ್ರಕಾಶ್ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದಲ್ಲಿನ ಶಿವಣ್ಣ ಅವರ ಲುಕ್ ರಿಲೀಸ್ ಆಗಿದ್ದು, ಸೂಟು ಬೂಟ್ ತೊಟ್ಟು ಗನ್ ಹಿಡಿದು ಸ್ಟೈಲಿಶ್ ಆಗಿ ಕಂಗೊಳಿಸಿರುವ ಶಿವಣ್ಣ, ಈ ಹಿಂದಿನ ಬಾಂಡ್ ಚಿತ್ರಗಳನ್ನು ನೆನಪಿಸುತ್ತಾರೆ. ಇದನ್ನು ಗಮನಿಸಿದರೆ ಈ ಚಿತ್ರದಲ್ಲಿ ಥ್ರಿಲ್ಲಿಂಗ್ ಕಥೆ ಅಡಕವಾಗಿದೆ ಎಂಬುದು ತಿಳಿಯುತ್ತದೆ.

ಪೆದ್ದಿಯಲ್ಲಿ ಅಬ್ಬರ

ರಾಮ್ ಚರಣ್ ಅಭಿನಯದ ಪೆದ್ದಿ ಚಿತ್ರದಲ್ಲಿಯೂ ಶಿವಣ್ಣ ಅಭಿನಯಿಸಿದ್ದು, ಗೌರು ನಾಯ್ಡು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇದು ಪವರ್ ಫುಲ್ ಪಾತ್ರವಾಗಿದ್ದು, ಕುಸ್ತಿ ಕಲಿಸುವ ಉಸ್ತಾದ್ ಆಗಿ ಪ್ರೇಕ್ಷಕರಿಗೆ ದರ್ಶನ ಕೊಡಲಿದ್ದಾರೆ. ಪೆದ್ದಿ ಸಿನಿಮಾದ ಟ್ರೇಲರ್ ರಿಲೀಸ್ ಆಗಿದ್ದು ಇದರಲ್ಲಿ ಶಿವಣ್ಣ ಅವರ ಪಾತ್ರವೂ ಹೈಲೈಟ್ ಆಗಿದೆ. ಇದರಲ್ಲಿ ಶಿವಣ್ಣ ಹೇಳುವ ಆಟ ಗೆಲ್ಲೋದಲ್ಲ..ಬದುಕೋದು ಮುಖ್ಯ..ಎಂಬ ಖಡಕ್ ಡೈಲಾಗ್ ಪ್ರೇಕ್ಷಕರನ್ನು ರಂಜಿಸುತ್ತದೆ.

ಬೇಲ್‌ನಲ್ಲಿ ಹೊಸ ಲುಕ್

ನಿರ್ದೇಶಕ ಪವನ್ ಒಡೆಯರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಬೇಲ್ ಚಿತ್ರದಲ್ಲಿಯೂ ಶಿವಣ್ಣ ಅಭಿನಯಿಸುತ್ತಿದ್ದಾರೆ. ಈ ಸಿನಿಮಾದ ಫಸ್ಟ್ ಲುಕ್ ರಿಲೀಸ್ ಆಗಿದೆ. ಬೇಲ್ ಸಿನಿಮಾದಲ್ಲಿ ಶಿವಣ್ಣ ಹೊಸ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಸಾಲ್ಟ್ ಅಂಡ್ ಪೆಪ್ಪರ್ ಲುಕ್ ನಲ್ಲಿ ದರ್ಶನ ಕೊಟ್ಟಿರುವ ಹ್ಯಾಟ್ರಿಕ್ ಹೀರೊ, ವಿಜಿ ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಕೊಡೆ ಹಿಡಿದು ಸಾಕು ನಾಯಿಯ ಜತೆ ಶಿವಣ್ಣ ನಡೆದು ಬರುವ ಸ್ಟೈಲ್ ಅದ್ಭುತವಾಗಿದೆ. ಜೋರಾಗಿ ಸುರಿಯುತ್ತಿರುವ ಮಳೆ, ನಿಧಾನವಾಗಿ ನಾಯಿಗೆ ಬಿಸ್ಕೆಟ್ ತಿನ್ನುಸುತ್ತಿರುವ ವಿಜಿ ದರ್ಶನವಾಗುತ್ತದೆ. ಆ ಲುಕ್ ನೋಡುವುದೇ ಖುಷಿ.

ಬಯೋಪಿಕ್ ನಲ್ಲಿ ಶಿವಣ್ಣ

ಶಿವಣ್ಣ ಬಯೋಪಿಕ್ ಸಿನಿಮಾಗಳನ್ನು ಆಯ್ದುಕೊಳ್ಳುತ್ತಿದ್ದಾರೆ. ಅದರಲ್ಲಿ ಗುಮ್ಮಡಿ ನರಸಿಂಹಯ್ಯ ಸಿನಿಮಾವೂ ಒಂದು. ಈ ಸಿನಿಮಾದ ಪೋಸ್ಟರ್ ಈ ಹಿಂದೆಯೇ ರಿಲೀಸ್ ಆಗಿತ್ತು. ಇದರಲ್ಲಿ ಶಿವಣ್ಣ ಪಂಚೆಯುಟ್ಟು, ಸೈಕಲ್ ಹಿಡಿದು ಬರುತ್ತಿರುವ ಲುಕ್ ಸಖತ್ ಸದ್ದು ಮಾಡಿತ್ತು. ಇದನ್ನು ನೋಡಿ ಸಿನಿಪ್ರಿಯರು ಬಹುಪರಾಕ್ ಎಂದಿದ್ದರು. ಪರಮೇಶ್ವರ್ ಹಿವ್ರಾಲೆ ನಿರ್ದೇಶನದಲ್ಲಿ ಸಿನಿಮಾ ಮೂಡಿಬರುತ್ತಿದ್ದು, ಎನ್. ಸುರೇಶ್ ರೆಡ್ಡಿ ನಿರ್ಮಾಣ ಮಾಡುತ್ತಿದ್ದಾರೆ.



ಮಹಾನ್ ಜತೆಯಾದ ಕಿರಣ್

ಪಿ.ಸಿ.ಶೇಖರ್ ನಿರ್ದೇಶನದಲ್ಲಿ ಮಹಾನ್ ಚಿತ್ರ ಬಲು ಅದ್ದೂರಿಯಾಗಿ ಮೂಡಿಬರುತ್ತಿದೆ. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ನಿರ್ಮಿಸುತ್ತಿರುವ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ನಾಯಕನಾಗಿ ನಟಿಸುತ್ತಿದ್ದಾರೆ. ಈಗ ಈ ಚಿತ್ರತಂಡಕ್ಕೆ ನಟ ಕಿರಣ್ ಶ್ರೀನಿವಾಸ್ ಸೇರ್ಪಡೆಯಾಗಿದ್ದು, ಪ್ರಮುಖ ಪಾತ್ರವೊಂದರಲ್ಲಿ ಅಭಿನಯಿಸುತ್ತಿದ್ದಾರೆ. ಮಹನ್ ಚಿತ್ರದ ಭಾಗವಾಗಿರುವುದಕ್ಕೆ ಕಿರಣ್ ಸಂತಸ ವ್ಯಕ್ತಪಡಿಸಿದ್ದಾರೆ. ನಿರ್ದೇಶಕ ಪಿ.ಸಿ.ಶೇಖರ್, ನಿರ್ದೇಶನದ ಹಿಂದಿನ ಚಿತ್ರಗಳು ನನಗೆ ಬಹಳ ಇಷ್ಟವಾಗಿತ್ತು. ಅವರ ನಿರ್ದೇಶನದ ಮಹಾನ್ ಚಿತ್ರದಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿರುವುದಕ್ಕೆ ಖುಷಿಯಾಗಿದೆ. ಮಹಾನ್ ಚಿತ್ರದಲ್ಲಿ ನಾನು ಈವರೆಗೂ ಮಾಡಿರದ ಪಾತ್ರ ಮಾಡಿದ್ದೇನೆ. ಈ ಪಾತ್ರ ಜನರ ಮನಸ್ಸಿನಲ್ಲಿ ಉಳಿಯುವ ಪಾತ್ರವಾಗುತ್ತದೆ ಎಂಬ ಭರವಸೆ ಇದೆ. ನಿರ್ದೇಶಕರು ಕಥೆ ಹೇಳಿದಾಗಲೇ ನನ್ನ ಪಾತ್ರ ಮನಸ್ಸಿಗೆ ಬಹಳ ಹತ್ತಿರವಾಗಿತ್ತು. ಕೆಲವು ವರ್ಷಗಳ ಹಿಂದೆ ವಿಜಯ ರಾಘವೇಂದ್ರ ಅವರು ತೀರ್ಪುಗಾರರಾಗಿದ್ದ ರಿಯಾಲಿಟಿ ಶೋನಲ್ಲಿ ನಾನು ನಿರೂಪಕನಾಗಿದ್ದೆ. ಆಗ ಅವರು ತೋರಿದ ಪ್ರೀತಿ ಇಂದಿಗೂ ಹೃದಯದಲ್ಲಿ ಅಚ್ಚೊತ್ತಿದೆ. ಈಗ ಅವರ ಜತೆಗೆ ನಟಿಸುತ್ತಿರುವುದು ಬಹಳ ಖುಷಿಯಾಗಿದೆ. ರಂಗಾಯಣ ರಘು ಅವರಿಂದ ಅಭಿನಯದ ಬಗ್ಗೆ ಸಾಕಷ್ಟು ಕಲಿತಿದ್ದೇನೆ. ರಾಧಿಕಾ ನಾರಾಯಣ್ ಹಾಗೂ ವರ್ಷಾ ಅವರ ಜತೆಗೆ ನಟಿಸುತ್ತಿರುವುದು ಸಂತೋಷವಾಗಿದೆ. ಮಹಾನ್ ಎಂದರೆ ರೈತ, ದೇಶದ ಬೆನ್ನೆಲುಬಾದ ರೈತನ ಕುರಿತಾದ ಚಿತ್ರದಲ್ಲಿ ನಾನು ಒಂದು ಭಾಗವಾಗಿರುವುಕ್ಕೆ ಹೆಮ್ಮೆ ಇದೆ ಎಂದು ನಟ ಕಿರಣ್ ಶ್ರೀನಿವಾಸ್ ಹೇಳುತ್ತಾರೆ. ವಿಜಯ ರಾಘವೇಂದ್ರ ಅವರಿಗೆ ನಾಯಕಿಯಾಗಿ ರಾಧಿಕಾ ನಾರಾಯಣ್ ಬಣ್ಣಹಚ್ಚಿದ್ದಾರೆ. ಉಳಿದಂತೆ ಮಿತ್ರ, ನಮ್ರತಾ ಗೌಡ, ವರ್ಷಾ ಮುಂತಾದವರು ಮಹಾನ್ ಚಿತ್ರದ ತಾರಾಬಳಗದಲ್ಲಿದ್ದಾರೆ.

ಮ್ಯಾಂಗೋ ಪಚ್ಚನಿಗೆ ಕಿಚ್ಚ ಸಾಥ್

ಕಿಚ್ಚ ಸುದೀಪ್ ಸಹೋದರಿ ಪುತ್ರ, ಸಂಚಿತ್ ಅಭಿನಯದ ಮ್ಯಾಂಗೋ ಪಚ್ಚ ಜೂನ್ 5 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ. ಮೈಸೂರು ಹಿನ್ನೆಲೆಯಲ್ಲಿ ಸಾಗುವ ಕಥೆ ಚಿತ್ರದಲ್ಲಿದ್ದು, ಇಪ್ಪತ್ತು ಹಿಂದಿನ ವರ್ಷದ ಹಿಂದಿನ ಸ್ಟೋರಿ ತೆರೆಯಲ್ಲಿ ಸಾಗಲಿದೆ. ಹಾಗಾಗಿ ಕೊಂಚ ರೆಟ್ರೋ ಶೈಲಿಯಲ್ಲಿ ಸಿನಿಮಾ ಮೂಡಿಬಂದಿರುವುದು ವಿಶೇಷ. ಟೈಟಲ್‌ನಲ್ಲಿಯೇ ಸದ್ದು ಮಾಡುತ್ತಿರುವ ಮ್ಯಾಗೋ ಪಚ್ಚ, ಈಗ ಟೀಸರ್‌ನಲ್ಲಿಯೂ ಸಖತ್ ಸದ್ದು ಮಾಡುತ್ತಿದ್ದಾನೆ. ಚಿತ್ರದ ಟೀಸರ್ ಕೂಡ ಬಿಡುಗಡೆಯಾಗಿದ್ದು, ಈ ಸಿನಿಮಾಗೆ ಕಿಚ್ಚ ಸುದೀಪ್ ಸಾಥ್ ಕೊಟ್ಟಿದ್ದಾರೆ. ಚಿತ್ರದ ನಾಯಕನ ಪರಿಚಯ ಮತ್ತು ಕಥೆಯ ನಿರೂಪಣೆ ಎರಡೂ ಕಿಚ್ಚನ ಕಂಚಿನ ಕಂಠದಲ್ಲಿ ಮೂಡಿಬಂದಿದೆ. ಅದನ್ನು ಕೇಳಲು ಹಿತ ಅನ್ನಿಸುತ್ತದೆ. 2002ರಲ್ಲಿ ಮೈಸೂರು ಮತ್ತು ಟೈಮ್ ಎರಡೂ ಚೇಂಜ್ ಆಗ್ತಾ ಇತ್ತು... ಈ ಸಮಯದಲ್ಲಿ ಪದ್ಮ, ಶ್ಯಾಮ್, ನಾಗಪ್ಪ, ಶ್ರೀಧರ್ ಇವರಿಲ್ಲದೆ ಈ ಕಥೇನೆ ಇಲ್ಲ. ಆದರೆ, ಇದು ಈ ಪಚ್ಚನ ಕಥೆ...ಹೀಗೆ ಸುದೀಪ್ ಚಿತ್ರದ ಕಥೆ ಮತ್ತು ಪಾತ್ರಗಳ ನಿರೂಪಣೆ ಮಾಡಿದ್ದಾರೆ. ಸಿನಿಮಾದ ಟ್ರೇಲರ್ ಶೀಘ್ರದಲ್ಲಿಯೇ ರಿಲೀಸ್ ಆಗಲಿದೆ. ಸಂಚಿತ್ ರೆಟ್ರೋ ಲುಕ್‌ನಲ್ಲಿ ಮಿಂಚಿದ್ದು, ಕಾಜಲ್ ಕುಂದರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಉಗ್ರಂ ಮಂಜು, ಮಯೂರ್ ಪಟೇಲ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ವಿವೇಕ್ ನಿರ್ದೇಶನದಲ್ಲಿ ಸಿನಿಮಾ ಮೂಡಿಬಂದಿದ್ದು, ಕೆಆರ್‌ಜಿ ಸ್ಟುಡಿಯೊಸ್ ಮತ್ತು ಸುಪ್ರಿಯಾನ್ವಿ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗಿದೆ.